Om symbol

# ಅಭಿಷೇಕ

## ಸ್ಮರಣ ಸಂಚಿಕೆ

**ಈಶಾವಾಸ್ಯ ಪ್ರಕಾಶನ**
೧೧೬೬, ೧೦ನೇ ಬಿ ಅಡ್ಡ ರಸ್ತೆ
ಯಲಹಂಕ ಉಪನಗರ
ಬೆಂಗಳೂರು – ೫೬೦ ೦೬೪
: 8460422

**ಪ್ರಕಾಶಕರು:**
ಜಿ. ವಿ. ಪ್ರಭಾಕರ ರಾವ್
ನಂ. ೧೧೬೬, ಈಶಾವಾಸ್ಯ
೧೦ನೇ ಬಿ ಅಡ್ಡ ರಸ್ತೆ
ಯಲಹಂಕ ಉಪನಗರ
ಬೆಂಗಳೂರು – ೫೬೦ ೦೬೪

ಹಕ್ಕುಗಳು:  ಪ್ರಕಾಶಕರಿಗೆ ಸೇರಿವೆ

ಮೊದಲ ಮುದ್ರಣ: ೨೦೦೨

ಒಟ್ಟು ಪುಟಗಳು: ೧೮೪+೪

ಬೆಲೆ : ರೂ. ೨೦೦/-

ಅಕ್ಷರ ಜೋಡಣೆ:
**ಶ್ರೀ ರಾಘವೇಂದ್ರ ಎಂಟರ್‌ಪ್ರೈಸಸ್**
ನಂ. ೫೦೦, ೯ನೇ ಮುಖ್ಯ ರಸ್ತೆ,
೨ನೇ ಬ್ಲಾಕ್, ಬಿ.ಎಸ್.ಕೆ. ೧ನೇ ಹಂತ,
ಬೆಂಗಳೂರು – ೫೬೦ ೦೫೦

ಮುದ್ರಕರು:
**ದಿಕ್ಸೂಚಿ ಪ್ರಕಾಶನ**
ಸನ್‌ರೈಸ್ ಪ್ಲಾಜಾ, ವಾಟಾಳ್ ನಾಗರಾಜ್ ರಸ್ತೆ,
ರಾಜಾಜಿನಗರ, ಬೆಂಗಳೂರು – ೫೬೦ ೦೧೦

## ಅರ್ಪಣೆ

*ಎಲೆ ಮರೆ ಕಾಯಿಗಳಂತಿದ್ದು ಸಮಾಜ ಸೇವೆ*
*ಮಾಡಿದ ಎಲ್ಲ ಘಟ್ಟು ವಂಶದ ಹಿರಿಯರಿಗೆ*

## ಘಟ್ಟು ವಂಶದವರ ಬಗ್ಗೆ ಅಂತರ್ಜಾಲ ಪುಟ!

*ಘಟ್ಟು ವಂಶದ ಪರಿಚಯ, ವಂಶವೃಕ್ಷ, ಹಿರಿಯರ ಅಪೂರ್ವ ಚಿತ್ರಗಳು, ಅವರ ಸಮಾಜ ಸೇವಾ ಕಾರ್ಯಗಳು ಮತ್ತು ಘಟ್ಟು ವಂಶದವರ ಇಂದಿನ ಪ್ರಗತಿಯನ್ನು ಬಿಂಬಿಸಿ, ನಿರಂತರವಾಗಿ ಪರಿಷ್ಕರಿಸಲ್ಪಡುವ ಅಂತರ್ಜಾಲ ಸೈಟನ್ನು ಸಂದರ್ಶಿಸಿ:*

***www.geocities.com\eshavasyaus***

ಘಟ್ಟು ವಂಶದ, ಕಾಣ್ವ ಸಮಾಜದ ಹಿರಿಯರ ಹಾಗೂ ಇಂದಿನ ಪೀಳಿಗೆಯವರ ಬಗ್ಗೆ ಚಿತ್ರಗಳು ಹಾಗೂ ಹೆಚ್ಚಿನ ಮಾಹಿತಿ ದೊರೆತಲ್ಲಿ ಅದನ್ನು ಈ ಸೈಟಿನಲ್ಲಿ ಅಳವಡಿಸಲು ಈ ಕೆಳಗಿನ ವಿಳಾಸಕ್ಕೆ ಕಳುಹಿಸಿ:


**೧೧೬೬, ೧೦ನೇ ಬಿ ಅಡ್ಡ ರಸ್ತೆ**

**ಯಲಹಂಕ ಉಪನಗರ**

**ಬೆಂಗಳೂರು – ೫೬೦ ೦೬೪**

**ದೂ: 8460422**

**email : vinay_tw@mailcity.com**


ಶ್ರೀ ಮೂಲ ಗೋಪಾಲಕೃಷ್ಣೋ ವಿಜಯತೇ॥ ಶ್ರೀ ಮೂಲ ಪಟ್ಟಾಭಿರಾಮೋ ವಿಜಯತೇ॥
ಶ್ರೀ ವ್ಯಾಸರಾಜೋ ವಿಜಯತೇ॥

**ಶ್ರೀ ವ್ಯಾಸರಾಜ ವಿದ್ಯಾ ಕರ್ನಾಟಕ ಸಂಸ್ಥಾನ**

ಶ್ರೀ ರಾಜೇಂದ್ರ ತೀರ್ಥರ ಪೂರ್ವಾದಿ ಮಠ

# ಶ್ರೀ ವ್ಯಾಸರಾಜ ಮಠ (ಸೋಸಲೆ)

ತ್ರಿಮಕುಟ ಕ್ಷೇತ್ರ (ತಿರುಮಕೂಡಲು), ಟಿ. ನರಸೀಪುರ ತಾಲ್ಲೂಕು
ಮೈಸೂರು ಜಿಲ್ಲೆ, ಕರ್ನಾಟಕ ರಾಜ್ಯ



ದಿನಾಂಕ ೨೦-೧-೨೦೦೨

ಶ್ರೀಯುತ ಜಿ. ವಿ. ಪ್ರಭಾಕರ ರಾವ್ ರವರಿಗೆ ಅನುಗ್ರಹ ಪೂರ್ವಕವಾಗಿ
ಬರೆಸಿ ಕಳುಹಿಸಿದ ಅನುಗ್ರಹ ಸಂದೇಶ

ಆದಾಗಿ ನಿಮ್ಮ ಪೂರ್ವಜರ ಸವಿ ನೆನಪಿಗಾಗಿ ಹಾಗೂ ಅವರು ಮಾಡಿರುವ ಸಮಾಜ ಸೇವಾ ಕಾರ್ಯಗಳನ್ನು ಸ್ಮರಿಸುವ ಸಲುವಾಗಿ ಅಭಿಷೇಕ ಎಂಬ ಸ್ಮರಣ ಸಂಚಿಕೆಯುನ್ನು ಹೊರತರುತ್ತಿರುವುದನ್ನು ತಿಳಿದು ಬಹಳ ಸಂತೋಷವಾಗಿದೆ. ಹಾಗೂ ಗುರುಹಿರಿಯರಲ್ಲಿ ಭಕ್ತಿ ಮಾಡುವುದು ಅವರ ವಂಶದಲ್ಲಿ ಜನ್ಮ ಪಡೆದಿದ್ದೇ ಸಾರ್ಥಕ ವಿಷಯವಾಗಿರುತ್ತದೆ.

ಎಲ್ಲ ಸಹೃದಯರಿಗೂ ಮಾರ್ಗದರ್ಶಿಯಾಗಿ, ನಿಮಗೂ, ನಿಮ್ಮ ಕುಟುಂಬದವರೆಲ್ಲರಿಗೂ ಸಕಲ ಸನ್ಮಂಗಳವನ್ನುಂಟು ಮಾಡಲೆಂದು ನಮ್ಮ ಉಪಾಸ್ಯಮೂರ್ತಿ ಶ್ರೀಮೂಲ ಗೋಪಾಲಕೃಷ್ಣ ದೇವರಲ್ಲಿ ಪ್ರಾರ್ಥಿಸುತ್ತೇವೆ.

ಇತಿ ನಾರಾಯಣ ಸ್ಮರಣೆಗಳು


**ಶ್ರೀ ಶ್ರೀ ಶ್ರೀ ವಿದ್ಯಾವಾಚಸ್ಪತಿ ತೀರ್ಥರು**

## Akhila Bharata Yogishwara Yagnavalkya

**Peethacharya**
**Paramahamsa Jagadguru Vidya Bhaskara Teertha Mahaswamigalu**

## Kanva Mathadheesharu

**Hunasihole - 585 290, Ph: 08444-58758**




ಸತ್ಯವೊಂದೇ ಗೆಲ್ಲುವುದು. ಅಸತ್ಯಕ್ಕೆ ಗೆಲುವಿಲ್ಲ. ವಿದ್ಯೆಯೇ ಅಮೃತ. ಅವಿದ್ಯೆಯಿಂದ ಮೃತಿ. ಸರ್ವಜೀವರುಗಳೂ ದುಃಖದಿಂದ ಮುಕ್ತಿಯನ್ನು ಕಾಣಲಿ. ಜ್ಞಾನ ಧರ್ಮಗಳಿಂದ ಭೂಮಿ ಸುಭಿಕ್ಷವಾಗಲಿ. ಶ್ರೀಮನ್ನಾರಾಯಣನು ಸರ್ವರನ್ನೂ ಕಾಪಾಡಲಿ. ಧರ್ಮ ಭಾರತದ ಉಸಿರಾಗಲಿ, ವಿಶ್ವಕ್ಕೆ ಕಣ್ಣಾಗಲಿ.

ಶ್ರೀ ಪ್ರಭಾಕರ ರಾಯರು ತಮ್ಮ ಪೂರ್ವಜರ ಸ್ಮರಣೆಗಾಗಿ ಅಭಿಷೇಕ ಎಂಬ ಪುಸ್ತಕ ಪ್ರಕಟಿಸುತ್ತಿರುವುದು ನಮಗೆ ಸಂತೋಷವಾಗಿದೆ. ೧೬-೨-೨೦೦೨ ರಂದು ನಡೆಯಲಿರುವ ಈ ಪುಸ್ತಕ ಬಿಡುಗಡೆ ಹಾಗೂ ಗುರುಹಿರಿಯರನ್ನು ವಂದಿಸುವ ಕಾರ್ಯಕ್ರಮಗಳಿಗೆ ಶುಭವಾಗಲೆಂದು ಶ್ರೀ ವಿಠ್ಠಲಕೃಷ್ಣನನ್ನು ಪ್ರಾರ್ಥಿಸುತ್ತೇವೆ.

ನಾರಾಯಣ ಸ್ಮರಣೆಗಳು

**ಶ್ರೀ ಶ್ರೀ ಶ್ರೀ ವಿದ್ಯಾಭಾಸ್ಕರ ತೀರ್ಥರು**

श्री वीर विठ्ठ्लो विजयते ॥



## H.H. Sri Sri Sugunendra Theertha Swamiji

### Jagadaguru Sri Madhwaachaarya Moola Samsthaanam

### SRI PUTTIGE MATH, UDUPI



ತನ್ನ ಪೂರ್ವವಂಶದಿಂದ ಸ್ಫೂರ್ತಿ ಪಡೆದರೆ ಮನುಷ್ಯನ ಭವಿಷ್ಯಜ್ಜೀವನ ಹಸನಾಗುತ್ತದೆ. ಈ ದೃಷ್ಟಿಯಲ್ಲಿ ಇತಿಹಾಸದತ್ತ ಪಯಣ ಪ್ರತಿಯೊಬ್ಬನ ಕರ್ತವ್ಯವೂ ಆಗಿದೆ. ಜಿ. ವಿ. ಪ್ರಭಾಕರ ರಾವ್ ಬರೆದಿರುವ ಪದ್ಯರೂಪದ ಅವರ ಪೂರ್ವವಂಶದ ಇತಿಹಾಸ ಪುಸ್ತಿಕೆ ಅಪೂರ್ವವಾಗಿದೆ. ಮುಂದಿನ ಪೀಳಿಗೆಗೆ ಅನುಕರಣೀಯವಾಗುವ ಇಂತಹ ಸ್ತುತ್ಯಕಾರ್ಯವನ್ನು ನಾವು ಅಭಿನಂದಿಸುತ್ತೇವೆ. ಶ್ರೀಯುತ ಪ್ರಭಾಕರ ರಾಯರಿಂದ ಇಂತಹ ಸತ್ಕಾರ್ಯಗಳು ಮುಂದೆಯೂ ಇನ್ನಷ್ಟು ನಡೆಯಲಿ.

ಇತಿ ಸಪ್ರೇಯಶ್ರೀಮನ್ನಾರಾಯಣಸ್ಮರಣೆಗಳೊಂದಿಗೆ

**ಶ್ರೀ ಶ್ರೀ ಶ್ರೀ ಸುಗುಣೇಂದ್ರ ತೀರ್ಥರು**



Phone : (04112) 22115 Email : skmkanci@md3.vsnl.net.in.
Fax : 24305

Sri Chandramouleeswaraya Namaha :
Sri Sankara Bhaghavadpadacharya Paramparagatha
Moolamnaya Sarvagnapeeta
His Holiness Sri Kanchi Kamakoti Peetadhipathi

## Jagadguru Sri Sankaracharya Swamigal

SRIMATAM SAMSTHANAM

*No. 1, SALAI STREET, KANCHEEPURAM - 631 502.*

DATE 15-11-2001

நமது இந்து மதத்தின் நோக்கம் தர்மம் செய்வது. கடமைகளைப் பலனை எதிர்பாராமல் செய்வது என்பது தான். பகவான் கீதையில் இதைத்தான் சொல்கிறார். தர்மம் என்பது அவரவர் இஷ்டப்படிச் செய்வது அன்று. நம் முன்னோர்கள் வகுத்த வழிப்படி செய்வது தான்.

தனி மனிதன் வாழ்க்கையில் ஒரு வழிகாட்டியாக இருந்து தனக்கும், தன் சமுதாயத்திற்கும், நாட்டிற்கும் பெருமை சேர்ப்பது வழக்கமாக இருந்து வருகிறது. மனிதன் சிறந்த சேவை செய்து பேரும் புகழும் பெற்று தன் புகழோடுடன் சமுதாயப் புகழையும் சேர்த்து பகுதியின் புகழுக்கும் பெருமை சேர்க்கிறான்.

இம்மாதிரி பேர், புகழ் பெற்ற சமுதாயங்கள் பலவற்றில் கர்நாடக மாநிலம் கோலார் பகுதி காட் குடும்பமும் ஒன்று. அக்குடும்பத்தினர் தன் சமுதாய மேன்மைக்கும் நாட்டின் மேன்மைக்கும் பாடுபட்டு வந்துள்ளனர். அவர்களைப் பற்றிய குறிப்புகள் கொண்டு மலர் வெளியிடுவது கேட்டு சந்தோஷிக்கிறோம். மலரில் அக்குடும்பத்தினர் செய்த அரும் பெரும் பணிகளை படித்து மேன்மேலும் அக்குடும்ப சந்ததியினரும் மற்றவர்களும் அபிஷேகம் செய்து தொண்டுகள் செய்து நாட்டின் மேன்மைக்கு பாடுபட வேண்டுமாய் ஆசீர்வதிக்கிறோம்.

நாராயண ஸ்ம்ருதி:

Phone: (O4112) 22115 Fax: 24305 Email: skmkanci@md3.vsnl.net.in

Sri Chandramouleeswaraya Namaha:
Sri Sankara Bhagavadpaadacharya Paramparagatha
Moolamnaya Sarvagnapeeta

**His Holiness Sri Kanchi Kamakoti Peetadhipathi**

## Jagadguru Sri Sankaracharya Swamigal

**SRIMATAM SAMSTHANAM**

*No. 1, SALAI STREET, KANCHEEPURAM - 631 502*

DATE: 15-11-2001

ಧಾರ್ಮಿಕ ಆಚರಣೆ ಹಿಂದೂಗಳ ಧ್ಯೇಯ. ಪ್ರತಿಫಲಾಪೇಕ್ಷೆಯಿಲ್ಲದೆ ಸೇವೆ ಮಾಡುವುದೇ ನಮ್ಮ ಆದರ್ಶ. ಭಗವದ್ಗೀತೆಯಲ್ಲಿ ಪರಮಾತ್ಮನೂ ಇದನ್ನೇ ಪ್ರತಿಪಾದಿಸಿದ್ದಾನೆ. ಅವರವರಿಗೆ ತೋಚಿದಂತೆ ನಡೆದುಕೊಳ್ಳುವುದು ಧರ್ಮವೆನಿಸದು. ನಮ್ಮ ಪೂರ್ವೀಕರು ಆಚರಿಸಿದ್ದನ್ನು ಆದರ್ಶವಾಗಿ ಸ್ವೀಕರಿಸಿ ಅನುಸರಿಸುವುದೇ ಧರ್ಮ.

ಒಳ್ಳೆಯ ಮಾನವನ ಬಾಳುವೆ ಇಂದಿನವರಿಗೆ ಹಾಗೂ ಮುಂದಿನವರಿಗೆ ಬದುಕಿನ ನಂದಾದೀಪವಾಗಬೇಕು. ತಾನು ಮಾಡಿದ ಸೇವೆಯಿಂದಾತ ಸಮಾಜದಲ್ಲಿ ಕೀರ್ತಿ ಹಾಗೂ ಖ್ಯಾತಿ ಗಳಿಸಬೇಕು. ಅಂತಹವರು ಆ ಕೀರ್ತಿಯನ್ನೂ ಸಮಾಜಸೇವೆಗೆ ವಿನಿಯೋಗಿಸಿ ಆ ಪ್ರದೇಶವನ್ನೂ ಪಾವನಗೊಳಿಸುವರು.

ಸ್ವರ್ಣ ಭೂಮಿಯೆಂದು ಪ್ರಖ್ಯಾತವಾದ ಕರ್ನಾಟಕ ಪ್ರಾಂತದ ಕೋಲಾರದಲ್ಲಿ ಘಟ್ಟು ಕುಟುಂಬದವರೂ ನೆಲೆಸಿದರು. ಸಮುದಾಯದ ಒಳಿತಿಗೆ ಹಾಗೂ ನಾಡಿನ ಪುರೋಭಿವೃದ್ಧಿಗೆ ಇವರು ವಿಶೇಷವಾಗಿ ಶ್ರಮಿಸಿದ್ದಾರೆ. ಅವರ ಸೇವೆಯನ್ನು ವಿವರಿಸುವ ಸ್ಮರಣ ಸಂಚಿಕೆಯೊಂದನ್ನು ಹೊರತರುತ್ತಿರುವುದು ನಮಗೆ ಸಂತೋಷ ತಂದಿದೆ. ಇದನ್ನು ಓದಿ ಅವರ ಕುಟುಂಬದ ಸದಸ್ಯರು ಹಾಗೂ ಸಾರ್ವಜನಿಕರು ಅದೇ ದಾರಿಯಲ್ಲಿ ಸಾಗಿ ಸೇವಾ ಕಾರ್ಯದಿಂದ ದೇಶಕ್ಕೂ, ಸಮುದಾಯಕ್ಕೂ ಕೀರ್ತಿ ತರಲು ಹಾರೈಸುವೆವು.

ॐ

R. N. DESAI
(Baburao Desai)
Central Secretary
VISHVA HINDU PARISHAD

91, Dharmasri, Shankarapuram, Bangalore-560 004 ✆ : 6604641, 624918

೩೧-೦೧-೨೦೦೨

ಶ್ರೀ ಪ್ರಭಾಕರರಾವ್
ನಮಸ್ಕಾರಗಳು,

ಪೂರ್ವಜರ ಸ್ಮರಣೆ ಎಲ್ಲ ಮಾನವರ ಕರ್ತವ್ಯ. ಅದರಿಂದ ದೊರೆಯುವ ಪ್ರೇರಣೆ, ಧೈರ್ಯ, ಶಕ್ತಿ, ಸಮಾಧಾನಗಳು, ಅಪೂರ್ವ. ಶ್ರೀರಾಮಚಂದ್ರನಿಂದ ಹಿಡಿದು ಎಲ್ಲರೂ ಇದರಿಂದಲೇ ಯಶಸ್ವಿಗಳಾಗಿದ್ದಾರೆ. ಈಗೀಗ ಇದು ಕಡಿಮೆಯಾಗುತ್ತಿರುವುದೇ ನಮ್ಮ ಎಲ್ಲ ಸಮಸ್ಯೆಗಳ ಮೂಲವೆನಿಸುತ್ತದೆ.

ಈ ಕೊರತೆಯನ್ನು ನೀಗಿಸುವ "ಅಭಿಷೇಕ" ಪುಸ್ತಕದ ಪ್ರಕಟಣೆಯ ನಿಮ್ಮ ಪ್ರಯತ್ನ ಶ್ಲಾಘನೀಯ. ನಿಮಗೆ ಮತ್ತು ಇದಕ್ಕೆ ಸಹಕರಿಸಿದ ಎಲ್ಲರಿಗೆ ಇತ್ಯೋಪತಿಶಯವಾದ ಶ್ರೇಯಸ್ಸು ಪ್ರಾಪ್ತವಾಗಲೆಂದು ಭಗವಂತನಲ್ಲಿ ಪ್ರಾರ್ಥಿಸುತ್ತೇನೆ.

ವಂದನೆಗಳು,

**ಬಾಬೂರಾವ್ ದೇಸಾಯಿ**

# ಮುನ್ನುಡಿ

ನಾವೆಲ್ಲರೂ ಆಸ್ತಿಕರು–ಅಪ್ಪ ಅಮ್ಮಂದಿರ ಪಿತ್ರಾರ್ಜಿತ ಆಸ್ತಿಯಲ್ಲಿ ಕಣ್ಣಿಟ್ಟವರು ಎಂಬರ್ಥದಲ್ಲಿ ಮಾತ್ರ ಎಂಬುದು ದುರಂತದ ಸಂಗತಿ! ಆದರೆ ನಮ್ಮ ಹಿರಿಯರು ಕೇವಲ ಆಸ್ತಿಯೇ ಅಲ್ಲದೇ ಅದಕ್ಕಿಂತ ಅಮೂಲ್ಯವಾದ ಜೀವನ ಧೋರಣೆಯನ್ನು ಆಚರಿಸಿ ಆದರ್ಶಪ್ರಾಯರೆನಿಸಿದ್ದರೂ ಅದರತ್ತ ನಮ್ಮ ಗಮನ ಹರಿಯುವುದೇ ಇಲ್ಲ. ಹೆಚ್ಚೇಕೆ, ಎರಡು ತಲೆಮಾರಿನ ಆಚೆಗೆ ಬಾಳಿಹೋದವರ ಹೆಸರೂ ನಮಗೆ ತಿಳಿದಿರುವುದಿಲ್ಲ. ತಿಳಿಯುವ ಕುತೂಹಲವೂ ಇರುವುದಿಲ್ಲ. ನಾವು ತೀರಿಸ ಬೇಕಾದ ಋಣಗಳಲ್ಲಿ ಪಿತೃ ಋಣ, ದೇವ ಋಣ ಹಾಗೂ ಋಷಿ ಋಣ ಮುಖ್ಯವಾದದ್ದೆಂದು ಪ್ರಾಚೀನರು ಪ್ರತಿಪಾದಿಸಿದ್ದಾರೆ. ನಮ್ಮ ಹುಟ್ಟಿಗೆ ಕಾರಣರಾದವರ ಆಶೋತ್ತರಗಳು ನಮ್ಮನ್ನು ಕುರಿತಂತೆ ಏನಿದ್ದಿರಬಹುದು? ಅದರ ಸ್ವರೂಪವನ್ನು ತಿಳಿಯಲು ಗತಿಸಿದವರನ್ನು ಸಮೀಪಿಸಿ ಕೇಳಲು ಸಾಧ್ಯವಾಗದು. ಅವರ ಗತ ಜೀವಿತದ ಮಾಹಿತಿ ಸಂಗ್ರಹ ಅವರ ಬಗ್ಗೆ ಕೆಲವು ಸೂಚನೆಗಳನ್ನಾದರೂ ನೀಡಬಹುದು.

ನಮ್ಮ ಅಜ್ಜ/ಅಜ್ಜಿ ಮಾಡುತ್ತಿದ್ದ ಅಡಿಗೆ ನಮಗೆ ಮಾಡಲು ಬರುವುದಿಲ್ಲ. ಅವರಿಗಿಲ್ಲದ ಸೌಕರ್ಯಗಳು ನಮಗೆ ಅನೇಕವಿವೆ. ಆದರಿಂದ ಅವರ ಕಾಲದ ನೋವು ನಲಿವುಗಳು ಇಂದಿಗೆ ಅಪ್ರಸ್ತುತ ಹಾಗೂ ಇಂದಿನ ಕಾಲದ ಗೋಜಲನ್ನು ಅವರು ಕಂಡವರೇ ಅಲ್ಲ ಎಂದು ಹೇಳಿ ಕೈ ತೊಳೆದುಕೊಳ್ಳುವುದು ಸುಲಭ. ತಮಗೆ ಲಭಿಸಿದ ಪೂರ್ವಿಕ ಜೀವನ ಶ್ರದ್ಧೆಯ ಬಗೆಗೆ ಹೀಗಲ್ಲದೇ ಹೇಗೆ ಸಮಾಧಾನ ಪಟ್ಟುಕೊಳ್ಳಲು ಸಾಧ್ಯ?

ಆದರೆ ಬದುಕು ಎಷ್ಟೋ ಬದಲಾವಣೆಗಳನ್ನು ಕಂಡರೂ ಕೆಲವು ಮೂಲಭೂತ ಅಂಶಗಳು ಸದಾ ಇರುವಂತಹವು. ಕನಸು ನನಸಾದಾಗ ಸಂತಸ; ಕೈಗೂಡದಾಗ ಸಂಕಟ. ಅಸಹಾಯತೆ ಕಾಡಿದಾಗ ಕಿರಿಕಿರಿ; ಅನಿರೀಕ್ಷಿತ ಸಾಧನೆಗೆ ಹಲ್ಲುಕಿರಿ. ಸಮಾಜ ಮನ್ನಿಸಿದರೆ ಉನ್ನತಿ; ಕಡೆಗಣಿಸಿದರೆ ಖಿನ್ನತೆ. ಇಂತಹ ಎಲ್ಲಾ ಕಾಲದ ಎಲ್ಲಾ ಬಾಳಿನ ಎಲ್ಲರ ಗೋಜಲುಗಳೂ ಕಾಲ–ದೇಶ–ವೃತ್ತಿಗಳಾಚೆಗಿನವು.

ನಮ್ಮ ಪೂರ್ವಜರು ನಮ್ಮ ಪಾಲಿಗೆ ಕೇವಲ ನಾಮವಾಗಿಯೋ (ಇಲ್ಲವೇ ಅದೂ ಮರೆತೋ) ಉಳಿದರೆ ಸಾಕೇ? ಅವರ ಗುಣಕ್ರಿಯಾದರ್ಶಗಳತ್ತ ನಮ್ಮ ಗಮನ ಹರಿಸಬೇಡವೇ?

ತಂದೆಯನ್ನೂ/ಹಿರಿಯರನ್ನೂ ತೀರ್ಥರೂಪ ಎಂದು ಸಂಬೋಧಿಸುವುದು ವಾಡಿಕೆ. ತೀರ್ಥ ಎಂಬ ಪದಕ್ಕೆ ಜ್ಞಾನ ಎಂಬರ್ಥ ಇದೆ. ನೆನಪುಳಿಯಬೇಕಾದದ್ದು ಹಿರಿಯರ ನಾಮ ರೂಪಗಳಲ್ಲ; ಅವರ ಜ್ಞಾನ ಸ್ವರೂಪ; ಸಮಾಜದ ನಡುವೆ, ನಿಸರ್ಗದ ನಡುವೆ, ಕಷ್ಟ ಸುಖಗಳ ನಡುವೆ 'ಅವರತನ'ವನ್ನು ಅವರು ಮೆರೆದ ಪರಿ.

ತೀರ್ಥ ಎಂದರೆ ನೀರು ಎಂದರ್ಥವೂ ಇದೆಯಷ್ಟೇ. ನೀರಿನ ಅವಿರತ ಪ್ರವಾಹದ ಮಾಹಿತಿಯ ಮಾದರಿಯಲ್ಲಿ ಪರಂಪರೆಯ ಆಶೋತ್ತರ ವಾಹಿನಿ ಮುಂದುವರಿಯಬೇಕಾಗುತ್ತದೆ. 'ಸ್ಮಶಾನದಲ್ಲಿ ಸತ್ತು ಬೂದಿಯಾಗಿಹ ಅಪ್ಪ ನಾಳ ನಾಳಗಳಲ್ಲಿ ತೀರ್ಥರೂಪ'–ಎಂಬ ಅಡಿಗರ ವಾಣಿ ಮನನೀಯವಾದುದು.

ಈ ಎಲ್ಲ ಅಂಶಗಳನ್ನೂ ಕೊಂಚವಾಗಿ ಬಿಂಬಿಸಲು ಎಷ್ಟು ಪರಿಶ್ರಮ ಪಡಬೇಕಾಗುತ್ತದೆ ಎಂಬುದನ್ನು ಈ ಪುಸ್ತಕವನ್ನು ಪರಿಶೀಲಿಸುವವರಿಗೆ ಗೊತ್ತಾಗುತ್ತದೆ. ಈ ಪ್ರಯತ್ನವನ್ನು ಕೈಗೊಂಡ ಮಾನ್ಯ ಶ್ರೀ ಪ್ರಭಾಕರ ರಾಯರು ಅಭಿನಂದನಾರ್ಹರು.

ಅಜ್ಜನ ಹೆಗಲೇರಿದ ಮೊಮ್ಮಗನ ಹಾಗೆ ನಮ್ಮ ಬದುಕು. ಆದರೆ ಅಜ್ಜನ ಬಗೆಗೆ ಅಜ್ಞತೆಯಾದರೆ? ಅದು ಗಂಭೀರ ಸಮಸ್ಯೆ. ಮೂರು ಋಣ*ಗಳಿಗೂ ಈ ಪುಸ್ತಕ ತನ್ನದೇ ಕೊಡುಗೆ ನೀಡಿದೆ. ಸಮಕಾಲೀನವಲ್ಲದ ಬದುಕಿನಲ್ಲಿ ಸರ್ವಕಾಲಿಕ ಸತ್ಯವನ್ನು ಹುಡುಕಿಕೊಳ್ಳಲು ಪ್ರಚೋದನೆಯನ್ನು ಇದು ಕೊಂಚವಾದರೂ ನೀಡಿದರೆ ಅವರ ಶ್ರಮ ಕೃತಕೃತ್ಯವೆನಿಸೀತು.

'ಬೆರಳ್ಗೆ ಕೊರಳ್' ನಾಟಕದ ಒಂದು ಪ್ರಸಂಗ: ಏಕಲವ್ಯನು ಅರ್ಜುನನನ್ನು ಭೇಟಿಯಾದಾಗ, ಆತನು ಯಾರೆಂದು ಕೇಳುತ್ತಾನೆ. ಆಗ ಅರ್ಜುನನು ತನ್ನ ಹೆಸರನ್ನು ಹೇಳುತ್ತಾನೆ. ಆಗ ಏಕಲವ್ಯನ ಪ್ರತಿಕ್ರಿಯೆ ವಿಚಿತ್ರವೆನಿಸಬಹುದಾದರೂ ಮೌಲಿಕವಾದದ್ದು – "ಹೀಗೆ ನಿನ್ನ ಹೆಸರಿನಿಂದ ಮಾತ್ರ ಗುರುತಿಸುವ ನಿನಗೆ ತಂದೆತಾಯಿಗಳಿಲ್ಲವೇ?. ಗುರುಹಿರಿಯರು ಮಾರ್ಗದರ್ಶಕರಿಲ್ಲವೇ?" ಎಂದು. ನಾವೆಲ್ಲಾ ಅರ್ಜುನನ ಹಾಗೆ. ಇದ್ದೂ ಇಲ್ಲದ ತಬ್ಬಲಿಗಳು.

ಇಲ್ಲಿ ಪ್ರಭಾಕರರಾಯರು ತಮ್ಮ ವಂಶಸ್ಥರ ಪರಿಚಯ ಮಾಡಿಕೊಡುವ ನೆವದಲ್ಲಿ, ಅವರ ಪರಂಪರೆಯವರ ಪ್ರಾತಃಸ್ಮರಣೀಯ ಗುಣವೇ ಅಲ್ಲದೇ ಪ್ರಾಸಂಗಿಕವಾಗಿ ಬರುವ ಪ್ರಾದೇಶಿಕ ಅಂಶಗಳು, ಸಾಮಾಜಿಕ ಸ್ಥಿತಿಗತಿಗಳು, ನಂಬಿಕೆಗಳು ಮತ್ತು ಆಚರಣೆಗಳು ಲೇಖಕರ ಅಭಿರುಚಿಯುನ್ನು ಬಿಂಬಿಸುವಂತಹದು.

ಇಲ್ಲಿನ ಅಭಿಪ್ರಾಯಗಳನ್ನು ಒಪ್ಪುವುದು ವಾಚಕರಿಗೆ ಬಿಟ್ಟದ್ದು. ಆದರೆ ಈ ಪ್ರಚೋದನೆ ಅವರಿಗೆ ಉಂಟಾದದ್ದು ವಂದನೆ-ನಿಂದನೆಗಳ ನಿರೀಕ್ಷೆ ಇಲ್ಲದೆ. ಅವರ ಕುಟುಂಬದ ಸದಸ್ಯರು ಇಂತಹ ಸುಸಂಸ್ಕೃತ ಪ್ರಯತ್ನಗಳಿಗೆ ಪ್ರೋತ್ಸಾಹ ನೀಡಲಿ ಎಂದು ಹಾರೈಸುವುದು ದುರಾಶೆಯಾದೀತೇ?

**ಪ್ರೊ. ಎಂ. ಆರ್. ನಾಗರಾಜು**
ಪ್ರಧಾನ ಸಂಪಾದಕರು, 'ಬಾಲ ವಿಜ್ಞಾನ'
ಎಫ್-೩, ಎಸ್.ಎಫ್.ಎಸ್ ನಿವಾಸಗಳು
೭ನೇ ಬಿ ಅಡ್ಡ ರಸ್ತೆ
ಯಲಹಂಕ ಉಪನಗರ, ಬೆಂಗಳೂರು-೬೪
ದೂ: ೮೪೬೨೮೨೬, ೩೩೪೦೫೦೭

---

**ಮೂರು ಋಣಗಳು*

***ದೇವ ಋಣ:*** *ಎಂದಾಗ ಅಮೂರ್ತ ನಿರ್ಗುಣ ದೇವರಲ್ಲದೇ ದೇವರ ಮೂರ್ತಿ. ರೂಪವಾದ, ನಿಸರ್ಗ ಋಣವೂ ಸೇರಿದೆ ಎಂದು ನಮ್ಮ ಸ್ಪಷ್ಟ ನಿಲುವು.*

***ಪಿತೃ ಋಣ:*** *ಎಂದಾಗ ತಂದೆ ತಾಯಿಗಳಲ್ಲದೇ ತಂದೆ ತಾಯಿಯರಂತೆಯೇ ವಾತ್ಸಲ್ಯ ತೋರಿ ಬೆಂಬಲಿಸಿದ ಗುರುಹಿಯರೆಲ್ಲರ ಋಣವೂ ಸೇರಿದೆ.*

***ಋಷಿ ಋಣ:*** *ಎಂದಾಗ ಸಮಾಜವನ್ನು ಸುಸಂಸ್ಕೃತಗೊಳಿಸಲು ದುಡಿದ ಎಲ್ಲಾ ಮಹನೀಯರ ಋಣವೂ ಸೇರಿದೆ.*

*ನಮ್ಮ ಮಥನ, ಮಾತು, ಕೃತಿಗಳಲ್ಲಿ ದೈವದ ಅನಂತತೆ, ನಮ್ಮ ಬದುಕಿನ ಸಾಲಲಿತತೆ, ನಿಸರ್ಗಕ್ಕೆ ಸಲ್ಲಿಸಬೇಕಾದ ಮಾನ್ಯತೆ, ನಮ್ಮನ್ನು ನಮ್ಮನ್ನಾಗಿಸಿದವರ ಬಗೆಗೆ ಧನ್ಯತೆ ಮತ್ತು ವೈಯಕ್ತಿಕ ಗಳಿಕೆ, ಸಾಮರ್ಥ್ಯ ಪ್ರೀತಿಗಳನ್ನು ಸಮಾಜದ ಒಳಿತಿಗೆ ಧಾರೆ ಎರೆದವರ ಆದರ್ಶ ಪ್ರಿಯತೆ – ಈ ಎಚ್ಚರವಿರುವವರು ಮಾತ್ರ ಋಣ ಪ್ರಜ್ಞೆ ಉಳ್ಳವರು.*

# ಮನೆದೇವರು

ಕಲ್ಯಾಣಾದ್ಭುತಗಾತ್ರಾಯ ಕಾಮಿತಾರ್ಥಪ್ರದಾಯಿನೇ।
ಶ್ರೀಮದ್ವೆಂಕಟನಾಥಾಯ ಶ್ರೀನಿವಾಸಾಯ ತೇನಮಃ॥

# ಅಸತೋಮ ಸದ್ಗಮಯ...

ಮಾನವನು ಅಸತ್ಯದಿಂದ ಸತ್ಯದೆಡೆಗೆ, ತಮಸ್ಸಿನಿಂದ ಜ್ಯೋತಿಯೆಡೆಗೆ, ಮೃತ್ಯುವಿನಿಂದ ಅಮರತ್ವದೆಡೆಗೆ ಸಾಗುವ ಓರ್ವ ಯಾತ್ರಿಕ. ಅವನ ಬದುಕೇ ಒಂದು ಯಾತ್ರೆ. ಮಾನವನ ಬಾಳಿನಲ್ಲಿ ಸುಖಶಾಂತಿಗಳು ಲಭಿಸಿ ಬದುಕು ಯಶಸ್ವಿಯಾಗಬೇಕಾದರೆ ವ್ಯಕ್ತಿಯ ಶಾರೀರಕ ಮಾನಸಿಕ ಮತ್ತು ಆಧ್ಯಾತ್ಮಿಕ ಬೆಳವಣಿಗೆಗಳು ಸಮರ್ಪಕವಾಗಿ ಕೂಡಿಬರಬೇಕು. ಜೀವನದಲ್ಲಿ ಅನುಭವಕ್ಕೆ ಬರುವ ಕಷ್ಟಸುಖಗಳು, ಏರುಪೇರುಗಳು, ವೃದ್ಧಿ–ವಿಯೋಗಗಳು ಎಲ್ಲವೂ ದ್ವಂದ್ವಗಳು. ಇವುಗಳ ಪ್ರಭಾವಕ್ಕೆ ಒಳಗಾಗುವ ಮಾನವ ವಾಸ್ತವವಾಗಿ ಪ್ರಪಂಚದ ಆಗುಹೋಗುಗಳನ್ನು ನಿಯಂತ್ರಿಸುವ ನಿಯಾಮಕನಿದ್ದಾನೆಂದು ಬಲವಾಗಿ ನಂಬಿದ್ದಾನೆ. ಆದ್ದರಿಂದಲೇ ಆ ದಿವ್ಯ ಶಕ್ತಿಯನ್ನು ನಂಬಿ ಆರಾಧಿಸುತ್ತಾನೆ. ಈ ಸರ್ವಶಕ್ತ ದೇವರೊಬ್ಬನೆ. ಅವನ ನಾಮ ಹಲವು. ಹಾಗೆಯೇ ದೇವರನ್ನು ಸೇರುವ ಹಾದಿಗಳೂ ಹಲವು. ಈ ರೀತಿ ನಡೆಯುವ ಮಾರ್ಗವೇ ತೀರ್ಥಯಾತ್ರೆ. ಸಾಮಾಜಿಕ ದೃಷ್ಟಿಯಿಂದ ನೋಡಿದರೆ ಹಿರಿಯರ ಪರಿಚಯವೂ ಕೂಡಿಬರುವ ಒಂದು ತೀರ್ಥಯಾತ್ರೆ. ಇದೇ ಜೀವನದ ಪ್ರಥಮ ಧಾರ್ಮಿಕ ತಳಹದಿ.

ಕುಮಾರಸ್ವಾಮಿ ಗಣಪತಿಯರಲ್ಲಿ ಯಾರು ಹೆಚ್ಚೆಂದು ಪಂಥ ಬಂದಾಗ ಗಣಪತಿ ತಂದೆತಾಯಿಗಳಿಗೆ ಪ್ರದಕ್ಷಿಣೆ ಮಾಡಿ ಭೂಮಂಡಲದ ಯಾತ್ರೆಯಾಯಿತೆಂದು ತೀರ್ಥಯಾತ್ರಾ ಫಲಪಡೆದ. ಮಾತಾಪಿತೃಗಳಿಂದ ಪ್ರಥಮ ವಿಶ್ವ ಪರ್ಯಟನೆಯ ಫಲ ಪಡೆದ. ಪ್ರತಿವರ್ಷ ಹಿರಿಯರನ್ನು ಸ್ಮರಿಸಿ ಶ್ರದ್ಧೆಯ ಪೂಜೆ ಆಚರಿಸಿದರೆ ಅದೇ ಆರಾಧನೆ. ಎಲ್ಲ ಪುಣ್ಯಕಾರ್ಯಗಳೂ ತೀರ್ಥಯಾತ್ರೆಗಳೇ. ಎಲ್ಲ ಸತ್‌ಸಂಸ್ಕಾರಗಳೂ ಪುಣ್ಯಫಲಗಳೇ. ನದಿಯಲ್ಲಿ ಮಿಂದರೆ ಸ್ನಾನ, ನೆಂದರೆ ಅಭಿಷೇಕ. ಎಲ್ಲ ನದಿಗಳ ಪವಿತ್ರ ತೀರ್ಥಗಳನ್ನು ತಂದು ಹಿರಿಯರಿಗೆ ಸಿಂಚನ ಮಾಡಿಸಿದರೆ ಅಭಿಷೇಕ. ಸ್ವರ್ಣಪುಷ್ಪಗಳನ್ನೂ ಹಿರಿಯರ ಮೇಲೆ ಸಿಂಪಡಿಸಿದರೆ ಕನಕಾಭಿಷೇಕ.

ಜನ್ಮಜನ್ಮಾಂತರಗಳ ಯಾತ್ರೆಯಲ್ಲಿ ನಾವು ಅನೇಕ ಜನ್ಮಗಳಲ್ಲಿ ಹುಟ್ಟುತ್ತೇವೆ. ಅನೇಕ ಸ್ಥಳಗಳನ್ನು ಸೇರುತ್ತೇವೆ. ಸಿಕ್ಕಿದ ಜನ್ಮದಲ್ಲಿ ಲೋಕಹಿತ

ಕಾರ್ಯ ಮಾಡಿದರೆ ಮತ್ತೊಮ್ಮೆ ಉತ್ತಮ ಜನ್ಮವೆತ್ತುತ್ತೇವೆ.

ಈ ಜೀವನ್ಮರಣಗಳ (ಹುಟ್ಟು ಸಾವುಗಳ) ಸರಮಾಲೆಯೇ ಜೀವನ.
***ಪುನರಪಿ ಜನನಂ ಪುನರಪಿ ಮರಣಂ। ಪುನರಪಿ ಜನನಿ...***
ಇದುವೇ ಜೀವನ. ಈ ಚಕ್ರಭ್ರಮಣದಲ್ಲಿ ತೊಳಲುತ್ತಿರುವ ಜೀವಿಗೆ ಜೀವನವೆಲ್ಲಾ ರಹಸ್ಯ. ಅವನು ಈ ಜೀವ ವೃಕ್ಷದ ಅಗೋಚರ ಬೇರುಗಳಿಗೆ ನೀರೆರೆದು ಅದರ ಫಲವುಣ್ಣ ಬೇಕು. ಆಗಲೇ ಅವನಿಗೆ ಮೋಕ್ಷ. ಇದೇ ಜೀವನದ ಗುರಿ.

ಜಲ, ಭೂಗೋಳದ ಜೀವರಾಶಿಗೆ ಆಧಾರಶಕ್ತಿ. ಅದು ದೇಹದ ಕೊಳೆಯನ್ನು ನಿವಾರಿಸುತ್ತದೆ, ತನುವಿನ ದಾಹವನ್ನು ನಿವಾರಿಸಿ ಶಕ್ತಿಯನ್ನು ತುಂಬುತ್ತದೆ.

**ತದೇವಾಗ್ನಿಸ್ತದ್ವಾಯುಸ್ತತ್ಸೂರ್ಯಸ್ತದುಚಂದ್ರಮಾಃ**
**ತದೇವಶುಕ್ರಮಮೃತಂ ತದ್ಬ್ರಹ್ಮತದಾಪಃಸಪ್ರಜಾಪತಿಃ**

ಜಲವಿಲ್ಲದ ಸ್ಥಳವಿಲ್ಲ – ಸ್ಥಳವಿಲ್ಲದ ಜಲವೂ ಇಲ್ಲ. ಆದ್ದರಿಂದ ನೆಲ–ಜಲ ಲಕ್ಷ್ಮಿನಾರಾಯಣ ರೂಪ, ದೇವ–ಜೀವಗಳ ಸಂಕೇತ. ಈ ಜೀವ ದೈವತ್ವದ ಕಡೆಗೆ ಸಾಗಬೇಕಾದರೆ ಅದಕ್ಕೆ ಭೌತಿಕವಾಗಿ ಅಭಿಷೇಕದ ಅವಶ್ಯಕತೆಯಿದೆ.

ಮಾನವನ ಜೀವನವನ್ನು ನದಿಗೆ ಹೋಲಿಸುತ್ತಾರೆ. ಕಾರಣ ಎರಡರ ನಡಿಗೆಯಲ್ಲೂ ಸಾಮ್ಯವಿದೆ. ನದಿಯ ನಡಿಗೆ ಸಾಗರದತ್ತ. ಜೀವನದ ಗುರಿ ಮೋಕ್ಷದತ್ತ. ನದಿ ಒಂದು ದಡ ಸೇರಿದರೆ ಅದೇ ಮುಕ್ತಿ. ಭಗವಂತನಿಗೆ ಕ್ಷೀರಾಭಿಷೇಕ, ಜೀವಿಗೆ ಜಲಾಭಿಷೇಕ – ಜೀವನ ಪಥದಲ್ಲೊಮ್ಮೆ ಕನಕಾಭಿಷೇಕ.

ಮಾನವ, ಪ್ರತಿ ದಿನವೂ, ಪ್ರತಿ ಕ್ಷಣವೂ ಏನಾದರೊಂದು ಕಲಿಯುತ್ತಲೇ ಇರುತ್ತಾನೆ. ತನ್ನ ಸಂಪರ್ಕಕ್ಕೆ ಬರುವ ಎಲ್ಲಾ ವಿಷಯಗಳನ್ನೂ ಅರಿಯುವ ಪ್ರಯತ್ನ ಮಾಡುತ್ತಲೇ ಇರುತ್ತಾನೆ. ಹೀಗಿರುವಾಗ ತನ್ನ ಹಾಗೂ ತನ್ನ ಪೂರ್ವಜರ ಬಗ್ಗೆ ಅವನಿಗೆ ತಿಳಿಯುವ ಆಸಕ್ತಿ ಇರುವುದು ಸಹಜ.

ನಮ್ಮ ಹಿರಿಯರು ತಮ್ಮ ಜೀವನವನ್ನು ಸಮಾಜ ನಿರ್ಮಾಣದಲ್ಲಿ

ಎಲೆಮರೆಯ ಕಾಯಿಗಳಂತೆ ಕಳೆದರು. ಇವರನ್ನು ಗುರುತಿಸಿ, ಅವರು ಅನುಭವಿಸಿದ ನೋವು, ನಲಿವು, ಅದ್ಭುತ, ಆಶ್ಚರ್ಯ, ಪರಿಶೋಧನೆ, ಸಂಶೋಧನೆ, ಸಮರ, ಶಾಂತಿ ಮುಂತಾದವುಗಳ ಬಗ್ಗೆ ಅರಿತು ಅವರ ಮಾರ್ಗದರ್ಶನ ಪಡೆಯುವುದೇ ನಮ್ಮ ಗುರಿ. ಭಾರತೀಯರ ಸಾಮಾಜಿಕ ಮೌಲ್ಯಗಳು ಹಾಗೂ ತಲೆತಲಾಂತರಗಳಿಂದ ಬೇರೂರಿ ಬಂದಿರುವ ಕೌಟುಂಬಿಕ ಪದ್ಧತಿಗಳು ಇಂದು ವಿಶ್ವಕ್ಕೆ ದಾರಿದೀಪಗಳಾಗಿವೆ. ನಮ್ಮ ಪೂರ್ವಜರ ದೂರದೃಷ್ಟಿ ಹಾಗೂ ತತ್ವಚಿಂತನೆಗಳೇ ಇದಕ್ಕೆ ಮೂಲ ಕಾರಣ.

ಈ ನಿಟ್ಟಿನಲ್ಲಿ ನಮ್ಮ ಸಮುದಾಯದ ಯುವಜನಾಂಗದ ಪ್ರಯೋಜನಕ್ಕಾಗಿ, ನಮ್ಮ ಸಮಾಜದ, ಅದರಲ್ಲೂ ವಿಶೇಷವಾಗಿ ಘಟ್ಟುವಂಶದ, ಹಿರಿಯರ ಜ್ಞಾಪಕಾರ್ಥವಾಗಿ ಒಂದು ಕಿರುಹೊತ್ತಿಗೆಯನ್ನು ಹೊರತರುವ ಪ್ರಯತ್ನಕ್ಕೆ ಕೈಹಾಕಿದೆವು. ನಮ್ಮಲ್ಲಿಯ ಹಿರಿಯರನ್ನು ಸಂಧಿಸಿ ಅವರ ಜೀವನಾನುಭವವನ್ನು ಅರಿತು ಅದನ್ನು ಪುಸ್ತಕ ರೂಪದಲ್ಲಿ ಸಂಗ್ರಹಿಸುವ ಬೃಹತ್ಕಾರ್ಯಕ್ಕೆ ಮುಂದಾದೆವು. ನಮ್ಮ ತಾಯಿ ಶ್ರೀಮತಿ ಸರೋಜಮ್ಮನವರ ಕನಕಾಭಿಷೇಕ ಸಮಾರಂಭದ ಸಂದರ್ಭವೇ ಈ ಮಹತ್ಕಾರ್ಯಕ್ಕೆ ಪ್ರೇರೇಪಣೆ.

ನಮ್ಮ ತಾಯಿ ಸರೋಜಮ್ಮನವರಿಗೆ ೧೦-೬-೯೬ರಂದು ಕನಕಾಭಿಷೇಕ ಮಹೋತ್ಸವವು ನೆರವೇರಿತು. ನಮ್ಮ ಆಹ್ವಾನದ ಮೇರೆಗೆ ನಮ್ಮ ಬಂಧು ಬಾಂಧವರು ತೋರಿದ ಪ್ರೀತಿವಿಶ್ವಾಸ ಮತ್ತೆ ಈ ರೀತಿಯ ಕಾರ್ಯಕ್ರಮ ನೆರವೇರಿಸಬೇಕೆಂಬ ಕಾರ್ಯಕ್ಕೆ ಚಾಲನೆ ನೀಡಿತು. ನಮ್ಮ ಪೂರ್ವಜರ ಜೀವನದ ಬಗ್ಗೆ ತಿಳಿದುಕೊಳ್ಳುವ ಹಂಬಲವೂ ಇದರಿಂದ ತೀವ್ರವಾಯಿತು.

ಘಟ್ಟು ವಂಶೀಕರೆಲ್ಲರನ್ನೂ ಒಟ್ಟುಗೂಡಿಸುವ ಮೊಟ್ಟಮೊದಲ ಪ್ರಯತ್ನ ಮಾಡಿದವರು ಅಗ್ರಜ ಮಾದಣ್ಣನವರು. ಅವರು ನಮ್ಮ ಪೂರ್ವಜರ ಬಗ್ಗೆ ತಿಳಿಸಿದ ವಿಷಯಗಳು ನಮ್ಮ ಪೂರ್ವಜರನ್ನು ಮತ್ತು ಅವರ ಸಮಕಾಲೀನ ಬಂಧುಗಳನ್ನು ತಿಳಿಯುವ ಆಸೆ ನಮ್ಮಲ್ಲಿ ಹುಟ್ಟಿಸಿತು. ಎಲ್ಲಕ್ಕಿಂತ ಮಿಗಿಲಾಗಿ ನಮ್ಮ ತೀರ್ಥರೂಪ ರಾಮಚಂದ್ರ ದೊಡ್ಡಪ್ಪನವರು ತೋರಿದ ಮಾರ್ಗದರ್ಶನ ನಮಗೆ ಈ ಕಾರ್ಯ ಮಾಡಲು ಪ್ರೇರೇಪಿಸಿತು.

ಈ ಪ್ರಯತ್ನವನ್ನು ಘಟ್ಟು ವಂಶೀಕರನ್ನು ಕೇಂದ್ರವಾಗಿಟ್ಟುಕೊಂಡು, ಅವರೊಂದಿಗೆ ಸಂಬಂಧ ಬೆಳೆಸಿರುವ ಇತರ ಗೋತ್ರ ಬಂಧುಗಳ ಬಗ್ಗೆಯೂ

ಈ ಪುಸ್ತಕದಲ್ಲಿ ವಿವರಣೆ ನೀಡಲಾಗಿದೆ. ಈ ಪ್ರಯತ್ನಕ್ಕೆ ನಿರೀಕ್ಷಿತ ಪ್ರತಿಕ್ರಿಯೆ ದೊರೆಯದಿದ್ದರೂ ನಮ್ಮ ಅನೇಕ ಬಂಧು ಬಾಂಧವರು ಸಾಕಷ್ಟು ಮಾಹಿತಿಯನ್ನು ನೀಡಿ ಸಹಕರಿಸಿದರು. ನಮ್ಮ ಸಮಾಜದ ಅನುಭವಿ ಬಂಧುಗಳು ಈ ಪುಸ್ತಕ ಪ್ರಕಟಣೆಯಲ್ಲಿ ಸಕ್ರಿಯವಾಗಿ ಪಾಲ್ಗೊಂಡರು.

ಘಟ್ಟು ವೃಕ್ಷದ ಮಾಹಿತಿ ಸಂಗ್ರಹಕ್ಕೆ ಅಂಕುರಾರ್ಪಣ ಮಾಡಿದವರು ನಮ್ಮ ಮಾವ ದಿ॥ ಡಿ. ವಿ. ವೆಂಕಟಾಚಲಯ್ಯನವರು. ನನ್ನ ವಿವಾಹವಾದಮೇಲೆ ನಮ್ಮ ಮಾವನ ಮನೆಗೆ ಹೋದಾಗಲೆಲ್ಲಾ ನನಗೆ ನಮ್ಮ ಮನೆತನದ ಹಿರಿಯರ ಬಗ್ಗೆ ಕಥೆಗಳನ್ನು ಹೇಳುತ್ತಿದ್ದರು. ಜೊತೆಗೆ ಅವರು ಕಣ್ವಮಠದ ಬಗ್ಗೆ ಕೊಡುತ್ತಿದ್ದ ಮಾಹಿತಿ ನನಗೆ ನಮ್ಮ ಪೂರ್ವಜರ ಬಗ್ಗೆ ಹೆಚ್ಚು ಆಸಕ್ತಿ ಮೂಡಿಸಿತು. ನಮ್ಮ ಅರವತ್ತು ಮನೆ ಬಂಧುಗಳ ಬಗ್ಗೆ ಮಾಹಿತಿಯನ್ನು ಕಥಾರೂಪದಲ್ಲಿ ಬರೆದುಕೊಟ್ಟು, ಈ ಪುಸ್ತಕ ಪ್ರಕಟಿಸಲು ಎಲ್ಲಾ ರೀತಿಯಲ್ಲೂ ನನಗೆ ಸಹಕಾರ ಕೊಟ್ಟವರು ನಮ್ಮ ಭಾವ ಡಿ. ವಿ. ಪ್ರಭಾಕರ್‌ರವರು. ನನ್ನ ತಮ್ಮ ಚಿ. ನಾಗಭೂಷಣರಾವ್, ನಮ್ಮ ವಂಶೀಕರ ವಂಶವೃಕ್ಷವನ್ನು ತಯಾರಿಸಿ ಕೊಟ್ಟು ಸಹಕರಿಸಿದ್ದಾನೆ. ಇದರ ಆಧಾರದಿಂದಲೇ ನಮಗೆ ಹೆಚ್ಚು ಮಾಹಿತಿ ಸಂಗ್ರಹಿಸಲು ಸಾಧ್ಯವಾಯಿತು. ಈ ಮಹತ್ಕಾರ್ಯದಲ್ಲಿ ಹೆಚ್ಚು ಸಹಕಾರ ಮತ್ತು ಸಲಹೆ ನೀಡಿದ ಇನ್ನೊಬ್ಬರೆಂದರೆ ನಮ್ಮ ಕಣ್ವ ಸಮಾಜದ ಸಂಘಟಕ ಶಕ್ತಿಯ ಸಾಕಾರಮೂರ್ತಿ ಜಿ. ವಿ. ವೆಂಕಟೇಶರಾಯರು.

ದಳಸನೂರು ಘಟ್ಟು ವಂಶದವರ ಕುಟುಂಬಗಳ ಬಗ್ಗೆ ಹೆಚ್ಚು ಮಾಹಿತಿ ಸಂಗ್ರಹಿಸಲು ನಮಗೆ ಸಾಧ್ಯವಾಗಲಿಲ್ಲ. ಈಗ ಸಂಗ್ರಹಿಸಿರುವ ಎಲ್ಲಾ ವಿಷಯಗಳನ್ನೂ ಶ್ರಮವಹಿಸಿ ಸಂಪಾದಿಸಲು ನನಗೆ ನೆರವಾದವರಲ್ಲಿ ಚಿರಂಜೀವಿ ವಿನಯನ ಪಾತ್ರ ಹಿರಿದು. ಹಾಗೆಯೇ ಈ ಪುಸ್ತಕದ ಪದಜೋಡಣೆ ಹಾಗೂ ವಿನ್ಯಾಸವನ್ನು ಚಿ. ರಾಘವೇಂದ್ರನು ಅಂದವಾಗಿ ಮಾಡಿಕೊಟ್ಟಿದ್ದಾನೆ. ನನಗೆ ಸಮಯೋಚಿತ ಸಮಾಲೋಚನೆಗೆ ಗ್ರಾಸ ಒದಗಿಸಿ ಆಶೀರ್ವದಿಸಿದ ಶ್ರೀ ಜಿ. ಆರ್. ಶ್ರೀನಿವಾಸ ರಾವ್ (ಸೀನಣ್ಣ), ಚಿ. ರಾಜವರ್ಧನ, ತೀ. ಸ. ಕಾಮಪಾಲರಾವ್, ವೆಲಗಲಬುರ‍್ರೆ ಶೇಷಪ್ಪ, ನೆಗವಾರದ ರಘುನಂದನ ರಾವ್, ಕೆ. ಆರ್. ನರಸಿಂಹನ್, ಇವರೆಲ್ಲರಿಗೂ ನನ್ನ ಕೃತಜ್ಞತೆಗಳು. ಹಾಗೆಯೇ ಮುನ್ನುಡಿಯನ್ನು ಬರೆದುಕೊಟ್ಟು ಪ್ರೊ. ಎಂ. ಆರ್. ನಾಗರಜುರವರು ಪುಸ್ತಕದ ಮೌಲ್ಯವನ್ನು ಹೆಚ್ಚಿಸಿದ್ದಾರೆ.

ಬರಹ ಲಿಪ್ಯಂತರ ಸಾಫ್ಟ್‌ವೇರ್ ಬ್ರಹ್ಮ ಶ್ರೀ ಶೇಷಾದ್ರಿ ವಾಸುರವರಿಗೆ ಪ್ರತ್ಯೇಕವಾಗಿ ಕೃತಜ್ಞತೆ ಸಲ್ಲಿಸಬೇಕಾದುದು ನಮ್ಮ ಕರ್ತವ್ಯ. ಬರಹ ಸಾಫ್ಟ್‌ವೇರ್ ಲಭ್ಯವಿಲ್ಲದಿದ್ದಲ್ಲಿ ಈ ಪುಸ್ತಕ ಕಾರ್ಯ ಯಶಸ್ವಿಯಾಗುತ್ತಿರಲಿಲ್ಲ.

ಈ ಕಿರುಪ್ರಯತ್ನ ನಮ್ಮ ಹಿರಿಯರನ್ನು ಅರಿಯಲು ಸಹಾಯವಾಗುವುದೆಂದು ನನ್ನ ನಂಬಿಕೆ. ಈ ಕಾರ್ಯದಲ್ಲಿ ಹಲವಾರು ಲೋಪದೋಷಗಳು ಕಂಡುಬರಬಹುದು. ಇದನ್ನು ಸರಿಯಾದ ಭಾವನೆಯಿಂದ ಸ್ವೀಕರಿಸಿ ನಮಗೆ ಮಾರ್ಗದರ್ಶನ ನೀಡಬೇಕೆಂದು ಪ್ರಾರ್ಥನೆ. ನಮ್ಮ ಪೂರ್ವಿಕರ ಗುಣಗಳನ್ನು ಸಮಾಜಸೇವಾ ಕಾರ್ಯಗಳನ್ನು ಸಂಕ್ಷಿಪ್ತವಾಗಿ ಕೀರ್ತನ ರೂಪದಲ್ಲಿ ಈ ಕೆಳಕಂಡ ರೀತಿಯಲ್ಲಿ ವರ್ಣಿಸಬಹುದು.

*ವಸುದೆಯೊಳಗೆಣೆಗಾಣೆ ನಾ ಸ್ವರ್ಣ ಭೂಮಿಯ*
*ಘಟ್ಟು ಸೋದರರ ಅಗಣಿತ (ಗುಣ) ಸಂಘ ಶಕ್ತಿಯನು ॥ಪ॥*
*ಶಮದಲ್ಲಿ ದಮದಲ್ಲಿ ಕಷ್ಟಗಳ ಸಹಿಪಲ್ಲಿ*
*ಕುಟಿಲ ಮತಿಗಳ ತಡೆವಲ್ಲಿ ಕುಶಲ ಬುದ್ಧಿಯಲಿ*
*ಯಮನಿಯಮ ನಿಷ್ಠೆಯಲಿ ಅನುಷ್ಠಾನದಲಿ*
*ಅಹಂಕಾರ ಮಮಕಾರ ಕೋಪಾಗ್ನಿ ತ್ಯಾಗದಲಿ ॥೧॥*
*ವೇದಶಾಸ್ತ್ರಾಭ್ಯಾಸ ಸಮಾಜ ಶಾಸ್ತ್ರದಲಿ*
*ಕೃಷಿಶಾಸ್ತ್ರ ಗೋಸಂರಕ್ಷಣೆಯ ಮಾರ್ಗದಲಿ*
*ಧರ್ಮ ರಕ್ಷಣೆಯಲ್ಲಿ ದೇವತೆಯ ಪೂಜೆಯಲಿ*
*ಸಾದುಸಮ್ಮತ ಸಕಲ ಸಂಪದಗಳಲ್ಲಿ ॥೨॥*
*ಭಕ್ತಿ ಶ್ರದ್ಧೆಯ ದಾಸವೃತ್ತಿಯ ನಿರ್ಮಲತೆಯಲಿ*
*ಸಂಘರ್ಷಗಳ ವಿಮರ್ಶೆಯ ಚತುರ ಯುಕ್ತಿಯಲಿ*
*ದಾಸಾನುದಾಸನ(ರ) ಮೂಡಭಕ್ತಿಯ ರಚನೆಯಲಿ*
*ವರಕರುಣಿ ವಿಠ್ಠಲ ಕೃಷ್ಣರ ನಿಜ ಪುತ್ರರಲ್ಲಿ ॥೩॥*

**ಜಿ. ವಿ. ಪ್ರಭಾಕರ ರಾವ್**
ವೃಷನಾಮ ಸಂವತ್ಸರದ ಮಾಘ ಶುದ್ಧ ಪಂಚಮಿ
೧೭-೨-೨೦೦೨, ರವಿವಾರ

# ಶ್ರೀಮನ್ಮಧ್ವಾಚಾರ್ಯರು



ಅಭ್ರಮಂ ಭಂಗರಹಿತಂ ಅಜಡಂ ವಿಮಲಂ ಸದಾ।
ಆನಂದತೀರ್ಥಮತುಲಂ ಭಜೇ ತಾಪತ್ರಯಾಪಹಂ॥

# ಈ ಪುಸ್ತಕದ ಬಗ್ಗೆ

ಈ ಪುಸ್ತಕದ ಕೆಲಸ ಪ್ರಾರಂಭಿಸಿದ ಮೊದಮೊದಲು ನಮ್ಮನ್ನು ಕಾಡಿದ ಪ್ರಶ್ನೆಗಳು ಇವು – ಈ ಪುಸ್ತಕದ ಉದ್ದೇಶ ಏನು? ಈ ಪುಸ್ತಕದ ಸ್ವರೂಪ ಹೇಗಿರಬೇಕು? ಈ ಪುಸ್ತಕಕ್ಕೆ ಬೇಕಾದ ಮಾಹಿತಿ ಸಂಗ್ರಹಣೆ ಹೇಗೆ ಮಾಡುವುದು? ಇತ್ಯಾದಿ.

ನಮ್ಮ ಪೂಜ್ಯ ತಾಯಿಯವರ ಕನಕಾಭಿಷೇಕದ ಸಂದರ್ಭದಲ್ಲಿ ಅಂಕುರಗೊಂಡ ಈ ಪುಸ್ತಕದ ಯೋಜನೆಗೆ ಕೈ ಹಾಕುವ ಮೊದಲು ಈ ಪುಸ್ತಕದ ಅವಶ್ಯಕತೆ ನಿಜವಾಗಲೂ ಇದೆಯೇ? ನಮ್ಮ ಸಮಾಜಕ್ಕೆ ಇಂತಹ ಪುಸ್ತಕಗಳ ಅಗತ್ಯ ಎಷ್ಟಿದೆ? ಅಗತ್ಯವಿದ್ದಲ್ಲಿ ಇದರ ಸ್ವರೂಪ ಹೇಗಿರಬೇಕು? ಎಂಬುದರ ಬಗ್ಗೆ ಒಂದು ಸ್ಪಷ್ಟ ಅಭಿಪ್ರಾಯಕ್ಕೆ ಬರಲು ಕೆಲವು ವಾರಗಳೇ ಹಿಡಿಯಿತು. ಇದಾದ ನಂತರ ಮಾಹಿತಿ ಸಂಗ್ರಹಣೆ ಹೇಗೆ ಮಾಡಬೇಕು ಎಂಬ ಪ್ರಶ್ನೆ ಎದುರಾಯಿತು.

ಪ್ರಾರಂಭಕ್ಕೆ ಈ ಪುಸ್ತಕದ ವಿಚಾರ ನಮ್ಮ ಘಟ್ಟು ವಂಶದ ಪ್ರತಿಯೊಬ್ಬರಿಗೂ ತಲುಪಬೇಕು ಹಾಗೂ ಅವರೊಂದಿಗೆ ವಿಚಾರ ವಿನಿಮಯ ಏರ್ಪಾಡಾಗಬೇಕು ಹಾಗೂ ಅವರೆಲ್ಲರ ಸಲಹೆಗಳನ್ನೂ ಕಾರ್ಯರೂಪಕ್ಕೆ ತರಬೇಕೆಂದು ನಿರ್ಧರಿಸಿದೆವು. ಅದರಂತೆ ಒಂದು ಸಂಕ್ಷಿಪ್ತ ಪ್ರಶ್ನಾವಳಿಯನ್ನು ತಯಾರಿಸಿದೆವು. ನಮ್ಮ ವಂಶೀಯರು ಮತ್ತು ಅವರೊಂದಿಗೆ ಸಂಬಂಧ ಬೆಳೆಸಿದ ಕುಟುಂಬಗಳ ಮುಂದೆ ಈ ಕೆಲವು ಪ್ರಶ್ನೆಗಳನ್ನು ಮುಂದಿಟ್ಟೆವು:

ನಮ್ಮ ವಂಶದಲ್ಲಿ ಬರುವ ಪ್ರಭಾವಶಾಲಿ ವ್ಯಕ್ತಿಗಳು ಯಾರು ಮತ್ತು ಅವರ ಸಾಧನೆಗಳೇನು? ಸಮಾಜಕ್ಕೆ ಈ ಹಿರಿಯರ ಸಕಾರಾತ್ಮಕ ಕೊಡುಗೆಯೇನು? ಘಟ್ಟು ವಂಶದ ಮೂಲ ಪುರುಷರು ಮತ್ತು ಸಂಸ್ಥಾನಗಳ್ಯಾವುವು? ಆಧ್ಯಾತ್ಮಿಕ ಪ್ರಪಂಚಕ್ಕೆ ಘಟ್ಟು ವಂಶೀಕರ ಕೊಡುಗೆಯೇನು? ಸಮುದಾಯ ಸೇವೆ–ಸಮಾಜಸೇವೆಗಳಲ್ಲಿ ಇವರ ಪಾತ್ರವೇನು? ಇತ್ಯಾದಿ.

ಆದರೆ, ಈ ಪ್ರಶ್ನಾವಳಿಗೆ ನಿರೀಕ್ಷಿತ ಪ್ರತಿಕ್ರಿಯೆ ದೊರೆಯಲಿಲ್ಲ. ಈ ಪುಸ್ತಕದ ಬಗ್ಗೆ ನಮಗೆ ಮಿಶ್ರ ಪ್ರತಿಕ್ರಿಯೆ ಬಂತು. ಕೆಲವರು ಅತಿ

ಮುತುವರ್ಜಿಯಿಂದ ತಮಗೆ ತಿಳಿದ ವಿಚಾರಗಳನ್ನು ನಮಗೆ ಬರೆದು ಕಳುಹಿಸಿದರೆ ಇನ್ನು ಕೆಲವರು ಈ ಪುಸ್ತಕ ವ್ಯರ್ಥ ಪ್ರಯತ್ನ ಎಂದು ಪ್ರತಿಕ್ರಿಯಿಸಿದರು.

'ನಮ್ಮ ವಂಶೀಕರೇನು ರಾಜ–ಮಹಾರಾಜರೇ, ಪ್ರಧಾನಿಗಳೇ ಅಥವಾ ವಿಜ್ಞಾನಿಗಳೇ? ಇವರ ಬಗ್ಗೆ ಪುಸ್ತಕ ತರುವ ಕೆಲಸವನ್ನೇನು ಮಾಡಿದ್ದಾರೆ? ಇತ್ಯಾದಿ ಪಶ್ನೆಗಳೂ ಕೇಳಿ ಬಂದವು. ನಿಜ, ನಮ್ಮ ವಂಶೀಕರು ರಾಜ–ಮಹಾರಾಜರಾಗಿರಲಿಲ್ಲ. ಆದರೆ ಇವರು ತಮ್ಮ ಕೈಲಾದ ಮಟ್ಟಿಗೆ ಸಮಾಜವನ್ನು ಒಗ್ಗೂಡಿಸುವ ಕಾರ್ಯವನ್ನು ಮಾಡುತ್ತಾ ತನ್ಮೂಲಕ ರಾಷ್ಟ್ರಸೇವೆ ಮಾಡಿದ ಮಹನೀಯರು. ಅವರ ಸ್ಮರಣೆ ನಮಗೆ ಸದಾ ಸ್ಫೂರ್ತಿದಾಯಕ.

ಬಂದ ಕೆಲವು ಮಾಹಿತಿಗಳು ಘಟ್ಟು ವಂಶೀಯರ ಬಗ್ಗೆ ಪೂರ್ಣ ಪರಿಚಯ ನಮಗೆ ನೀಡಲಿಲ್ಲ. ಆದ್ದರಿಂದ ಘಟ್ ವಂಶೀಯರ ಮೂಲ ನೆಲೆಯೂರುಗಳಿಗೆ ನಾವೇ ಭೇಟಿ ನೀಡುವ ನಿರ್ಧಾರ ಮಾಡಿದೆವು. ಅದರಂತೆ ದಳಸನೂರು ಮತ್ತು ಮಂಡಿಕಲ್ಲುಗಳಿಗೆ ಭೇಟಿ ನೀಡಿದೆವು. ಆದರೆ ನಮಗೆ ಹೆಚ್ಚಿನ ಮಾಹಿತಿ ದೊರೆತಿದ್ದು ದಳಸನೂರಿನಲ್ಲಿ. ಅಲ್ಲಿ, ಘಟ್ಟು ವಂಶೀಯರ ಬಗ್ಗೆ ಸಾಕಷ್ಟು ವಿಷಯಗಳನ್ನು ತಿಳಿದಿದ್ದ ಮಾದಣ್ಣನವರು ನಮ್ಮ ಯತ್ನವನ್ನು ಶ್ಲಾಘಿಸಿ ತಮಗೆ ತಿಳಿದಿದ್ದ ಎಲ್ಲಾ ಮಾಹಿತಿಯನ್ನು ಒದಗಿಸುವುದಾಗಿ ಭರವಸೆ ನೀಡಿದರು. ಅದರಂತೆ ಘಟ್ಟು ವಂಶೀಯರ ಮೂಲ, ಸ್ಥಾಪಕರು ಹಾಗೂ ಅವರ ಜನಜೀವನಗಳ ಬಗ್ಗೆ ಅನೇಕ ಸ್ವಾರಸ್ಯಕರ ಲೇಖನಗಳನ್ನು ಮಾದಣ್ಣನವರು ಒದಗಿಸಿದರು. ಅದರೊಂದಿಗೇ ನಮ್ಮ ಈ ಯತ್ನದ ಉದ್ದೇಶ ಹಾಗೂ ಪರಿಣಾಮಗಳನ್ನು ಪ್ರಶ್ನಿಸಿ ೨೭.೧೦.೧೯೯೮ರಂದು ನಮಗೆ ಪತ್ರವೊಂದನ್ನು ಬರೆದರು. ಇದು ನಮ್ಮ ಈ ಪುಸ್ತಕ ಕಾರ್ಯಕ್ಕೆ ನಿಶ್ಚಿತ ತಿರುವು ನೀಡಿತು ಎಂದರೆ ತಪ್ಪಾಗಲಾರದು. ಅವರ ಪತ್ರದ ಒಕ್ಕಣೆ ಹೀಗಿದೆ:

*"ನಿನ್ನ ಯತ್ನ ಶ್ಲಾಘನೀಯ. ಕೆಲವು ವರ್ಷಗಳ ಹಿಂದೆ ಇಂತಹುದೇ ಒಂದು ನಮ್ಮ–ನಮ್ಮವರು ಕೂಟವನ್ನು ಕೂಡಿಸಿದಾಗ, ಯಾರಾದರೂ ಮುಂದಿನ ಪೀಳಿಗೆಯವರು ಇದನ್ನು ಪ್ರತಿವರ್ಷವೂ ಮುಂದುವರೆಸಲಿ ಎಂಬ ಮಹದಾಶೆ ಇತ್ತು. ಆದರೆ ಏಕೋ ಅದು ಸಾಧ್ಯವಾಗಲಿಲ್ಲ. ಈಗ ನೀನು ಈ ಕೆಲಸ ಮಾಡುತ್ತಿದ್ದೀ. ಭಗವಂತನು ಎಲ್ಲಾ ನೆರವು, ಧೈರ್ಯಗಳನ್ನು ನೀಡಲಿ. ಆದರೆ ಈಗ ನೀನು ಉದ್ದೇಶಿಸಿರುವುದಾದರೂ ಏನು? 'ನಾವು' ಎಂದರೆ*

*ಘಟ್ಟು ವಂಶದವರು ಎಂದೇ? ಇಲ್ಲವೇ ನಮ್ಮ ಸಂಪರ್ಕಕ್ಕೆ ಬಂದವರೂ ಇದರಲ್ಲಿ ಇದ್ದಾರೆಯೇ? ನಮ್ಮನ್ನು ಅರಿಯುವುದಾದರೆ ಅದು ಶ್ಲಾಘನೀಯ. ನಮ್ಮ ಸಂಬಂಧಿಗಳ ಬಗ್ಗೆ ಅರಿಯುವುದು ಒಂದು ವೃಥಾ ಯತ್ನವೆಂದು ನನ್ನ ಅಭಿಪ್ರಾಯ.*

*ನೀನಾಗಲೀ, ಅಥವಾ ನಿನ್ನ ಸಮವಯಸ್ಕರು ಯಾರೇ ಆಗಲೀ, ಘಟ್ ನಾರಾಯಣದಾಸ್, ಶ್ರೀಧರಪ್ಪ ಇವರನ್ನು ಹೆಸರಿನಿಂದ ಅರಿತಿದ್ದೀರಷ್ಟೇ. ನೀವು ಅವರ ಬಗ್ಗೆ ಏನು ಬಲ್ಲಿರಿ? ಹಾಗೆಯೇ ಮುಂದಿನ ಪೀಳಿಗೆಯವರು ಘಟ್ ರಾಮರಾಯರನ್ನಾಗಲೀ, ವೆಂಕಟಾಚಲಯ್ಯರನ್ನಾಗಲೀ ಕಂಡಿಲ್ಲ. ಅವರು ತಾನೇ ಏನು ವಿವರ ನೀಡ್ಯಾರು? ಕೇವಲ ರಾಮಚಂದ್ರಣ್ಣನು ಒಬ್ಬನು ಮಾತ್ರ ತನ್ನ ಹಿಂದಿನ ಎರಡು ತಲೆ, ಮುಂದಿನ ಮೂರು ಪೀಳಿಗೆ ಹೀಗೆ ಐದು ಪೀಳಿಗೆಯ ಬಗ್ಗೆ ಹೇಳ ಬಲ್ಲರು.*

*ವೆಂಕಟನಾರಾಯಣಪ್ಪ–ಮಲ್ಲಪ್ಪನವರ ಕಾಲದಲ್ಲಿ ತದನಂತರದ ವೇದಾಚಲಯ್ಯ ವೆಂಕಟರಮಣಯ್ಯ, ನಾರಾಯಣಪ್ಪ, ಶ್ರೀಧರಪ್ಪ ಹಾಗೂ ಮಂಡಿಕಲ್‌ನಲ್ಲಿ ವೆಂಕಟನಾರಾಯಣಪ್ಪ, ವೆಂಕಟಾಚಲಯ್ಯ ಇವರುಗಳಲ್ಲಿ ಇದ್ದ ನಮ್ಮವರು–ನಮ್ಮತನ, ಪರಸ್ಪರ ಪ್ರೀತಿ, ವಿಶ್ವಾಸ, ಪ್ರೇಮಗಳು ನಂತರದ ಪೀಳಿಗೆಯಲ್ಲಿ ಕಾಣಬರುತ್ತಿದೆಯೇ?*

*ನಿನ್ನ ಯತ್ನ ಉತ್ತಮವಾದರೂ ಈ ಹಲವಾರು ಪ್ರಶ್ನೆಗಳಿಗೆ ಉತ್ತರ ದೊರಕಿಸಿದಲ್ಲಿ ಬಹಳ ಸಂತೋಷ. ನಾವೆಲ್ಲರೂ ನಮ್ಮನ್ನು ನಮ್ಮ ಮೂಲದಿಂದ ಬೇರೆ ದೂರದಲ್ಲಿ ನಿಂತು ಕಾಣುತ್ತಿದ್ದೇವೆಯೇ ವಿನಾ ಮೂಲದಲ್ಲಿ ಬೆರೆತು ನಮ್ಮಲ್ಲಿ ನಾವು ಬೆರೆತು ಕಾಣುತ್ತಿಲ್ಲ. ಇದು ನನ್ನ ಅಭಿಪ್ರಾಯ. ಇದನ್ನು ತಪ್ಪೆಂದು ಯಾರಾದರೂ ನಮ್ಮಲ್ಲಿ ಹೇಳಿದರೆ ನನಗೆ ಅತೀವ ಸಂತಸವಾಗುತ್ತದೆ.*

***–ನಿನ್ನ, ಮಾದಣ್ಣ"***

ಇದು ನಿಜಕ್ಕೂ ನಮ್ಮ ಪ್ರಯತ್ನಕ್ಕೆ ಸಹಕಾರಿಯಾಯಿತು. ಮಾದಣ್ಣನವರು ಕೇಳಿರುವ ಎಲ್ಲಾ ಪ್ರಶ್ನೆಗಳಿಗೂ ನಮ್ಮಲ್ಲಿ ಉತ್ತರವಿಲ್ಲದಿದ್ದರೂ, ಬಹುತೇಕ ಪ್ರಶ್ನೆಗಳನ್ನು ಈ ಪುಸ್ತಕದ ಮೂಲಕ ಉತ್ತರಿಸಿದ್ದೇವೆ.

ಈ ಪುಸ್ತಕ ಮೂಲವಾಗಿ ಘಟ್ಟು ವಂಶದವರನ್ನು ಆಧರಿಸಿದ್ದಾದರೂ, ಅವರೊಂದಿಗೆ ಸಂಬಂಧ ಬೆಳೆಸಿ ಅವರ ಜೀವನಗಳಲ್ಲಿ ಹಾಸುಹೊಕ್ಕಾಗಿರುವ

ನಮ್ಮ ಸಂಬಂಧಿಕರ ಬಗ್ಗೆಯೂ ಆದಷ್ಟು ಮಟ್ಟಿಗೆ ಮಾಹಿತಿ ನೀಡುತ್ತದೆ.

ಈ ಪುಸ್ತಕದಲ್ಲಿರುವ ಅನೇಕ ಲೇಖನಗಳು ಲೇಖಕರ ಸ್ವಂತ ಅನುಭವಗಳನ್ನು ಆಧರಿಸಿದ್ದು. ಇದರಲ್ಲಿ ಸರಿ ಅಥವಾ ತಪ್ಪುಗಳಿಲ್ಲ. ಹಾಗೆಯೇ ಇಲ್ಲಿರುವ ಮಾಹಿತಿಯೆಲ್ಲವೂ ಅಧಿಕೃತ ಅಥವಾ ಪ್ರಮಾಣೀಕೃತವೇನಲ್ಲ. ಘಟ್ಟು ವಂಶಾವಳಿಯನ್ನು ಅತ್ಯಂತ ಜಾಗರೂಕತೆಯಿಂದ, ಇತ್ತೀಚಿನ ಎಲ್ಲಾ ಹೆಸರುಗಳನ್ನೂ ಸೇರಿಸಿ ತಯಾರಿಸಲಾಗಿದೆ. ಆದರೂ ನಮ್ಮ ಪೂರ್ವಜರ ಹೆಸರುಗಳ ಹಾಗೂ ಅವರ ಸಂಬಂಧಗಳ ಬಗ್ಗೆ ಇನ್ನೂ ಪೂರ್ಣ ಸ್ಪಷ್ಟತೆಯಿರುವುದಿಲ್ಲ. ನಮ್ಮ ಸ್ವಂತ ಮಾಹಿತಿ ಹಾಗೂ ಇನ್ನಿತರ ಹಿರಿಯರ ಹೇಳಿಕೆಗಳಂತೆ ಇದನ್ನು ನಮ್ಮ ಕೈಲಾದ ಮಟ್ಟಿಗೆ ಪರಿಷ್ಕರಿಸಿದ್ದೇವೆ.

ಹಾಗೆಯೇ ಈ ಪುಸ್ತಕದಲ್ಲಿರುವ ಲೇಖನಗಳು ಹಾಗೂ ಘಟನೆಗಳು ಮಂಡಿಕಲ್ಲು ಘಟ್ಟು ವಂಶದವರ ಬಗ್ಗೆಯೇ ಕೇಂದ್ರೀಕೃತವಾಗಿವೆ. ದಳಸನೂರು ಘಟ್ಟು ವಂಶದವರ ಬಗ್ಗೆ ಹೆಚ್ಚು ಮಾಹಿತಿ ಪಡೆಯುವಲ್ಲಿ ನಾವು ಪೂರ್ಣ ಸಫಲರಾಗಲಿಲ್ಲವೇನೊ ಅನ್ನಿಸುತ್ತದೆ. ಇದನ್ನು ಮುಂದಿನ ಪ್ರಯತ್ನದಲ್ಲಿ ಸರಿಪಡಿಸಿಕೊಳ್ಳುವ ಆಶಾಭಾವನೆ ನಮಗಿದೆ. ಇನ್ನೊಂದು ವಿಷಯವೆಂದರೆ ಯುವಕರು ಈ ಪ್ರಯತ್ನದಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳದಿದ್ದುದು ಖೇದದ ಸಂಗತಿ. ಮುಂದೆ ಘಟ್ಟು ವಂಶದ ಯುವಕರು ಈ ನಿಟ್ಟಿನಲ್ಲಿ ಹೆಚ್ಚು ಆಸಕ್ತಿ ವಹಿಸುವರೆಂದು ನಂಬಿದ್ದೇವೆ.

ಈ ಪುಸ್ತಕವು ತನ್ನಷ್ಟಕ್ಕೇ ಪರಿಪೂರ್ಣವೇನಲ್ಲ. ಈ ಪುಸ್ತಕದಲ್ಲಿ ಅನೇಕ ಮಾಹಿತಿಗಳು ಅಪೂರ್ಣವಾಗಿರಬಹುದು ಮತ್ತು ಕೆಲವಾರು ವಿಷಯಗಳು ಬಿಟ್ಟುಹೋಗಿರಲೂಬಹುದು. ಇವುಗಳೆಲ್ಲವನ್ನೂ ನೀವು ಸಕಾರಾತ್ಮಕವಾಗಿ ಸ್ವೀಕರಿಸುತ್ತೀರೆಂದು ನಂಬಿದ್ದೇವೆ. ನಮ್ಮ ಪೂರ್ವಜರ ಜೀವನಚರಿತ್ರೆಗಳು ಪ್ರಥಮ ಬಾರಿಗೆ ಪುಸ್ತಕ ರೂಪದಲ್ಲಿ ಪ್ರಕಟಗೊಂಡಿರುವುದು ನಮಗೆ ಆನಂದ ತಂದಿದೆ. ಈ ಚಿಕ್ಕ ಹೆಜ್ಜೆ ನಮ್ಮ ಸಮಾಜದ ಬಂಧುಗಳು, ಪ್ರಗತಿಪಥದಲ್ಲಿ ಮುಂದಿಡುವ ದಿಟ್ಟ ಹೆಜ್ಜೆಗಳಿಗೆ ನಾಂದಿಯಾಗುವುದರಲ್ಲಿ ಸಂಶಯವಿಲ್ಲ.

**ಜಿ. ವಿ. ಪ್ರಭಾಕರ ರಾವ್, ಜಿ. ಪಿ. ವಿನಯಬಾಬು**

೧೭–೨–೨೦೦೨, ಭಾನುವಾರ

# ಒಳಪುಟಗಳಲ್ಲಿ


ಗಣಪತಿ ಒಂದು ಚಿಂತನೆ........................................................27
ಪ್ರಾರ್ಥನೆ............................................................................30
ಕನಕಾಭಿಷೇಕ ಮಹೋತ್ಸವ...................................................33
ನೆನಪಿನಂಗಳ.......................................................................37

**ಘಟ್ಟು ವಂಶ**.......................................................................41

ಘಟ್ಟು ಚಿತ್ರಗಳು...................................................................43
ಘಟ್ಟು ವಂಶ.............................. *ಜಿ. ವಿ. ಪ್ರಭಾಕರ ರಾವ್* 46
ಘಟ್ಟು ಮೂಲ........................... *ಜಿ. ಆರ್. ಮಾಧವರಾವ್* 52
ಘಟ್ಟು ವಂಶ: ಪರಿಚಯ............... *ಡಿ. ವಿ. ಪ್ರಭಾಕರ* 56
ವಂಶವೃಕ್ಷ ............................................................................68
ಅರವತ್ತು ಮನೆ ಬಂಧುಗಳು.......... *ವಿವರಣೆ* 80
ಮಂಡಿಕಲ್ ಘಟ್ಟುವಂಶ............... *ಕೆ. ಮಾಧವರಾವ್* 88
*ಸಿ. ಬಿ. ಸುಬ್ರಹ್ಮಣ್ಯಂ*
ಘಟ್ಟು ಆಧಾರ ಸ್ತಂಭಗಳು............ *ಜಿ. ಆರ್. ಮಾಧವರಾವ್* 96
ಘಟ್ಟು ವಾಸುದೇವರಾವ್............. *ಜಿ. ವಿ. ಯಜ್ಞಪಾಲ* 102
ಘಟ್ಟು ನೆಲೆಗಳು......................... *ಕೆ. ಆರ್. ನರಸಿಂಹನ್* 105
ಹಳೆಮನೆ ಚರಿತ್ರೆ........................ *ಡಿ. ವಿ. ಶ್ಯಾಮರಾವ್* 110
ಕಣ್ವಮಠ ಒಂದು ಪರಿಚಯ...........*ಡಿ. ವಿ. ಪ್ರಭಾಕರ* 114
ವಂದನವು ಶ್ರೀಕೃಷ್ಣ...................*ಜಿ. ವಿ. ಪ್ರಭಾಕರ ರಾವ್* 117

**ನಾವು ನಮ್ಮವರು..........................................................121**

ನಮ್ಮ ಊರುಗಳು..........................................................123

ನನ್ನೂರು ನನ್ನ ದೊಡ್ಡಪ್ಪ............. *ಕೆ. ಆರ್. ನರಸಿಂಹನ್* 125

ನಮ್ಮ ಮನೆ..................................................................128

**ನಮ್ಮ ಸಂಬಂಧಿಗಳು.......................................................135**

ಚಲ್ದಿಗಾನಹಳ್ಳಿ............................ *ಸಿ. ಬಿ. ಸುಬ್ರಹ್ಮಣ್ಯಂ* 137

ಮುಳ್ಳಹಳ್ಳಿ ಚರಿತ್ರೆ....................... *ಡಿ.ವಿ. ಪ್ರಭಾಕರ* 143

ದ.ವೆಂ.ವೆಂಕಟಾಚಲಯ್ಯ............... *ಡಿ.ವಿ. ಪ್ರಭಾಕರ* 151

ದೊಡ್ಡ ಕುರುಗೋಡು.................. *ಡಿ.ವಿ. ಸತ್ಯನಾರಾಯಣರಾವ್* 156

ಎಲೆಮರೆ ಕಾಯಿಗಳು.................. *ರಾಜ್ ಕಮಲ್* 163

ವೈ. ಎನ್. ಹೊಸಕೋಟೆ............ *ಹೆಚ್.ಆರ್. ವಾದಿರಾಜ್* 167

ವೆಂಕೋಬಾಚಾರ್....................... *ನಾಗರಾಜಾಚಾರ್* 172

ಪೂಜೆ ಮತ್ತು ಸಂಸ್ಕಾರ................ *ಇ. ಡಿ. ನರಹರಿ* 176

ಗಂಗಾವತರಣ..................................................................181

# ಗಣಪತಿ: ಒಂದು ಚಿಂತನೆ

*ಗಣಾನಾಂ ತ್ವಾ ಗಣಪತಿಂ ಹವಾಮಹೇ (೨.೨೩.೧)*

ಇದು ಋಗ್ವೇದದಲ್ಲಿ ಗಣಪತಿಯ ಬಗ್ಗೆ ನೀಡಿರುವ ವಿವರಣೆ. ಪ್ರಸಿದ್ಧನಾದ ಗಣಪತಿ ಅಥವಾ ಗಣೇಶನು ಎಲ್ಲ ಭಾರತೀಯರಿಗೂ ತುಂಬಾ ಜನಪ್ರಿಯ ದೇವತೆ. ಯಾವ ಕಾರ್ಯವೇ ಆದರೂ ಗಣೇಶನಿಗೆ ಪೂಜೆಯಿಲ್ಲದೆ ಪ್ರಾರಂಭವಾಗುವುದಿಲ್ಲ. ಇವನನ್ನು ವಿನಾಯಕನೆಂದೂ, ವಿಘ್ನರಾಜನೆಂದೂ, ಗಣಾಧಿಪನೆಂದೂ, ಲಂಬೋದರನೆಂದೂ ಭಾರತೀಯ ವೇದ ಪುರಾಣಗಳು ವರ್ಣಿಸಿವೆ.

## ಬಲದ ಸಂಕೇತ

ಮಾನವ ಇಂದು ಗಳಿಸಿಕೊಂಡಿರುವ ನಾಗರೀಕತೆ ಮತ್ತು ಸಂಸ್ಕೃತಿಗಳು, ಪ್ರಕೃತಿಯಲ್ಲಿರುವ ಪ್ರಾಣಿ ಪಕ್ಷಿಗಳಿಂದ ಪ್ರೇರಿತವಾದದ್ದು. ***ಬಾಹೂ ರಾಜನ್ಯ ಕೃತಃ*** ಎಂಬಂತೆ ಯಾರಿಗೆ ತೋಳ್ಬಲ ಹೆಚ್ಚೋ ಅವನೇ ರಾಜ. ಅದರಂತೆಯೇ ವನಗಳಲ್ಲಿ ಜೀವಿಸುತ್ತಿದ್ದ ಪ್ರಾಣಿ ಗಳಿಗೆ ಆನೆ ರಾಜನಾದ. ಅವನೇ ಗಜಪತಿಯಾದ. ಈ ಕಾರಣದಿಂದಲೇ ಆನೆಯ ಮುಖದ ಗಣಪತಿಗೆ ಅಗ್ರಪೂಜೆ.

ಆನೆಯು **ಜಗದ** ವಿಕೃತರೂಪ. **ಗಜ**ದಲ್ಲಿ, **ಜ** ಎಂದರೆ ಜಾಯತೆ –ಹುಟ್ಟು ಎಂದರ್ಥ. **ಗ** ಎಂದರೆ ಗತಿಕಾರಣ – ಸಾವು ಎಂದರ್ಥ. ಇವೆರಡನ್ನೂ

ಧೃವೀಕರಣಗೊಳಿಸುವ ಶಕ್ತಿಯೇ ಗಣಪತಿ. ವಿಘ್ನೇಶನು ವಿಘ್ನಕಾರಕನೂ ಹೌದು ವಿಘ್ನನಾಶಕನೂ ಹೌದು.

ಪುರುಷಸೂಕ್ತದಲ್ಲಿ ಭಗವಂತನನ್ನು **ಅತ್ಯತ್ತಿಷ್ಟ ದಶಾಂಗುಲಂ** ಎಂದು ವರ್ಣಿಸಿದ್ದಾರೆ. ನಮ್ಮ ಊಹೆಗೂ ನಿಲುಕದ ಶಕ್ತಿಯೇ ಭಗವಂತನ ಸ್ವರೂಪ. ಹಾಗಾಗಿ ನಮ್ಮ ಊಹೆ ಎಷ್ಟೇ ಎತ್ತರದ್ದಾಗಿರಲಿ ವಿಶಾಲವಾಗಿರಲಿ ಅದು ಭಗವಂತನ ವಾಸ್ತವಕ್ಕೆ ದೂರವೇ ಆಗಿದೆ. ಆದರೂ ಮಾನವನ ಮಟ್ಟಿಗೆ ಆನೆಯೇ ಅತಿ ದೊಡ್ಡ ಪ್ರಾಣಿ – ಅದ್ದರಿಂದಲೇ ಗಣಪತಿ ಭಗವಂತನ ಪ್ರತ್ಯಕ್ಷ ಸ್ವರೂಪ.

## ಗಣಪತಿಯ ಬಿಂಬೋಪಾಸನೆ

ಗಣಪತಿ ಎಂಬುದು ಒಂದು ತತ್ವ. ಗಣಪತಿಗೆ ಸಂಬಂಧಿಸಿದ ಪ್ರತಿಯೊಂದು ಅಂಗಾಂಗವೂ ಅಗಾಧ ಅರ್ಥವನ್ನು ಹೊಂದಿದೆ.

**ತಲೆ:** ವೈಶಾಲ್ಯತೆಯ ಪ್ರತೀಕ ತಲೆ. ಇಡೀ ವಿಶ್ವವನ್ನು ಚಿಂತಿಸುವ–ವೃದ್ಧಿಸುವ ಚಿಂತನೆಗಳು ಹೊಳೆಯುವುದು ತಲೆಯಿಂದಲೇ. ಇದನ್ನು ಪ್ರತಿಬಿಂಬಿಸುವುದು ಆಕಾಶ. ಆದ್ದರಿಂದಲೇ ***ಸರ್ವಾಂಗೇಷು ಶಿರಃ ಪ್ರಧಾನಂ.*** ಇದು ನಾಯಕನಿಗೆ ಅತ್ಯವಶ್ಯ.

**ಕಿವಿ:** ಎಲ್ಲರ ಕಷ್ಟಸುಖಗಳನ್ನು ಕೇಳಿಸಿಕೊಳ್ಳುವ ತಾಳ್ಮೆ ನಾಯಕನಿಗೆ ಇರಬೇಕು. ಇದರ ಸಂಕೇತವಾಗಿ ವಿಶಾಲವಾದ ಕಿವಿ ಗಣೇಶನಿಗಿದೆ.

**ಸೊಂಡಿಲು/ಮೂಗು:** ಸಮಾಜದಲ್ಲಿ ಕೆಡುಕನ್ನು ಗ್ರಹಿಸುವ ಶಕ್ತಿ ನಾಯಕನಿಗಿರಬೇಕು. ಅದರ ಸಂಕೇತವೇ ಈ ಉದ್ದ ಸೊಂಡಿಲು.

**ಕಣ್ಣು:** ಬೃಹತ್ ಆಕಾರಕ್ಕೆ ಸಣ್ಣಕಣ್ಣು. ಎಷ್ಟೇ ದೊಡ್ಡ ಧ್ಯೇಯ ಉದ್ದೇಶವಿದ್ದರೂ ನಾಯಕನಿಗೆ ದೃಷ್ಟಿಯು ಸೂಕ್ಷ್ಮವಾಗಿಯೂ ತೀಕ್ಷ್ಣವಾಗಿಯೂ ಇರಬೇಕು. ಇದೇ ಆನೆಯ ಸಣ್ಣಕಣ್ಣುಗಳ ಅರ್ಥ.

**ದಂತಗಳು:** ಒಂದು ಪೂರ್ಣ, ಇನ್ನೊಂದು ಅಪೂರ್ಣ. ಪೂರ್ಣದಂತಹ ಪರಮಾತ್ಮನ ಪರಿಪೂರ್ಣತೆಯನ್ನೂ, ಅರ್ಧದಂತ ಮಾನವನ ಅಪೂರ್ಣತೆಯನ್ನು ಪ್ರತಿಬಿಂಬಿಸುತ್ತದೆ. ವೇದವ್ಯಾಸ ಮಹರ್ಷಿಗಳು ಮಹಾಭಾರತವನ್ನು ಗಣಪತಿಯ ಕೈಯಲ್ಲಿ ಮುರಿದ ದಂತದ ಮೂಲಕ ನಿರಂತರವಾಗಿ ಬರೆಸಿದ ಕಥೆ ಜನಪ್ರಿಯವಾಗಿದೆ.

**ಅಭಯಹಸ್ತ:** ಜನತೆಯ ಕಲ್ಯಾಣಕ್ಕೆ ಸದಾ ನಾಯಕನು ಸಿದ್ದನಾಗಿರಬೇಕು. ಆಶ್ವಾಸನೆಗಳು, ಶುಭಾಶಯಗಳು ಅವನ ಧರ್ಮ.

**ಪಾಶ:** ಪಾಶ ಬಂಧನಕ್ಕೆ ಒಳಪಡಿಸುತ್ತದೆ. ಪಾಶವೆಂದರೆ ಹಗ್ಗ, ಈ ಪಾಶಕ್ಕೆ ಕೊನೆಮೊದಲಿಲ್ಲ. ಪಾಶದ ಪರಿಧಿಯಲ್ಲಿ ಎಲ್ಲರೂ ಬಂದಿಗಳೇ; ಇದನ್ನು ಗೆದ್ದರೆ ಮೋಕ್ಷ.

**ಅಂಕುಶ:** ಶಿಕ್ಷೆಗೆ ಗುರಿ ಮಾಡುವುದು. ದುಷ್ಟ ಶಿಕ್ಷ–ಶಿಷ್ಟ ರಕ್ಷಣದ ಸಂಕೇತ. ಹಾದಿತಪ್ಪಿದ ಮಾನವನನ್ನು ಸನ್ಮಾರ್ಗಕ್ಕೆ ತರುವುದೇ ಅಂಕುಶದ ಉದ್ದೇಶ. ಪಾಶಾಂಕುಶಗಳು ಆನೆಯ ನಿಯಂತ್ರಣಕ್ಕೆ ಬಳಕೆಯಾಗುವಂತಹವು. ಪಾಶ ಅಂಕುಶಗಳಿದ್ದರೆ ದೇಶ ಸಮೃದ್ಧಿಯಾಗಿರುತ್ತದೆ. ಆನೆ ಮುಖದ ಗಣಪ ಪಾಶಾಂಕುಶಗಳನ್ನು ಧರಿಸಿ ನಾಯಕನಿಗೆ ಇರಬೇಕಾದ ಸ್ವನಿಯಂತ್ರಣದ ಮಹತ್ವವನ್ನು ಸಾರುತ್ತಿರಬಹುದೇ?

**ಮೋದಕ:** ವಿಶ್ವದ ಅರ್ಧಕ್ಕೂ ಹೆಚ್ಚು ಜನಕ್ಕೆ ಅಕ್ಕಿಯೇ (ಅನ್ನ) ಪ್ರಧಾನ ಆಹಾರ. ಮೋದಕ ಅಕ್ಕಿಯಿಂದಲೂ ಗೋಧಿಯಿಂದಲೂ ತಯಾರಿಸುವ ಒಂದು ಪದಾರ್ಥ. ಮೋದ ಎಂದರೆ ಸಂತೋಷ. ಮೋದಕ ಎಂದರೆ ಸಂತೋಷವನ್ನು ನೀಡುವಂತಹುದು. ನಾಯಕನಾದವನು ಸ್ವಸಂತುಷ್ಟ ನಾಗಿರಬೇಕಲ್ಲವೇ?

**ಲಂಬೋದರ:** ಬೃಹತ್ ಜನಸಂಖ್ಯೆಯ ಸಂಕೇತ.

**ಮೂಷಿಕ ವಾಹನ:** ಇದು ಚಂಚಲತೆಯ ಸಂಕೇತ. ನಾಯಕನ ಸ್ಥಾನ ಸದಾ ಅಭದ್ರ. ಅದನ್ನು ನಿಗ್ರಹಸಿ ನಾಯಕತ್ವ ನಡೆಸಬೇಕೆಂಬುದು ಈ ತತ್ವ ತೋರಿಸುತ್ತದೆ.

**ಹಾವು:** ಹಾವಿಗೆ ಎರೆಡೆಳೆ ನಾಲಿಗೆ ಇದ್ದಂತೆ ಭೂಲೋಕದ ಪ್ರಜೆಗಳು ಸದಾ ದ್ವಿಬುದ್ಧಿಯಿಂದ ಕೂಡಿದವರಾಗಿದ್ದಾರೆ. ಅಂತಹ ಜನರನ್ನು ನಿಗ್ರಹಸಿ ಕಾರ್ಯಸಾಧಿಸಬೇಕೆನ್ನುವುದೇ ಈ ಹಾವನ್ನು ಉದರಕ್ಕೆ ಕಟ್ಟಿಕೊಂಡಿರುವ ಉದ್ದೇಶ. ಮೂಷಿಕ ಮತ್ತು ಸರ್ಪ ಪರಿಸರ ಸಮತೋಲನದ ಸಂಕೇತವೂ ಆಗಿದೆ.

ಸರ್ವಾಂಗ ಶಕ್ತನಾದ ಗಣಪತಿಯು ಆದ್ದರಿಂದಲೇ ವಿಶ್ವವಂದ್ಯ.

## ದಳಸನೂರು ಫಟ್‌ವೇದಾಚಲ ದಾಸಕೃತ ಕಣ್ವಮಠಾಧೀಶ ಶ್ರೀ ಶ್ರೀ ಮಾಧವ ತೀರ್ಥ ಸ್ತೋತ್ರ

ಮಾಧವತೀರ್ಥರ ಪಾದಯುಗಳ ಧ್ಯಾನ।
ಸಾಧನ ಮುಕ್ತಿ ಪಥ ॥ ಪ ॥
ಪಾಥೋಧಿನಿಲಯ ಲಕ್ಷೀಧವ ಮಲಗುವ
ಆದಿಶೇಷನ ಅಂಶಸಾರದಿಂ ಉದಿಸಿದ ॥ಅ. ಪ.॥

ವಾದೀಭಸಿಂಹ ದುರ್ವಾದವಾರಿದ ಪವನ
ಸಾಧು ಸಜ್ಜನ ಸುರವರ॥
ಬೋಧಪೂರ್ಣಮತ ಸ್ಥಾಪನಪಟು ಪಂಚ
ಭೇದಾನುವಾದ ಸದ್ಭಾವ ವಿಹಿತಮನ ॥೧॥

ಲಕ್ಷ್ಮೀಮನೋಹರ ತೀರ್ಥ ಕರೋದ್ಭವ।
ಪಕ್ಷಿವಾಹನ ಕೃಷ್ಣನ॥
ಅಕ್ಷಯಪದಪಂಕೇರುಹ ಬಂಭರ
ಅಕ್ಷೋಭ್ಯತೀರ್ಥರಿಗೊಲಿದು ಆಶ್ರಮವಿತ್ತ ॥ ೨ ॥

ಸತ್ಯ ಪ್ರಕೃತಿ ಜಗದೀಶಾವಾಸ್ಯವೆಂದು।
ನಿತ್ಯ ಬೋಧಿಸುವ ಕಣ್ವ
ಶೃತ್ಯರ್ಥ ಪದವಾಕ್ಯ ಸತ್ಯಪ್ರತಿಪಾದನಾ।
ದಿತ್ಯಾಂತರ್ಗತ ಶ್ರೀನಾರಾಯಣನ ಸ್ಮರಿಪರ॥ ೩ ॥

ಹೃದ್ಯ ಹಯಶಿರ ಬ್ರಹ್ಮ ವಿದ್ಯಾವಿರಾಜಿತ।
ಸದ್ಯೋನಾಮದ ಯತಿಯು ನಮ್ಮ॥
ನುದ್ಧರಿಸಿದ ಪಾದ ದಾಸವೇದಾಚಲ
ಬದ್ಧಾಂಜಲಿ ನಿತ್ಯ ಹರಿಗೆ ಅರ್ಪಿತವೆಂದು ॥೪॥

**–ದಳಸನೂರು ಫಟ್‌ವೇದಾಚಲಯ್ಯ**

## ಬೇಡಲರಿಯೆನು ದೊರೆಯೇ

ಬೇಡಲರಿಯೆನು ದೊರೆಯೇ ಅಲ್ಪಮತಿಯೋ ನಾನು।
ನೀನಿತ್ತುದೇ ಎನಗೆ ಪರಮಸೌಭಾಗ್ಯವಯ್ಯ ಸ್ವಾಮಿ॥
ಅತಿಶಯದ ಧನಕನಕ ಯಶವಿದ್ಯೆ ಸಕಲವೂ।
ಮೆರೆಯುತಿವೆ ಜಗದೊಳಗೆ ಸುಖಶಾಂತಿಗಳ ಕದಡಿ॥
ಮತಿಗೆಡಿಸಿ ಮನುಜರ ಹುಚ್ಚರನು ಮಾಡುತಿವೆ।
ಇರುತಿರಲು ತವ ಕರುಣೆ ಇವನು ನಾನೊಲ್ಲೆನಯ್ಯ ಪ್ರಭು॥
ಕಂಡರಿಯೆ ಪರಲೋಕ ಸ್ವರ್ಗ ವೈಕುಂಠಗಳ।
ಇರುತಿಹವೊ ಇಲ್ಲವೊ ಅದುಕೂಡ ಸಂಶಯವೆನಗೆ॥
ಬೇಡದೆಲೆ ನೀಡುವಾ ಪ್ರಭುವು ನೀನೇ ಎನಗೆ।
ಅರಿತು ಒಳಿತನೇ ನೀಡಿ ಸಲಹಯ್ಯ ವೇಣುಗೋಪಾಲನೆ॥

## ತಾಳ್ಮೆ

ತಾಳಿ ಕೊಳ್ಳಬೇಕೋ ನರನೆ ಜಗದಲಿ ಬಲು ತಾಳ್ಮೆ ಇರಬೇಕೋ ।
ತಾಳ್ಮೆಯೇ ತಪವು ಪರಮ ಪದಕಿದುವೆ ಸೋಪಾನ ॥
ಹೀಗೆ ಜನರು ಸದಾ ನಿನ್ನ ಜರಿದು ಹೀಯಾಳಿಪರೋ
ಮಿಗೆ ಮನವ ನೋವಿಪರು ಕುಹಕ ನುಡಿಗಳಿಂಕೆಲರು।
ಬೀಗಿ ಮೆರೆವರು ಕೆಲರು ಮೂದಲಿಸಿ ಹಂಗಿಪರೊನಿನ್ನ ॥
ಕಂಗೆಡದೆ ಇವನೆಲ್ಲ ತಾಳಿಕೊಳ್ಳುವುದೆ ನಿನಗೆ ಸುಖವೋ
ಅಕ್ಕರದ ಯೋಜನೆಗಳು ಮುಗ್ಗರಿಸಿ ಕೆಟ್ಟಾಗ ।
ಲೆಕ್ಕವಿಲ್ಲದ ಕಷ್ಟ ಕಾರ್ಪಣ್ಯಗಳು ಕಾಡುತಿರುವಾಗ
ಸಿಕ್ಕಿ ಬಲು ಗೋಜಿನಲಿ ತೊಳಲಾಡುತಿರುವಾಗ
ಕಕ್ಕುಲತೆಯಿಂ ಶ್ರೀ ಹರಿಯ ಸ್ಮರಿಸುತ್ತ ಕೆಲಕಾಲ ॥
ಶಾಂತಿ ದಮನಗಳಿಗಿಂತ ತಾಳ್ಮೆಯೇ ಹಿರಿದೆಂದು
ತಾನ್‌ತಿತಿಕ್ಷಸ್ವ ಎಂದರುಹಿದನು ಪರಮಾತ್ಮ ।
ಕಂತು ಪಿತ ಶ್ರೀವೇಣುಗೋಪಾಲನನು ನೆನೆಯುತ
ಕ್ಷಾಂತಿಯಲಿ ಬಾಳುವೆಯ ನಡೆಸುವೊಡೆ ಸುಖವೋ ॥

**–ಜಿ. ಆರ್. ಶ್ರೀನಿವಾಸ್ ರಾವ್**

## ಆಸೆ

ಆಸೆ ಎಲ್ಲಕು ಮೂಲ
ಹರಡಿ ಎಲ್ಲೆಡೆ ಜಾಲ
ಮಾಡಿದೆ ಜಗವ ಕಲ್ಲೋಲ॥

ಬೇಕು ಬೇಕೆಂಬ ತೃಷೆ
ತುಂಬಿ ಎಲ್ಲೆಡೆ ಆಸೆ
ಮಾಡಿದೆ ಬದುಕ ಸಮಸ್ಯೆ ॥

ಹುಟ್ಟಿಹ ಮಗನಿಗೆ
ಹುಟ್ಟುವ ಮೊಮ್ಮಗನಿಗೆ
ಆಸ್ತಿ ನಾ ಮಾಡಬೇಕೆ॥

ಹೊಟ್ಟೆ ಬಟ್ಟೆಗೆ ಬೇಕು
ಇರಲೊಂದು ಮನೆ ಸಾಕು
ದುಡಿದರೆ ಇದಕೆ ನಾ ಸಾಕು॥

ಸೋಲು ಅಳಿವಿನ ತಿಳಿವು
ಗೆಲುವು ಗೆಲುವಿನ ಸುಳಿವು
ಸಮರಸ ಜೀವನದ ಸಾರವು ॥

ಉಳಿದಾಯುವನೆಲ್ಲ
ನಿನ್ನ ಧ್ಯಾನಕೆ ಸಲ್ಲ
ಕಾಪಾಡೊ ನಮ್ಮೂರ ಗೊಲ್ಲ॥
ಮಾಡಿಹೆ ಉದರ ತುಂಬೋ
ವಿಚಾರ॥

## ದರ

ಓ ನರ ವಾನರ
ಏನು ನಿನ್ನ ದರ॥

ದರದ ವಿವರ ಅರಿಯದೆ
ಮಾಡಿಹೆ ಉದರ ತುಂಬೋ
ವಿಚಾರ॥

ಮಾತು ಆದರೂ ಖಾರ
ನಗ್ನ ಸತ್ಯ ಇದರ ಸಾರ॥

ಏಕೆ ಹೀಗೆ ನಾನರಿಯೆ
ಓ ವಾನರ ನರ॥

ಬಾ ಕುಳಿತು ಒಂದಾಗಿಯೆ
ಚಿಂತಿಸುವ ಇದರ ದೂರ॥

ಮಂಥನದ ಶ್ರಮವಾಗಿ
ಕರಗುವುದೇನೋ ಭಾರ॥

–ದಳಸನೂರು ರಾಜಣ್ಣ

# ಕನಕಾಭಿಷೇಕ ಮಹೋತ್ಸವ

ಶ್ರೀ ಧಾತು ನಾಮ ಸಂವತ್ಸರದ ಜ್ಯೇಷ್ಠ ಬಹುಳ ದಶಮಿ, ಸೋಮವಾರ ೧೦-೬-೧೯೭೬ರಂದು ದಿ॥ ವಿಠ್ಠಲಕೃಷ್ಣರಾಯರ ಜ್ಯೇಷ್ಠ ಪುತ್ರ ಪ್ರಭಾಕರ ರಾಯರ ಪೌತ್ರ ಚಿ। ಪವನನು ಜನಿಸಿದ ಶುಭ ಸಂದರ್ಭದಲ್ಲಿ ಪವನನ ಮುತ್ತಜ್ಜಿ ಶ್ರೀಮತಿ ಸರೋಜಮ್ಮನವರಿಗೆ ಕನಕಾಭಿಷೇಕ ಮಹೋತ್ಸವವನ್ನು ನೆರವೇರಿಸಲಾಯಿತು. ಇದರ ಉದ್ದೇಶ – ಮುಂದಿನ ಪೀಳಿಗೆಯ ಎಲ್ಲರೂ ಆಯುರಾರೋಗ್ಯವಂತರಾಗಿ ಸಮಾಜಕ್ಕೆ ದಾರಿದೀಪವಾಗಿ ಬಾಳಲಿ ಎಂಬುದೇ ಆಗಿದೆ.

ಕನಕಾಭಿಷೇಕವು ಒಂದು ವಿಶಿಷ್ಟ ಆಚರಣೆ. ಇದು ಎಲ್ಲರಿಗೂ ಲಭ್ಯವಾಗುವುದಿಲ್ಲ. ವ್ಯಕ್ತಿಯೊಬ್ಬರ ಸಂತತಿಯ ಮುಂದಿನ ಮೂರು ತಲೆಮಾರುಗಳಲ್ಲಿ ಸತತವಾಗಿ ಮೊದಲನೇ ಸಂತಾನವು ಗಂಡೇ ಆದಲ್ಲಿ ಕನಕಾಭಿಷೇಕದ ಅಪೂರ್ವ ಅವಕಾಶ ದೊರೆಯುತ್ತದೆ. ಶ್ರೀಮತಿ ಸರೋಜಮ್ಮನವರಿಗೆ ಈ ಅವಕಾಶ ದೊರೆಯಿತು. ಕನಕಾಭಿಷೇಕ ಮಾಡುವ ಈ ಸೌಭಾಗ್ಯವು ಅವರ ಮರಿಮಗ ಪವನ್ ಜನಿಸಿದಾಗ ನಮಗೆಲ್ಲಾ ಲಭಿಸಿತು. ಪ್ರಭಾಕರರಾವ್, ವಿಠ್ಠಲ ಕೃಷ್ಣ ಮತ್ತು ಪವನ್– ಇವರೆಲ್ಲರೂ ತಮ್ಮ ತಂದೆ ತಾಯಂದರಿಗೆ ಮೊದಲ ಸಂತಾನವಾಗಿರುವುದು ಇಲ್ಲಿನ ವಿಶೇಷತೆ.

---


**ವಿಠ್ಠಲ ಕೃಷ್ಣ, ವೀಣಾ, ಪವನ್, ಪ್ರಭಾಕರ ರಾವ್ ಮತ್ತು ಶಾಂತಾಮಣಿಯವರು ಶ್ರೀಮತಿ ಸರೋಜಮ್ಮನವರಿಗೆ ಕನಕಾಭಿಷೇಕ ಮಾಡುತ್ತಿರುವುದು.** ▼





◂ ಶ್ರೀಮತಿ ಸರೋಜಮ್ಮನವರಿಗೆ ಪವನ್‌ನೊಂದಿಗೆ ಅವರ ಅಪ್ಪ ವಿಠ್ಠಲಕೃಷ್ಣ ಮತ್ತು ಅಮ್ಮ ವೀಣಾ ಕನಕಾಭಿಷೇಕ ಮಾಡುತ್ತಿರುವುದು.

ಶ್ರೀಮತಿ ಸರೋಜಮ್ಮನವರಿಗೆ ಶ್ರೀ ವಿದ್ಯಾಮಾನ್ಯ ತೀರ್ಥ ಶ್ರೀಪಾದಂಗಳವರು ಫಲ ಮಂತ್ರಾಕ್ಷತೆ ನೀಡಿ ಆಶೀರ್ವಾದಿಸುತ್ತಿರುವುದು ▾



ಫಲಿಮಾರು (ಭಂಡಾರಕೇರಿ) ▶
ಮಠದ ಅಂದಿನ
ಮಠಾಧೀಶರಾದ ಶ್ರೀ
ವಿದ್ಯಾಮಾನ್ಯ ತೀರ್ಥ
ಶ್ರೀಪಾದಂಗಳವರು
ಕನಕಾಭಿಷೇಕ ಸಂದರ್ಭದಲ್ಲಿ
ಈಶಾವಾಸ್ಯಕ್ಕೆ ಆಗಮಿಸಿದಾಗ



ಹಿರಿಯರ ಮೇಲ್ಪಂಕ್ತಿ:
ಎಡದಿಂದ ಬಲಕ್ಕೆ:
ಶ್ರೀ ಘಟ್ಟು
ರಾಮಚಂದ್ರರಾವ್,
ಶ್ರೀ ಘಟ್ಟು ನಾರಾಯಣ
ರಾವ್, ಶ್ರೀಮತಿ
ಪದ್ಮಾವತಮ್ಮ ಮತ್ತು ಶ್ರೀ
ದ.ವೆಂ. ವೆಂಕಟಾಚಲಯ್ಯ

▼





◂ ಕನಕಾಭಿಷಿಕ್ತ ಶ್ರೀಮತಿ ಸರೋಜಮ್ಮನವರು (ದಿನಾಂಕ ೧೦–೬–೧೯೯೬)

ಶ್ರೀಮತಿ ಸರೋಜಮ್ಮನವರು ತಮ್ಮ ಮರಿಮಗ (ವಿಠ್ಠಲ ಕೃಷ್ಣನ ಮಗ) ಪ್ರಭಂಜನ್ (ಪವನ್)ನೊಂದಿಗೆ, ಕನಕಾಭಿಷೇಕಕ್ಕೆ ಸ್ವಲ್ಪ ಮೊದಲು

▾



# ನೆನಪಿನಂಗಳ



ದಳಸನೂರಿನಲ್ಲಿ ಪ್ರತಿಷ್ಠಾಪಿಸಲ್ಪಟ್ಟಿರುವ ವೇಣುಗೋಪಾಲ ಸ್ವಾಮಿಯ ಮೂರ್ತಿ



ಘಟ್ಟು ಅಚ್ಯುತ ರಾವ್




ಭಾರತಮ್ಮ



ಉಡುಪಿಯ ಪೇಜಾವರ ಅಧೋಕ್ಷಜ ಮಠದ ಶ್ರೀ ವಿಶ್ವೇಶ ತೀರ್ಥರು
ಈಶಾವಸ್ಯಕ್ಕೆ ಭೇಟಿ ನೀಡಿದಾಗ ತೆಗೆದ ಚಿತ್ರ.



ಈಶಾವಾಸ್ಯದ ಗೃಹಪ್ರವೇಶ - (೧೮-೦೬-೧೯೮೪)





ಘಟ್ಟು ವೆಂಕಟರಮಣಯ್ಯ, ಸುಬ್ಬಲಕ್ಷ್ಮಮ್ಮ ಮತ್ತು
ಘಟ್ಟು ರಘುನಾಥ ರಾವ್



ಶ್ರೀ ಜಿ.ವಿ. ವೆಂಕಟಗಿರಿಯವರ ಶುಭ ವಿವಾಹ ಸಂದರ್ಭದಲ್ಲಿ ಶ್ರೀಮತಿ ಮತ್ತು ಶ್ರೀ ಘಟ್ಟು ವೆಂಕಟರಮಣಯ್ಯನವರು ಮಕ್ಕಳು ಮತ್ತು ಮೊಮ್ಮಕ್ಕಳೊಂದಿಗೆ



ಶ್ರೀಮತಿ ವೆಂಕಮ್ಮ ಮತ್ತು ಶ್ರೀ ಕೊಲದೇವಿ ರಾಮಾಚಾರ್



ಬಿ.ಇ.ಎಲ್. ಕಾಲೋನಿಯಲ್ಲಿ ನಡೆದ ಶ್ರೀ ಶುಕ್ಲಯಜುರ್ವೇದ
ಯುವಕ ಸಂಘದ ಸಭೆ

## ಘಟ್ಟು ವಂಶ

*ಘಟ್ಟು ವಂಶದ ಮೂಲಪುರುಷ ಶ್ಯಾಮಭಟ್ಟರು ಸುಮಾರು ೨೦೦ ವರ್ಷಗಳ ಹಿಂದೆ ಆಂಧ್ರಪ್ರದೇಶದಿಂದ ಬಂದು ಕೋಲಾರ ಜಿಲ್ಲೆಯ ದಳಸನೂರಿನಲ್ಲಿ ನೆಲೆಸಿದರು ಎಂದು ಸ್ಥಳ ಪುರಾಣಗಳು ತಿಳಿಸುತ್ತವೆ. ಘಟ್ಟು ವಂಶಸ್ಥರ ಗುಣ ಮತ್ತು ಸಮಾಜ ಸೇವಾ ಕಾರ್ಯಗಳ ಬಗ್ಗೆ ಅನೇಕ ಕತೆಗಳು ಪ್ರಚಲಿತದಲ್ಲಿವೆ. ಈ ಭಾಗ ಘಟ್ಟು ವಂಶಸ್ಥರ ಈ ಗುಣಗಳ ಬಗ್ಗೆ ಬೆಳಕು ಚೆಲ್ಲುತ್ತದೆ.*

# ಪ್ರಾತಃಸ್ಮರಣೀಯರು



## ಘಟ್ಟು ರಾಮಚಂದ್ರ ರಾಯರು

ಘಟ್ಟು ರಾಮಚಂದ್ರ ರಾಯರು ಘಟ್ಟು ವಂಶದ ಇಂದಿನ ಹಿರಿಯ ಚೇತನ. ಇವರು ೯೩ ವಸಂತಗಳನ್ನು ಕಂಡು ಪೀಳಿಗೆಯ ಯುವಜನಾಂಗಕ್ಕೆ ಸ್ಫೂರ್ತಿಯ ಚಿಲುಮೆಯಾಗಿದ್ದಾರೆ.

अभिषेक

# ಘಟ್ಟು ಹಿರಿಯರ ಸಮಾಗಮ



**ಜಿ. ವಿ. ಪ್ರಭಾಕರ ರಾವ್ ಮತ್ತು ಡಿ. ವಿ. ಶಾಂತಾಮಣಿ ಯವರ ವಿವಾಹದ ಸಂದರ್ಭದಲ್ಲಿ (೧೨-೦೬-೧೯೬೬) ತೆಗೆದ ಚಿತ್ರ.**

**ನಿಂತಿರುವವರು (ಎಡದಿಂದ ಬಲಕ್ಕೆ):** ಪ್ರೇಮಮ್ಮ, ಲಕ್ಷ್ಮಮ್ಮ, ಸುಭದ್ರಮ್ಮ, ಸೀತಮ್ಮ, ಜಯಮ್ಮ, ಘಟ್ ವಾಸುದೇವರಾವ್

**ಕುಳಿತಿರುವವರು (ಎಡದಿಂದ ಬಲಕ್ಕೆ):** ನಾರಾಯಣ ರಾವ್, ರಾಮಚಂದ್ರ ರಾವ್, ಶಾಂತಾಮಣಿ, ಪ್ರಭಾಕರ ರಾವ್, ಶ್ರೀನಿವಾಸ ರಾವ್



ಘಟ್ಟು ವೇದಾಚಲಯ್ಯನವರ ಮಗ ಘಟ್ಟು ರಾಮ ರಾವ್ (ಎಡಕ್ಕೆ) ಹಾಗೂ ನೆಗವಾರದ ವೆಂಕಟರಮಣಯ್ಯನವರ ಮಗ ಶ್ಯಾನುಭೋಗ ವೆಂಕಣ್ಣನವರು. ◂

ಜಿ. ಆರ್. ಮಾಧವರಾವ್ ದಳಸನೂರಿನ ತಮ್ಮ ಆಶ್ರಮದಲ್ಲಿ
▾

# ಘಟ್ಟುವಂಶ

ಜಿ. ವಿ. ಪ್ರಭಾಕರ ರಾವ್

ಕನ್ನಡ ನಾಡಿನ ಸ್ವರ್ಣ ಭೂಮಿಯ
ಸೂರ್ಯ ತೇಜದಿ ಹೊಳೆವ ಭೂಮಿಯ
ಘಟ್ಟು ವಂಶವು ನೆಟ್ಟ ಭೂಮಿಯ
ಚರಿತೆಯನಾನು ಹೇಳುವೆ ।೧।

**ಮೂಲ**

ಕನ್ನಡನಾಡಿನ ಮೂಡಲಲಿ ಚಿನ್ನದ ಗಣಿಗಳ ಅಂಚಿನಲಿ
ಕೋಲಾರ ಜಿಲ್ಲೆಯ ಮಧ್ಯದಲಿ
ಇದ್ದಿತು ತುಳಸಿಯ ಬೀಡೊಂದು
ಶತದಳಪುರಿಯೆಂಬ ಊರೊಂದು ।೨।

ಗಿರಿಗಳ ಬನಗಳ ಮಡಿಲಿಂದ
ಘಟ್ಟ ಪ್ರದೇಶದ ಅಡಿಯಿಂದ
ನಡೆದು ಬಂದರು ಪಂಡಿತರು
ಶ್ಯಾಮಭಟ್ಟರೆಂಬ ಕೌಶಿಕರು ।೩।

ನೆಲೆನಿಂತರು ಆ ಗ್ರಾಮದಲವರು
ಊರಿನ ಹಿರಿಯರ ದಯದಿಂದ
ಜೀವನ ಸಾಗಿತು ಸುಖದಿಂದ
ಗಾಯಿತ್ರಿ ಮಾತೆಯ ವರದಿಂದ ।೪।

ವೆಲಗಲಬುರ್ರೆಯ ಕಳಸಪ್ಪ ಬಂದರು
ವರಾನ್ವೇಷಣೆಯ ನೆವದಿಂದ

ಕಂಡರು ಭಟ್ಟರ ಆದರದಿ
ಕೊಟ್ಟರು ಕಾವೇರಿಯ ಹರುಷದಲಿ ।೫।

ಅರಳಿತು ಶ್ಯಾಮಭಟ್ಟರ ಜೀವನ
ಆಯಿತು ಎರಡು ಪುತ್ರರ ಜನನ
ಹರುಷದಿಂದಲಿ ಮಾಡಿದರು ನಾಮಕರಣ
ಇವರ ಅಂಕಿತವು ಮಲ್ಲಪ್ಪ ವೆಂಕಟನಾರಾಯಣ ।೬।

ಮಲ್ಲಪ್ಪ ಹೂಡಿದರು ಸಮರಸದ ಜೀವನ
ಶ್ರೀಶನನುಗ್ರಹದಿಂದ ಐದು ಮಕ್ಕಳ ಜನನ
ವೆಂಕಟರಮಣ, ವೇದಾಚಲ, ನಾರಾಯಣ ಶ್ರೀಧರರಿಗೆ ನಮನ
ಲಕ್ಷ್ಮೀದೇವಿ ಸೋದರಿಯಾಗಿ ಆಭರಣ ।೭।

ವೆಂಕಟರಮಣರಿಗಾಯ್ತು ಜೀವನ ದರ್ಶನ
ನೆನೆದರು ಮೂಡಲಬಾಗಿಲ ಹನುಮೇಶನ
ಪಡೆದರು ಮಂಡಿಕಲ್ ಚಾಮುಂಡಿ ದರ್ಶನ
ಬೇಡಿದರು ದೇವಿಯ ನಿತ್ಯ ಸಂದರ್ಶನ ।೮।

**ಮಂಡಿಕಲ್**
ತ್ರೇತಾಯುಗದಿ ಅವತರಿಸಿದಳು ಮಹಾಲಕ್ಷ್ಮಿ ಸೀತೆ
ಮಂಡಿಯೂರಿದಳವಳು ಲವ ಕುಶರ ಮಾತೆ
ಇಹುದಿಲ್ಲಿ ಇಂದಿಗೂ ಮಂಡಿಯೂರಿದ ಗುರುತು
ಪೂಜಿಸುವರು ಆ ಗುರುತ ಪ್ರತಿವರ್ಷ ನವರಾತ್ರಿಯಂದು ।೯।

ಘಟ್ಟುವಂಶದ ಏನುಗ ಮಲ್ಲಮ್ಮ ದೇವತೆಯಿಲ್ಲಿ
ಎಲ್ಲರಿಷ್ಟಾರ್ಥಗಳ ನೆರೆವೇರಿಸುವಳಿಲ್ಲಿ
ಅಭಯಕೊಟ್ಟಿರುವಳವಳು ಬಹುಜನರ ಅಭ್ಯುದಯಸಲ್ಲಿ
ಅಷ್ಟಗ್ರಾಮಗಳ ಅಧಿದೇವತೆ ಅಲ್ಲಿ ।೧೦।

**ವೆಂಕಟರಮಣ**

ಆಯಿತು ವೆಂಕಟ್ರಮಣರಿಗೆ ಕಲ್ಯಾಣಮಸ್ತು
ಕೈಹಿಡಿದರವರು ಚಲದಿಪುರಿ ಸುಬ್ಬಮ್ಮ ತಾಯ
ಧನ ಧಾನ್ಯ ಸಮೃದ್ಧಿ ಸಂಪನ್ನೆ ಇವಳು
ಕಂಡರವರು ಆವಳಿಂದ ಹೊಸ ಬಾಳಬೆಳಕ ।೧೧।

ಶ್ರೀ ವನಿತೆ ಸುಬ್ಬಮ್ಮ ಗೆಲುವಾದಳಿಲ್ಲಿ
ಊರುಗೋಲಾದಳಿವಳು ಅವರ ಎಲ್ಲ ಕಾರ್ಯಗಳಲ್ಲಿ
ಪಡೆದಳು ಸುಖವಸತಿ ಇವರ ನೆಲೆಯಲ್ಲಿ
ಆಯಿತು ಇವರಿಗೆ ಎರಡು ಗಂಡು ಮಕ್ಕಳ ಪ್ರಾಪ್ತಿ ।೧೨।

ತಿಳಿದರವರು ಆದನು ತಿರುಮಲೇಶನ ಕರುಣೆಯೆಂದು
ಹೆಸರಿಸಿದರವರಿಗೆ ವೆಂಕಟಾಚಲ, ವೆಂಕಟನಾರಾಯಣರೆಂದು
ದೈವಚಿತ್ತದಿ ಪಡೆದರಿವರು ಒಂದು ಹೆಣ್ಣು ಮಗಳ
ಸಂಭ್ರಮದಿ ಕರೆದರು ಸಾವಿತ್ರಿಯೆಂದು ।೧೩।

**ವೆಂಕಟಾಚಲ**

ವೆಂಕಟಾಚಲರು ನಡೆದರು ತಂದೆಯಾ ಜಾಡಿನಲಿ
ಹಿಡಿದರು ಗ್ರಾಮಗಳ ಕುಲಕರಣಿ ಸೂತ್ರ
ಕರೆದರಿವರನು ಗ್ರಾಮ ಧರ್ಮ ದರ್ಶಿಗಳೆಂದು
ಚಾಮುಂಡಿಮಾತೆಯ ಹಿರಿಯಮಗನೆಂದು
।೧೪।

ನಿರ್ಮಲಚಿತ್ತದಿ ಮಾಡಿದರು ಚಾಮುಂಡಿಸೇವೆ
ಕಂಡುಕೊಂಡರು ಇವರು ಋಣಮುಕ್ತಿ ನಾವೆ
ವೆಂಕಟಾಚಲರಿಗಾಯ್ತು ಷಟ್ಚಕ್ರಸಂತಾನ
ಮಾತೆರುಕ್ಮಿಣಿಯು ಮೊದಲ ಸಂತಾನ ।೧೫।

ವೆಂಕಮ್ಮ ಆದಳು ಆರನೆಯ ಜನನ

ಇವರೀರ್ವರ ಮಧ್ಯೆ ನಾಲ್ಕು ಗಂಡು ಮಕ್ಕಳ ವರದಾನ
ಅರಿಷಡ್ವರ್ಗಗಳ ಮೆಟ್ಟಿನಿಲ್ಲುವ ಅಮರ ಅನುದಾನ
ಚಾಮುಂಡಿಮಾತೆಯ ಸುಖವಸತಿ ತಾಣ ।೧೬।

**ಶ್ರೀನಿವಾಸ**

ಅದ್ವಿತೀಯರಾಗಿ ಜನಿಸಿದರು ಶ್ರೀನಿವಾಸರು ಇಲ್ಲಿ
ವರಕವಿಯೇ ಆದರು ಎಲ್ಲ ಮಾರ್ಗಗಳಲ್ಲಿ
ಆಧ್ಯಾತ್ಮಚಿಂತನೆಯೇ ಇವರ ಚಿತ್ತ ವೃತ್ತಿ
ಪ್ರವೃತ್ತಿಯಾಯಿತು ಬೋಧನಾ ಶಕ್ತಿ ।೧೭।

ಅಧ್ಯಾಪನೆಯೇ ಇವರ ಮೊದಲ ಅರಿವು
ಆಯಿತು ಕೀರ್ತನ–ಭಜನೆಗಳ ಹರಿವು
ಸೂರ್ಯನಾರಾಯಣರ ವರಪುತ್ರರಿವರು
ಮಠಮಂದಿರಗಳ ಸ್ಥಾಪಕರಿವರು ।೧೮।

ವೇದಾನ್ವೇಷಣೆಯ ಸಂಯೋಜಕರಿವರು
ಮೂಡಲ ಹನುಮೇಶನ ಪರಮ ಭಕ್ತರಿವರು
ಐದು ಮಕ್ಕಳಿಗಿವರು ಜನ್ಮ ನೀಡಿದರು
ತೀರ್ಥಯಾತ್ರೆಯ ಮಾಡಿ ವಾಸುದೇವನ ಪಡೆದರು
।೧೯।

ವಾರಣಾಸಿಗೆ ಪೋಗಿ ವಿಶ್ವನಾಥನ ಪಡೆದರು
ಶಾರದೆಯ ಅನುಗ್ರಹದಿಂದ ಹೆಣ್ಣು ಮಗಳನ್ನು
ಲಾಲಿತ್ಯದಲಿ ಜೀವನ ಸಾಗಿಸಿದವರಿವರು
ಸೇರಿದರು ಹರಿಪಾದ ಮುಕ್ತಿ ಪಡೆದು ।೨೦।

**ರಾಮಚಂದ್ರ**

ಎರಡನೆಯ ಮಗನಾಗಿ ಶ್ರೀರಾಮಚಂದ್ರ
ಸನ್ಮಾರ್ಗ ತೋರಿದರು ಸೋದರರೊಳಗೆ

ಅಚಲರಾಗಿ ನಿಂತರು ಗೃಹಕೃತ್ಯಗಳಲ್ಲಿ
ಆಶ್ರಯವಾದರು ಬಂಧು ಜನರಲ್ಲಿ ।೨೧।

ರಕ್ಷಣೆಯ ನೀಡಿದರು ದೀನ ದಲಿತರಿಗೆ
ಕುಲಕರಣಿ ವೃತ್ತಿ ಇವರ ಮತ್ತೊಂದು ಯುಕ್ತಿ
ನಿಂತರು ಧರ್ಮದರ್ಶಿಗಳಾಗಿ ಚಾಮುಂಡಿ ಮುಂದೆ
ಹಿಮಾಲಯವಾಗಿ ಸಮಾಜದ ಹಿಂದೆ ।೨೨।

ಶ್ರದ್ಧೆಯಲಿ ಮಾಡಿದರು ಗಾಯತ್ರಿ ಲಕ್ಷ
ಪಡೆದರೆರಡು ಗಂಡುಗಳು ಕಲ್ಪವೃಕ್ಷ
ಅಶ್ವತ್ಥನ ದಯದಿಂದ ಎರಡು ಸ್ತ್ರೀರತ್ನಗಳ
ಭಕ್ತಿಯಲಿ ಮಾಡಿದರು ಕನ್ಯಾದಾನವನು ।೨೩।

**ವಿಠ್ಠಲ ಕೃಷ್ಣ**

ವಿಠ್ಠಲ ಕೃಷ್ಣರು ಜನಿಸಿದರು ಮೂರನೆಯವರಾಗಿ
ಇವರಿಗಾಯ್ತು ಒಟ್ಟು ಆರು ಸಂತಾನ
ಮನೆತುಂಬಲು ಮೂರು, ಕನ್ಯಾದಾನಕೆ ಮೂರು
ಆಧ್ಯಾತ್ಮ ಚಿಂತನೆಯೆ ಇವರ ಮೊದಲ ಗುರಿಯಾಯ್ತು ।೨೪।

ಪುರಾಣ ಪುಣ್ಯ ಕಥೆ ಇವರ ವರದಾನವಾಯ್ತು
ಬೋಧನ ಶೋಧನೆಯೆ ಇವರ ದೇವ ಸ್ಮರಣೆ
ಜಪ ತಪಾದಿಗಳಿವರ ಮೋಕ್ಷ ಮಾರ್ಗ
ಆದರು ಇವರು ಗ್ರಾಮಗಳ ಸತ್ಯದಾ ಗುರುವು ।೨೫।

ಮನೆ ಮನೆಗಳಲ್ಲಿ ನಡೆಸುತ್ತಿದ್ದರು ಇವರು ಭಾರತಕತೆಯ
ವೇದಪುರಾಣಗಳ ವ್ಯಾಖ್ಯಾನಕಾರರಿವರು
ಅರ್ಥೈಸುತ್ತಿದ್ದರು ಶಾಸ್ತ್ರ ಭಾಗವನಿವರು
ಹರಿಸಿದರು ಜನಗಳ ಮನದಲ್ಲಿ ಜ್ಞಾನದ ಬೆಳಕ ।೨೬।

ದಾಖಲೆಯ ಮಾಡಿದರು ಸೂರ್ಯೋಪಾಸನೆ ಐದು ವರ್ಷ
ಮಾಡುತ್ತಿದ್ದರು ತೀರ್ಥಯಾತ್ರೆಗಳ ಪ್ರತಿವರುಷ
ದಾಸಕೂಟದ ಜೊತೆಗೆ ಅಕ್ಷರದಾನ
ಎಲ್ಲ ಶಿಷ್ಯರಿಗೆ ದೊರಕಿತು ಸರ್ಕಾರೀ ವೇತನ ।೨೭।

**ನಾರಾಯಣ**

ನಾರಾಯಣರ ಜನನ ಗಂಡುಗಳಲ್ಲಿ ನಾಲ್ಕನೆಯ ಸ್ಥಾನ
ಇವರ ಜೀವನವಾಯ್ತು ಧರ್ಮ ಸೋಪಾನ
ಮಾಡಿಕೊಂಡರು ಇವರು ಉಪಾಧ್ಯಾಯ ವೃತ್ತಿ ಪ್ರಧಾನ
ಹರಿಕೀರ್ತನೆಯೇ ಇವರ ಜೀವನ ನಿರ್ದೇಶನ ।೨೮।

ಗ್ರಾಮ ಸಂಸ್ಕೃತಿಯ ಹರಿಕಾರರಿವರು
ಅಣ್ಣ ವಿಠ್ಠಲಕೃಷ್ಣರೊಡಗೂಡಿ
ಬರೆದೊಪ್ಪಿಸಿದರಿವರು ಚಾಮುಂಡಿ ದಂಡಕವ
ಮುದ್ದಾಗಿ ಪ್ರಕಟಿಸಿದರು ಕಸ್ತೂರಿ ಭಾಷೆಯಲಿ ।೨೯।

ಅಣ್ಣಹಾಕಿದ ಗೆರೆಯ ದಾಟದ ಲಕ್ಷ್ಮಣರಿವರು
ಮಠಮಂದಿರಗಳ ಪೂಜೆಯಲಿ ಆದ್ಯರಿವರು
ಕಂಡರಿದ ಸತ್ಯಗಳ ಸ್ಮೃತಿಕಾರರಿವರು
ನೂರೆಂಟು ದಿವ್ಯ ಚಿತ್ರಗಳ ಬಿಡಿಸಿದವರಿವರು ।೩೦।

ಹರಿಯೌಪಾಸನೆಯಿಂದ ಇವರಿಗೆ ಎರಡು ಗಂಡು ಸಂತಾನ
ಬೆಳಗಿದರು ಕನ್ಯಾದಾನ ಮಾಡಿ ಐದು ಮನೆಯ
ಹೀಗಾಯ್ತು ಇವರ ಜೀವನ ಸಾಧನ
ಸೇರಿದರು ಹರಿಪಾದ ಸಂತೃಪ್ತಿಯಿಂದ ।೩೧।

---

***ತೋಷ ಎಂದರೆ ನಮಗಿರುವಷ್ಟೇ ಸಾಕು ಎಂಬ ಧನ್ಯಭಾವ. ಅದು ಸಂತೋಷದ ಅರೆಕ್ಷರದಲ್ಲಿದ್ದರೆ ಸಾಲದು. ಕೊರತೆಗಳನ್ನು ಮರೆಸುವ ಉತ್ಸಾಹದ ಒರತೆ ಸೃಷ್ಟಿಸುವ ಸಂಜೀವಿನಿಯಾಗಿ ಎಲ್ಲ ಕ್ಷಣದಲ್ಲಿಯೂ ಇದ್ದರೆ ಎಷ್ಟು ಚೆನ್ನ!***

---

# ಘಟ್ಟು ಮೂಲ

ಜಿ.ಆರ್. ಮಾಧವ ರಾವ್

ಓಂ ನಮಃ ಶಿವಾಯ್ಯೆ ಗಂಗಾಯ್ಯೆ ಶಿವದಾಯ್ಯೆ ನಮೋ ನಮಃ।
ನಮಸ್ತೇ ರುದ್ರರೂಪಿಣ್ಯೈ ಶಾಂಕರ್ಯ್ಯೆ ತೇ ನಮೋ ನಮಃ॥

ಆದಿ ಪುರುಷ ಬ್ರಹ್ಮನು ದೇವ ನದಿ ಗಂಗೆಯನ್ನು ಈ ಮೇಲಿನಂತೆ ಸ್ತುತಿಸಿದನಂತೆ. ಗಂಗೆ ಎಂದ ಕೂಡಲೇ ಪ್ರತಿಯೊಬ್ಬರ ಸ್ಮೃತಿಪಟಲದಲ್ಲಿ ಭಾಸವಾಗುವುದು ಹಿಮಾಲಯದ ಉತ್ತುಂಗ ಹಿಮಾಚ್ಛಾದಿತ ಶಿಖರಗಳ ಮಧ್ಯೆ ಜುಳು ಜುಳು ನಾದದೊಂದಿಗೆ ಸಣ್ಣತೊರೆಯಾಗಿ ಹರಿಯುತ್ತಾ, ಅಲ್ಲಿಂದಿಲ್ಲಿಗೆ ಇಲ್ಲಿಂದಲ್ಲಿಗೆ ಬಳುಕುತ್ತಾ, ಕುಣಿಯುತ್ತಾ ಆಗಾಗ್ಗೆ ಹಾರುತ್ತಾ, ಧುಮುಕುತ್ತಾ, ಭೋರ್ಗರೆಯುತ್ತಾ, ಕಡೆಗೆ ಶಾಂತವಾಗಿ ತನ್ನ ಪ್ರದೇಶದಲ್ಲಿ ಹರಿದು ತನ್ನ ಮಾರ್ಗದುದ್ದಕ್ಕೂ ಅಸಂಖ್ಯ ಜನರಿಗೆ ಜೀವನೋಪಾಯ ಮಾರ್ಗದರ್ಶನ ನೀಡಿ ಹಲವಾರು ಪುಣ್ಯಕ್ಷೇತ್ರಗಳಲ್ಲಿ ಋಷಿ ಮುನಿಗಳ ಪಾದಗಳನ್ನು ಸ್ಪರ್ಶಿಸಿ, ಕಡೆಗೆ ಸಾಗರವನ್ನು ಸೇರುವ ಒಂದು ಜೀವ ನದಿಯ ಚಿತ್ರ.

ಉಗಮ ಸ್ಥಾನದಿಂದ ಇದು ಮುಂದುವರೆದಂತೆ, ಇದರೊಂದಿಗೆ ಸೇರುವ ಕಾಲುವೆಗಳೆಷ್ಟೋ, ತೊರೆಗಳೆಷ್ಟೋ ಹಾಗೂ ನದಿಗಳೂ ಎಷ್ಟೋ ಹಾಗೆಯೇ ಇದರಿಂದ ಹೊರಬರುವ, ಇದರೊಂದಿಗೆ ಸೇರುವ ಯಾವುದೇ ನೀರಿನ ಝರಿ ಅದರ ನಾಮ ನಿರ್ದೇಶನ ಕಳೆದುಕೊಳ್ಳುತ್ತದೆಯೇ ವಿನಃ, ಈ ಜೀವ ನದಿ ತನ್ನತನವನ್ನು ಚಿರಂತನವಾಗಿ ಉಳಿಸಿಕೊಳ್ಳುತ್ತದೆ.

ಒಂದು ಮನೆತನವೂ ಸಹ ನದಿಯಂತೆಯೇ, ಎಲ್ಲಿಯೋ ಹುಟ್ಟಿ, ಹರಿದು ಬರುತ್ತಾ, ತನ್ನನ್ನು ಸೇರಬಯಸಿಬಂದವರಿಗೆ ಆಶ್ರಯ ನೀಡುತ್ತಾ, ತನ್ನತನವನ್ನು ಮಾತ್ರ ಕಾಪಾಡಿಕೊಳ್ಳುತ್ತಾ ಮುಂದುವರೆಯುತ್ತದೆ.

ಇದು ಕೋಲಾರ ಜಿಲ್ಲೆಯ ಘಟ್ ಮನೆತನದ ಚಿತ್ರ. ಈ ಮನೆತನದ ಚರಿತ್ರೆ ಈ ಜಿಲ್ಲೆಯಲ್ಲಿ ಸುಮಾರು ೨೦೦ ವರ್ಷಗಳ ಹಿಂದೆ ಆರಂಭವಾಯಿತು.

ಅಂದರೆ, ಈಗ್ಗೆ ಸುಮಾರು ಆರು – ಏಳು ತಲಮಾರಿನ ಹಿಂದೆ ಎನ್ನಬಹುದು. ಈ ಜಿಲ್ಲೆಯಲ್ಲಿ ಈ ಮನೆತನದ ಮೂಲ ಪುರುಷ ಶ್ಯಾಮಭಟ್ಟ ಪ್ರಖ್ಯಾತ ಜೋತಿಷ್ಯಜ್ಞ. ಈತನನ್ನು ಶ್ಯಾಮಜೋಯಿಸ ಎಂದೂ ಕರೆಯಲಾಗುತ್ತಿತ್ತು. ಋಷಿ ಮೂಲ, ನದಿ ಮೂಲಗಳು ಸದಾ ಒಂದು ಬಿಡಿಸಲಾಗದ ಕಗ್ಗಂಟಾಗಿರುವಂತೆ, ಈ ಶ್ಯಾಮಭಟ್ಟರದೂ ಸಹ. ಇವರು ಎಲ್ಲಿಂದ ಬಂದರು, ಇವರು ಬರಲು ಕಾರಣವೇನು ಎನ್ನುವುದು ಈಗಲೂ ನಿಗೂಢವೇ ಸರಿ. ಆಂಧ್ರದ ಕರ್ನೂಲು ಜಿಲ್ಲೆಯ ಗಡ್ವಾಲಿನ ಕೆಲ ಶುಕ್ಲ ಯಜುರ್ವೇದಿ ಬ್ರಾಹ್ಮಣರು ಹೇಳುವಂತೆ ಅವರ ಪೂರ್ವಿಕರಲ್ಲಿ ಯಾರೋ ಕೋಲಾರ ಜಿಲ್ಲೆಗೆ ಹೋಗಿ ಅಲ್ಲಿಂದ ವಾಪಸ್ಸು ಬಾರದ ಕಥೆ ಹೇಳುತ್ತಾರೆ.

ಏನೇ ಇರಲಿ, ಶ್ಯಾಮಭಟ್ಟರು ಜ್ಯೋತಿಷ್ಯ ಶಾಸ್ತ್ರದಲ್ಲಿ ಅದ್ವೀತಿಯರಾಗಿದ್ದರಲ್ಲದೆ, ಸಂಗೀತಜ್ಞರೂ, ದೈವಭಕ್ತರೂ ಆಗಿದ್ದರು. ಆಂಧ್ರ ಪ್ರದೇಶದಿಂದ ಬಂದಿದ್ದ ಭಟ್ಟರಿಗೆ ಆಶ್ರಯ ನೀಡಿದ್ದು ಕೋಲಾರ ಜಿಲ್ಲೆಯ ಪಾಪನಪಲ್ಲಿ (ಈಗಿನ ಶ್ರೀನಿವಾಸಪುರ) ಬಳಿಯ ಗ್ರಾಮ ಶತದಳಪುರಿ (ಈಗಿನ ದಳಸನೂರು). ಈ ಗ್ರಾಮದ ಸುತ್ತಮುತ್ತಲು ಇದ್ದ ತುಳಸೀ ಗಿಡಗಳು ಭಟ್ಟರನ್ನು ಇಲ್ಲಿಯೇ ಇರುವಂತೆ ಒತ್ತಾಯಿಸಿದವು.

ಆಗ್ಗೆ ದಳಸನೂರಿನಲ್ಲಿ ಇದ್ದದ್ದು ಕೆಲವೇ ಬ್ರಾಹ್ಮಣರ ಮನೆಗಳು. ಅವುಗಳಲ್ಲಿ ಮುಖ್ಯವಾದುದು ಭಾರದ್ವಾಜ ಗೋತ್ರದ ಸುಬ್ಬರಾಯಪ್ಪನವರದು. ದಳಸನೂರಿನಲ್ಲಿ ಸುಬ್ಬರಾಯಪ್ಪನವರ ಮನೆಯೇ ಅಲ್ಲದೆ ಇನ್ನೂ ಎರಡು ಬ್ರಾಹ್ಮಣರ ಮನೆಗಳು ಇದ್ದವು. ಅವುಗಳೆಂದರೆ ಕರಡಿಯವರ ಮನೆ ಮತ್ತು ಕುಮಾರಪ್ಪನ ಮನೆ. ಈ ಊರ ಸುತ್ತುಮುತ್ತಲಿನ ಗ್ರಾಮಗಳ ಶ್ಯಾನುಭೋಗರಾಗಿದ್ದ ಶ್ರೀ ಸುಬ್ಬರಾಯಪ್ಪನವರು ಸಾಕಷ್ಟು ಭೂಮಿಕಾಣಿಕೆಯನ್ನು ಹೊಂದಿದ್ದರು. ದಳಸನೂರಿಗೆ ಶ್ಯಾಮಭಟ್ಟರು ಬಂದಾಗ ಅವರಿಗೆ ಆಶ್ರಯವಿತ್ತವರು ಇವರೇ. ಸಮಾನ ವಯಸ್ಕರಾದ ಸುಬ್ಬರಾಯಪ್ಪನವರಿಗೂ ಶ್ಯಾಮಭಟ್ಟರಿಗೂ ಮೈತ್ರಿ ಬೆಳೆದು, ಶ್ಯಾಮಭಟ್ಟರನ್ನು ದಳಸನೂರಿನಲ್ಲಿಯೇ ಉಳಿಯುವಂತೆ ಸುಬ್ಬರಾಯಪ್ಪ ಒತ್ತಾಯಿಸಿ ಸಫಲರಾದರು. ಶ್ಯಾಮಭಟ್ಟರ ಹಿರಿಯ ಮಗ ವೆಂಕಟನಾರಾಯಣಪ್ಪನಿಗೆ ದಳಸನೂರಿನ ಸುಬ್ಬರಾಯಪ್ಪನ ಮಗಳು ಗೌರಮ್ಮನೊಡನೆ ವಿವಾಹವಾಯಿತಲ್ಲದೆ, ಸುಬ್ಬರಾಯಪ್ಪ ಹಾಗು ಶ್ಯಾಮಭಟ್ಟರ ನಡುವಣ ಮೈತ್ರಿಯು ಮತ್ತಷ್ಟು ಗಾಢವಾಗಿ ಬೆಳೆಯಿತು. ಇಂದಿಗೂ

ಈ ಮನೆತನಗಳ ಮೈತ್ರಿಯು ಅದೇ ರೀತಿಯಲ್ಲಿ ಬೆಳೆದು ಬಂದಿದೆ. ಕೌಶಿಕ ಗೋತ್ರದ ಶ್ಯಾಮಭಟ್ಟರು ಬೇರೆ ಪ್ರದೇಶದಿಂದ ಬಂವರಾದ್ದರಿಂದ ಘಟ್ ನವರಾದರು ಮತ್ತು ಇದೇ ಊರಿನಲ್ಲಿ ಮುಂಚಿನಿಂದ ಇದ್ದ ಸುಬ್ಬರಾಯಪ್ಪನವರು ಹಳೇಮನೆಯವರಾದರು.

ಶ್ಯಾಮಭಟ್ಟರ ಪಾಂಡಿತ್ಯ ಮತ್ತು ಸದಾಚಾರಗಳು ಅವರ ಬೆಂಬಲವಾಗಿದ್ದರಿಂದ, ಆಸುಪಾಸಿನ ಬ್ರಾಹ್ಮಣ ವೃಂದ ತಮ್ಮ ಶಾಖೆಯವರೇ ಆದ ಭಟ್ಟರನ್ನು ತಮ್ಮಲ್ಲಿಯೇ ಉಳಿಸಿಕೊಳ್ಳಲು ಉತ್ಸುಕರಾಗಿದ್ದರು. ಅಂತೆಯೇ ವೆಲಗಲಬುರ್ರೆಯ ಜಮೀನದಾರರಾಗಿದ್ದ ಶ್ರೀ ಕಳಸಪ್ಪನವರು ತಮ್ಮ ಮಗಳು ರಾಧಮ್ಮನನ್ನು ಭಟ್ಟರಿಗೆ ಕೊಟ್ಟು ವಿವಾಹವನ್ನು ಮಾಡಿದರು. ಹಲವಾರು ಗ್ರಾಮಗಳ ಶ್ಯಾನುಭೋಗರಾಗಿದ್ದ ಶ್ರೀ ಕಳಸಪ್ಪನವರು ತಮ್ಮ ಅಳಿಯನಿಗೆ ದಳಸನೂರಿನಲ್ಲಿಯೇ ಸ್ಥಿರವಾಗಿ ನಿಲ್ಲಲು ಎಲ್ಲಾ ನೆರವು ನೀಡಿದರು. ಮಾವ ಕಳಸಪ್ಪನವರು, ಮಿತ್ರ ಸುಬ್ಬರಾಯಪ್ಪನವರ ಪ್ರೀತಿವಿಶ್ವಾಸಗಳಿಂದ ಶ್ಯಾಮಭಟ್ಟರು ಇಲ್ಲಿ ಯಾವ ಕಷ್ಟವೂ ಇಲ್ಲದೆ ತಮ್ಮ ಜೀವನ ನಡೆಸಿದರು. ಅವರ ಪಾಂಡಿತ್ಯ ನಡತೆ, ಜನರೊಂದಿಗೆ ಪ್ರೇಮ– ಪೂರ್ಣ ವ್ಯವಹಾರಗಳು ಊರಿನ ಎಲ್ಲರ ಆದರ ವಿಶ್ವಾಸ ಗಳಿಸಿತು.

ಕೆಲವರ್ಷಗಳು ಗತಿಸಿದ ನಂತರ ಸುಬ್ಬರಾಯಪ್ಪನವರು ಭಟ್ಟರೊಂದಿಗಿನ ತಮ್ಮ ಸ್ನೇಹವನ್ನು ಸಂಬಂಧವನ್ನಾಗಿಸಿದರು. ತಮ್ಮ ಮಗಳು ಗೌರಮ್ಮನನ್ನು ಭಟ್ಟರ ಹಿರಿಯ ಮಗ ವೆಂಕಟನಾರಣಪ್ಪನಿಗೆ ಇತ್ತು ವಿವಾಹ ಮಾಡಿದರು. ವೆಂಕಟನಾರಣಪ್ಪನವರು ತಂದೆಯಂತೆ ಪ್ರಸಿದ್ಧ ಜ್ಯೋತಿಷಿಯಾಗಿದ್ದರು. ವೈಶಿಷ್ಟ್ಯವೆಂದರೆ ತಂದೆಯಂತೆ ಇವರು ಜೀವನೋಪಾಯಕ್ಕೆ ಜ್ಯೋತಿಷ್ಯ ಉಪಯೋಗಿಸಲಿಲ್ಲ. ಶಾಸ್ತ್ರಾರ್ಥವನ್ನು ಚೆನ್ನಾಗಿಬಲ್ಲವರಾಗಿದ್ದರು. ವೆಂಕಟನಾರಣಪ್ಪನಿಗೆ ಲೌಕಿಕದಲ್ಲಿ ಅಷ್ಟಾಗಿ ಆಸಕ್ತಿ ಇರಲಿಲ್ಲ. ಆದರೆ ಭಟ್ಟರ ಎರಡನೇ ಮಗ ಮಲ್ಲಪ್ಪನು ಲೌಕಿಕ ವ್ಯವಹಾರಜ್ಞನಾಗಿದ್ದ.

ಶ್ಯಾಮಭಟ್ಟರ ಒಬ್ಬಳೇ ಮಗಳು ಲಕ್ಷ್ಮೀದೇವಮ್ಮನನ್ನು ಕೊಲದೇವಿಯ ಆಚಾರ್ಯರ ಮನೆಗೆ ಕೊಟ್ಟು ಮದುವೆ ಮಾಡಿದ್ದರು. ಈ ಆಚಾರ್ಯರಿಗೆ ಆ ಭಾಗದ ಕೆಲವು ಗ್ರಾಮಗಳ ಶ್ಯಾನುಭೋಗಿಕೆ ಸಹ ಇದ್ದಿತು. ಪೌರೋಹಿತ್ಯವಂತು ಇದ್ದೇ ಇತ್ತು. ಲಕ್ಷ್ಮೀದೇವಮ್ಮನು ಕೊಲದೇವಿಯ

ಶ್ಯಾನುಭೋಗಿಕೆ ಲೆಕ್ಕ ಬರೆಯಲು ಸಹಾಯ ಮಾಡುವಂತೆ ಮಲ್ಲಪ್ಪನನ್ನು ಕೋರಿದರು. ಆದುದರಿಂದ ಮಲ್ಲಪ್ಪನ ಮಗ ವೆಂಕಟರಮಣಪ್ಪನು ತನ್ನ ಸಂಸಾರವನ್ನು ಕೊಲದೇವಿಯ ಬಳಿಯ ಮಂಡಿಕಲ್ ಗ್ರಾಮದಲ್ಲಿ ಹೂಡಿದರು. ಹೀಗೆ ಮುಳಬಾಗಿಲು ತಾಲೂಕಿನಲ್ಲಿಯೂ ಘಟ್ ಮನೆತನ ಚಿಗುರಿತು.

ಈ ಭಾಗದ ಪ್ರಮುಖರಾದ ಭಾರಧ್ವಾಜ ಗೋತ್ರದ ದಳಸನೂರು, ವೆಲಗಲಬುರ್ರೆ ಮತ್ತು ಈ ಪ್ರಾಂತದ ಋತ್ವಿಕ್ ವರ್ಗದ ಪಾರ್ಥಿವಸ ಗೋತ್ರದ ಕೊಲದೇವಿಯವರೂ ಘಟ್‌ನವರೊಂದಿಗೆ ಸಂಬಂಧ ಬೆಳೆಸಿದ್ದನ್ನು ನೋಡಿ, ಮತ್ತೊಂದು ಪ್ರಮುಖ ವರ್ಗದ ಚಲದಿಗಾನಹಳ್ಳಿಯವರು ಇವರೊಂದಿಗೆ ಸಂಬಂಧ ಬೆಳೆಸಲು ಮುಂದಾದರು. ಚಲದಿಗಾನಹಳ್ಳಿ ಗುರಪ್ಪನವರು ತಮ್ಮ ತಂಗಿ ಸುಬ್ಬಮ್ಮನನ್ನು ಮಲ್ಲಪ್ಪನ ಮಗ ವೆಂಕಟರಮಣಯ್ಯನಿಗೆ ಕೊಟ್ಟು ಸಂಬಂಧ ಬೆಳೆಸಿದರು. ಹೀಗೆ ದೂರ ದೇಶದಿಂದ ಬಂದಿದ್ದ ಶ್ಯಾಮಭಟ್ಟರು ಕೇವಲ ತಮ್ಮ ಪಾಂಡಿತ್ಯ, ಚಾರಿತ್ರ್ಯ ಹಾಗು ಸದ್ಗುಣಗಳಿಂದ ಈ ಪ್ರಾಂತದ ಪ್ರಮುಖ ಮನೆತನಗಳೊಂದಿಗೆ ತಮ್ಮ ಬಾಂಧವ್ಯವನ್ನು ಬೆಳೆಸಿದರು.

**ಇಂದು**

ಹದಿನೇಳನೇ ಶತಮಾನದಲ್ಲಿ ಪ್ರತಿಭಾಶಾಲಿ ಯುವಕನೊಬ್ಬನು ದೇಶಪರ್ಯಟನೆಯ ಹೆಸರಿನಲ್ಲಿ ದಳಸನೂರಿಗೆ ಬಂದಾಗ ತನ್ನ ಸಮವಯಸ್ಕರ ಸ್ನೇಹ ಪ್ರೀತಿಯ ಸಂಕೋಲೆಯಿಂದ ಬಂಧಿತನಾಗಿ ಅಲ್ಲಿಯೇ ಉಳಿದುಕೊಂಡ ವಿದ್ವಾನ್ ಶ್ಯಾಮಭಟ್ಟರ ವಂಶದವರು ಇಂದು ಇಪ್ಪತ್ತರ ಶತಕದಲ್ಲಿ ಎಲ್ಲ ಕಡೆಯೂ ವ್ಯಾಪಕವಾಗಿ ಹರಡಿದ್ದಾರೆ. ಇಂದು ಶ್ಯಾಮಭಟ್ಟರ ಸಂತತಿಯವರಿಗೆ ವಿದ್ಯಾವಂತರ ಮನೆತನವೆಂದು ಹೆಸರು ಅನ್ವರ್ಥವಾಗಿದೆ. ಸರಳಜೀವನ, ಸಾಮಾಜಿಕ ಆರೋಗ್ಯಕರ ಬೆಳವಣಿಗೆಗೆ ಇವರು ಪೂರಕವಾಗಿದ್ದಾರೆ. ಈಗ ನಡೆಯುತ್ತಿರುವ ಐದನೆಯ ತಲೆಮಾರಿನವರು ಎಲ್ಲ ರೀತಿಯ ಅಭಿವೃದ್ಧಿಪಥದಲ್ಲಿದ್ದಾರೆ. ಈ ಎರಡು ಶತಕಗಳಲ್ಲಿ ಘಟ್ ನವರು ರಾಜ್ಯದ ಪ್ರಮುಖ ನಗರಗಳಾದ ಬೆಂಗಳೂರು, ಮೈಸೂರುಗಳಲ್ಲಿ ಹರಡಿದ್ದಾರಲ್ಲದೆ, ಭಾರತದ ವಿವಿಧ ರಾಜ್ಯಗಳಲ್ಲೂ ಹಾಗು ವಿದೇಶಗಳಲ್ಲೂ ನೆಲೆಸಿದ್ದಾರೆ.

***ಲೇಖಕರು ಘಟ್ಟು ವಂಶದ ಮೂಲ ಹಾಗೂ ಬೆಳವಣಿಗೆಯ ಬಗ್ಗೆ ಸಾಕಷ್ಟು ಅಧ್ಯಯನ ಮಾಡಿರುವವರು***

# ಘಟ್ಟು ವಂಶ: ಕಿರು ಪರಿಚಯ

ಡಿ.ವಿ. ಪ್ರಭಾಕರ

*ವೆಂಕಟೇಶೋ ವಾಸುದೇವಃ ಪ್ರದ್ಯುಮ್ನೋಮಿತವಿಕ್ರಮಃ ।*
*ಸಂಕರ್ಷಣೋ ಅನಿರುದ್ಧಶ್ಚ ಶೇಷಾದ್ರಿಪತಿರೇವ ಚ ।*

ಕೋಲಾರ ಮತ್ತು ಚಿತ್ತೂರು ಕ್ರಮವಾಗಿ ಕರ್ನಾಟಕ ಮತ್ತು ಆಂಧ್ರ ಪ್ರದೇಶ ರಾಜ್ಯಗಳ ಅಕ್ಕಪಕ್ಕದ ಜಿಲ್ಲೆಗಳು. ಚಿತ್ತೂರು ಜಿಲ್ಲೆಯು ಒಣಭೂಮಿಯಿಂದ ಕೂಡಿದ್ದು ಅನೇಕ ಬೆಟ್ಟ ಶ್ರೇಣಿಗಳಿಂದ ಆವೃತವಾಗಿದೆ. ತಿರುಪತಿಯ ಏಳು ಬೆಟ್ಟಗಳ ಶ್ರೇಣಿಯೂ ಇದೇ ಜಿಲ್ಲೆಗೆ ಸೇರಿದೆ. ಈ ಕಣಿವೆ ಮತ್ತು ಘಟ್ಟ ಪ್ರದೇಶದಲ್ಲಿ ಕರ್ನಾಟಕದಿಂದ ವಲಸೆ ಹೋಗಿ ಆಂಧ್ರದಲ್ಲಿ ಬೀಡು ಬಿಟ್ಟ ಕನ್ನಡದವರೇ ಆಗಿದ್ದ ಮಾಧ್ವ ಸಾಂಪ್ರದಾಯದ ಕುಟುಂಬವೊಂದಿತ್ತು. ಇವರು ಕೌಶಿಕ ಗೋತ್ರದ ಕಾಣ್ವಶಾಖಾ ಬ್ರಾಹ್ಮಣರು. ಇವರ ಮನೆದೇವರು ಆಂಧ್ರ ಪ್ರದೇಶದ ಸುಪ್ರಸಿದ್ಧವಾದ ತಿರುಪತಿ ಶ್ರೀನಿವಾಸದೇವರು. ಇವರ ಕುಲದೇವತೆ ಯಾನಿಗ ಮಲ್ಲಮ್ಮ. ಈ ಪ್ರದೇಶವು ಕಾಡು ಮತ್ತು ಮೃಗಗಳಿಂದ ಆವೃತವಾಗಿದ್ದು ಜನಜೀವನಕ್ಕೆ ತುಂಬಾ ತೊಂದರೆಯುಂಟಾಗುತ್ತಿತ್ತು.

ಈ ಕುಟುಂಬಕ್ಕೆ ಸೇರಿದ ಒಬ್ಬ ಯುವಕ ಪರಿಸ್ಥಿತಿಯ ಒತ್ತಡದಿಂದಲೂ ಕಾರ್ಯಕಾರಣಗಳಿಂದಲೂ ಘಟ್ಟ ಪ್ರದೇಶವನ್ನು ಬಿಟ್ಟು ಬಯಲು ಸೀಮೆಗೆ ಬಂದು ಅಲ್ಲಿಂದ ಮುಂದೆ ಮುಳಬಾಗಿ–ಕೋಲಾರ ಮಾರ್ಗವಾಗಿ ದಳಸನೂರು ಗ್ರಾಮಕ್ಕೆ ಬಂದು ಸೇರಿದನು. ಈ ಯುವಕನ ಹೆಸರು ಶ್ಯಾಮಭಟ್ಟ. ದಳಸನೂರಿಗೆ ಆಗ್ಗೆ ಶತದಳಪುರಿ ಎಂದು ಹೆಸರಿತ್ತು. ಇಲ್ಲಿನ ಹೇರಳವಾದ ತುಳಸೀವನ ಮತ್ತು ಪ್ರಕೃತಿ ಸೌಂದರ್ಯಗಳಿಗೆ ವಶನಾಗಿ ಹಲವು ಬ್ರಾಹ್ಮಣರ ಮನೆತನಗಳಿದ್ದ ಆ ಗ್ರಾಮದಲ್ಲಿ ಆ ಯವಕನು ನೆಲೆಸಲು ಇಚ್ಛಿಸಿದನು. ಇದು ಸಂಭವಿಸಿದ್ದು ಸುಮಾರು ಕ್ರಿ.ಶ. ೧೮೨೫ರಲ್ಲಿ. ಈ ಯುವಕನಿಗೆ ಯಾರೂ ಪೋಷಕರಾಗಲಿ

ಅಥವಾ ನೆಂಟರಿಷ್ಟರಾಗಲಿ ಇರಲಿಲ್ಲ. ಒಂಟಿಯಾಗಿ ದಳಸನೂರನ್ನು ಸೇರಿದ ಈ ಹುಡುಗನ ಕುಶಾಗ್ರ ಬುದ್ಧಿ, ತೇಜಸ್ಸು, ವಿಧೇಯತೆ ಮತ್ತು ಪ್ರಾಮಾಣಿಕತೆಗಳು ಆ ಊರಿನ ಜನರ ಮೇಲೆ ಪರಿಣಾಮ ಬೀರಿತು ಹಾಗೂ ಅವರ ಅಭಿಮಾನವನ್ನು ಗಳಿಸಿತು. ಶ್ಯಾಮಭಟ್ಟರಿಗೆ ಜ್ಯೋತಿಷ್ಯ ಹಾಗೂ ಸಂಗೀತದಲ್ಲಿ ಪರಿಶ್ರಮವಿತ್ತೆಂದು ತಿಳಿದುಬರುತ್ತದೆ. ದಳಸನೂರಿನ ಜನರ ಆದರ ಅಭಿಮಾನಗಳಿಗೆ ಶ್ಯಾಮಭಟ್ಟನು ಪಾತ್ರನಾದನು. ಆಗ್ಗೆ ಉತ್ತಮ ಸ್ಥಿತಿಯಲ್ಲಿದ್ದ ಮುಳ್ಳಹಳ್ಳಿ ವಂಶಸ್ಥರು ಈತನಿಗೆ ಆಶ್ರಯವನ್ನು, ಮನೆ ಬಾಗಿಲುಗಳನ್ನು ಕೊಟ್ಟರು. ಈತನಿಗೆ ಪಕ್ಕದ ಊರಾದ ವೆಲಗಲಬುರ್ರೆ ಗ್ರಾಮದ ಭಾರದ್ವಾಜ ಗೋತ್ರದ ರಾಧಮ್ಮ(ಕಾವೇರಮ್ಮ) ಎಂಬ ಹೆಣ್ಣನ್ನು ತಂದು ವಿವಾಹ ಮಾಡಿದರು.

## ಘಟ್ಟು ಮನೆತನ

ಆಗ್ಗೆ ದಳಸನೂರಿನಲ್ಲಿ ಎಲ್ಲ ಮನೆತನಗಳನ್ನೂ ಒಂದೊಂದು ಸಂಬೋಧನಾ ಪದದಿಂದ ಕರೆಯುವ ಮತ್ತು ಗುರುತಿಸುವ ಪದ್ಧತಿ ಇದ್ದಿತು. ಉದಾಹರಣೆಗೆ ಕುಮಾರಪ್ಪನವರ ಮನೆ, ಹಳೇಮನೆ, ಆಚಾರ್ಯರ ಮನೆ, ಪಂಚಾಂಗದವರ ಮನೆ ಇತ್ಯಾದಿ. ಹಾಗೆಯೇ ಶ್ಯಾಮಭಟ್ಟರ ಮನೆಯನ್ನು, ಇವರು ಘಟ್ಟು ಪ್ರದೇಶದಿಂದ ವಲಸೆ ಬಂದವರಾದ್ದರಿಂದ, ಘಟ್ಟು ಮನೆಯವರೆಂದೇ ಸಂಬೋಧಿಸುತ್ತಿದ್ದರು. ಈ ರೀತಿ ಪ್ರಾರಂಭವಾದ ಘಟ್ಟು ಮನೆತನ ಇಂದು ನೂರರಿಂದ ನೂರೈವತ್ತು ಮನೆಗಳಾಗಿ ವಿಸ್ತಾರಗೊಂಡಿದೆ. ಈ ವಂಶದವರು ತಮ್ಮ ಹೆಸರಿನ ಮೊದಲು ಊರಿನ ಹೆಸರಿಗೆ ಬದಲಾಗಿ ಘಟ್ಟು ಎಂದು ಸೇರಿಸಿಕೊಂಡು ಪ್ರಸಿದ್ಧರಾಗಿದ್ದಾರೆ. ದಳಸನೂರು ಇವರ ಪೂರ್ವಿಕರ ಸ್ವಂತ ಊರಾಗಿರದೆ ವಾಸಸ್ಥಳ ಮಾತ್ರವಾಗಿದ್ದುದರಿಂದ ಇವರು ದಳಸನೂರಿನವರೆಂದು ಗುರುತಿಸಿಕೊಳ್ಳದಿರಲು ಮತ್ತೊಂದು ಕಾರಣ. ಘಟ್ಟು ವಂಶಸ್ಥರು ದೇಶದ ನಾನಾ ಭಾಗಗಳಲ್ಲಿ ವಿಸ್ತಾರಗೊಂಡು ವಿದ್ಯಾವಂತರೂ, ಕೀರ್ತಿಶಾಲಿಗಳೂ ಆಗಿದ್ದಾರೆ. ಶ್ಯಾಮಭಟ್ಟ ಮತ್ತು ರಾಧಮ್ಮ(ಕಾವೇರಮ್ಮ) ದಂಪತಿಗಳಿಗೆ ವೆಂಕಟನಾರಣಪ್ಪ ಮತ್ತು ಮಲ್ಲಪ್ಪ ಎಂಬ ಇಬ್ಬರು ಗಂಡುಮಕ್ಕಳು ಹಾಗೂ ಲಕ್ಷ್ಮಮ್ಮ ಎಂಬ ಒಬ್ಬ ಹೆಣ್ಣುಮಗಳು ಇದ್ದರು. ಲಕ್ಷ್ಮಮ್ಮಳನ್ನು ಕೊಲದೇವಿ ಗ್ರಾಮದ ಪಾರ್ಥಿವಸ ಗೋತ್ರದ ಶ್ರೀನಿವಾಸಾಚಾರ್ಯ ಎಂಬುವವರಿಗೆ ಕೊಟ್ಟು ವಿವಾಹ ಮಾಡಿದರು. ವೆಂಕಟನಾರಣಪ್ಪನವರು ದಳಸನೂರಿನ ಭಾರದ್ವಾಜ

ಗೋತ್ರದ ಗೌರಮ್ಮಳನ್ನು ವಿವಾಹವಾದರು. ಇವರ ಬಗ್ಗೆ ಹೆಚ್ಚಿನ ಮಾಹಿತಿಯಿಲ್ಲ.

**ಮಲ್ಲಪ್ಪಭಟ್ಟರು (ಮಲ್ಲಪ್ಪ)**

ಇವರು ಶ್ಯಾಮಭಟ್ಟರ ಎರಡನೆಯ ಮಗ. ಇವರು ಘಟ್ಟು ವಂಶದ ಮೂಲ ಪುರುಷ ಶ್ಯಾಮಭಟ್ಟರ ಮಕ್ಕಳಲ್ಲಿ ಕೊನೆಯವರು. ಇವರ ಹೆಂಡತಿ ಮೀನಾಕ್ಷಮ್ಮ. ಮಲ್ಲಪ್ಪ ದಂಪತಿಗಳಿಗೆ ನಾಲ್ಕು ಮಂದಿ ಗಂಡುಮಕ್ಕಳಾದರು. ಇವರುಗಳೆಂದರೆ : ವೆಂಕಟರಮಣಪ್ಪ, ವೇದಾಚಲಯ್ಯ, ನಾರಾಯಣಪ್ಪ ಮತ್ತು ಶ್ರೀಧರಪ್ಪ.

**ಮಂಡಿಕಲ್ಲು ಘಟ್ಟು ವಂಶ – ವೆಂಕಟರಮಣಪ್ಪ**


ಇವರು ಮಲ್ಲಪ್ಪನವರ ಹಿರಿಯ ಮಗ. ಇವರು ತಮ್ಮ ಮನೆಯ ಪರಿಸ್ಥಿತಿಯನ್ನು ಮನಗಂಡು ಮುಂದಾಲೋಚನೆ ಮಾಡಿ ಎಲ್ಲಾ ಅಣ್ಣತಮ್ಮಂದಿರು ಒಂದೇ ಮನೆಯಲ್ಲಿ ಇದ್ದರೆ ಉಂಟಾಗಬಹುದಾದ ಆರ್ಥಿಕ ಸ್ಥಿತಿಯನ್ನು ಸಮಾಲೋಚಿಸಿ ಅವಿಭಕ್ತ ಕುಟುಂಬದಿಂದ ಹೊರಬಂದು ದಳಸನೂರು ಗ್ರಾಮವನ್ನು ತ್ಯಜಿಸಿ ಮುಳಬಾಗಿಲು ತಾಲ್ಲೂಕಿನ ಮಂಡಿಕಲ್ಲು ಗ್ರಾಮಕ್ಕೆ ಬಂದು ನೆಲೆಸಿದರು. ವೆಂಕಟರಮಣಪ್ಪನವರು ಮಂಡಿಕಲ್ಲು ಗ್ರಾಮವನ್ನು ತಮ್ಮ ಹೊಸ ನಿವಾಸ ಸ್ಥಳವನ್ನಾಗಿ ಆರಿಸಿಕೊಳ್ಳಲು ಮುಖ್ಯವಾದ ಕಾರಣ ಇವರ ಸೋದರತ್ತೆ, ಅಂದರೆ ತಂದೆಯ ಅಕ್ಕ ಲಕ್ಷ್ಮಮ್ಮಳನ್ನು ಕೊಲದೇವಿಯ ಶ್ರೀನಿವಾಸಾಚಾರ್ಯರು ವಿವಾಹವಾಗಿದ್ದುದು. ಲಕ್ಷ್ಮಮ್ಮನವರು ತಮ್ಮ ಸೋದರಳಿಯನಾದ ವೆಂಕಟರಮಣಪ್ಪನು ಮಂಡಿಕಲ್ಲು ಗ್ರಾಮದಲ್ಲಿ ಬಂದು ನೆಲೆಸಲು ಅನುಕೂಲಗಳನ್ನು ಮಾಡಿಕೊಟ್ಟರು. ಹೀಗೆ, ಮಂಡಿಕಲ್ಲು ಘಟ್ಟು ವಂಶ ವೆಂಕಟರಮಣಪ್ಪನವರಿಂದ ಪ್ರಾರಂಭವಾಯಿತು. ವೆಂಕಟರಮಣಪ್ಪನವರು ಚಲದಿಗಾನಹಳ್ಳಿಯ ಗುರುರಾಜಪ್ಪ (ಗುರಪ್ಪ) ನವರ ತಂಗಿ ಸುಬ್ಬಮ್ಮಳನ್ನು ವಿವಾಹವಾದರು. ವೆಂಕಟರಮಣಪ್ಪ– ಸುಬ್ಬಮ್ಮ ದಂಪತಿಗಳಿಗೆ ವೆಂಕಟಾಚಲಯ್ಯ, ವೆಂಕಟನಾರಣಪ್ಪ ಎಂಬ ಇಬ್ಬರು ಗಂಡುಮಕ್ಕಳು ಹಾಗೂ ಸಾವಿತ್ರಮ್ಮ ಎಂಬ ಒಬ್ಬ ಹೆಣ್ಣುಮಗಳು ಹುಟ್ಟಿದರು. ಮಗಳು ಸಾವಿತ್ರಮ್ಮಳನ್ನು ಕೊಲದೇವಿ ಗ್ರಾಮದ ಪಾರ್ಥಿವಸ ಗೋತ್ರದ ಶ್ರೀನಿವಾಸಾಚಾರ್ಯರ ಮಗ ನಾರಾಯಣಾಚಾರ್ಯರಿಗೆ ವಿವಾಹ ಮಾಡಿಕೊಟ್ಟರು. ವೆಂಕಟರಮಣಪ್ಪನವರು ಮಂಡಿಕಲ್ಲು ಗ್ರಾಮಕ್ಕೆ ಬಂದು ನೆಲೆಸಿ ಮನೆ, ಜಮೀನು, ಶ್ಯಾನುಭೋಗವೃತ್ತಿ

ಮೊದಲಾದವುಗಳನ್ನು ಸ್ವಶಕ್ತಿಯಿಂದ ಸಂಪಾದಿಸಿಕೊಂಡರು. ಮಂಡಿಕಲ್ಲು ಗ್ರಾಮದ ಬಳಿ ಇದ್ದ ಚೌಡೇಶ್ವರಿಯನ್ನು ತಮ್ಮ ಮನೆತನದ ಕುಲದೇವತೆಯನ್ನಾಗಿ ಮಾಡಿಕೊಂಡರು.

## ಘಟ್ಟು ವೆಂಕಟಾಚಲಯ್ಯ



ಇವರು ಘಟ್ಟು ವೆಂಕಟರಮಣಪ್ಪನವರ ಹಿರಿಯ ಮಗ. ಇವರು ನೆಗವಾರ ಗ್ರಾಮದ ಮಹಲಕ್ಷ್ಮಮ್ಮ ಎಂಬಾಕೆಯನ್ನು ವಿವಾಹವಾದರು.




◀ ಘಟ್ಟು ವೆಂಕಟಾಚಲಯ್ಯನವರ ಹಸ್ತಾಕ್ಷರ

ವೆಂಕಟಾಚಲಯ್ಯನವರು ವಿದ್ಯಾವಂತರಾಗಿದ್ದು ವ್ಯವಹಾರ ಚತುರರಾಗಿ ಶ್ಯಾನುಭೋಗ ವೃತ್ತಿಯನ್ನು ಮಾಡುತ್ತಿದ್ದರು. ಮಂಡಿಕಲ್ಲು ಗ್ರಾಮ ಪಂಚಾಯಿತಿ ಸಭೆಗಳಲ್ಲಿ ಇವರು ಮುಖ್ಯ ಪಾತ್ರ ವಹಿಸುತ್ತಿದ್ದರು. ಇವರು ಮಂಡಿಕಲ್ಲು ಗ್ರಾಮದ ಬಳಿ ಇದ್ದ ಪ್ರಸನ್ನ ಚೌಡೇಶ್ವರಿ ದೇವಿಯ ದೇವಾಲಯವನ್ನು ಪುನರುಜ್ಜೀವನಗೊಳಿಸಿದರು. ಈ ಪುನರುಜ್ಜೀವನ ಕಾರ್ಯದಲ್ಲಿ ಆ ಗ್ರಾಮದ ಸರಹದ್ದಿನ ಜನಗಳಿಂದ ಸಹಾಯವನ್ನು ಪಡೆದುಕೊಂಡರು. ಈ ದೇವಸ್ಥಾನದಲ್ಲಿ ಪೂಜಾದಿಗಳನ್ನು ವ್ಯವಸ್ಥೆ ಮಾಡಿದರು. ವಾರ್ಷಿಕ ರಥೋತ್ಸವ ಜಾನುವಾರು ಜಾತ್ರೆ, ಅಗ್ನಿಕುಂಡ ಸೇವೆ, ಮಹಿಳೆಯರಿಂದ ದೀಪೋತ್ಸವ ಸೇವೆ ಮುಂತಾದವುಗಳನ್ನು ಪ್ರಾರಂಭಗೊಳಿಸಿದರು. ಚೌಡೇಶ್ವರಿ ರಥೋತ್ಸವ ಸಂದರ್ಭದಲ್ಲಿ ಮಂಡಿಕಲ್ಲು ಗ್ರಾಮಸ್ಥರೇ ಅಲ್ಲದೇ ದೇವಿಯ ಸೇವೆಯನ್ನು ಸಲ್ಲಿಸುವಲ್ಲಿ ಸುತ್ತಮುತ್ತಲಿನ ಗ್ರಾಮ ನಿವಾಸಿಗಳೂ ಸಕ್ರಿಯವಾಗಿ ಭಾಗವಹಿಸುವಂತೆ ಪ್ರೇರೇಪಿಸಿದರು. ಈ ದೇವಸ್ಥಾನಕ್ಕೆ ದತ್ತಿಗಳನ್ನು ಮತ್ತು ಮಾನ್ಯಗಳನ್ನು ಕೊಡಿಸಿ ಪೂಜಾ ಕಾರ್ಯಗಳಿಗಾಗಿ ಒಂದು ಕುಟುಂಬವನ್ನೇ ಕರೆತಂದು ನಿರಂತರ ಪೂಜಾ ವ್ಯವಸ್ಥೆಗೆ ಎಲ್ಲಾ ಸೌಕರ್ಯಗಳನ್ನೂ ಮಾಡಿದರು. ಇಂದಿಗೂ ಘಟ್ಟು ವಂಶದವರು ಈ ದೇವಾಲಯದ ಪೂಜಾದಿಗಳನ್ನು ಮುಂದುವರೆಸಿಕೊಂಡು ಬರುತ್ತಿದ್ದಾರೆ. ಈ ದೇವಸ್ಥಾನದ ಉಸ್ತುವಾರಿಯನ್ನು ಧರ್ಮದರ್ಶಿಗಳಾಗಿ ಇವರೇ ನೋಡಿಕೊಳ್ಳುತ್ತಿರುತ್ತಾರೆ. ಇದರಿಂದಾಗಿ ವೆಂಕಟಾಚಲಯ್ಯನವರು ಮಂಡಿಕಲ್ಲು ಗ್ರಾಮ ನಿವಾಸಿಗಳ ಭಕ್ತಿ, ಆದರ, ಗೌರವಗಳಿಗೆ ಪಾತ್ರರಾದರು. ೧೯೩೯ನೆ ಇಸ್ವಿಯಲ್ಲಿ ಘಟ್ಟು ವೆಂಕಟಾಚಲಯ್ಯನವರು "*ಚೌಡೇಶ್ವರಿ ದಂಡಕಮು*" ಎಂಬ ಕನ್ನಡ ಲಿಪಿಯ ತೆಲುಗು ಭಾಷೆಯ ದೇವಿಯ ದಂಡಕವನ್ನು ಪ್ರಕಟಗೊಳಿಸಿದರು. ಈ ಕಿರು ಹೊತ್ತಿಗೆಯು ಇಂದಿಗೂ ಅನೇಕರ ಮನೆಗಳಲ್ಲಿ ಪಠಣಗೊಳ್ಳುತ್ತಿದೆ. ಘಟ್ಟು ವೆಂಕಟಾಚಲಯ್ಯನವರು ದೈವಭಕ್ತರಷ್ಟೇ ಅಲ್ಲದೆ ಮತಾಭಿಮಾನಿಗಳೂ ಆಗಿದ್ದರು.

ಘಟ್ಟು ವೆಂಕಟಾಚಲಯ್ಯನವರಿಗೆ ಇಬ್ಬರು ಹೆಣ್ಣುಮಕ್ಕಳು ಮತ್ತು ನಾಲ್ಕು ಮಂದಿ ಗಂಡುಮಕ್ಕಳಾದರು. ಇವರುಗಳೆಂದರೆ ಕ್ರಮವಾಗಿ ರುಕ್ಕಮ್ಮ, ಶ್ರೀನಿವಾಸರಾವ್, ರಾಮಚಂದ್ರರಾವ್, ವಿಠಲಕೃಷ್ಣರಾವ್, ನಾರಾಯಣರಾವ್ ಮತ್ತು ವೆಂಕಮ್ಮ. ಹಿರಿಯ ಮಗಳು ರುಕ್ಕಮ್ಮಳನ್ನು ಶ್ರೀನಿವಾಸಪುರದಲ್ಲಿ ವಾಸವಾಗಿದ್ದ ಚಲದಿಗಾನಹಳ್ಳಿ ಭಾಸ್ಕರಪ್ಪನವರಿಗೂ, ಕಿರಿಯ ಮಗಳು ವೆಂಕಮ್ಮಳನ್ನು ದಳಸನೂರಿನಲ್ಲಿ ವಾಸವಾಗಿದ್ದ ಕೊಲದೇವಿ ರಾಮಾಚಾರ್ಯರಿಗೆ ಎರಡನೆಯ ಸಂಬಂಧವಾಗಿ ಕೊಟ್ಟು ವಿವಾಹ ಮಾಡಿದರು.

## ವೆಂಕಟನಾರಣಪ್ಪ

ಇವರು ಘಟ್ಟು ವೆಂಕಟರಮಣಪ್ಪನವರ ಎರಡನೆಯ ಮಗ. ಇವರು ಆಗಿನ ಮೈಸೂರು ರಾಜ್ಯ ಸರ್ಕಾರದ ಅರಣ್ಯ ಇಲಾಖೆಯಲ್ಲಿ ಉದ್ಯೋಗಿಗಳಾಗಿದ್ದರು. ಇವರ ಹೆಂಡತಿಯ ತವರೂರು ಚಲದಿಗಾನಹಳ್ಳಿ. ಇವರಿಗೆ ಗಂಡು ಸಂತತಿ ಇರಲಿಲ್ಲ. ಹೆಣ್ಣುಮಕ್ಕಳ ಪೂರ್ಣಮಾಹಿತಿ ತಿಳಿದುಬಂದಿಲ್ಲ. ಇವರ ಒಬ್ಬ ಮಗಳು ಭಾಗೀರತಮ್ಮಳನ್ನು ಚಲದಿಗಾನಹಳ್ಳಿಯ ಮೂರ್ತಿ ಎಂಬುವವರಿಗೆ ವಿವಾಹ ಮಾಡಿಕೊಟ್ಟಿದ್ದರು. ಆದರೆ, ವೆಂಕಟನಾರಣಪ್ಪನವರು ತಮ್ಮ ಅಣ್ಣನ ಮಗ ವಿಠಲಕೃಷ್ಣರಾಯರನ್ನು ದತ್ತು ಮಾಡಿಕೊಳ್ಳಲು ಇಚ್ಛಿಸಿದ್ದರು. ಸರಿಯಾದ ನೊಂದಣಿ ಕ್ರಮ ಮತ್ತು ವಿಧಿವಿಧಾನಗಳನ್ನು ಜರುಗಿಸದಂತೆ ಕಾಣುವುದಿಲ್ಲ. ವಿಠಲಕೃಷ್ಣರಾಯರು ವೆಂಕಟನಾರಣಪ್ಪನವರ ಸೇವೆಯನ್ನು ತಮ್ಮ ಜೀವಿತ ಕಾಲದಲ್ಲಿ ನಿಷ್ಠೆಯಿಂದ ನಡೆಸುತ್ತಿದ್ದರು. ವಿಠಲಕೃಷ್ಣರಾಯರ ಅಕಾಲ ಮೃತ್ಯುವಿನ ನಂತರ ವೆಂಕಟನಾರಣಪ್ಪನವರ ಸೇವೆಯನ್ನು ಇವರ ತಮ್ಮ ನಾರಾಯಣರಾಯರು ನೆರವೇರಿಸುತ್ತಿದ್ದರು. ಒಟ್ಟಿನಲ್ಲಿ ವೆಂಕಟನಾರಣಪ್ಪನವರ ಜೀವನ ದೈವಭಕ್ತಿಯ ಕೇಂದ್ರವಾಗಿದ್ದಿತು. ಇವರ ನೇತೃತ್ವದಲ್ಲಿ ದಾಸಶ್ರೇಷ್ಠರ ಆರಾಧನೆಗಳು ವೈಭವದಿಂದ ನಡೆಯುತ್ತಿದ್ದವು.

## ಶ್ರೀನಿವಾಸರಾವ್

ಇವರು ಘಟ್ಟು ವೆಂಕಟಾಚಲಯ್ಯನವರ ಹಿರಿಯ ಮಗ. ಇವರು ತಮ್ಮ ಪೂರ್ಣ ಸೇವೆಯನ್ನು ವಿದ್ಯಾ ಇಲಾಖೆಯಲ್ಲಿ ಉಪಾಧ್ಯಾಯರಾಗಿ ಮಳಬಾಗಿಲು ತಾಲ್ಲೂಕಿನಲ್ಲಿಯೇ ಸಲ್ಲಿಸಿದರು. ಇವರು ಒಳ್ಳೆಯ ಸಾಹಿತಿಗಳು, ನಾಟಕಕಾರರು,



ಘಟ್ಟು ಶ್ರೀನಿವಾಸರಾವ್

ಲೇಖಕರು, ದೈವಭಕ್ತರು, ಅಲ್ಲದೇ ಶ್ರೇಷ್ಠ ಮಟ್ಟದ ಉಪನ್ಯಾಸಕರೂ ಆಗಿದ್ದರು. ಇವರ ಜ್ಞಾನ ಪಾಂಡಿತ್ಯವೂ ಇವರ ಬಗ್ಗೆ ಜನರಲ್ಲಿ ಗುರುಭಾವನೆ ಗೌರವಾದಿಗಳನ್ನು ಹುಟ್ಟಿಸಿದ್ದವು. ಇವರು ಸ್ವತಃ ಸಂಸ್ಕೃತ ಬಲ್ಲವರಾಗಿದ್ದು ಅನೇಕ ಧಾರ್ಮಿಕ ಮತ್ತು ಆಧ್ಯಾತ್ಮಿಕ ಗ್ರಂಥಗಳನ್ನು ಮತ್ತು ವೇದಪುರಾಣಗಳನ್ನು ಅಧ್ಯಯನ ಮಾಡಿ ಅನೇಕ ಲೇಖನಗಳನ್ನು ಬರೆದಿದ್ದಾರೆ. ಇವರು ಬರೆದ *"ವೇದಾನ್ವೇಷಣ"* ಎಂಬ ಯಾಜ್ಞವಲ್ಕ್ಯರ ಚರಿತ್ರೆಗೆ ಸಂಬಂಧಿಸಿದ ನಾಟಕವನ್ನು ಲೇಖನಗೊಳಿಸಿದ್ದಾರೆ. ಈ ನಾಟಕವನ್ನು ಕಣ್ವಮಠದ ಶ್ರೀವಿದ್ಯಾವಿರಾಜತೀರ್ಥರ ಸಮ್ಮುಖದಲ್ಲಿ ೧೯೩೩ರಲ್ಲಿ ಅಭಿನಯಿಸಲಾಯಿತು. ಆಗ್ಗೆ ಶ್ರೀಗಳವರು ಚಾತುರ್ಮಾಸ್ಯ ವ್ರತಕ್ಕಾಗಿ ದಳಸನೂರಿನಲ್ಲಿ ಮೊಕ್ಕಾಂ ಹೂಡಿದ್ದರು. ಆ ಸಂದರ್ಭದಲ್ಲಿ ಈ ನಾಟಕದ ನಿರ್ವಹಣೆ ನಿರ್ದೇಶನಗಳನ್ನು ಸ್ವತಃ ಶ್ರೀನಿವಾಸರಾಯರೇ ಮಾಡಿ ಶ್ರೀಗಳವರ ಅಭಿನಂದನೆಗೆ ಪಾತ್ರರಾದರು. ಇವರು ದಳಸನೂರು ಭಾರದ್ವಾಜ ಗೋತ್ರದ ಕುಮಾರಪ್ಪನವರ ವಂಶಸ್ಥರಾದ (ಮುಳ್ಳಹಳ್ಳಿ ವಂಶ) ವೆಂಕಟಸುಬ್ಬಯ್ಯನವರ ಮಗಳು ಸೀತಮ್ಮಳನ್ನು ವಿವಾಹವಾದರು. ಇವರಿಗೆ ವಾಸುದೇವರಾವ್ ಮತ್ತು ವಿಶ್ವನಾಥರಾವ್ ಎಂಬ ಇಬ್ಬರು ಗಂಡುಮಕ್ಕಳು ಹಾಗೂ ಶಾರದಮ್ಮ, ಲಲಿತಮ್ಮ ಮತ್ತು ಸುಬ್ಬಮ್ಮ ಎಂಬ ಮೂರುಮಂದಿ ಹೆಣ್ಣುಮಕ್ಕಳಾದರು. ಶಾರದಮ್ಮಳನ್ನು ಶ್ರೀನಿವಾಸಪುರದ ಭಾಸ್ಕರಪ್ಪನವರ ಮಗ ವಿಶ್ವನಾಥರಾಯರಿಗೂ, ಲಲಿತಮ್ಮಳನ್ನು ಬಿಸನಹಳ್ಳಿಯ ಅನಂತಪ್ಪನವರ ಮಗ ಶ್ರೀನಿವಾಸರಾಯರಿಗೂ ಮತ್ತು ಸುಬ್ಬಮ್ಮಳನ್ನು ಕುರುಡುಮಲೆ ನರಸಿಂಗರಾಯರ ಮಗ ಲಕ್ಷ್ಮೀನಾರಾಯಣರಾಯರಿಗೂ ಕೊಟ್ಟು ವಿವಾಹ ಮಾಡಿದರು.

ಶ್ರೀನಿವಾಸರಾಯರು ತಮ್ಮ ಕೆಲವು ಸ್ನೇಹಿತರು, ಬಂಧುಗಳು ಮತ್ತು ಹಿತೈಷಿಗಳ ಸಹಾಯದಿಂದ ಶುಕ್ಲ ಯಜುರ್ವೇದ ಮಹಾಸಭಾ ಎಂಬ ಸಂಸ್ಥೆಯನ್ನು ೧೯೫೬ ರಲ್ಲಿ ಸ್ಥಾಪಿಸಿದರು. ಮುಂದೆ ಈ ಸಂಸ್ಥೆಯ ಅಧ್ಯಕ್ಷರೂ ಆದರು.

ಮುಳುಬಾಗಿಲಿನಲ್ಲಿದ್ದ ಕಣ್ವಮಠಕ್ಕೆ ಸೇರಿದ ನಿವೇಶನವು ಅಕ್ಕಪಕ್ಕದವರಿಂದ ಒತ್ತರಿಸಲ್ಪಡುವ ಸಾಧ್ಯತೆಗಳಿದ್ದುದರಿಂದ ಶ್ರೀನಿವಾಸರಾಯರು ಶುಕ್ಲ ಯಜುರ್ವೇದ ಮಹಾಸಭಾದ ವತಿಯಿಂದ ಹಾಗೂ ಬಂಧುಗಳ, ಅಭಿಮಾನಿಗಳ ಮತ್ತು ಸ್ನೇಹಿತರ ಸಹಾಯದಿಂದ ಹಣ ಸಂಗ್ರಹಣೆ ಮಾಡಿ, ಸೂರ್ಯನಾರಾಯಣ ದೇವರು ಮತ್ತು ಯಾಜ್ಞವಲ್ಕ್ಯ ಗುರುಗಳ ಪ್ರತಿಮೆಗಳನ್ನು ಸ್ಥಾಪಿಸಿ ಒಂದು ಸಣ್ಣ ಮಂದಿರವನ್ನು ತಮ್ಮ ತಂದೆ ವೆಂಕಟಾಚಲಯ್ಯ ಮತ್ತು ತಾಯಿ ಮಹಾಲಕ್ಷ್ಮಮ್ಮನವರ ಜ್ಞಾಪಕಾರ್ಥವಾಗಿ ಕಟ್ಟಿಸಿದರು. ಈ ಮಂದಿರದಲ್ಲಿನ ಪೂಜಾದಿಗಳಿಗೆ ಎಲ್ಲಾ ಸೌಕರ್ಯಗಳನ್ನು ಮಾಡಿ ಪ್ರದ್ಯುಮ್ನಾಚಾರ್ಯ ಎಂಬ ಪುರೋಹಿತರನ್ನು ಕರೆತಂದು ನೆಲೆಗೊಳಿಸಿದರು. ಭಕ್ತಾದಿಗಳಿಂದ ಇವರು ಹಣ ಸಂಗ್ರಹಿಸಿ ಈ ಹಣವನ್ನು ಶಾಶ್ವತ ಠೇವಣಿ ಯೋಜನೆಯಲ್ಲಿ ತೊಡಗಿಸಿ ಇದರಿಂದ ಬಂದ ಬಡ್ಡಿಯ ಹಣದಿಂದ ಶಾಶ್ವತ ನಿತ್ಯಪೂಜೆಗೆ ಇಲ್ಲಿ ವ್ಯವಸ್ಥೆ ಮಾಡಿದರು. ಪ್ರತಿದಿನವೂ ಕನಿಷ್ಠ ಒಬ್ಬರ (ಭಕ್ತರ) ಹೆಸರಿನಲ್ಲಿ ಆಯಾ ದಿನದ ಪೂಜಾದಿಗಳನ್ನು ಮಾಡುವ ಕ್ರಮವನ್ನು ಸಿದ್ಧಪಡಿಸಿದರು. ಈ ಮಂದಿರದ ಸರಹದ್ದಿನಲ್ಲಿ ಭಕ್ತಾದಿಗಳ ಸೌಕರ್ಯಕ್ಕಾಗಿ ಮಂಡಿಕಲ್ಲು ವಾಸುದೇವರಾಯರು ಒಂದು ಕೊಠಡಿಯನ್ನು ಅವರ ಅಜ್ಜಿ ಮಹಾಲಕ್ಷ್ಮಮ್ಮನವರ ಹೆಸರಿನಲ್ಲಿ ಕಟ್ಟಿಸಿಕೊಟ್ಟರು. ಈ ಮಂದಿರವು ಮುಂದೆ ದಾನಿಗಳ ಸಹಾಯದಿಂದ ಅಭಿವೃದ್ಧಿ ಹೊಂದತೊಡಗಿತು.

## ರಾಮಚಂದ್ರ ರಾವ್




ಇವರು ಮಂಡಿಕಲ್ಲು ಘಟ್ಟು ವೆಂಕಟಾಚಲಯ್ಯನವರ ಎರಡನೆಯ ಮಗ ಮತ್ತು ಶ್ರೀನಿವಾಸರಾಯರ ತಮ್ಮಂದಿರು. ಇವರು ಹಿರಿಯರಿಂದ ಬಂದಿದ್ದ ಸ್ವಂತ ಶ್ಯಾನುಭೋಗ ವೃತ್ತಿ ಮತ್ತು ಜಿರಾಯಿತಿ ಮೊದಲಾದವುಗಳನ್ನು ಮಂಡಿಕಲ್ಲು ಗ್ರಾಮದಲ್ಲಿ ನೋಡಿಕೊಂಡು ಅಲ್ಲಿಯೇ ನೆಲೆಸಿದರು. ಇವರು ನಾರಾಯಣಪುರ

(ಪೆಂಗಸಂದ್ರ)ದ ಶ್ಯಾನುಭೋಗರಿಗೆ ಸೇರಿದ ಕಾರಂಗಿ ಮತ್ತು ಕನಮಪಲ್ಲಿ ಗ್ರಾಮಗಳ ಶ್ಯಾನುಭೋಗ ವೃತ್ತಿಯನ್ನೂ ಅವರ ಪರವಾಗಿ ಇವರೇ ನೋಡಿಕೊಳ್ಳುತ್ತಿದ್ದರು. ಇವರು ಯನುಮಲಪಾಡಿಯ ಭಾರದ್ವಾಜ ಗೋತ್ರದ ಕುಮಾರಪ್ಪನವರ ಮಗಳು ಸರೋಜಮ್ಮಳನು ವಿವಾಹವಾದರು. ಇವರಿಗೆ ನಾಗಭೂಷಣರಾವ್ ಮತ್ತು ಶ್ರೀಧರ ಎಂಬ ಇಬ್ಬರು ಗಂಡುಮಕ್ಕಳು, ಶಕುಂತಲಾ ಮತ್ತು ಇಂದ್ರಾಣಿ ಎಂಬ ಇಬ್ಬರು ಹೆಣ್ಣು–ಮಕ್ಕಳಾದರು. ಇವರ ಹಿರಿಯ ಮಗ ನಾಗಭೂಷಣರಾವ್ ಬೆಂಗ–ಳೂರಿನ ಭಾರತ್ ಎಲೆಕ್ಟ್ರಾನಿಕ್ಸ್ ಸಾರ್ವಜನಿಕ ಸಂಸ್ಥೆಯಲ್ಲಿ ಅಧಿಕಾರಿಯಾಗಿ ಸೇವೆ ಸಲ್ಲಿಸುತ್ತಿದ್ದಾರೆ. ಈಗ ರಾಮಚಂದ್ರರಾಯರು ಮಂಡಿಕಲ್ಲು ಗ್ರಾಮವನ್ನು ಬಿಟ್ಟು ಮಗ ನಾಗಭೂಷಣ ರಾವ್ ಮನೆಯಲ್ಲಿಯೇ ಇದ್ದಾರೆ. ಇವರ ಹೆಣ್ಣುಮಗಳು ಶಕುಂತಲಮ್ಮಳನ್ನು ಕೊಲದೇವಿ ರಾಮಾಚಾರ್ಯರ ಹಿರಿಯ ಮಗ ಶ್ರೀನಿವಾಸಾಚಾರ್ಯರಿಗೂ, ಇಂದ್ರಾಣಿಯನ್ನು ದೊಡ್ಡಬಳ್ಳಾಪುರದ ಬಳಿಯಿರುವ ಕೊನಘಟ್ಟದ ಭಗವಂತರಾಯರ ಮಗ ವಿಶ್ವೇಶ್ವರ ಎಂಬುವವರಿಗೂ ಕೊಟ್ಟು ವಿವಾಹ ಮಾಡಿದರು.

## ವಿಠ್ಠಲಕೃಷ್ಣರಾವ್

ಇವರು ಮಂಡಿಕಲ್ಲು ಘಟ್ಟು ವೆಂಕಟಾಚಾಲಯ್ಯನವರ ಮೂರನೆಯ ಮಗ. ಇವರು ವಿದ್ಯಾವಂತರು, ದೈವಭಕ್ತರು, ಸಾಹಿತಿಗಳು ಮತ್ತು ಸ್ವತಃ ಕವಿಗಳು ಆಗಿದ್ದರು. ಇವರು ವಿದ್ಯಾಭ್ಯಾಸದ ನಂತರ ಖಾಸಗಿ ವಿದ್ಯಾಸಂಸ್ಥೆಯೊಂದರಲ್ಲಿ ತಾಯಲೂರು ಬಳಿಯಿರುವ ತಿರುಮನಹಳ್ಳಿಯಲ್ಲಿ ಉಪಾಧ್ಯಾಯರಾಗಿ ತಮ್ಮ ವೃತ್ತಿಯನ್ನು ಪ್ರಾರಂಭಿಸಿದರು. ಅನಂತರ ಇವರಿಗೆ ನೆಗವಾರ ಗ್ರಾಮಕ್ಕೆ ವರ್ಗವಾಯಿತು. ಇವರ ವರ್ಚಸ್ಸು ಮತ್ತು ಪ್ರತಿಭೆಯನ್ನು ಕಂಡು ಆಗಿನ ಕಾಲಕ್ಕೆ ಸುಪ್ರಸಿದ್ಧ ಶ್ಯಾನುಭೋಗರಾಗಿದ್ದ ವೆಂಕಣ್ಣನವರು ತಮ್ಮ ಮಗಳು ಸರೋಜಮ್ಮಳನ್ನು ಕೊಟ್ಟು ವಿವಾಹ



ಘಟ್ಟು ವಿಠ್ಠಲಕೃಷ್ಣರಾವ್




ಘಟ್ಟು ವಿಠ್ಠಲಕೃಷ್ಣರಾಯರ ಹಸ್ತಾಕ್ಷರ

ಮಾಡಿಕೊಟ್ಟರು. ಇವರು ಬೆಂಗಳೂರು ನಗರದಲ್ಲಿ ಹೆಚ್ಚಿನ ತರಬೇತಿಯನ್ನು ಪಡೆದು ಸರ್ಕಾರಿ ಉಪಾಧ್ಯಾಯರಾಗಿ ನೇಮಕಗೊಂಡರು. ಇವರು ಹೆಚ್ಚು ಕಾಲ ಮುಳುಬಾಗಿಲು ತಾಲ್ಲೂಕಿನಲ್ಲಿಯೇ ಉಪಾಧ್ಯಾಯ-ರಾಗಿ ಸೇವೆ ಸಲ್ಲಿಸಿದರು. ಇವರು ಮಂಡಿಕಲ್ಲು ಗ್ರಾಮದ ಪ್ರಸನ್ನ ಚೌಡೇಶ್ವರಿ ದೇವಿಯ ದಂಡಕವನ್ನು ಕನ್ನಡ ಭಾಷೆಯಲ್ಲಿ, ಸಂಸ್ಕೃತ ಶೈಲಿಯಲ್ಲಿ ಛಂದೋಬದ್ಧವಾಗಿ ರಚಿಸಿದ್ದಾರೆ. ಇದು ಕನ್ನಡದಲ್ಲಿ ಬಂದ ದೇವಿಯ ಮೊದಲನೆಯ ಕಾವ್ಯ. ಇದೇ ಅಲ್ಲದೆ ಸಂಧ್ಯಾವಂದನೆ, ದೇವತಾರ್ಚನೆ ಮತ್ತು ಇನ್ನೂ ಅನೇಕ ಉಪಯುಕ್ತ ಸ್ತೋತ್ರಾದಿಗಳನ್ನು ಮುಂದಿನ ಯುವ ಪೀಳಿಗೆಯ ಉಪಯೋಗಕ್ಕಾಗಿ ಇವರು ಸಂಗ್ರಹಿಸಿ ಬರಹಗೊಳಿಸಿದ್ದಾರೆ. ಇವರು ದೈವಭಕ್ತರಾಗಿದ್ದು, ಐದು ಮಂಡಲ ಸೂರ್ಯನಮಸ್ಕಾರಗಳನ್ನು ವಿಧಿವತ್ತಾಗಿ ಮಾಡಿದ್ದರು. ಇದರಿಂದಾಗಿ ವಿಠಲಕೃಷ್ಣರಾಯರು ತಮ್ಮ ಹಿರಿಯ ಮಗನಿಗೆ ಪ್ರಭಾಕರ ಎಂದು ನಾಮಕರಣ ಮಾಡಿದರು. ಇವರಿಗೆ ಮೂರು ಮಂದಿ ಗಂಡುಮಕ್ಕಳು ಹಾಗೂ ಮೂರು ಮಂದಿ ಹೆಣ್ಣುಮಕ್ಕಳು ಆದರು. ಇವರು ತಮ್ಮ ಎಲ್ಲ ಮಕ್ಕಳಿಗೂ ಪ್ರಾಸಬದ್ಧವಾಗಿ ನಾಮಕರಣಗಳನ್ನು ಮಾಡಿರುತ್ತಾರೆ. ಇವರ ಮಕ್ಕಳ ಹೆಸರುಗಳು ಈ ರೀತಿಯಾಗಿರುತ್ತವೆ – ಪ್ರಭಾಕರ, ಪ್ರಕಾಶ, ಪ್ರಸನ್ನ ಕುಮಾರ, ಪ್ರಭಾವತಿ, ಪ್ರೇಮ, ಪ್ರತ್ಯಕ್ಷ. ಈ ಹೆಸರುಗಳು ಇವರ ಸಾಹಿತ್ಯಾಭಿರುಚಿಗೆ ನಿದರ್ಶನವಾಗಿದೆ. ಇವರು ತಮ್ಮ ೪೩ನೇ ವಯಸ್ಸಿನಲ್ಲಿ ಪ್ಲೇಗ್‌ನಿಂದಾಗಿ ನಿಧನ ಹೊಂದಿದರು. ಇವರ ನಿಧನದ ನಂತರ ಇವರ ಮಕ್ಕಳ ಪೋಷಣೆ ವಿಠಲಕೃಷ್ಣರಾಯರ ಮಡದಿ ಸರೋಜಮ್ಮನವರ ಹೊಣೆಗಾರಿಕೆಯಾಯಿತು. ಈಕೆಯು ತನ್ನ ಇಬ್ಬರು ಭಾವಂದಿರು ಮತ್ತು ಒಬ್ಬ ಮೈದುನರ ಸಹಕಾರಗಳಿಂದ ಮಕ್ಕಳನ್ನು ಪೋಷಿಸಿ, ಬೆಳೆಸಿ, ವಿದ್ಯಾಭ್ಯಾಸಾದಿಗಳನ್ನು ಮಾಡಿಸಿದರು. ಇವರ ಹಿರಿಯ ಮಗ ಪ್ರಭಾಕರರಾವ್ ಬೆಂಗಳೂರಿನಲ್ಲಿ ವಾಸವಾಗಿದ್ದ ದಳಸನೂರು ವೆಂಕಟಾಚಲಯ್ಯನವರ ಮಗಳು ಶಾಂತಾಮಣಿಯೊಂದಿಗೆ ವಿವಾಹವಾದ ನಂತರ ಬೆಂಗಳೂರಿನ ಮಲ್ಲೇಶ್ವರದಲ್ಲಿ ಮನೆ ಮಾಡಿದರು. ನಂತರ ಸರೋಜಮ್ಮನವರು ಬೆಂಗಳೂರಿಗೆ ಬಂದು ಸೇರಿದರು. ಮುಂದೆ ಬಿ.ಇ.ಎಲ್. ಕ್ವಾರ್ಟರ್ಸ್‌ನಲ್ಲಿ

ಕೆಲಕಾಲ ವಾಸವಾಗಿದ್ದ ಇವರು ನಂತರ ಯಲಹಂಕ ಉಪನಗರದಲ್ಲಿ ಮಗ ಪ್ರಭಾಕರ ರಾಯರು ಸ್ವಂತ ಮನೆ ಈಶಾವಸ್ಯದಲ್ಲಿ ಖಾಯಂ ನಿವಾಸಿಗಳಾದರು. ಇಲ್ಲಿ, ಸರೋಜಮ್ಮನವರ ಮೊಮ್ಮಗ ವಿಠಲಕೃಷ್ಣನಿಗೆ ಪುತ್ರೋತ್ಸವವಾದ ನಂತರ ಇವರ ಕನಕಾಭಿಷೇಕ ಮಹೋತ್ಸವವು ತಾ॥ ೧೦-೬-೧೯೯೬ ರಂದು ಯಲಹಂಕ ಉಪನಗರದಲ್ಲಿ ವಿಜೃಂಭಣೆಯಿಂದ ನೆರವೇರಿತು. ಈ ಸಂದರ್ಭದಲ್ಲಿ ಮುಮ್ಮಗ ಪವನನಿಗೆ ಶುಭಹಾರೈಸಿ ಸರೋಜಮ್ಮನವರ ಆಶೀರ್ವಾದ ಪಡೆದುಕೊಂಡರು.

### ನಾರಾಯಣರಾವ್

ಇವರು ಮಂಡಿಕಲ್ಲು ಘಟ್ಟು ವೆಂಕಟಾಚಲಯ್ಯನವರ ಕೊನೆಯ ಮಗ. ಇವರು ಉಪಾಧ್ಯಾಯ-ರಾಗಿದ್ದರು. ಘಟ್ಟು ವೆಂಕಟಾಚಲಯ್ಯನವರ ನಾಲ್ಕು ಮಂದಿ ಗಂಡುಮಕ್ಕಳಲ್ಲಿ ರಾಮಚಂದ್ರರಾಯರನ್ನು ಹೊರತುಪಡಿಸಿ ಉಳಿದ ಮೂರು ಮಂದಿ ಗಂಡುಮಕ್ಕಳು ಉಪಾಧ್ಯಾಯ ವೃತ್ತಿಯನ್ನೇ ಮಾಡುತ್ತಿದ್ದರು. ಇವರೂ ಮಂಡಿಕಲ್ಲಿನಲ್ಲಿಯೇ ವಾಸವಾಗಿದ್ದರು. ಇವರು ತಮ್ಮ ಸೋದರತ್ತೆಯ ಮಗಳು ಅಂದರೆ ಕೊಲದೇವಿ ನಾರಾಯಣಾಚಾರ್ಯ ಸಾವಿತ್ರಮ್ಮ ದಂಪತಿಗಳ ಮಗಳು ಲಕ್ಷ್ಮಿಯನ್ನು ವಿವಾಹವಾದರು. ಇವರಿಗೆ ಮೋಹನ, ವೆಂಕಟಾಚಲ ಎಂಬ ಇಬ್ಬರು ಗಂಡುಮಕ್ಕಳೂ, ಸುಭದ್ರಮ್ಮ, ಜಯಮಣಿ, ಕಾಂತ, ದೇವಿ ಮತ್ತು ಸಂಧ್ಯಾ ಎಂಬ ಐವರು ಹೆಣ್ಣುಮಕ್ಕಳು ಹುಟ್ಟಿದ್ದರು. ನಾರಾಯಣರಾಯರು ಸುಭದ್ರಮ್ಮಳನ್ನು ದಳಸನೂರು ರಾಮಾಚಾರ್ಯರ ಎರಡನೆಯ ಮಗ ಮಾಧವರಾವ್‌ಗೂ, ಜಯಮಣಿಯನ್ನು ಚಲದಿಗಾನಹಳ್ಳಿ ಭಾಸ್ಕರಪ್ಪನವರ ಮಗ ಸುಬ್ರಹ್ಮಣ್ಯಂರಿಗೂ, ಕಾಂತಳನ್ನು ಚಿಂತಾಮಣಿ ತಾಲ್ಲೂಕು ಯನುಮಲಪಾಡಿಯಲ್ಲಿ ಉಪಾಧ್ಯಾಯ ವೃತ್ತಿಯಲ್ಲಿದ್ದ ವೆಂಕಟೇಶಮೂರ್ತಿಯವರಿಗೂ, ಕೊನೆಯ ಮಗಳಾದ ಸಂಧ್ಯಾಳನ್ನು



ಘಟ್ಟು ನಾರಾಯಣರಾವ್

ಬೇತಮಂಗಳದ ರಾಜ್‌ಕಮಲ್ ಎಂಬುವವರಿಗೂ ಕೊಟ್ಟು ವಿವಾಹ ಮಾಡಿದರು. ಇವರು ದೈವಭಕ್ತರಾಗಿದ್ದು ದಾಸಪಂತದಿಂದ ವ್ಯಾಸಪಂತದವರೆಗೆ ಎಲ್ಲಾ ಭಕ್ತಿಯ ಆಯಾಮಗಳಲ್ಲೂ ನುರಿತವರಾಗಿದ್ದರು. ಇವರು ಅನೇಕ ದೇವತಾ ಸ್ತೋತ್ರಗಳು, ಸಂಧ್ಯಾವಂದನೆ, ದೇವತಾರ್ಚನೆ ಮುಂತಾದವುಗಳನ್ನು ಹಸ್ತಪ್ರತಿ ಮಾಡಿ ಸಂಗ್ರಹಿಸಿಟ್ಟಿದ್ದರು. ಅಲ್ಲದೆ ಇವರು ಕೈಯಲ್ಲಿಯೇ ರಾಮಾಯಣ, ಮಹಾಭಾರತ ಮತ್ತು ಭಾಗವತ ಪುರಾಣಗಳ ಮುಖ್ಯ ಚಿತ್ರಗಳನ್ನು ಒಂದು ಪುಸ್ತಕದಲ್ಲಿ ಸಂಗ್ರಹಿಸಿಟ್ಟಿದ್ದಾರೆ. ಇವರಿಗೆ ಸೂಕ್ತ ಪ್ರೋತ್ಸಾಹವಿಲ್ಲದೆ ಇವ್ಯಾವುವೂ ಬೆಳಕಿಗೆ ಬರಲಿಲ್ಲ. ಇಂದಿಗೂ ಈ ಚಿತ್ರಗಳನ್ನು ಪ್ರಭಾಕರ ರಾಯರ ಮನೆಯಲ್ಲಿ ಕಾಣಬಹುದು. ನಾರಾಯಣರಾಯರು ಅವರ ಅಣ್ಣ ವಿಠಲಕೃಷ್ಣರಾಯರ ಜೊತೆಗೂಡಿ ಗ್ರಾಮಸ್ಥರಿಗಾಗಿ ನಡೆಸುತ್ತಿದ್ದ ನಳಚರಿತ್ರೆ ರಾಮಾಯಣ ಮಹಾಭಾರತ ಕಥೆಗಳ ವ್ಯಾಖ್ಯಾನಗಳು ಇಂದಿಗೂ ಜನಸಾಮಾನ್ಯರಲ್ಲಿ ಮನೆಮಾತಾಗಿದೆ. ಇವರು ದಾಸರಾಗಿ ನಡೆಸುತ್ತಿದ್ದ ಹರಿಕಥೆ, ಕನಕಭಟ್ಟರಾಗಿ ಗ್ರಾಮಸ್ಥರ ಅನುಕೂಲಕ್ಕಾಗಿ ನಡೆಸುತ್ತಿದ್ದ ಪಾಕಶಾಲೆ, ಅಕ್ಷರ ಆಂದೋಲನದಲ್ಲಿ ಪ್ರಮುಖರಾಗಿ ರಾತ್ರಿ ವೇಳೆ ನಡೆಸುತ್ತಿದ್ದ ವಯಸ್ಕರ ಶಿಕ್ಷಣ ಶಾಲೆ ಮುಳುಬಾಗಿಲು ತಾಲ್ಲೂಕಿನಲ್ಲಿ ಪ್ರಸಿದ್ಧಿಯನ್ನು ಪಡೆದಿತ್ತು.

ನಾರಾಯಣರಾಯರು ಡ್ರಾಮಾ ಮಾಸ್ತರಿಂದ ಮೊದಲುಮಾಡಿ ಎಲ್ಲಾ ರೀತಿಯ ಜೀವನ ಕ್ರಮಗಳಲ್ಲೂ ಗ್ರಾಮಸ್ಥರಿಗೆ ನಿಜವಾದ ಮಾಸ್ತರರಾಗಿದ್ದರು. ಇವರ ಮೊದಲನೆಯ ಮಗ ಮೋಹನರಾಯನಿಗೆ ಮೊದಲನೆಯ ಮಗ ಮುರಳಿ, ಇವನಿಗೆ ಮೊದಲನೆಯ ಗಂಡು ಮಗ ರಾಘವೇಂದ್ರನು ಹುಟ್ಟಿದ ಸಂದರ್ಭದಲ್ಲಿ ನಾರಾಯಣರಾಯರಿಗೆ ಕೈವಾರ ಕ್ಷೇತ್ರದಲ್ಲಿ ಕನಕಾಭಿಷೇಕ ಮಹೋತ್ಸವವನ್ನು ಇವರ ಹಿರಿಯ ಮಗ ಮೋಹನನ ಮನೆಯಲ್ಲಿ ನೆರವೇರಿಸಲಾಯಿತು.

**ಸಂಗ್ರಹ: ದಿ|| ಡಿ. ವಿ. ವೆಂಕಟಾಚಲಯ್ಯ**

---

***ಗುಣವಂತರಲ್ಲಿ ಗ್ರಾಹ್ಯವಾದದ್ದು ಗುಣವೇ ವಿನಾ ವಯಸ್ಸು, ಲಿಂಗ ಗಳಿಕೆ, ಹೊಗಳಿಕೆಗಳಲ್ಲ.***
***ಅರಿವಿಗೆ ಹುಡುಕಾಟ ಇರುವವರೆಗೆ. ಇದಕ್ಕೆ ಇರುವವರದ್ದಲ್ಲದೆ ಇದ್ದುಹೋದವರ ಕೊಡುಗೆ ಕಡಿಮೆಯೇನಲ್ಲ.***

---

# ಘಟ್ಟು ವಂಶವೃಕ್ಷ

## ನಕ್ಷೆ ೧: ಶ್ಯಾಮಭಟ್ಟ/ಮಲ್ಲಭಟ್ಟ


**ಘಟ್ಟು ವಂಶ**

ಮೂಲಪುರುಷ: ಶ್ಯಾಮಭಟ್ಟ


ಆಂಧ್ರಪ್ರದೇಶದಿಂದ ಬಂದ ಮಾಧ್ವ ಬ್ರಾಹ್ಮಣರು (1825)

- **ಶ್ಯಾಮಭಟ್ಟ** – ಕಾವೇರಮ್ಮ
  - **ವೆಂಕಟನಾರಣಪ್ಪ (ಜ್ಯೋತಿಷಿ)** – ಗೌರಮ್ಮ (ಸಂತತಿ ಇಲ್ಲ) ವೇದಾಚಲಯ್ಯ ದತ್ತು
  - **ಮಲ್ಲಭಟ್ಟ** (ಭರತನಾಟ್ಯ ಕಲಾವಿದ) – ಮೀನಾಕ್ಷಮ್ಮ
    - **ವೆಂಕಟರಮಣಯ್ಯ** – ಸುಬ್ಬಮ್ಮ
    - **ವೇದಾಚಲಯ್ಯ** – ಮಹಾಲಕ್ಷ್ಮಮ್ಮ
    - **ನಾರಣಪ್ಪ** – ಕಾವೇರಮ್ಮ
    - **ಶ್ರೀಧರಪ್ಪ** – ವೆಂಕಟಲಕ್ಷ್ಮಮ್ಮ
    - **ಲಕ್ಷ್ಮಿದೇವಮ್ಮ** – ನಾರಾಯಣಾಚಾರ್ಯ
  - **ಮಲ್ಲಮ್ಮ**
  - **ರಾಧಮ್ಮ/ಲಕ್ಷ್ಮಮ್ಮ** – ಶ್ರೀನಿವಾಸಾಚಾರ್ಯ


## ನಕ್ಷೆ ೨: ವೆಂಕಟರಮಣಯ್ಯ/ವೆಂಕಟಾಚಲಯ್ಯ




**ನಕ್ಷೆ ೩: ರುಕ್ಮಿಣಮ್ಮ**


ರುಕ್ಮಿಣಮ್ಮ
ಭಾಸ್ಕರಪ್ಪ
ಅನಂತರಾಮರಾವ್
ನರಸಮ್ಮ
ಪದ್ಮಾವತಮ್ಮ
ಲಕ್ಷ್ಮಣಾಚಾರ್ಯ
ವಿಶ್ವನಾಥ ರಾವ್
ಶಾರದಮ್ಮ
ಜಯಮ್ಮ
ಶ್ರೀನಿವಾಸರಾವ್
ಸೂರ್ಯನಾರಾಯಣ ರಾವ್
ಕೃಷ್ಣವೇಣಿ/ಸುಲಕ್ಷಣ
ಸುಬ್ರಹ್ಮಣ್ಯಂ
ಜಯಮಣಿ
ನಾಗರಾಜಶರ್ಮ/ಮಂಜುಳ
ವೆಂಕಟ್ರಮಣಶರ್ಮ/ಶ್ರೀದೇವಿ
ಚಂದ್ರಶೇಖರ/ಶೋಭ
ಗಾಯತ್ರಿ/ಶೇಷಪ್ಪ
ದಿನೇಶ
ಮಂಜುನಾಥ
ರಾಜೇಶ್ವರಿ
ಸಾತ್ವಿಕ್
ರವಿಕುಮಾರ್
ವಿದ್ಯಾ
ಚೇತನ್
ವಿಜಯ ಕುಮಾರ್
ಪದ್ಮಪ್ರಿಯ
ಗುರುಪ್ರಸಾದ್
ಅಮರನಾಥ್
ಸವಿತಾ
ಜನಾರ್ಧನ/ಭಾಗ್ಯಮ್ಮ
ರಂಗನಾಥಾಚಾರ್ಯ/ರಮ
ನಾಗರತ್ನ/ರಾಮಮೂರ್ತಿ
ಭಾಗ್ಯ/ಜನಾರ್ದನ್
ಶಶಿಕಾಂತ
ಭ್ರಮರಾಂಬ/ಶಿವಶಂಕರ್
ಪ್ರಸನ್ನಾಂಬ/ರಾಮಮೂರ್ತಿ
ಸುಬ್ರಹ್ಮಣ್ಯ/ರಾಧ
ಪ್ರಮೀಳಾಂಬ/ಶ್ರೀನಿವಾಸ್
ವಾಸುದೇವಮೂರ್ತಿ/ತುಳಸಿ


## ನಕ್ಷೆ ೪: ಶ್ರೀನಿವಾಸರಾವ್




## ನಕ್ಷೆ ೫ : ರಾಮಚಂದ್ರ ರಾವ್



## ನಕ್ಷೆ ೬: ವಿಠಲಕೃಷ್ಣ ರಾವ್




## ನಕ್ಷೆ ೭: ನಾರಾಯಣ ರಾವ್




ನಾರಾಯಣರಾವ್*
ಲಕ್ಷ್ಮಮ್ಮ
ಸುಭದ್ರಮ್ಮ
ಮಾಧವರಾವ್
ಜಯಮಣಿ
ಸುಬ್ರಹ್ಮಣ್ಯಂ
ಸಂಧ್ಯಾ
ರಾಜ್‌ಕಮಲ್
ದೇವಯಾನಿ*
ಮುರಳಿ
ಶ್ರೀನಿವಾಸ
ವಿಜಯ ಮೋಹನ
ಲಕ್ಷ್ಮಿ
ವೆಂಕಟಾಚಲ
ಅನ್ನಪೂರ್ಣ
ಕಾತ್ಯಾಯಿನಿ
ವೆಂಕಟೇಶಮೂರ್ತಿ
ರಾಘವೇಂದ್ರ
ರಾಗಿಣಿ
ಮುರಳೀಧರ
ಸುಮಿತ್ರ
ಅಕ್ಷತಾ
ಅರ್ಪಿತಾ
ಭಾಸ್ಕರ
ಸಂಗೀತ
ಶಂಕರ
ಪದ್ಮ
ನಾಗಲಕ್ಷ್ಮಿ
ರಂಜಿತಾ
ವಸುಧಾ
ವಾಣಿ
ಮಂಜುನಾಥ
ರಾಘವೇಂದ್ರ
ಕೃಷ್ಣವೇಣಿ

## ನಕ್ಷೆ ೮: ವೆಂಕಮ್ಮ





ಅಭಿಷೇಕ

## ನಕ್ಷೆ ೯: ವೇದಾಚಲಯ್ಯ



ವೇದಾಚಲಯ್ಯ
ಮಹಾಲಕ್ಷ್ಮಮ್ಮ
ಪಟ್ಟಾಭಿರಾಮರಾವ್
ರಮಾಮಣಮ್ಮ
ಗೌರಮ್ಮ
ವೆಂಕಟರಾಯಪ್ಪ
ಚಲ್ದಿಗಾನಹಳ್ಳಿ
ಛಾಯಮ್ಮ
ಕುಮಾರಪ್ಪ
ಯನುಮಲಪಾಡಿ
ಕಾವೇರಮ್ಮ
ವೆಂಕಣ್ಣ
ನೆಗವಾರ
ಅಚ್ಯುತ ರಾವ್
ಭಾರತಮ್ಮ
ಶ್ರೀನಿವಾಸ ರಾವ್
ಚಂದ್ರಮ್ಮ
ಮಾಧವರಾವ್
ವೇದಮೂರ್ತಿ
ರುಕ್ಮಿಣಿ
ಭುಜಂಗ ರಾವ್
ಕಾತ್ಯಾಯಿನಿ
ಗೋವರ್ಧನ್‌ರಾವ್
ಲಕ್ಷ್ಮೀದೇವಿ
ಲೋಕಪಾವನಿ*
ರಾಜವರ್ಧನ
ವಿಜಯ
ಪೂರ್ಣಿಮ
ಕೇಶವಮೂರ್ತಿ
ನರೇಂದ್ರ ಕುಮಾರ್
ಮಧುಸೂದನ
ಮಂಜುಳ
ಮಧುಶ್ರೀ
ಮನೋಹರ
ಮುಕುಂದ
ರಾಧಾಕೃಷ್ಣ
ಅನುಸೂಯಾ
ಅರ್ಚನ
ಅರ್ಪಿತ
ಜಾನ್ಹವಿ
ವೆಂಕಟಾಚಲಪತಿ
ಛಾಯಾಮಣಿ
ಮಾಧವಿ
ರಶ್ಮಿ
ದಾಶರಥಿ
ಸರಯು
ಮೋಹನ
ರವಿಕುಮಾರ್
ಚಂಪಾ
ವರುಣ
ಪುಷ್ಪ
ಮುರಳಿ
ಅಮೂಲ್ಯ
ಕೋಮಲ
ನಾರಾಯಣಮೂರ್ತಿ
ಗೌರಿ
ಕೃಷ್ಣ ಕುಮಾರ್/ಸಂಧ್ಯಾ
ಗೋಮತಿ
ರಾಮಮೂರ್ತಿ
ಕೃಷ್ಣವೇಣಿ
ರಾಜೀವ
ಮಹಾಲಕ್ಷ್ಮಿ
ರಾಮನಾಥ
ಪುಷ್ಪಲತ
ವೇಣು
ಶಶಿಕಲಾ
ರವಿ
ಗೀತ
ಹರಿಸಿಂಹ
ರಾಮಪ್ರಸಾದ

## ನಕ್ಷೆ ೧೦: ನಾರಣಪ್ಪ




ನಾರಣಪ್ಪ
ಕಾವೇರಮ್ಮ
ವೆಂಕಟರಮಣಯ್ಯ
ಸುಬ್ಬಲಕ್ಷ್ಮಮ್ಮ
ಸುಧಾ
ಪ್ರಾಣೇಶ್
ಜ್ಯೋತಿ
ಗುರುಪ್ರಕಾಶ್
ರಘುನಾಥ ರಾವ್
ತುಳಸಮ್ಮ
ಜಾನಕಮ್ಮ
ವಾಸುದೇವ
ವೆಂಕಟೇಶರಾವ್
ರುಕ್ಮಿಣಿ
ಮಧುಕರ
ಸುಧಾ
ಶ್ರೀನಿವಾಸರಾವ್
ವಿಜಯಲಕ್ಷ್ಮಿ
ಸುಮಾ
ಸತ್ಯಪ್ರಕಾಶ್
ಬಾಲಾಜಿ
ಪಲ್ಲವಿ
ರಾಜೀವ
ಯಾಜ್ಞವಲ್ಕ್ಯ
ಗೀತಾ
ನರ್ಮದಾ
ಗುರುರಾಜ್
ವೆಂಕಟಗಿರಿ
ಜಾನಕಿ
ಕಲ್ಪನಾ
ಪದ್ಮಾವತಿ
ರಾಘವೇಂದ್ರ
ಪಲ್ಲವಿ
ಸುಚಿತ್ರಾ
ಲಲಿತಮ್ಮ
ಸುರೇಶ್
ಗೌತಮ
ದ್ವಾರಕಾನಾಥ
ಮಂಜುಳಾ
ದೇವದತ್ತ
ಪೂರ್ಣಚಂದ್ರ
ಸುನಂದಮ್ಮ
ವಿಠ್ಠಲರಾವ್
ಶೇಷಗಿರಿ
ಯಾಜ್ಞವಲ್ಕ್ಯ
ಮಂಜುಳ
ರಾಧಾ
ವೈದೇಹಿ
ಸರಳ
ನಾರಾಯಣರಾವ್
ಸುಮಿತ್ರಮ್ಮ
ರಾಘವೇಂದ್ರ
ಕಿರಣ
ರಾಮಚಂದ್ರ ರಾವ್
ಕಾಂತಲಕ್ಷ್ಮಿ
ತುಳಸಿಮಣಿ
ವೆಂಕಟೇಶ
ಇಂದುಮ
ಮೋಹನ್
ಚಿನ್ನಮ್ಮ(ರಂಗಮ್ಮ)
ನಾಗರಾಜ ರಾವ್
ಸೀತಾ
ಗಿರಿಜಮ್ಮ
ಮಾಧವರಾವ್
ಅಶೋಕ
ಪ್ರಕಾಶ
ಗೀತಾ
ಲಕ್ಷ್ಮಿ
ಶ್ರೀಪತಿ ರಾವ್
ಹರೀಶ್
ಅನಂತ

## ನಕ್ಷೆ ೧೧: ಶ್ರೀಧರಪ್ಪ



## ನಕ್ಷೆ ೧೨: ಅಚ್ಯುತರಾವ್



## ಶುಕ್ಲಯಜುರ್ವೇದೀಯರಲ್ಲಿ ಅರವತ್ತು ಮನೆ-ಹದಿನಾಲ್ಕು ಗೋತ್ರಗಳ ಪಟ್ಟಿ

ಶ್ರೀಮತ್ ಶುಕ್ಲಯಜುಸ್ಸುರದ್ರುಮ ಮಹರ್ಷಿ ಶ್ರೀಯಾಜ್ಞವಲ್ಕ್ಯೋದಿತಂ। ಶಾಖಾ ಪಂಚದಶೈವನಿರ್ಣಯಯುತಂ ಕಾತ್ಯಾಯನೋಕ್ತಸ್ಥಿತಂ। ಸೂತ್ರಂ ಕಣ್ವಲತಾ ಚತುರ್ದಶದಳಂ ಗೋತ್ರೇಷು ಷಷ್ಟೀಗೃಹಂ। ಪುಷ್ಪಂ ಸ್ಮಾರ್ತ ಸುವೈಷ್ಣವೇಶು ಫಲಿತಂ ಕುರ್ಯಾರ್ಥಃ ಮಂಗಳಂ॥

| ಕ್ರಮ ಸಂಖ್ಯೆ | ಒಟ್ಟು ಮನೆ | ಮನೆತನದವರ ಹೆಸರುಗಳು | ಹಾಲೀಮನೆತನದವರು ಇರತಕ್ಕ ಸ್ಥಳಗಳು | ಗೋತ್ರ | ಪ್ರವರ | ಶ್ಲೋಕ |
|---|---|---|---|---|---|---|
| ೧.<br>೨.<br>೩.<br>೪. | ೪ | ನ್ಯಾಮರಿಸಿದವರೂ<br>ಅಪ್ಪರಸದವರೂ<br>ದುರ್ಗ್ಗರಾಜದವರೂ<br>ನಿಮ್ಮರಸದವರೂ | ಧರ್ಮಾವರಂ,<br>ಉತ್ತನೂರು,<br>ಅಬ್ಬಣೀ, ಗುಜ್ಜನಹಳ್ಳಿ,<br>ಮಾಲೂರು,<br>ಚಲ್ದಿಗಾನಹಳ್ಳಿ,<br>ದೊಡ್ಡಗುರ್ಕಿ, ನೆರ್ನಹಳ್ಳಿ,<br>ಬಿಸನಹಳ್ಳಿ, | ಹರಿತಸ | ಹರಿತಾಂಬರೀಷ<br>ಯುವನಾಶ್ವ<br>ತ್ರಯಾರುಷೇಯ | ನಿಮ್ಮರಸ ದುರ್ಗ್ಗರಾಜಂ<br>ನ್ಯಾಮರಸಿಯಪ್ಪರಸಂ ।<br>ಹರಿತತ್ಸಸಗೋತ್ರಜಾತಂ ।<br>ಚತ್ವಾರಗೃಹಂ ಭವಂತು<br>ಮಂಗಳಂ ನಿತ್ಯಂ ॥ |
| ೫.<br><br><br>೬. | ೨ | ಮುತ್ತಿನವರೂ<br><br><br>ಕೊರಗಲ್ಲುನವರೂ | ಬುಗಡೂರು, ತಿನ್ನಲಿ,<br><br><br>ಕೊಡಿಗೇಳ್ಳಿ,<br>ಗೊರವನಹಳ್ಳಿ,<br>ಮಂಗಳವಾಡ,<br>ಕುರುಡುಮಲೆ | ಆತ್ರೇಯಸ | ಆತ್ರೇಯ<br>ಅರ್ಚನಾನಸ<br>ಶ್ಯಾವಾಸ್ವ<br>ತ್ರಯಾರುಷೇಯ | ಆತ್ರೇಯ ಗೋತ್ರಂ ಪರಮಂ<br>ಪವಿತ್ರಂ।<br>ಕುರುಡುಮಲೆ ಕುರಗಲ್ಲು<br>ಮುಕ್ತಾಗ್ರುಹವಾಸಯುಕ್ತಂ ।<br>ದ್ವೇಗ್ರುಹಂ ಸುಪ್ರಕಾಶಂಭವ<br>ಪಾಪನಾಶಂ।<br>ಸನ್ಮಂಗಳಾನಾಂತ್ವನಿತ್ಯಂ |

| ಕ್ರಮ ಸಂಖ್ಯೆ | ಒಟ್ಟು ಮನೆ | ಮನೆತನದವರ ಹೆಸರುಗಳು | ಹಾಲೀಮನೆತನದವರು ಇರತಕ್ಕ ಸ್ಥಳಗಳು | ಗೋತ್ರ | ಪ್ರವರ | ಶ್ಲೋಕ |
|---|---|---|---|---|---|---|
| ೭.<br>೮.<br>೯.<br>೧೦.<br>೧೧. | ೫ | ಕೊಳಗದವರೂ<br>ಪೈತಣಿಯವರೂ<br>ಪೇರೂರುನವರೂ<br>ರಡ್ಡಿಹಳ್ಳೀಯವರೂ<br>ಮಠದವರೂ | ಮಣಿಗಟ್ಟ, ಶಾಂನ್ನಹಳ್ಳಿ | ಶಾಂಡಿಲ್ಯಸ | ಶಾಂಡಿಲ್ಯ ಅಶಿತ<br>ನೀವತಿ<br>ತ್ರಯಾರುಷೇಯ | ಪೇರೂರು ರೆಡ್ಡಿಹಳ್ಳೀ।<br>ಪೈಠಣೀ ಕುಳಗಮಠ ನಿವಾಸ<br>ವಿಲಾಸಂ।<br>ಶಾಂಡಿಲ್ಯಸಗೋತ್ರಜಾತಂ<br>ಪಂಚಭವನಂ ಭವಂತು<br>ಮಂಗಳಂ ನಿತ್ಯಂ॥ |
| ೧೨.<br>೧೩.<br>೧೪.<br>೧೫.<br>೧೬.<br>೧೭.<br>೧೮.<br>೧೯. | ೮ | ಅಯೋಧ್ಯದವರೂ<br>ಹೆಡಂಬಿಯವರೂ<br>ದಂಡಾಯತಿಯವರೂ<br>ಆನೆಗುಂದಿಯವರೂ<br>ಅರಹಣಗುಂದಿಯವರೂ<br>ಹಂಪೇಪುರದವರೂ<br>ದಾನಮಾನದವರೂ<br>ಮಂಕಿಣಿಯವರೂ | ನೂಟವಿ, ಕೌರಗಾನಹಳ್ಳಿ | ಕಾಶ್ಯಪ | ಕಾಶ್ಯಪಾ ವತ್ಸಾಲ<br>ನೈದ್ರುವ<br>ತ್ರಯಾರುಷೇಯ* | ಹಂಪಾಪುರದಾನಮಾನಂ ।<br>ಅಯೋಧ್ಯ ಆನೆಗುಂದಿ<br>ಅರಹಣಗುಂದಿ ।<br>ಮಂಕಿಣಿ ಹೆಡಂಬ<br>ದಂಡಾಯುತ<br>ಕಾಶ್ಯಪಸಗೋತ್ರ<br>ಜಾತಮಷ್ಟಾನುಸದನಂ ।<br>ಕುರ್ಯಾತ್ ಸದಾ ಮಂಗಳಂ ॥ |

| ಕ್ರಮ ಸಂಖ್ಯೆ | ಒಟ್ಟು ಮನೆ | ಮನೆತನದವರ ಹೆಸರುಗಳು | ಹಾಲೀಮನೆತನದವರು ಇರತಕ್ಕ ಸ್ಥಳಗಳು | ಗೋತ್ರ | ಪ್ರವರ | ಶ್ಲೋಕ |
|---|---|---|---|---|---|---|
| ೨೦. | | | ನೆಗವಾರ, | ಭಾರದ್ವಾಜ | ಆಂಗೀರಸ | ನೋಟಂ ಗಾಣ ಪರಾಕಿ ಕರಿಗೆ |
| ೨೧. | ೧೨ | | | | ಭಾರಸ್ಪತ್ಯ | ಕಗ್ಗಲ್ಲುಪದ್ಮಸ್ಥಿತಂ। |
| ೨೨. | | | | | ಭಾರದ್ವಾಜ | ನೋಟಂ ಯಟಿಕೇ ಪುಂಡರೀಕ |
| ೨೩. | | | | | ತ್ರಯಾರುಷೇಯ* | ಕಗದಂ ಗಾಣಾಭಿಸಂಹಕ್। |
| ೨೪. | | | | | | ತೇರೋರು ಮಂದಿರ |
| ೨೫. | | | | | | ತುಟಿವಾನರುಚಿರಂ |
| ೨೬. | | | ವೆಲಗಲಬುರ್ರೆ, | | | ಗೋರಂಟಿಗ್ರಾಮನ್ವಿತಂ। |
| ೨೭. | | | ದಳಸನೂರು, | | | ಭಾರದ್ವಾಜಸ |
| | | | ಬೆಂಗಳೂರು,ಉತ್ತನೂರ | | | ಗೋತ್ರದ್ವಾದಶಗ್ರುಹಂ |
| ೨೮. | | | ಗುಜ್ಜನಹಳ್ಳಿ | | | ಕುರ್ವಂತುತೇ ಮಂಗಳಂ। |
| ೨೯. | | | | | | |
| ೩೦. | | | | | | |
| ೩೧. | | | | | | |

| ಕ್ರಮ ಸಂಖ್ಯೆ | ಒಟ್ಟು ಮನೆ | ಮನೆತನದವರ ಹೆಸರುಗಳು | ಹಾಲೀಮನೆತನದವರು ಇರತಕ್ಕ ಸ್ಥಳಗಳು | ಗೋತ್ರ | ಪ್ರವರ | ಶ್ಲೋಕ |
|---|---|---|---|---|---|---|
| ೩೨.<br>೩೩.<br>೩೪.<br>೩೫.<br>೩೬.<br>೩೭.<br>೩೮. | ೭ | ವಿಠಲದವರೂ<br>ಸನ್ನಿಧಿಯವರೂ<br>ಶ್ರೋತ್ರೀಯರೂ<br>ಸುಕಳದವರೂ<br>ಹಂಪೆಯವರೂ<br>ಮುಂಗಾಲದವರೂ<br>ತಿರುಪತೀಚಂದ್ರಗಿರಿ<br>ಯವರೂ | ಈ ಗೋತ್ರದವರು ಎಲ್ಲಿ ನೆಲೆಸಿದ್ದಾರೆಂದು ತಿಳಿದಿಲ್ಲ | ಗೌತಮಸ | ಆಯಾಸ್ಯ<br>ಅಂಬರೀಷ<br>ಗೌತಮೇತಿ<br>ತ್ರಯಾರುಷೇಯ | ಮುಂಗಾಲಹಂಪೇತಿರುಪತಿ ।<br>ಚಂದ್ರಗಿರಿಸುಕ ಳ<br>ವಿಠಲಸನ್ನಿಧಿಗೇಹಂ<br>ಶ್ರೋತ್ರಿಯಮಿತಿಸಪ್ತಗೇ । |
| ೩೯.<br>೪೦.<br>೪೧.<br>೪೨.<br>೪೩. | ೫ | ಮಳಿಗೆಯವರೂ<br>ಪಂಡಿತ್ತದವರೂ<br>ಹಾಲುಹರವಿಯವರೂ<br>ಪೇರಣೀಯವರೂ<br>ಕೆಂಚನಗುಂಡಿಯವರೂ | ಕವುರುಗಾನಹಳ್ಳಿ<br>ಯಾಚಲುಬಳ್ಳಾಪುರ | ಶ್ರೀವತ್ಸ | ಭಾರ್ಗವ<br>ಚಾಲವ ಆಪ್ಲವ<br>ಔರವ ಜಮದಗ್ನಿ<br>ಪಂಚಾರುಷೇಯ | ಪೇರಣೀ ಕೆಂಚನಗುಂಡಿ<br>ಪಂಡಿತಾಹಾಲುಹರಿವೀಳಿಗೆ<br>ಪಂಚಸುಸದನಂ<br>ಶ್ರೀವತ್ಸಗೋತ್ರಜಾತಂ<br>ಕುರ್ವಂತುತೇ ಮಂಗಳಂ |

| ಕ್ರಮ ಸಂಖ್ಯೆ | ಒಟ್ಟು ಮನೆ | ಮನೆತನದವರ ಹೆಸರುಗಳು | ಹಾಲೀಮನೆತನದವರು ಇರತಕ್ಕ ಸ್ಥಳಗಳು | ಗೋತ್ರ | ಪ್ರವರ | ಶ್ಲೋಕ |
|---|---|---|---|---|---|---|
| ೪೪.<br>೪೫.<br>೪೬. | ೩ | ಬಳ್ಳದವರೂ<br>ಅವದೀಯವರೂ<br>ವಾಸುದೇವನವರೂ | ತುಂಡಾಲ,<br>ನಾಯಕನಹಳ್ಳಿ<br>ಪುಂಗಂಬಟ್ಟಿ,<br>ಹೊನಗಾನಹಳ್ಳಿ | ಅಗಸ್ತ್ಯ ಸ | ಅಗಸ್ತ್ಯ<br>ದಾಲೀಭ್ಯಾಚ್ಯುತ<br>ಯುಗ್ಮಾಹೇತಿ<br>ತ್ರಯಾರುಷೇಯ | ಬಳ್ಳಂಚ ವಾಸುದೇವಂಚ।<br>ಅವದಿಂಚ ಗ್ರುಹಂತ್ರಯಂ।<br>ಅಗಸ್ತ್ಯಗೋತ್ರಜಾಕ್ತೇಷು।<br>ನಿತ್ಯಂ ಭವಂತುತೋ ಮಂಗಳಂ। |
| ೪೭.<br>೪೮.<br>೪೯.<br><br>೫೦.<br>೫೧.<br>೫೨.<br>೫೩.<br>೫೪.<br>೫೫. | ೯ | ಮರಗಲ್ಲುನವರೂ<br>ರುದ್ದದವರೂ<br>ಮುದುಗಲ್ಲುನವರೂ<br><br>ನಾಟದವರೂ<br>ಮಾಲ್ಯವಂತದವರೂ<br>ಗುಬ್ಬಿಯವರೂ<br>ಪುರದವರೂ<br>ವೇದಗಿರಿಯವರೂ<br>ಶಾಲ್ಯದವರೂ | ಜೊಕ್ಕನಹಳ್ಳಿ, ಹೊದಲಿ,<br>ಹೆಬ್ಬಟ<br><br>ಮಾರಿಕುಪ್ಪ,<br>ಬೆಂಗಳೂರು | ಕೌಂಡಿನ್ಯಸ | ವಾಶಿಷ್ಟ<br>ಮೈತ್ರಾವರುಣ<br>ಕೌಂಡಿನ್ಯ<br>ತ್ರಯಾರುಷೇಯ* | ಮುದಗಲ್ಲುರುದ್ದಾವಾಟಂ ।<br>ಮರಗಲ್ ಗುಬ್ಬಿಪುರಂ<br>ವೇದಗಿರಿಂ।<br>ಶ್ಯಾಲ್ಯಾವರ ಮಾಲ್ಯಾವಂತಂ ।<br>ಕೌಂಡಿನ್ಯಸ ಗೋತ್ರಂ<br>ನವರಸಸದನಂ<br>ಶುಭದಂ ಮಂಗಳಂ |

| ಕ್ರಮ ಸಂಖ್ಯೆ | ಒಟ್ಟು ಮನೆ | ಮನೆತನದವರ ಹೆಸರುಗಳು | ಹಾಲೀಮನೆತನದವರು ಇರತಕ್ಕ ಸ್ಥಳಗಳು | ಗೋತ್ರ | ಪ್ರವರ | ಶ್ಲೋಕ |
|---|---|---|---|---|---|---|
| ೫೬. | ೧ | ಬರಗಾಲದವರೂ | ವುಳ್ಳೇರಹಳಿ<br>ಹುಣಶಿಕೋಟೆ<br>ಮಾಗುಂದಿ<br>ವುತ್ತನೂರು | ಪೂತಮಾನಸ | ಶಾಕ್ತ್ಯ ಸಾಂಕೃತ್ಯ<br>ಗೌತಮೇತಿ<br>ತ್ರಯಾರ್ಷೇಯ | ಪೂತಮಾನಸ ಗೋತ್ರೇಷು ।<br>ಚಾಯಕ್ತೆಬರತಾಗ್ರುಹಂ ।<br>ಏಕೋಪವಿತ್ರಂಪರಮಂ ನಿತ್ಯಂ<br>ಭವಂತು ಮಂಗಳಂ । |
| ೫೭. | ೧ | ಶಿಂಗವರದವರೂ | ವುತ್ತನೂರು<br>ಮೈಸೂರು | ಔದುಂಬರಸ | ವಿಶ್ವಾಮಿತ್ರ<br>ಕಾತ್ಯಾಯನ ಆತ್ರೇಯ<br>ತ್ರಯಾರ್ಷೇಯ | ಔದುಂಬರಸ ಗೋತ್ರೇಷು ।<br>ಭವಂ ಶಿಂಗವರಂ ಗ್ರುಹಂ ।<br>ಯೇಕಾಪ್ರಶಸ್ತಂಪರಮಂ ನಿತ್ಯಂ<br>ಭವಂತು ಮಂಗಳಂ |
| ೫೮<br><br><br>೫೯. | ೨ | ಕುಂಬಳದವರೂ<br><br><br>ಜನಕನಕಾಲದವರೂ | ಜನಪನಹಳ್ಳಿ<br>ದಳಸನೂರು<br>ಮಂಡಿಕಲ್ | ಕೌಶಿಕ | ಕೌಶಿಕ ವಿಶ್ವಾಮಿತ್ರ<br>ಅಘಮರ್ಷಣ<br>ತ್ರಯಾರುಷೇಯು | ಪರಮಂ ಕೌಶಿಕ ಗೋತ್ರಂ ।<br>ಜನಕನಕಾಲ ಕುಂಬಳಂ ನಿಕಾಯ<br>ದ್ವಿತೀಯಂ।<br>ವಿಶ್ವಾಮಿತ್ರಸ್ಯ ಗೋತ್ರಂ<br>ವರ್ಗಗೃಹೇಮೆ<br>ಕರೋಭವತು ಮಂಗಳಂ<br>ಔದುಂಬರಸ ಗೋತ್ರೇಷು । |
| ೬೦. | | ವರ್ಗದವರೂ | | ವಿಶ್ವಾಮಿತ್ರ | | |

ಅಭಿಷೇಕ

| ಕ್ರಮ ಸಂಖ್ಯೆ | ಒಟ್ಟು ಮನೆ | ಮನೆತನದವರ ಹೆಸರುಗಳು | ಹಾಲೀಮನೆತನದವರು ಇರತಕ್ಕ ಸ್ಥಳಗಳು | ಗೋತ್ರ | ಪ್ರವರ | ಶ್ಲೋಕ |
|---|---|---|---|---|---|---|
| ೬೧. | ೧ | ಸ್ವಶಾಖೆಯವರು | ಬಿದರಹಳ್ಳಿ, ಯಲಹಂಕ, ಮುತ್ಕೂರ್, ಕೊಲದೇವಿ, ಪೆಂಗಸಂದ್ರ, ಮಾದಾಪುರ, ಬಿಳಿಶಿವಾಲೆ | ಪಾರ್ಥಿವಸ (ಪಾರ್ಥ) | ಭಾರ್ಗವ ವೈನ್ಯವ ಪಾರ್ಥಿವೇತಿ ತ್ರಯಾರ್ಷೇಯ | ಪಾರ್ಥಿವಸ ಗೋತ್ರೇಷು ಭವಂ ಷಷ್ಟೀಗೃಹೇಯುತಂ ಸ್ವಶಾಖಿನೀ ಪ್ರಜಾಯಂತೆ ನಿತ್ಯಂ ಭವಂತು ಮಂಗಳಂ। |
| ೬೧ | ೬೧ ಮನೆ | ಒಟ್ಟು ಜುಮ್ಲ |  | ೧೪ ಗೋತ್ರಗಳು |  |  |

*ಮುರುಗಲ್ ವಂಶಸ್ಥ ಚುಕ್ಕನಹಳ್ಳಿ ಸುಬ್ಬಯ್ಯನ ಮಗ ಲಕ್ಷ್ಮೀನಾರಾಯಣ ಇವರಿಂದ ತಾ||೦೬-೦೪-೧೯೩೩ರಲ್ಲಿ ಹಳೇ ಪ್ರತಿಗಳಿಂದ ಹುಡುಕಿ ತಯಾರಿಸಲ್ಪಟ್ಟಿದ್ದು*

# ಏಕಶ್ಲೋಕಿ ರಾಮಾಯಣ

ಪೂರ್ವಂ ರಾಮತಪೋ ವನಾಭಿಗಮನಂ ಹತ್ವಾ ಮೃಗಂ ಕಾಂಚನಂ।
ವೈದೇಹಿಹರಣಂ ಜಟಾಯುಮರಣಂ ಸುಗ್ರೀವ ಸಂಭಾಷಣಂ॥
ವಾಲೀನಿಗ್ರಹಣಂ ಸಮುದ್ರತರಣಂ ಲಂಕಾಪುರೀದಾಹನಂ।
ಪಶ್ಚಾದ್ರಾವಣಕುಂಭಕರ್ಣಾದಿಹನನಂ ಏತದ್ಧಿರಾಮಾಯಣಂ॥

# ಏಕಶ್ಲೋಕಿ ಮಹಾಭಾರತ

ಆದೌ ಪಾಂಡವ ಧಾರ್ತರಾಷ್ಟ್ರಜನನಂ ಲಾಕ್ಷಾಗೃಹೇ ದಾಹನಂ।
ದ್ಯೂತೆ ಶ್ರೀಹರಣಂವನೇ ವಿಹರಣಂ ಮತ್ಸ್ಯಾಲಯೇ ವರ್ಧನಂ॥
ಲೀಲಾಗೋಗ್ರಹಣಂ ರಣೇ ವಿತರಣಂ ಸಂಧಿಕ್ರಿಯಾಜೃಂಭಣಂ ।
ಭೀಷ್ಮದ್ರೋಣಸುಯೋಧನಾದಿಮಥನಂ ಏತನ್ಮಹಾಭಾರತಂ॥

# ಏಕಶ್ಲೋಕಿ ಭಾಗವತ

ಆದೌ ದೇವಕೀಗರ್ಭಜನನಂ ಗೋಪೀಗೃಹೇ ವರ್ಧನಂ।
ಮಾಯಾಪೂತನಿಜೀವಿತಾಪಹರಣಂ ಗೋವರ್ಧನೋದ್ಧಾರಣಂ॥
ಕಂಸಚ್ಛೇದನ ಕೌರವಾದಿಹರಣಂ ಕುಂತೀಸುತಾಪಾಲನಂ।
ಏತದ್ಭಾಗವತಂ ಪುರಾಣಕಥಿತಂ ಶ್ರೀ ಕೃಷ್ಣ ಲೀಲಾಮೃತಂ॥

# ಮಂಡಿಕಲ್ ಘಟ್ಟು ಮಹಾವೃಕ್ಷದ ಕವಲುಗಳು

ಕೆ. ಮಾಧವರಾವ್, ಮಂಡಿಕಲ್
ಸಿ.ಬಿ. ಸುಬ್ರಹ್ಮಣ್ಯಂ, ಶ್ರೀನಿವಾಸಪುರ

ಧಾರ್ಮಿಕ, ಸಾಮಾಜಿಕ, ಶೈಕ್ಷಣಿಕ ಜನ ಜೀವನದ ನಾನಾ ಕ್ಷೇತ್ರಗಳಲ್ಲಿ ತಮ್ಮದೇ ಆದ ವ್ಯಕ್ತಿತ್ವ ಕರ್ತೃತ್ವ ಶಕ್ತಿಗಳಿಂದ ಶ್ರೀನಿವಾಸಪುರ ಮತ್ತು ಮುಳಬಾಗಿಲು ಪ್ರಾಂತ್ಯದ ಜನತೆಯ ಮೇಲೆ ಅಚ್ಚಳಿಯದ ಪ್ರಭಾವ ಬೀರಿದ ಕೀರ್ತಿ ಘಟ್ಟು ಮನೆತನಕ್ಕೆ ಸಲ್ಲುತ್ತದೆ.

ಮಂಡಿಕಲ್ಲು ಘಟ್ಟು ಮನೆತನದ ಮೂಲಪುರುಷರು ವೆಂಕಟರಮಣಯ್ಯನವರು ಮೂಲತಃ ದಳಸನೂರಿನಲ್ಲಿ ನೆಲೆಸಿದ್ದವರು. ಘಟ್ಟು ವಂಶದ ಮೂಲ ಪುರುಷ ಶ್ಯಾಮಭಟ್ಟರ ಮಗಳು ಲಕ್ಷ್ಮೀದೇವಮ್ಮನವರನ್ನು ಕೊಲದೇವಿ ಗ್ರಾಮದ ಆಚಾರ್ಯ ಕುಟುಂಬದವರಿಗೆ ಕೊಟ್ಟು ಸಂಬಂಧ ಬೆಳೆಸಿದರು. ಈ ಆಚಾರ್ಯ ಕುಟುಂಬದವರು ಕೊಲದೇವಿ ಪ್ರಾಂತ್ಯದ ಹತ್ತು ಹಲವು ಗ್ರಾಮಗಳಿಗೆ ಶ್ಯಾನುಭೋಗರು, ಹಾಗೂ ಪುರೋಹಿತರಾಗಿದ್ದರು. ಇವರ ಶ್ಯಾನುಭೋಗಿಕೆಗೆ ಸಹಾಯಕವಾಗಿರಲು ಘಟ್ಟು ವಂಶದ ಲಕ್ಷ್ಮೀದೇವಮ್ಮನು ತನ್ನ ಸೋದರ ಮಲ್ಲಭಟ್ಟನ ಹಿರಿಯ ಮಗ ಘಟ್ಟು ವೆಂಕಟರಮಣಯ್ಯನವರನ್ನು ಕೊಲದೇವಿಗೆ ಕರೆ ತಂದು, ಕೊಲದೇವಿಯ ಅವಳಿ ಗ್ರಾಮವಾದ ಮಂಡಿಕಲ್‌ನಲ್ಲಿ ನೆಲೆಸಲು ಆಶ್ರಯ ಮಾಡಿಕೊಟ್ಟಳು. ದಳಸನೂರಿನ ಘಟ್ ಮಹಾವೃಕ್ಷದ ಶಾಖೆ ಮಂಡಿಕಲ್‌ವರೆಗೂ ವಿಸ್ತರಿಸಿ ಇವರು ಮಂಡಿಕಲ್ ಘಟ್‌ನವರಾದರು.

## ಘಟ್ಟು ವೆಂಕಟಾಚಲಯ್ಯ

ವೆಂಕಟರಮಣಯ್ಯನವರ ಮಕ್ಕಳಲ್ಲಿ ಮೊದಲನೆಯವರಾದ ಘಟ್ಟು ವೆಂಕಟಾಚಲಯ್ಯನವರ ಕೀರ್ತಿ ಈ ಪ್ರಾಂತ್ಯದ ಜನತೆಯ ಮನದಲ್ಲಿ

ಅಜರಾಮರವಾಗಿ ಉಳಿದಿದೆ. ಇವರು ತಮ್ಮ ಜೀವನದ ಬಹುಭಾಗವನ್ನು ಧಾರ್ಮಿಕ ಜಾಗೃತಿಗಾಗಿ ಮೀಸಲಿಟ್ಟಿದ್ದರು. ಇವರು ಸಾಮಾಜಿಕವಾಗಿ ಎಷ್ಟು ಹೊಂದಿಕೊಂಡಿದ್ದರೆಂದರೆ ಇವರ ವಂಶಜರನ್ನು ಇಂದಿಗೂ ಈ ಪ್ರಾಂತ್ಯದ ಜನತೆ ಮಾವ, ಭಾವ, ಅಣ್ಣ ತಮ್ಮಂದಿರ ವರಸೆಯಲ್ಲಿ ಕರೆಯುವ ರೂಢಿ ಇದೆ. ಇವರು ಈ ಪ್ರಾಂತ್ಯದ ಹತ್ತಾರು ಗ್ರಾಮಗಳಲ್ಲಿ ಒಬ್ಬ ಪ್ರತಿಭಾವಂತ ನ್ಯಾಯಮೂರ್ತಿಗಳಾಗಿದ್ದರು. ವಿಶೇಷವಾಗಿ ಇವರು ಹರಪನಾಯ್ಕನಹಳ್ಳಿ ಜೋಡೀದಾರರ ವಂಶದವರಿಗೆ ಕಾನೂನು ಸಲಹೆಗಾರರಾಗಿದ್ದು ಅವರ ಕೋರ್ಟು ಕಛೇರಿ ವ್ಯವಹಾರಗಳನ್ನು ತಾವೇ ನೋಡಿಕೊಳ್ಳುತ್ತಿದ್ದರು.

ಹರಪನಾಯ್ಕನಹಳ್ಳಿ ಜೋಡೀದಾರ್ ವಂಶದವರು ತಮ್ಮ ಆರಾಧ್ಯದೇವತೆ ಶ್ರೀ ಪ್ರಸನ್ನ ಚೌಡೇಶ್ವರೀದೇವಿಗೆ ಪೂಜೆ ಸಲ್ಲಿಸದೆ ಯಾವುದೇ ಕಾರ್ಯವನ್ನು ಪ್ರಾರಂಭಿಸುತ್ತಿರಲಿಲ್ಲ. ಒಮ್ಮೆ ಒಂದು ಜಟಿಲ ಸಮಸ್ಯೆ ಸರ್ಕಾರದಲ್ಲಿ ವ್ಯವಹರಿಸಬೇಕಾಗಿದ್ದು ಈ ಸಮಸ್ಯೆ ಸುಗಮವಾಗಿ ಜಯವಾದರೆ ಅಮ್ಮನವರಿಗೆ ನಿತ್ಯ ಪೂಜಾ ಕೈಂಕರ್ಯ ರಥೋತ್ಸವ ಕಾರ್ಯಕ್ರಮಗಳನ್ನು ನಡೆಸಿಕೊಂಡು ಹೋಗುವುದಾಗಿ ಹರಕೆ ಹೊತ್ತರು. ವೆಂಕಟಾಚಲಯ್ಯನವರ ಸಹಾಯದೊಂದಿಗೆ ಆ ಕಾರ್ಯದಲ್ಲಿ ಜಯಶೀಲರಾದರು. ಇವರ ಪೂಜೆ ಮತ್ತು ರಥೋತ್ಸವ ಕೈಂಕರ್ಯಗಳು ಶ್ರೀ ವೆಂಕಟಾಚಲಯ್ಯ ಮತ್ತು ಜೋಡಿದಾರ್ ವೆಂಕಟೇಗೌಡರ ಸಹಕಾರದಿಂದ ಪ್ರಾರಂಭವಾಯಿತು. ಇಲ್ಲಿನ ಪೂಜೆ ಮತ್ತು ರಥೋತ್ಸವ ಕೈಂಕರ್ಯಗಳು ಇಂದಿಗೂ ಪ್ರತಿವರ್ಷ ಮಾಘಶುದ್ಧ ಪೌರ್ಣಮಿಯಂದು ಅವಿರತವಾಗಿ ನಡೆಯುತ್ತದೆ.

ಈ ದೇವಾಲಯಕ್ಕೆ ಕೊಲದೇವಿ, ಮಂಡಿಕಲ್, ಹರಪನಾಯ್ಕನಹಳ್ಳಿ ಗೊಲ್ಲಹಳ್ಳಿ ಮತ್ತು ಇತರ ಗ್ರಾಮಗಳ ಅಂದಿನ ಮುಖಂಡರು ಸೇರಿ ಒಂದು ಸಮಿತಿ ರಚಿಸಿ ಶ್ರೀಯುತ ವೆಂಕಟಾಚಲಯ್ಯನವರನ್ನು ದೇವಾಲಯದ ಧರ್ಮದರ್ಶಿಗಳನ್ನಾಗಿ ಆರಿಸಿದರು. ಇಂದಿಗೂ ಇವರ ಮಗ ಜಿ. ರಾಮಚಂದ್ರರಾಯರು ಇದರ ಧರ್ಮದರ್ಶಿಗಳಾಗಿ ಸೇವೆ ಸಲ್ಲಿಸುತ್ತಿದ್ದಾರೆ.

ಘಟ್ಟು ವೆಂಕಟಾಚಲಯ್ಯನವರು ಈ ಪ್ರಾಂತ್ಯದ ಜನತೆಗೆ ಸಲ್ಲಿಸಿದ ಸೇವೆ ಇದಾದರೇ, ಬ್ರಾಹ್ಮಣರಿಗೆ ಮತ್ತು ಕಣ್ವ ಮಠದ ನಿರ್ಮಾಣಕ್ಕೆ ಇವರ ಸೇವೆ ಅಪಾರ. ಕೋಲಾರ ಜಿಲ್ಲೆಯ ಶ್ರೀನಿವಾಸಪುರ, ಮುಳಬಾಗಿಲ್, ಪ್ರಾಂತ್ಯಗಳಲ್ಲಿ ಕಾಣ್ವ ಬ್ರಾಹ್ಮಣರ ಕುಟುಂಬಗಳು ಬಹಳಷ್ಟು ಇದ್ದು, ಇವರಿಗೆ

**ಚೌಡೇಶ್ವರಿ ದಂಡಕ**

॥ ಓಂ ಶ್ರೀ ಪ್ರಸನ್ನ ಚೌಡೇಶ್ವರೀದೇವಿ ಪ್ರಸನ್ನ ॥

ಪಂಚಾಕ್ಷರಿ ನೀನೇ । ಪಾರ್ವತಿಯು ನೀನೇ ।
ತ್ರಿಮೂರ್ತಿಗಳ್ ನೀನೇ ।
ಎತ್ತೆತ್ತಲು ನೀನೇ । ನಾರಾಯಣಿಯು ನೀನೇ ।
ವಾಣಿಯು ನೀನೇ ॥
ವೈದೇಹಿ ನೀನೇ । ಚಾಮುಂಡಿಯು ನೀನೇ ।
ಚೌಡಾಂಬೆ ನೀನೇ ।
ಭಾಗ್ಯದೇವತೆಯು ನೀನೇ । ಭದ್ರಕಾಳಿಯು ನೀನೇ ।
ರಕ್ತಚಾಮುಂಡಿಯೂ ರಣದುರ್ಗಿ ನೀನೇ ॥
ಪ್ರಣವವು ನೀನೇ । ಪ್ರಾಣರಕ್ಷಿತೆ ನೀನೇ ।
ಅಕ್ಷರವು ನೀನೇ । ಅಕ್ಷರಾಕ್ಷರಕ್ಕೆ ಆಧಾರವೂ ನೀನೇ ।
ಅಲಂಕಾರಿ ನೀನೇ । ಆನಂದಿ ನೀನೇ ॥
ಸೃಷ್ಟಿಕರ್ತಳು ನೀನೇ । ಇಷ್ಟಮುಕ್ತಳು ನೀನೇ ।
ಓಂಕಾರಿ ನೀನೇ । ಹ್ರೀಂಕಾರಿ ನೀನೇ ।
ನಿನ್ನ ನಂಬಿದವೆಮ್ಮ ನಮ್ಮ ಪಾಲಿಸೆದೇವಿ ।
ಶ್ರೀಜಯಜಗದಾಂಬ । ಶೃಂಗಾರಚೌಡಾಂಬ ॥
ರಾಜರಾಜೇಶ್ವರಿ ರಮಣೀಮುಖಾಂಬಾ ।
ಭುಜಗಭೂಷಣರಾಣಿ । ಭಳಿರೇ ಗೀರ್ವಾಣಿ ।

ಈ ಪ್ರಾಂತ್ಯದಲ್ಲಿ ಮಠದ ಸ್ವಂತ ನೆಲೆ ಇಲ್ಲದ್ದನ್ನು ಅರಿತು ಘಟ್ಟು ವೆಂಕಟಾಚಲಯ್ಯನವರು ಮಠದ ಶಾಖೆಯೊಂದನ್ನು ಸ್ಥಾಪಿಸಬೇಕೆಂದು ಸಂಕಲ್ಪ ಮಾಡಿದರು.

ಇವರು ಹರಪನಾಯ್ಕನಹಳ್ಳಿ ಜೋಡಿದಾರರಿಗೆ ನಿಕಟವರ್ತಿಗಳಾಗಿದ್ದುದರಿಂದ ಮುಳಬಾಗಿಲಿನಲ್ಲಿದ್ದ ಜೋಡಿದಾರರ ಒಂದು

ನಿವೇಶನವನ್ನು ಮಠಕ್ಕೆ ದಾನವಾಗಿ ಕೊಡಬೇಕೆಂದು ಅವರ ಮನ ಒಲಿಸಿ ಅವರ ಮಗ ಆಗಿನ ಶ್ರೀ ಹೆಚ್.ಡಿ. ವೆಂಕಟೇಗೌಡರಿಂದ ದಾನವಾಗಿ ಪಡೆದು ಶ್ರೀಯಾಜ್ಞವಲ್ಕ್ಯಾಶ್ರಮ ಮತ್ತು ಸೂರ್ಯದೇವರ ದೇವಸ್ಥಾನ ಕಟ್ಟಲು ನೆರವಾದರು. ವೆಂಕಟಾಚಲಯ್ಯನವರು ಮಠದ ಸ್ಥಾಪನೆಗೆ ಪ್ರಮುಖ ಮುತ್ಸದ್ದಿಗಳಾದರೆ ಇವರ ಹಿರಿಯ ಮಗ ಮಂಡಿಕಲ್ ಶ್ರೀನಿವಾಸರಾಯರು ಶ್ರೀಮಠದ ಕೀರ್ತಿಯನ್ನು ಬೆಳಗಿಸಿದರು.

ಶ್ರೀನಿವಾಸರಾಯರು *ವೇದಾನ್ವೇಷಣ* ನಾಟಕವನ್ನು ಬರೆದು ಇಡೀ ಜಿಲ್ಲೆಯಲ್ಲಿದ್ದ ತರುಣರನ್ನ ಹುರುದುಂಬಿಸಿ ನೆಗವಾರದ ವೆಂಕಣ್ಣನವರ ಮಗ ಶ್ರೀನಿವಾಸರಾವ್, ದಳಸನೂರು ಘಟ್ಟು ವೇದಾಚಲಯ್ಯನವರ ಮೊಮ್ಮಗ ಮತ್ತು ಘಟ್ಟು ನಾರಣಪ್ಪನವರ ಮಗ ಶ್ರೀ ಜಿ. ಎನ್. ವೆಂಕಟರಮಣಯ್ಯ ಮತ್ತು ದಳಸನೂರು ಗ್ರಾಮದ ಶ್ರೀವೆಂಕಟಸುಬ್ಬಯ್ಯನವರ ಮಗ ಶ್ರೀ ಡಿ.ವಿ. ವೆಂಕಟಾಚಲಯ್ಯನವರನ್ನು (ಯಾಜ್ಞವಲ್ಕ್ಯರ ಪಾತ್ರವನ್ನು) ಆರಿಸಿಕೊಂಡು ತಾವೇ ಬರೆದು ನಿರ್ದೇಶಿಸಿದ ಈ ನಾಟಕವನ್ನು (೧೯೩೩ನೆ ಇಸವಿ ರುಧಿರೋದ್ಗಾರಿನಾಮ ಸಂವತ್ಸರ ಭಾದ್ರಪದ ಶುದ್ಧ ದ್ವಾದಶಿಯಿಂದ ಅನಂತ ಹುಣ್ಣಿಮೆಯ ತನಕ) ದಳಸನೂರಿನಲ್ಲಿ ಅಭಿನಯಿಸಿದರು. ಎಂ. ಶ್ರೀನಿವಾಸರಾಯರು ವೃತ್ತಿಯಲ್ಲಿ ಶಿಕ್ಷಕರಾಗಿದ್ದು ಈ ನಾಟಕವನ್ನು ರಚಿಸಿ ಕಾಣ್ವಗುರುಗಳಾದ ಶ್ರೀಶ್ರೀಶ್ರೀ ವಿದ್ಯಾವಿರಾಜತೀರ್ಥರು ಈ ಪ್ರಾಂತ್ಯದ ಪರ್ಯಟನೆಗೆ ಬಂದಾಗ ಈ ನಾಟಕವನ್ನು ಪ್ರದರ್ಶಿಸಿದರು.

ಶ್ರೀವೆಂಕಟಾಚಲಯ್ಯನವರ ತಮ್ಮ ಶ್ರೀವೆಂಕಟನಾರಣಪ್ಪನವರು II (ದಿವಂಗತ ಮಲ್ಲಭಟ್ಟರ ಮೊಮ್ಮಗ ವೆಂಕಟರಮಣಯ್ಯನವರ ಮಗ) ಸಂಗೀತದಲ್ಲಿ ಪ್ರೌಡಿಮೆ ಪಡೆದ ಭಕ್ತರು. ಇವರು ತಮ್ಮ ಯೌವ್ವನದಲ್ಲೇ ಪತ್ನಿವಿಯೋಗಕ್ಕೆ ಒಳಗಾಗಿ ಇಡೀ ಆಯುಷ್ಯವನ್ನು ದೇವರ ಸೇವೆಗೆ ಮುಡಿಪಾಗಿ ಇಟ್ಟವರು. ಇವರಿಗೆ ಸಂತಾನವಿರಲಿಲ್ಲ.

ಇವರದೇ ಹೆಸರಿನ ಇವರ ತಾತ (ಶ್ಯಾಮಭಟ್ಟರ ಮಗ) ಪರಮ ಭಾಗವತ ಶಿಖಾಮಣಿಗಳಾಗಿದ್ದರು. ಆ ಕಾಲದಲ್ಲಿ ಪತ್ನೀ ಸಮೇತ ದಳಸನೂರಿನಿಂದ ಹೆಜ್ಜೆ ನಮಸ್ಕಾರ ಹಾಕಿಕೊಂಡು ತಿರುಪತಿ ತಲುಪಿದರಂತೆ. ತಿರುಮಲೆಯಲ್ಲಿ ವೆಂಕಟೇಶನನ್ನು ಪೂಜಿಸುತ್ತಿದ್ದಾಗ ತಿರುಮಲೆಯ ದೇವಾಲಯದ ಮಹಂತರು ಅವರ ಭಕ್ತಿಗೆ ಮೆಚ್ಚಿ, ತಿರುಮಲೇಶನಲ್ಲಿ ಅವರ

ಇಚ್ಛೆ ಏನೆಂದು ಕೋರಿದಾಗ, ಮುಕ್ತಿಯನ್ನು ಬೇಡಿದರಂತೆ. ಅಂಥಾ ಮಹಾನುಭಾವರಾದ ಶ್ರೀ ವೆಂಕಟನಾರಣಪ್ಪನವರು ಘಟ್ಟು ವಂಶಿಕರಿಗೆ ಪ್ರಾತಃಸ್ಮರಣೀಯರು.

## ಬೆಂಕಿ ಕೆಂಡಗಳ ಮೇಲೆ ನಡೆದ ಕೀರ್ತಿ

ಬೆಂಕಿ ಕೆಂಡಗಳ ಮೇಲೆ ಮೊದಲು ದೇವೀ ಸಮೇತ ನಡೆದ ಕೀರ್ತಿ ಘಟ್ ಮನೆತನದ ಸೊಸೆ ಶ್ರೀಮತಿ ಮಹಾಲಕ್ಷ್ಮಮ್ಮನವರಿಗೆ ಸಲ್ಲುತ್ತದೆ. ಇವರು ಆಗರ್ಭ ಶ್ರೀಮಂತ ಕುಟುಂಬಕ್ಕೆ ಸೇರಿದ ಮಹಿಳೆ. ಇವರ ತವರುಮನೆಯವರು ತಮ್ಮ ಹೆಣ್ಣುಮಗಳನ್ನು ನೋಡಿಕೊಂಡು ಹೋಗಲು ಬರುತ್ತಿದ್ದುದು ನೆಗವಾರದಿಂದ ಕುದುರೆ ಸಾರೋಟಿನಲ್ಲಿ. ಹೀಗಿದ್ದರೂ ಸಹ ಈಕೆ ತಮ್ಮ ಯಜಮಾನರ ಮಾತನ್ನು ಮೀರದೆ ಕೆಂಡಗಳ ಮೇಲೆ ಪ್ರಥಮ ಬಾರಿಗೆ ನಡೆಯಲು ಮುಂದಾದರು. ಘಟ್ಟು ವೆಂಕಟಾಚಲಯ್ಯನವರೊಡನೆ ವಿವಾಹವಾದ ಮೇಲೆ ಇವರ ಜೀವನ ಪದ್ಧತಿಯನ್ನು ಬದಲಾಯಿಸಿಕೊಂಡು ದೇವಿಯ ಪರಮಭಕ್ತರಾದರು. ಈಕೆ ಕಿಂಚಿತ್ತೂ ಹೆದರದೆ ತಂಬಿಟ್ಟು ದೀಪದೊಡನೆ ಅಗ್ನಿಕುಂಡದಲ್ಲಿ ಪ್ರವೇಶಿಸಿ ತಮ್ಮ ದೈವಭಕ್ತಿಯನ್ನು ಮತ್ತು ಪಾತಿವ್ರತ್ಯದ ಮಹಿಮೆಯನ್ನು ಇಡೀ ಸಮಾಜಕ್ಕೆ ತೋರಿಸಿಕೊಟ್ಟರು. ಈಕೆಯ ಕೀರ್ತಿ ಗ್ರಾಮೀಣ ಜನತೆಯ ಮನಸ್ಸಿನಲ್ಲಿ ಶಾಶ್ವತವಾಗಿ ಉಳಿದಿದೆ. ಇಂದಿಗೂ ಈ ಪದ್ಧತಿ ಘಟ್ಟು ಮನೆತನದ ಸೊಸೆಯರಿಂದ ನಡೆದುಬರುತ್ತಿದೆ. ಮಹಾಲಕ್ಷ್ಮಮ್ಮನವರು ದೇವಿಯವರ ರಥೋತ್ಸವದ ಮುಂದೆ ಕೆಂಡದ ಮೇಲೆ ನಡೆದ ದೃಶ್ಯ ಗ್ರಾಮಸ್ಥರಿಂದ ಕೇಳಿ ತಿಳಿಯುವುದೇ ಒಂದು ಸೊಗಸು. ಇವರಿಗೆ ಮರಿಮಗ ಹುಟ್ಟಿದಾಗ ಕನಕಾಭಿಷೇಕ ನಡೆಯಿತು. ಮಹಾಲಕ್ಷ್ಮಮ್ಮನವರ ನಂತರ ಘಟ್ಟು ಶ್ರೀನಿವಾಸರಾಯರ ಧರ್ಮಪತ್ನಿ ಸೀತಮ್ಮನವರೂ, ಜಿ. ರಾಮಚಂದ್ರರಾಯರ ಪತ್ನಿ ಸರೋಜಮ್ಮನವರು, ಜಿ. ವಿಠ್ಠಲಕೃಷ್ಣರಾಯರ ಪತ್ನಿ ಸರೋಜಮ್ಮನವರು ಹಾಗೂ ಶ್ರೀನಿವಾಸರಾಯರ ಹಿರಿಯಮಗ ಜಿ. ವಾಸುದೇವರಾಯರ ಧರ್ಮಪತ್ನಿ ಜಯಲಕ್ಷ್ಮಮ್ಮನವರು ದೀಪ ಸೇವೆಯನ್ನು ನಡೆಸಿದರು. ಇವರ ನಂತರ ವೆಂಕಟಾಚಲಯ್ಯನವರ ಕಿರಿಯಮಗ ಜಿ. ನಾರಾಯಣರಾಯರ ಸೊಸೆ ಜಿ.ಎಫ್. ವಿಜಯಮೋಹನ್‌ರವರ ಪತ್ನಿ ಲಕ್ಷ್ಮೀದೇವಮ್ಮನವರು ಇಂದಿಗೂ ದೀಪ ಸೇವೆಯನ್ನು ನಡೆಸಿಕೊಂಡು ಬರುತ್ತಿದ್ದಾರೆ.

ಧರ್ಮದರ್ಶಿ ವೆಂಕಟಾಚಲಯ್ಯನವರು ದೇವಿ ಪೂಜಾಕಾರ್ಯಕ್ಕೆಂದು ಸಾತಾಂಡ್ಲಹಳ್ಳಿಯ ಸುಬ್ಬಯ್ಯ ದೀಕ್ಷಿತ್ ಎಂಬ ಬ್ರಾಹ್ಮಣನನ್ನು ಕರೆಸಿ ಅವರಿಗೆ ತಮ್ಮದೇ ಆದ ಹೊಲ ಗದ್ದೆಗಳನ್ನು ಮಾನ್ಯವಾಗಿ ನೀಡಿದರು. ಇವರ ನಂತರ ದೇವಾಲಯದ ಅಭಿವೃದ್ಧಿಯಲ್ಲಿ ಇವರ ಸಾಕುಮಗ ಜಿ. ಕೃಷ್ಣಮೂರ್ತಿಯವರು ನೆರವಾಗಿ ಇಂದಿಗೂ ಅವರ ವಂಶಜರು ಅರ್ಚನಾವೃತ್ತಿಯನ್ನು ಮುಂದುವರೆಸಿಕೊಂಡು ಹೋಗುತ್ತಿದ್ದಾರೆ. ಇದಕ್ಕೆ ಸರ್ಕಾರದ ವತಿಯಿಂದ ಯಾವುದೇ ತರಹೆ ಮಾನ್ಯಗಳಿರುವುದಿಲ್ಲ ಮತ್ತು ಆದಾಯವಿರುವುದಿಲ್ಲ.

ವೆಂಕಟಾಚಲಯ್ಯನವರ ಮಗ ಜಿ. ವಿಠಲಕೃಷ್ಣರಾಯರು ಮಂಡಿಕಲ್ ಚೌಡೇಶ್ವರೀ ದೇವಿಯವರ ಪ್ರಭಾವಗಳು ಜನತೆಗೆ ತಿಳಿಸಿಲೋಸುಗವಾಗಿ ಶ್ರೀಚೌಡೇಶ್ವರೀ ದಂಡಕಮು ಎಂಬ ಕಿರಿಹೊತ್ತಿಗೆಯನ್ನು ೧೯೩೭ರಲ್ಲಿ ಘಟ್ ವೆಂಕಟಾಚಲಯ್ಯನವರ ಮುಖಾಂತರ ಪ್ರಕಟಿಸಿದರು. ಈ ಹೊತ್ತಿಗೆಯ ಲಿಪಿ ಕನ್ನಡವಾದರೂ ದಂಡಕವು ತೆಲುಗುಭಾಷೆಯಲ್ಲಿದೆ. ಈ ದಂಡಕದ ದ್ವಿತೀಯ ಮುದ್ರಣ ಘಟ್‌ವಾಸುದೇವರಾಯರು ಪ್ರಕಟಿಸಿದರು. ಇಂದಿಗೆ ಈ ದಂಡಕದ ಮೂರನೇ ಮುದ್ರಣ ಶ್ರೀನಿವಾಸಪುರದ ಶ್ರೀ ಯಾಜ್ಞವಲ್ಕ್ಯಸಮಿತಿಯವರಿಂದ ಪ್ರಕಟಿಸಲ್ಪಟ್ಟಿದೆ.

## ವೆಂಕಟಾಚಲಯ್ಯನವರ ಮಕ್ಕಳು

ವೆಂಕಟಾಚಲಯ್ಯನವರ ಎರಡನೇ ಮಗ ಜಿ. ರಾಮಚಂದ್ರರಾಯರು ತಮ್ಮ ತಂದೆಗೆ ಬಲಗೈ ಬಂಟನಾಗಿ ಮಡಿಕಲ್ಲಿನಲ್ಲಿಯೇ ಶ್ಯಾನುಭೋಗಿಗೆ ಮತ್ತು ವ್ಯವಸಾಯಗಳನ್ನು ಮಾಡಿಸಿಕೊಂಡು ವಾಸವಾಗಿದ್ದರು. ಇವರು ತಮ್ಮ ಸ್ವಶಕ್ತಿಯಿಂದ ಒಂಭತ್ತು ಗ್ರಾಮಗಳ ಶ್ಯಾನುಭೋಗಿಕೆ ಪಡೆದು ನಿಷ್ಠಾವಂತರಾದ ಶ್ಯಾನುಭೋಗರೆಂದು ಹೆಸರು ವಾಸಿಯಾದರು. ಇವರು ಇಂದಿಗೂ ತಮ್ಮ ತಂದೆಯವರಿಂದ ಪ್ರಾರಂಭಿಸಲ್ಪಟ್ಟ ಧರ್ಮದರ್ಶಿಗಳ ಸೇವೆಯನ್ನು ಸಲ್ಲಿಸುತ್ತಿದ್ದಾರೆ.

ಮೂರನೆಯ ಮಗ ಶ್ರೀಯುತ ಜಿ. ವಿಠಲಕೃಷ್ಣರಾಯರ ಶಿಕ್ಷಣಕ್ಷೇತ್ರದ ಕೊಡುಗೆ ಈ ಪ್ರಾಂತ್ಯದ ಹತ್ತಾರು ಕುಟುಂಬಗಳಿಗೆ ಅಭಯಹಸ್ತವಾಗಿದೆ. ಅಂದಿನ ಕಾಲದಲ್ಲಿ ಶಿಕ್ಷಣವಿಲ್ಲದ ಅನೇಕ ನಿರುದ್ಯೋಗಿ ಯುವಕರನ್ನು ಸಂಘಟಿಸಿ ಲೋಯರ್ ಸೆಕೆಂಡರಿ ಪರೀಕ್ಷೆಗೆ ಕೂಡಿಸಿ ಉತ್ತೀರ್ಣರನ್ನಾಗಿ ಮಾಡಿ ಅವರು

**ಜಿ. ವಾಸುದೇವರಾಯರು**

ಶ್ರೀನಿವಾಸರಾಯರ ಹಿರಿಯಮಗ ಶ್ರೀ ಜಿ. ವಾಸುದೇವರಾಯರು ತಂದೆಗೆ ಬಲಗೈ ಬಂಟನಾಗಿ ಶುಕ್ಲಯಜುರ್ವೇದ ಮಹಾಸಭೆಯ ಕಾರ್ಯ ಚಟುವಟಿಕೆಗಳಲ್ಲಿ ಪ್ರಧಾನ ಪಾತ್ರವಹಿಸಿದ್ದರು. ಜಿ. ವಾಸುದೇವರಾಯರು ಧೀರ, ಧೀಮಂತ ಪತ್ರಕರ್ತ, ರಾಜಕೀಯ ಮುತ್ಸದ್ದಿಯಾಗಿದ್ದು ಒಬ್ಬ ಹೆಸರಾಂತ ಸಮಾಜಸೇವಕಗಿದ್ದರು, ಇವರು ತಮ್ಮ ಪ್ರೌಢಾವಸ್ಥೆಯಲ್ಲಿಯೇ ಪ್ರಥಮವಾಗಿ ಸಹಕಾರಿ ಆಂದೋಳನದಲ್ಲಿ ಸಕ್ರಿಯವಾಗಿ ಭಾಗವಹಿಸಿ ರಾಜಕೀಯ ಮತ್ತು ಸಾಮಾಜಿಕ ಜೀವನದಲ್ಲಿ ಮೇಲುಗೈ ಪಡೆದು ಅನೇಕ ಗ್ರಾಮಾಭಿವೃದ್ಧಿ ಕಾರ್ಯಗಳನ್ನು ನಡೆಸಿ ಹಲವು ಸಹಕಾರ ಸಂಸ್ಥೆಗಳನ್ನು ಸ್ಥಾಪಿಸಿದರು. ಇವರು ಅಂದಿನ ತಾಲ್ಲೂಕು ಅಭಿವೃದ್ಧಿ ಮಂಡಳಿ ಸದಸ್ಯರು ಮತ್ತು ಕೋಲಾರ ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕಿನ ನಿರ್ದೇಶಕರಾಗಿ ಚುನಾಯಿತರಾಗಿದ್ದರು. ಇವರ ಕಾಲದ ಹಲವು ಜನಸೇವಾಕಾರ್ಯಗಳು ಈ ಪ್ರಾಂತ್ಯದ ಜನತೆಯ ಮನಃಪಟಲದಲ್ಲಿ ಹಚ್ಚ ಹಸುರಾಗಿ ಉಳಿದಿದೆ.

ಉಪಾಧ್ಯಾಯರಾಗಿ ಜೀವನ ಮಾಡಲು ಅನುವು ಮಾಡಿಕೊಟ್ಟಿರುತ್ತಾರೆ. ಇವರು ಒಬ್ಬ ಕಲಾಕಾರರು ಹಾಗೂ ಮಹಾನ್ ದೈವ ಭಕ್ತರಾಗಿದ್ದರು. ಇವರು ದೇವರ ಪೂಜಾ ಕಾಲದಲ್ಲಿ ಹಾಡುತ್ತಿದ್ದ ಪುರಂದರದಾಸರ ಕೀರ್ತನೆಗಳು ಇಂದಿಗೂ ಆ ತಲೆಮಾರಿನ ಜನತೆಯ ಮನೆಮಾತಾಗಿದೆ.

ಜಿ. ವಿಠಲಕೃಷ್ಣರಾಯರ ಧರ್ಮಪತ್ನಿ ಸರೋಜಮ್ಮನವರು ತಮ್ಮ ಪತಿ ನಿಧನರಾದ ಮೇಲೆ ಮಂಡಿಕಲ್‌ನಲ್ಲೇ ಉಳಿದು ತಮ್ಮ ಮಕ್ಕಳ ಶ್ರೇಯೋಭಿವೃದ್ಧಿಗೆ ಮತ್ತು ವಿದ್ಯಾಭಿವೃದ್ಧಿಗೆ ಶ್ರಮಿಸಿದರು. ಪ್ರಸ್ತುತ ಬೆಂಗಳೂರಿನಲ್ಲಿ ಇವರ ಹಿರಿಯಮಗ ಪ್ರಭಾಕರರಾಯರ ಬಳಿ ವಾಸವಾಗಿರುತ್ತಾರೆ. ಇವರ ಹಿರಿಯಮಗನಿಗೆ ಮೊಮ್ಮಗ ಹುಟ್ಟಿದಾಗ ಕನಕಾಭಿಷೇಕ ನಡೆಯಿತು. ಅಭಿಷೇಕದ ಸ್ಫೂರ್ತಿಯ ಸೆಲೆಯೇ ಈ ಘಟ್ಟುವಂಶದ ಗ್ರಂಥದ ಪ್ರಾರಂಭಕ್ಕೆ ನಾಂದಿಯಾಗಿರುತ್ತೆ.

ವೆಂಕಟಾಚಲಯ್ಯನವರ ಎರಡನೇ ಪುತ್ರಿ ವೆಂಕಮ್ಮನವರನ್ನು ದಳಸನೂರಿನಲ್ಲಿ ವಾಸಿಸುತ್ತಿದ್ದ ಕೊಲದೇವಿ ರಾಮಾಚಾರ್ಯರಿಗೆ ಕೊಟ್ಟು ವಿವಾಹ

ಮಾಡಿದರು. ರಾಮಾಚಾರ್ಯರು ಕೊಲದೇವಿಯವರಾದರೂ ಕೂಡ ದಳಸನೂರು ಶ್ಯಾ. ಶಾಮಣ್ಣನವರ ಪತ್ನಿ ರಾಮಾಚಾರ್ಯರ ಸೋದರತ್ತೆ ಜಯಲಕ್ಷ್ಮಮ್ಮನವರ ಆಶ್ರಯದಲ್ಲಿ ದಳಸನೂರು ಸೇರಿ ಅಲ್ಲಿಯೇ ವಾಸ್ತವ್ಯ ಹೂಡಿ ಶ್ರೀ ವೇಣುಗೋಪಾಲಸ್ವಾಮಿ ಅರ್ಚನಾ ವೃತ್ತಿ ಮತ್ತು ಒಂದು ಕಿರಾಣಿ ಅಂಗಡಿ ನಡೆಸಿಕೊಂಡು ಜೀವನೋಪಾಯ ಮಾಡುತ್ತಿದ್ದರು. ವೆಂಕಮ್ಮನವರ ಪುತ್ರಿ ಜಯಲಕ್ಷ್ಮಮ್ಮನವರನ್ನು ಮಂಡಿಕಲ್ ಶ್ರೀನಿವಾಸರಾಯರ ಮಗ ಜಿ. ವಾಸುದೇವರಾಯರಿಗೆ ಕೊಟ್ಟು ವಿವಾಹ ಮಾಡಿದರು.

ವೆಂಕಟಾಚಲಯ್ಯನವರ ಕೊನೆಯ ಮಗ ಜಿ. ನಾರಾಯಣರಾಯರು ವೃತ್ತಿಯಲ್ಲಿ ಶಿಕ್ಷಕರಾಗಿದ್ದು ಅನೇಕ ಜನ ಮೇಧಾವಿ ಶಿಷ್ಯರನ್ನು ಪಡೆದ ಕೀರ್ತಿ ಇವರದಾಗಿದೆ. ಇವರು ಒಳ್ಳೆಯ ಕಲಾವಿದರು, ನಾಟಕದ ಉಪಾಧ್ಯಾಯರು ಮತ್ತು ಹರಿಕಥಾ ವಿದ್ವಾಂಸರಾಗಿದ್ದರು, ಇವರು ತಮ್ಮ ಅಣ್ಣ ವಿಠಲಕೃಷ್ಣರಾಯರ ಜೊತೆಗೂಡಿ ಆಗಿನ ಕಾಲದಲ್ಲಿಯೇ ಕಾಣ್ವ ಶಾಖಾ ತರುಣ ಸಂಘವನ್ನು ಸ್ಥಾಪಿಸಿ ಕಾಣ್ವರ ಅಭ್ಯುದಯಕ್ಕಾಗಿ ಶ್ರಮಿಸಿದರು. ಶ್ರೀ ಸೂರ್ಯನಾರಾಯಣಸ್ವಾಮಿ ದೇವರಿಗೆ ಯಾಜ್ಞವಲ್ಕ್ಯ ಜಯಂತಿ ಸಮಯದಲ್ಲಿ ಸೂರ್ಯನಾರಾಯಣ ದೇವರ ರಥೋತ್ಸವ ಕಾರ್ಯಕ್ರಮವನ್ನು ಪ್ರಾರಂಭಿಸಿ ರಥೋತ್ಸವದ ಕಾರ್ಯಕ್ರಮಕ್ಕೆ ಮೆರಗು ಕೊಡುವ ೧೨ ಮಂಗಳಾರತಿ ಮತ್ತು ದಾಸಕೂಟದ ಸೇವಾಕರ್ತರಾಗಿ ದುಡಿದರು.

ಇಂತಹ ಮಹಾನ್ ಮಂಡಿಕಲ್ ಘಟ್ ಮನೆತನವೆಂಬ ಮಹಾವೃಕ್ಷದ ಕವಲುಗಳಾದ ಮಕ್ಕಳು, ಮೊಮ್ಮಕ್ಕಳು, ಮರಿಮಕ್ಕಳು ತಮ್ಮದೇ ಆದ ಪ್ರತಿಭೆಗಳೊಂದಿಗೆ ರಾರಾಜಿಸುತ್ತಿದ್ದಾರೆ. ಇದು ನಾವು ಕಂಡಂತೆ ಮಂಡಿಕಲ್ ಘಟ್ ಮನೆತನದ ಒಂದು ತುಣುಕು.

***ಕೆ. ಮಾಧವರಾವ್‌ರವರು, ದಳಸನೂರು ರಾಮಾಚಾರ್ಯರ ಮಕ್ಕಳು ಹಾಗೂ ಸಿ.ಬಿ. ಸುಬ್ರಹ್ಮಣ್ಯಂರವರು ಶ್ರೀನಿವಾಸಪುರ ಚಲ್ದಿಗಾನಹಳ್ಳಿ ಭಾಸ್ಕರಪ್ಪನವರ ಮಕ್ಕಳು***

***ಋದುಕು ನಿರುಳದಿಂದ ಸಾವನ್ನು ಒಪ್ಪಲು ಅಪ್ಪಲು ಮಾಡಿಕೊಳ್ಳುವ ಪೂರ್ವಸಿದ್ಧತೆ.***

# ಘಟ್ಟು ವಂಶದ ಆಧಾರಸ್ತಂಭಗಳು

ಜಿ. ಆರ್. ಮಾಧವ ರಾವ್

ಘಟ್ ಮನೆತನದ ಮೂಲಪುರುಷ ಶ್ಯಾಮಭಟ್ಟರು ನಿಸ್ಸೀಮ ದೈಭಕ್ತರಾಗಿದ್ದರಲ್ಲದೆ ಶಾಸ್ತ್ರಗಳಲ್ಲಿಯೂ ಪರಿಣಿತರಾಗಿದ್ದ ಅಂಶ ಇಂದಿಗೂ ಕಾಣಬಹುದಾಗಿದೆ.

ಹೆಸರೇ ಸೂಚಿಸುವಂತೆ ಶ್ಯಾಮಭಟ್ಟರು ದ್ವೈತಿಗಳಾಗಿದ್ದರು. ಅವರ ಮನೆ ಇಷ್ಟದೇವರು ತಿರುಪತಿಯ ವೆಂಕಟರಮಣಸ್ವಾಮಿ. ಘಟ್ ನವರಿಗೆ ಕುಲದೇವರು ಮದನಪಲ್ಲಿಯ ಬಳಿಯ ಯಾನಿಗ ಮಲ್ಲಮ್ಮನೆಂದು ಹೇಳಲಾಗುತ್ತಿದೆ. ಇಂದಿಗೂ ಈ ಮಲ್ಲಮ್ಮನ ದೇವಾಲಯದಲ್ಲಿ ಘಟ್‌ಮನೆತನದವರಿಗೆ ಒಂದು ತಾಂಬೂಲ ತೆಗೆದಿಡುತ್ತಾರಂತೆ. ಘಟ್ ಮನೆತನದ ಪೂರ್ವಜ ಶ್ಯಾಮಭಟ್ಟರೊಂದಿಗೆ ಮೊದಲು ಸಂಬಂಧ ಬೆಳೆಸಿದವರು ವೆಲಗಲಬುರ್ರೆಯವರು. ನಂತರ ದಳಸನೂರು ಸುಬ್ಬರಾಯಪ್ಪನವರು ಮತ್ತು ಚಲದಿಗಾನಹಳ್ಳಿ ಗುರುಪ್ಪನವರು. ಈ ಮನೆತನಗಳೆಲ್ಲವೂ ಈ ಪ್ರಾಂತದ ಪ್ರಮುಖ ಮನೆತನಗಳಾಗಿದ್ದವು.

ವೇದಾಚಲಯ್ಯನವರು ಪೂರ್ಣ ಅರಿವಿನಿಂದ, ತಿಳುವಳಿಕೆಯಿಂದ ಮಧ್ವ ಸಿದ್ಧಾಂತ ಅಧ್ಯಯಿಸಿ, ದ್ವೈತ ಸಂಪ್ರದಾಯವನ್ನನುಸರಿಸುತ್ತಿದ್ದರು. ಅವರು ರಚಿಸಿದ *ಮಾಧವತೀರ್ಥ ಪಾದಯುಗಳಧ್ಯಾನ* ಎಂಬ ಕಣ್ವಮಠದ ಮಹಿಮೆಯನ್ನು ಹೊಗಳಿ ಕೊಂಡಾಡುವ ಗೀತೆ ಇಂದಿಗೂ ಕಣ್ವಮಠದಲ್ಲಿ ಪ್ರತಿದಿನ ಹೇಳಲಾಗುತ್ತದೆ. ಇದು ಇವರ ದೈವಭಕ್ತಿ, ಶಾಸ್ತ್ರವೇತ್ತತೆಗೆ ದ್ಯೋತಕವಾಗಿದೆ. ಇಂದಿನ ಪೀಳಿಗೆಯವರಂತೆ ಕೇವಲ ಮುದ್ರಾಧಾರಣ ಅಥವಾ ಗೋಪಿಚಂದನಗಳನ್ನು ಧರಿಸುವ ದ್ವೈತರಾಗಿರಲಿಲ್ಲ.

ದೈವಭಕ್ತಿ, ಶಾಸ್ತ್ರಗಳ ಅಧ್ಯಯನ, ವಿರಕ್ತಿ, ಇವುಗಳು ವೇದಾಚಲಯ್ಯನವರಿಗೆ ಇವರ ಹಿರಿಯರಾದ ವೆಂಕಟನಾರಾಯಣಪ್ಪನವರಿಂದ ಪಾರಂಪರಿಕವಾಗಿ ಬಂದ ಕೊಡುಗೆ. ವೇದಾಚಲಯ್ಯನವರು

**ವೆಂಕಟನಾರಣಪ್ಪ(I)ನವರ ಗುಣ**

ಮೈಸೂರು ಮಹಾರಾಜರ ಅಂದಿನ ಆಳುವ ಮಹಾರಾಜರು ಒಮ್ಮೆ ವೆಂಕಟನಾರಾಯಣಪ್ಪನವರನ್ನು ವಿನಯ ಆದರಗಳಿಂದ ಬರಮಾಡಿಕೊಂಡರು. ಕೆಲಸಮಯದ ಮಾತುಕತೆ ನಂತರ ಮಹಾರಾಜರು ವೆಂಕಟನಾರಾಯಣಪ್ಪನವರನ್ನು ಅವರ ದೇವತಾ ಕಾರ್ಯದಲ್ಲಿ ಏನಾದರೂ ಅವಶ್ಯಕತೆಗಳ ಪೂರೈಕೆಗಾಗಿ ಪ್ರಶ್ನಿಸಿದಾಗ, ಅವರು ವಿನಯಪೂರ್ವಕವಾಗಿ ಪರಮಾತ್ಮನು ಸದ್ಯಕ್ಕೆ ಎಲ್ಲವನ್ನು ಕೊಟ್ಟಿದ್ದಾನೆ, ಅವಶ್ಯ ಬಿದ್ದಾಗ ಪ್ರಭುಗಳನ್ನು ಕಾಣುತ್ತೇನೆ ಎಂದು ಉತ್ತರಿಸಿದರು. ಮಹಾರಾಜರು ಇವರನ್ನು ರಾಜಧಾನಿಗೆ ಬರಲು ಆಹ್ವಾನ ನೀಡಿ, ಇವರು ಮೈಸೂರಿಗೆ ಬಂದಾಗ ತಮ್ಮ ಬಳಿಗೆ ನೇರವಾಗಿ ಇವರನ್ನು ಕರೆತರುವಂತೆ ತಮ್ಮ ಪರಿಚಾರಕರಿಗೆ ಸೂಚಿಸುವ ಆದೇಶ ಪತ್ರವೊಂದನ್ನು ಇವರಿಗೆ ದಯಪಾಲಿಸಿದ್ದರು. ಬಹಳ ಕಾಲದವರೆಗೆ ಆ ಪತ್ರವು ನಮ್ಮ ಮನೆಯಲ್ಲಿದ್ದಿತೆಂದು ನಮ್ಮ ಹಿರಿಯರು ಹೇಳುತಿದ್ದರು.

ವೆಂಕಟನಾರಾಯಣಪ್ಪನವರ ದತ್ತು ಪುತ್ರರಾಗಿ, ದೈವಭಕ್ತಿಯಲ್ಲಿ ಅವರನ್ನೇ ಅನುಸರಿಸಿದರು.

## ಹೆಜ್ಜೆ ನಮಸ್ಕಾರ

ವೆಂಕಟನಾರಣಪ್ಪನವರು ತಮ್ಮ ಪತ್ನಿ ಗೌರಮ್ಮನವರೊಂದಿಗೆ ಹೆಜ್ಜೆನಮಸ್ಕಾರದಲ್ಲಿ ಎರಡು ಬಾರಿ ತಿರುಪತಿಗೆ ಹೋಗಿ ದೇವರದರ್ಶನ ಪಡೆದು ಬಂದವರು. ಹೆಜ್ಜೆ ನಮಸ್ಕಾರವೆಂದರೆ, ಅವರು ಹೊರಟಸ್ಥಳ ಗುರುತು ಮಾಡಿ ಅಲ್ಲಿ ನಿಂತು ಗೋವಿಂದ ಗೋವಿಂದ ಎಂದು ದೇವಧ್ಯಾನ ಮಾಡುವುದು, ಅಲ್ಲಿಂದ ಒಂದು ಸಾಷ್ಟಾಂಗ ನಮಸ್ಕಾರ ಹಾಕುವುದು, ನಮಸ್ಕರಿಸುವುದು ತಮ್ಮ ಚಾಚಿದ ಹಸ್ತದ ಕೊನೆಯಲ್ಲಿ ಒಂದು ಗುರುತು ಹಾಕುವುದು. ಎದ್ದು ನಿಂತು ನಂತರ ಆ ಎರಡನೆ ಗುರುತಿನವರೆಗ್ ಗೋವಿಂದ ನಾಮಸ್ಮರಣೆ ಮಾಡುತ್ತಾ ನಡೆದು ಹೋಗುವುದು. ಈ ಕ್ರಿಯೆಯ ಪೂರ್ಣವಾಗುವವರೆಗೆ ಅವರ ಪತ್ನಿಯು ಗರುಡಗಂಬದ ಬಳಿ ಜಾಗಟೆ

ಬಡಿಯುತ್ತ ಗೋವಿಂದ ನಾಮಸ್ಮರಣೆ ನಡೆಸುತ್ತಿರುವುದು. ಈ ರೀತಿಯ ಹೆಜ್ಜೆ ನಮಸ್ಕಾರ ಮಾಡುತ್ತ ವೆಂಕಟನಾರಾಣಪ್ಪನವರು ಎರಡು ಬಾರಿ ತಿರುಪತಿಗೆ ದೇವದರ್ಶನಕ್ಕೆ ಹೋಗಿದ್ದರು.

ಒಮ್ಮೆ ಇವರು ಹೋಗಿದ್ದಾಗ, ಮೈಸೂರಿನ ಮಹಾರಾಜರು ಅಲ್ಲಿದ್ದರು. ಈ ಭಗವದ್ಭಕ್ತರನ್ನುಕಾಣಲು ಇಚ್ಛಿಸಿ ತಮ್ಮ ಪರಿವಾರದವರಿಗೆ ಇವರನ್ನು ಸಂಪರ್ಕಿಸಲು ಹೇಳಿದರು. ಶ್ರೀವೆಂಕಟನಾರಾಣಪ್ಪನವರನ್ನು ಪರಿವಾರದವರು ಭೇಟಿಮಾಡಿ. ಮಹಾರಾಜರ ಆಶಯ ತಿಳಿಸಿದಾಗ, ವೆಂಕಟಪ್ಪನಾರಾಣಪ್ಪನವರು ನಾನು ಇಲ್ಲಿಯ ಸಾರ್ವಭೌಮನನ್ನು ನೋಡಬಂದನೇ ಹೊರತು ರಾಜರನ್ನು ನೋಡುವ ಇಚ್ಛೆ ಇಲ್ಲ  ಎಂದು ಹೇಳಿದರು. ಆದರೆ ಪರಿವಾರದವರು *ನಾವಿಷ್ಣು: ಪೃಥಿವಿಪತಿಃ* ಎಂಬ ನುಡಿಯಂತೆ ಪೃಥಿವೀಪತಿಯನ್ನು ವಿಷ್ಣುವಿನ ಅಂಶವೇ ಎಂದು ಹೇಳಿದರಂತೆ. ಆಗ ವೆಂಕಟನಾರಣಪ್ಪನವರು ರಾಜರನ್ನು ಭೇಟಿಮಾಡಿ ರಾಜಾಶೀರ್ವಾದ ಮಂತ್ರಾಕ್ಷತೆಗಳನ್ನು ನೀಡಿದರಂತೆ. ಆಳುವ ಮಹಾರಾಜರು ವೆಂಕಟನಾರಾಯಣಪ್ಪನವರನ್ನು ವಿನಯ ಆದರಗಳಿಂದ ಬರಮಾಡಿಕೊಂಡರು. ಕೆಲಸಮಯದ ಮಾತುಕತೆ ನಂತರ ಮಹಾರಾಜರು ವೆಂಕಟನಾರಾಯಣಪ್ಪನವರನ್ನು ಅವರ ದೇವತಾ ಕಾರ್ಯದಲ್ಲಿ ಏನಾದರೂ ಅವಶ್ಯಕತೆಗಳ ಪೂರೈಕೆಗಾಗಿ ಪ್ರಶ್ನಿಸಿದಾಗ, ಅವರು ವಿನಯಪೂರ್ವಕವಾಗಿ ಪರಮಾತ್ಮನು ಸದ್ಯಕ್ಕೆ ಎಲ್ಲವನ್ನು ಕೊಟ್ಟಿದ್ದಾನೆ, ಅವಶ್ಯ ಬಿದ್ದಾಗ ಪ್ರಭುಗಳನ್ನು ಕಾಣುತ್ತೇನೆ  ಎಂದು ಉತ್ತರಿಸಿದರಂತೆ. ಮಹಾರಾಜರು ಇವರನ್ನು ರಾಜಧಾನಿಗೆ ಬರಲು ಆಹ್ವಾನ ನೀಡಿ, ಇವರು ಮೈಸೂರಿಗೆ ಬಂದಾಗ ತಮ್ಮ ಬಳಿಗೆ ನೇರವಾಗಿ ಇವರನ್ನು ಕರೆತರುವಂತೆ ತಮ್ಮ ಪರಿಚಾರಕರಿಗೆ ಸೂಚಿಸುವ ಆದೇಶ ಪತ್ರವೊಂದನ್ನು ಇವರಿಗೆ ದಯಪಾಲಿಸಿದ್ದರು. ಬಹಳ ಕಾಲದವರೆಗೆ ಆ ಪತ್ರವು ನಮ್ಮ ಮನೆಯಲ್ಲಿದ್ದಿತೆಂದು ನಮ್ಮ ಹಿರಿಯರು ಹೇಳುತ್ತಾರೆ

## ವೆಂಕಟನಾರಯಣಪ್ಪನವರ ಜ್ಯೋತಿಷ್ಯ

ವೆಂಕಟನಾರಣಪ್ಪನವರ ಜ್ಯೋತಿಷ್ಯದ ಬಗ್ಗೆ ಹಲವಾರು ರೋಚಕ ಕತೆಗಳು ಇವೆಯಾದರೂ, ಈ ಒಂದು ಕತೆಯನ್ನು ಇಲ್ಲಿ ಹೇಳಬಯಸುತ್ತೇನೆ. ಮುಳಬಾಗಿಲ ಬಳಿ ಹರಪನಾಯಕನ ಹಳ್ಳಿಯ ಪಾಳೇಗಾರರು, ಚಂದ್ರಗಿರಿಯ ಕೋಟೆಯ ದಾಳಿಯಲ್ಲಿ ತೋರಿದ ಅಮಿತ ಶೌರ್ಯ ಪರಾಕ್ರಮಗಳಿಗೆ ರಾಜಮನ್ನಣೆಯನ್ನು

ಪಡೆದಿದ್ದರು. ಘಟ್ ವೆಂಕಟನಾರಾಯಣಪ್ಪನವರೂ, ಅವರ ಸೋದರರೂ ವಾಸವಾಗಿದ್ದ ಮಂಡಿಕಲ್ ಗ್ರಾಮವು ಹರಪನನಾಯಕನ ಹಳ್ಳಿಯ ಗೌಡರ ಆಳ್ವಿಕೆ ವ್ಯಾಪ್ತಿಯಲ್ಲಿಯೆ ಇದ್ದಿತು. ಬಿಸ್ಸೇಗೌಡರಿಗೆ ಬ್ರಾಹ್ಮಣರಲ್ಲಿ ಭಕ್ತಿ ಶ್ರದ್ಧೆ ಅಚಲವಾಗಿತ್ತು.

ಒಮ್ಮೆ ಉತ್ತರ ಭಾರತದ ಪ್ರಸಿದ್ದ ಜ್ಯೋತಿಷಿಯೊಬ್ಬರು ಆ ಪ್ರಾಂತಕ್ಕೆ ಪ್ರವಾಸ ಬಂದಿದ್ದಾಗ ಬಿಸ್ಸೇಗೌಡರು ಗರ್ಭಿಣಿಯಾಗಿದ್ದ ತಮ್ಮ ಪತ್ನಿಯ ಭಾವೀ ಸಂತಾನದ ಬಗ್ಗೆ ಅವರನ್ನು ಪಶ್ನಿಸಿದರು. ಆ ಜೋಯಿಸರು ಗೌಡರಿಗೆ ಪುತ್ರ ಸಂತಾನವಾಗುವುದೆಂದು ಹೇಳಿ, ವಿಪುಲವಾಗಿ ಬಹುಮಾನಿತರಾಗಿ ಹಿಂದಿರುಗಿದರು. ಪ್ರಸವಕಾಲವು ಸಮೀಪ ಬಂದಾಗ ಒಮ್ಮೆ ಗೌಡರು ತಮ್ಮ ಬಂಧುಬಾಂಧವರೊಡನೆ ಸಭಾ ಗೃಹದಲ್ಲಿದ್ದಾಗ ವೆಂಕಟನಾರಣಪ್ಪನವರು ಅಕಸ್ಮಾತಾಗಿ ಅಲ್ಲಿಗೆ ಬಂದರು. ಪುತ್ರಸಂತಾನವೆಂದು ಪ್ರಸಿದ್ಧ ಜೋಯಿಸರ ಮಾತಿನಂತೆ ಅವರಿಗೆ ದೃಡವಾಗಿತ್ತಾದರೂ, ತಮಗೆ ಯಾವ ಮಗು ಆಗುವುದೆಂದು ವೆಂಕಟನಾರಣಪ್ಪನವರನ್ನು ಗೌಡರು ಕೇಳಿದರು. ವೆಂಕಟನಾರಣಪ್ಪನವರು ಸ್ವಲ್ಪ ಯೋಚಿಸಿ, ಹೆಣ್ಣುಮಗುವಾಗುತ್ತದೆಂದು ಹೇಳಿದರು. ಗೌಡರು ಈ ಮಾತನ್ನು ಕೇಳಿ ಎಲ್ಲರ ಮುಂದೆ ವೆಂಕಟನಾರಣಪ್ಪನವರನ್ನುದ್ದೇಶಿಸಿ, "ಸ್ವಾಮಿ ಹೆಣ್ಣುಮಗುವಾದರೆ ಮಗು ನಿಮ್ಮದು, ಗಂಡುಮಗು ಆದರೆ ನೀವು ಇನ್ನು ಮುಂದೆ ಜೋಯಿಸತನ ಮಾಡಕೂಡದು" ಎಂದು ನುಡಿದರು. ಈ ರೀತಿಯಾದ ವಿವಾದ ನಡೆಯುತ್ತಿರುವ ಸಮಯದಲ್ಲಿಯೇ ಗೌಡರಿಗೆ ಮನೆಯಿಂದ ಸಮಾಚಾರ ಬಂತು, ಗೌಡತಿ ಹೆಣ್ಣುಮಗುವಿಗೆ ಜನ್ಮವಿತ್ತಿದ್ದಾಳೆ ಎಂದು. ಆ ಹೆಣ್ಣು ಮಗು ವಿವಾಹಯೋಗ್ಯಳಾದಾಗ ಗೌಡರು ಆಕೆಯನ್ನು ಕೇಳಲು ಬಂದವರಿಗೆಲ್ಲ ಆ ಮಗು ನಮ್ಮ ಮನೆಯಲ್ಲಿದ್ದರೂ ಅದು ಜೋಯಿಸರದು, ಅವರು ಒಪ್ಪಿದರೆ ಆಗಬಹುದು ಎಂದು ಹೇಳುತ್ತಿದ್ದರಂತೆ. ಜೋಯಿಸರ ಒಪ್ಪಿಗೆಯಿಂದಲೇ ಆ ಮಗುವಿನ ವಿವಾಹ ನಡೆಯಿತಂತೆ. ಇಂತಹ ಹಲವಾರು ಕಥೆಗಳು ನಮ್ಮ ಮನೆತನದಲ್ಲಿ ಹಿರಿಯರು ತಮ್ಮ ಮೊಮ್ಮಕ್ಕಳಿಗೆ ಈಗಲೂ ಹೇಳುತ್ತಾರೆ.

## ರೆವೆನ್ಯೂ ಅಧಿಕಾರಿಗಳ ಭೇಟಿ

ಒಮ್ಮೆ ದಳಸನೂರಿಗೆ ಹಿರಿಯ ರೆವಿನ್ಯೂ ಅಧಿಕಾರಿಗಳು (ಅಸ್ಸಿಸ್ಟೆಂಟ್

ಕಮೀಷನರ್) ಭೇಟಿ ನೀಡಿದ್ದರು. ಗ್ರಾಮಸ್ಥರೆಲ್ಲಾ ಅವರನ್ನು ಆದರದಿಂದ ಬರಮಾಡಿಕೊಂಡರು. ಆದರೂ ಅಧಿಕಾರಿಗಳು ಬಂದಾಗ ವೇದಾಚಲಯ್ಯನವರು ದೇವರ ಪೂಜೆಯಲ್ಲಿದ್ದುದರಿಂದ ಹೋಗಲಾಗಲಿಲ್ಲ. ಗ್ರಾಮದ ಪಟೇಲರಿಗೂ ವೇದಾಚಲಯ್ಯನವರಿಗೂ ಗಾಢ ಮೈತ್ರಿ ಇದ್ದಿತು. ಪೂಜೆ ಮುಗಿದ ನಂತರ ಪಟೇಲ್ ಭದ್ರೇ ಗೌಡರು ಬಂದು ವೇದಣ್ಣನನ್ನು (ವೇದಾಚಲಯ್ಯನವರ ಬಳಕೆನಾಮ) ಕರೆದುಕೊಂಡು ಹೋಗಿ ಅಧಿಕಾರಿಗಳಿಗೆ ಪರಿಚಯ ಮಾಡಿಕೊಟ್ಟರು – ವೇದಾಚಲಯ್ಯನವರು ಬಹಳ ನಿಷ್ಠಾವಂತರು, ದೈವಭಕ್ತರು, ದೇವರ ಪೂಜೆಯಲ್ಲಿದ್ದುದರಿಂದ ತಡವಾಗಿ ಬರಬೇಕಾಯಿತು ಎಂದು ಹೇಳಿ ಇವರ ಸಾತ್ವಿಕತನವನ್ನು ಪ್ರಶಂಸಿಸಿದರು. ಆದರೆ ಆ ಅಧಿಕಾರಿಗಳ ಮನಸ್ಸಿನಲ್ಲಿ ಇವರು ತಡವಾಗಿ ಬಂದುದು ಕೊರೆಯುತಿತ್ತು. ಪರಸ್ಪರ ಕುಶಲ ಸಂಭಾಷಣೆಯ ನಂತರ ಆ ಅಧಿಕಾರಿಗಳು ವೇದಾಚಲಯ್ಯನವರನ್ನು ಕೆಣಕುವಂತೆ "ಏನು ಸ್ವಾಮೀ ನಿಮ್ಮಂತಹ ಅನೇಕ ದೈವಭಕ್ತರು ಪ್ರತಿದಿನ ಗೋಬ್ರಾಹ್ಮಣರು ಸುಖವಾಗಿರಲಿ ಎಂದು ಪ್ರಾರ್ಥಿಸುತ್ತೀರಾದರೂ ಅದು ಏನೂ ಪರಿಣಾಮ ಬೀರದಲ್ಲ ಏಕೆ?" ಎಂದು ಲಘು ವಾಗಿ ಹೇಳಿದರು. ಕೂಡಲೇ ವೇದಾಚಲಯ್ಯನವರು, "ನಿಜ ಸ್ವಾಮಿ ತಾವು ಹೇಳುವುದು. ತಾವು ಭಗದ್ಭಕ್ತರು ಪ್ರಾರ್ಥನೆಯ ಉತ್ತರಾರ್ಧ ಹೇಳಿದರೇ ವಿನಾ ಪೂರ್ವಾರ್ಧವನ್ನು ಮರೆತಿದ್ದೀರಿ" ಎಂದು ಹೇಳುತ್ತಲೇ ಆ ಅಧಿಕಾರಿಗಳು ಮಾತನ್ನು ಬೇರೆ ಕಡೆಗೆ ತಿರುಗಿಸಿದರು.

## ಅಪರಿಗ್ರಹ ವ್ರತ

ದಳಸನೂರಿನಲ್ಲಿ ಎಲ್ಲರ ಆದರ ಮನ್ನಣೆಗೆ ಪಾತ್ರರಾಗಿದ್ದ ವೇದಾಚಲಯ್ಯನವರು ಯಾರಿಂದಲೂ ಏನೂ ಅಪೇಕ್ಷಿಸುತ್ತಿರಲಿಲ್ಲ ಮತ್ತು ಯಾರನ್ನೂ ಎಂದೂ ಏನೂ ಕೇಳಿದವರಲ್ಲ. ಸ್ವಂತ ಕೃಷಿಯಲ್ಲಿ ನಿರತರಾಗಿದ್ದ ವೇದಾಚಲಯ್ಯನವರು ಸಾಧ್ಯವಾದಷ್ಟೂ ಅಪರಿಗ್ರಹ ವ್ರತವನ್ನೇ ಆಚರಿಸುತ್ತಿದ್ದರು. ಇದನ್ನು ಗ್ರಾಮಸ್ಥರು ಮೆಚ್ಚಲಿಲ್ಲ. ಹಾಸ್ಯ ರೂಪವಾಗಿ ಅವರಿಗೆ ನೀವು ಸತ್ತರೆ ಹೆಣ ಸುಡಲು ಕಟ್ಟಿಗೆ ಸಹ ಕೊಡುವದಿಲ್ಲವೆಂದು ಹೇಳುತ್ತಿದ್ದರು. (ದಳಸನೂರಿನಲ್ಲಿ ಈಗಲೂ ಬ್ರಾಹ್ಮಣರು ಸತ್ತರೆ ಸುಡಲು ಕಟ್ಟಿಗೆಯನ್ನು ಗ್ರಾಮಸ್ಥರೇ ಕೂಡಿ ಹಾಕುತ್ತಾರೆ. ಅನೇಕ ಗ್ರಾಮಗಳಲ್ಲಿ ಈ ಪದ್ಧತಿ ಇದೆ). ಹಾಗೆಯೇ ಆಯಿತು ಸಹ. ವೇದಾಚಲಯ್ಯನವರು ಮತ್ತು ಅವರ ಹೆಂಡತಿಯು ಬೆಂಗಳೂರಿನಲ್ಲಿ ಅವರ

ಮಗ ರಾಮರಾಯರ ಮನೆಯಲ್ಲಿಯೇ ನಿಧನಹೊಂದಿದರು. ಅವರ ಅಂತ್ಯ ಕ್ರಿಯೆಯು ಬೆಂಗಳೂರಿನಲ್ಲಿಯೇ ನಡೆಯಿತು. ಈಗ ದಳಸನೂರಿನಲ್ಲಿ ಶ್ಯಾಮಭಟ್ಟರ ವಂಶದ ವೇದಾಚಲಯ್ಯನವರ ಮೊಮ್ಮಕ್ಕಳು ಮಾತ್ರ ವಾಸವಾಗಿದ್ದಾರೆ. ನಾರಣಪ್ಪ ಮತ್ತು ಶ್ರೀಧರಪ್ಪನ ಪೀಳಿಗೆಯ ಅನೇಕರು ಇಂದು ಬೆಂಗಳೂರು ಮೈಸೂರುಗಳನ್ನು ಸೇರಿ ಅಲ್ಲಿಯೇ ನೆಲಸಿದ್ದಾರೆ.

## ಘಟ್ಟು ಮನೆತನದ ಗುಣ

ನಿರ್ಭಯತೆ ಹಾಗು ಸತ್ಯವನ್ನು ಹೇಳುವದು ಘಟ್ಟು ಮನೆತನಕ್ಕೆ ಬಂದ ಒಂದು ಸುಗುಣ. ಈ ಗುಣಗಳು ವೆಂಕಟನಾರಣಪ್ಪನವರ ನಂತರ ಅವರ ದತ್ತು ಮಗನಾದ ವೇದಾಚಲಯ್ಯ ಮತ್ತು ನಾರಣಪ್ಪ ಮತ್ತು ಶ್ರೀಧರಪ್ಪನವರಲ್ಲಿಯೂ ಕಾಣಬಹುದು. ಹಿರಿಯರಾದ ವೇದಾಚಲಯ್ಯನವರಲ್ಲಿ ಅಣ್ಣ ತಮ್ಮಂದಿರೆಲ್ಲರೂ ಪ್ರೀತಿ ವಿಶ್ವಾಸವನ್ನಿಟ್ಟಿದ್ದರು. ವೇದಾಚಲಯ್ಯನವರ ಮಾತು ಅಣ್ಣ ತಮ್ಮಂದಿರಿಗೆ ವೇದವಾಕ್ಯವೇ ಆಗಿದ್ದಿತು.

ಘಟ್ ಮನೆತನದವರ ಸಾತ್ವಿಕತೆ, ಆಚಾರಶೀಲತೆ, ನಿರ್ಭಯತೆ ಮತ್ತು ಜನೋಪಕಾರಿ ಗುಣಗಳಿಗೆ ಗ್ರಾಮದಲ್ಲಿ "ಘಟ್ಟವರು ನೀವು, ನಿಮ್ಮದು ತಾತನ ಕಾಲದಿಂದ ಹೀಗೆಯೇ" ಎಂದು ಹೇಳುವುದು ಗ್ರಾಮಸ್ತರಲ್ಲಿ ವಾಡಿಕೆಯಾಗಿಹೋಗಿದೆ.


*ಲೇಖಕರು ಘಟ್ಟು ವಂಶದ ಮೂಲ ಹಾಗೂ ಬೆಳವಣಿಗೆಯ ಬಗ್ಗೆ ಸಾಕಷ್ಟು ಅಧ್ಯಯನ ಮಾಡಿರುವವರು*

*ಇತಿಹಾಸಕಾರನು ಇತಿಹಾಸವನ್ನು ವಿವರಿಸುವಾಗ ತನಗರಿವಿಲ್ಲದೆಯೇ ತನ್ನ ಅಭಿರುಚಿಯ ಆಯಾಗಷ್ಟೇ ಮಹತ್ವ ನೀಡಿರುತ್ತಾನೆ. ತನ್ನ ಕಾಲದ ಬದುಕಿನೊಂದಿಗೆ ಗತಕಾಲದ ತುಲನೆ ಮಾಡುತ್ತಿರುವ ಬಗೆಗೆ ಅವನಿಗೆ ಅರಿವಿಲ್ಲದಿದ್ದರೂ ಹಾಗೆ ಆಗಿರುವುದಂತೂ ನಿಜ.*

# ಘಟ್ಟು ವಾಸುದೇವ ರಾವ್

ಜಿ. ವಿ. ಯಜ್ಞಪಾಲ

ಒಂದು ದೇಶವು ಎಲ್ಲಾ ಕ್ಷೇತ್ರಗಳಲ್ಲಿ ಸರ್ವತೋಮುಖ ಅಭಿವೃದ್ಧಿ ಹೊಂದಬೇಕಾದರೆ, ಮೊದಲು ಗ್ರಾಮೀಣ ಪ್ರದೇಶಗಳು ಉನ್ನತಿ ಹೊಂದಬೇಕು ಎಂಬ ನುಡಿಯು ಅನೇಕ ಹಿರಿಯರ ಅನುಭವದ ಮಾತು. ಈ ಅನುಭವದ ಮಾತಿನಂತೆ ಕಳೆದ ನಲವತ್ತು ವರ್ಷಗಳ ಹಿಂದೆಯೇ ಈ ದಿಕ್ಕಿನಲ್ಲಿ ಅಲ್ಪ ಸೇವೆಯನ್ನು ಸಮಾಜಕ್ಕೆ ಸಲ್ಲಿಸಿದವರಲ್ಲಿ ಒಬ್ಬರು ದಿವಂಗತ ಘಟ್ಟು ವಾಸುದೇವರಾವ್.



ಘಟ್ಟು ವಾಸುದೇವ ರಾವ್

ಮಂಡಿಕಲ್ ಘಟ್ಟು ಶ್ರೀನಿವಾಸ ರಾಯರ ಪ್ರಥಮ ಪುತ್ರರಾದ ವಾಸುದೇವರಾಯರು ಪ್ರಜಾವಾಣಿ–ಡೆಕ್ಕನ್ ಹೆರಾಲ್ಡ್ ಪತ್ರಿಕೆಯ ಪತ್ರಿಕೋದ್ಯಮಿಯಾಗಿ ತಮ್ಮ ವೃತ್ತಿಜೀವನವನ್ನು ಆರಂಭಿಸಿದರು. ಪತ್ರಿಕೋದ್ಯಮದ ಜೊತೆ–ಜೊತೆಗೆ ರಾಜಕೀಯ ಕ್ಷೇತ್ರವನ್ನೂ ಇವರು ಪ್ರವೇಶಿಸಿದರು.

ಗ್ರಾಮೀಣಾಭಿವೃದ್ಧಿಯ ಬಗ್ಗೆ ಅಪಾರ ಕಾಳಜಿ ಹೊಂದಿದ್ದ ಇವರು ಕಾಂಗ್ರೆಸ್ ಪಕ್ಷದ ಸಂಪರ್ಕವನ್ನು ಪಡೆದು, ಆ ಪಕ್ಷದ ಮೂಲಕ ಸಮಾಜ ಸೇವೆಯನ್ನಾರಂಭಿಸಿದರು. ತಾಲ್ಲೂಕು ಬೋರ್ಡ್ (ಈಗಿನ ಜಿಲ್ಲಾ ಪಂಚಾಯತಿಗಳಿಗೆ ಸಮಾನ) ಸದಸ್ಯರ ಸ್ಥಾನಕ್ಕೆ ಕಾಂಗ್ರೆಸ್ ಪಕ್ಷದಿಂದ ಕಾರಣಾಂತರಗಳಿಂದ ಅವಕಾಶ ದೊರೆಯದಿದ್ದಾಗ ಸ್ವತಂತ್ರ ಅಭ್ಯರ್ಥಿಯಾಗಿ

ಸ್ಪರ್ಧಿಸಿ ಅತಿ ಹೆಚ್ಚಿನ ಮತಗಳನ್ನು ಪಡೆದು ಜಯಶಾಲಿಗಳಾದರು. ತಾಲ್ಲೂಕು ಬೋರ್ಡ್ ಸದಸ್ಯರಾಗಿ, ರಾಜ್ಯ ಸರ್ಕಾರವು ತಾಲ್ಲೂಕು ಅಭಿವೃದ್ಧಿಗೆ ನೀಡುತ್ತಿದ್ದ ಅನುದಾನವನ್ನು ಸದುಪಯೋಗ ಪಡಿಸಿಕೊಂಡು ವಾಸುದೇವರಾಯರು ತಮ್ಮ ತಾಲ್ಲೂಕಿನ ಅತಿ ಹಿಂದುಳಿದ ಗ್ರಾಮಗಳಾದ ಸಾತನೂರು, ಬಿಸನಹಳ್ಳಿ, ಹೊಸಹಳ್ಳಿ ಮತ್ತು ಕರ್ನಾಟಕದ ಗಡಿಪ್ರದೇಶದ ಅಂಕಿರೆಡ್ಡಿಹಳ್ಳಿಗಳಿಗೆ ಮೂಲಭೂತ ಸೌಲಭ್ಯಗಳನ್ನು ಸರ್ಕಾರದ ವತಿಯಿಂದ ಒದಗಿಸುವಲ್ಲಿ ಯಶಸ್ವಿಯಾದರು.

ಇದರೊಂದಿಗೆ ತಮ್ಮ ಸ್ವಗ್ರಾಮವಾದ ಮಂಡಿಕಲ್ ಗ್ರಾಮಕ್ಕೆ ಪಕ್ಕದ ಹರಪನಾಯಕನಹಳ್ಳಿಯಿಂದ ಮುಡಿಯನೂರಿನವರೆಗೆ, ಮುಡಿಯನೂರಿನಿಂದ ಅಗರ ಗ್ರಾಮದವರೆಗೆ ರಸ್ತೆ ಸಂಪರ್ಕವನ್ನು ಕಲ್ಪಿಸುವಲ್ಲಿ ಯಶಸ್ವಿಯಾದರು. ಹಾಗೆಯೆ ಕೃಷಿ ಅಭಿವೃದ್ಧಿಗೆ ನೀರಾವರಿ ವ್ಯವಸ್ಥೆಯನ್ನು, ಒಂದು ಕೆರೆಯನ್ನು ಹಾಗೂ ಕೆರೆಕಟ್ಟೆಯನ್ನು ಕಟ್ಟಿಸಿದರು. ಇದಲ್ಲದೆ, ಪರಿಶಿಷ್ಟ ಜಾತಿ ಮತ್ತು ಪಂಗಡಗಳ ಬಗ್ಗೆ ಹೆಚ್ಚಿನ ಕಳಕಳಿಯನ್ನು ಹೊಂದಿದ್ದ ವಾಸುದೇವರಾಯರು, ಆ ವರ್ಗದ ಜನರ ಏಳಿಗೆಗಾಗಿ ಶ್ರಮಿಸಿದರು. ಈಗಿನ ಸರ್ಕಾರೇತರ ಸಂಸ್ಥೆಗಳ ಕಲ್ಪನೆಯನ್ನ ಬಹಳ ಹಿಂದೆಯೇ ಹೊಂದಿದ್ದ ಇವರು, ಈಗಿನ ಸರ್ಕಾರದ ಕಾರ್ಯಕ್ರಮಗಳಲ್ಲಿ ಒಂದಾದ ಜಲಾನಯನ ಅಭಿವೃದ್ಧಿ ಹಾಗೂ ಕಾಡುಗಳನ್ನು ಬೆಳೆಸುವ ಕಾರ್ಯವನ್ನು ಚಾಲನೆಗೆ ತಂದಿದ್ದರೆಂಬ ಅಂಶ ಗಮನಾರ್ಹವಾದದ್ದು.

'ವಿದ್ಯಯಾಮೃತಮಶ್ನುತೆ' ಎಂಬ ಉಪನಿಷದ್ ವಾಕ್ಯದಂತೆ, ತಮ್ಮ ಸ್ವಗ್ರಾಮ ಹಾಗೂ ಸುತ್ತಮುತ್ತಲ ಗ್ರಾಮ್ಗಳ ಮಕ್ಕಳು ವಿದ್ಯೆಯನ್ನು ಕಲಿಯಲು ದೂರದ ಮುಳಬಾಗಿಲಿಗೆ ಹೋಗಲು ಅನುಭವಿಸುತ್ತಿದ್ದ ತೊಂದರೆಯನ್ನು ಗಮನಿಸಿ, ಮುಡಿಯನೂರಿನಲ್ಲಿ ಮಹಾತ್ಮ ಗಾಂಧಿ ನ್ಯಾಶನಲ್ ಪ್ರೌಢಶಾಲೆಯ ಪ್ರಾರಂಭಕ್ಕೆ ಸಹಾಯ ಮಾಡಿ ಅನೇಕ ವಿದ್ಯಾರ್ಥಿಗಳು ತಮ್ಮ ಸ್ವಗ್ರಾಮಗಳ ಹತ್ತಿರದಲ್ಲಿಯೇ ಶಿಕ್ಷಣ ಪಡೆಯಲು ಅನುವು ಮಾಡಿಕೊಟ್ಟರು. ಹಾಗೆಯೇ ಜಿಲ್ಲಾ ಸಹಕಾರಿ ಸಂಘವೊಂದನ್ನು ಸ್ಥಾಪಿಸಿ ತಮ್ಮ ಹಾಗೂ ಸುತ್ತಮುತ್ತಲ ಗ್ರಾಮಸ್ಥರಿಗೆ ರಿಯಾಯತಿ ದರದಲ್ಲಿ ಆಹಾರಧಾನ್ಯಗಳು ದೊರೆಯುವಂತೆ ಮಾಡಿದರು.

ವಾಸುದೇವರಾಯರಿಗೆ ರಾಜಕೀಯ ಹಾಗೂ ಪತ್ರಿಕೋದ್ಯಮ ಕ್ಷೇತ್ರಗಳ ಅನೇಕ ಪ್ರಮುಖರ ಪರಿಚಯವಿತ್ತು. ಇವರಲ್ಲಿ ಪ್ರಮುಖರು ಮಾಜಿ ಮುಖ್ಯಮಂತ್ರಿಗಳಾದ ದಿವಂಗತ ವೀರೇಂದ್ರ ಪಾಟೀಲ್ ಮತ್ತು ಶ್ರೀ ರಾಮಕೃಷ್ಣ

ಹೆಗಡೆ, ಈಗಿನ ವಿಧಾನಸಭಾಧ್ಯಕ್ಷರಾದ ಶ್ರೀ ವೆಂಕಟಪ್ಪನವರು ಹಾಗೂ ಅವರ ಅಣ್ಣ ಕೇಂದ್ರ ಸಂಪುಟ ಸಚಿವರಾದ ಎಂ. ವಿ. ಕೃಷ್ಣಪ್ಪನವರು, ಶ್ರೀ ವಿ. ಎಸ್. ಕೃಷ್ಣ ಅಯ್ಯರ್ ಹಾಗೂ ಇನ್ನೂ ಅನೇಕರು.

ಪ್ರಜಾವಾಣಿ ಪತ್ರಿಕೆಯಲ್ಲಿ ಪ್ರಕಟವಾಗುತ್ತಿದ್ದ ಛೂಬಾಣದಿಂದ ಅಂಕಣಕಾರರಾದ ಶ್ರೀ ರಾಮಚಂದ್ರರಾಯರು, ಕನ್ನಡಪ್ರಭ ದಿನಪತ್ರಿಕೆಯ ಮಾಜಿ ಸಂಪಾದಕರುಗಳಾದ ದಿವಂಗತ ಖಾದ್ರಿ ಶಾಮಣ್ಣ ಮತ್ತು ವೈಎನ್ಕೆ, ಸುಧಾ ವಾರಪತ್ರಿಕೆ ಹಾಗೂ ಸೋವಿಯತ್ ದೇಶ ಪತ್ರಿಕೆಗಳ ಸಂಪಾದಕರಾಗಿದ್ದ ಶ್ರೀ ಕಟ್ಟೆ ನಾಗರಾಜ್, ಡೆಕ್ಕನ್ ಹೆರಾಲ್ಡ್ ಪತ್ರಿಕೆಯ ಸುದ್ದಿ ಸಂಪಾದಕರೂ ಭಾರತೀಯ ವಿದ್ಯಾ ಭವನದ ಪ್ರಾಧ್ಯಾಪರೂ ಆಗಿದ್ದ ಶ್ರೀ ಆರ್. ಶೇಷಾದ್ರಿ ಮುಂತಾದ ಹೆಸರಾಂತ ವ್ಯಕ್ತಿಗಳು ವಾಸುದೇವರಾಯರ ಸ್ನೇಹಿತರಾಗಿದ್ದರು.

ತಮ್ಮ ಜೀವಿತದ ಅಲ್ಪ ಸಮಯದಲ್ಲಿಯೇ ಸಾಕಷ್ಟು ಲೋಕಕಲ್ಯಾಣ ಕೆಲಸಗಳನ್ನು ಮಾಡಿದ್ದ ಘಟ್ಟು ವಾಸುದೇವರಾಯರು ೧೯೭೨ರ ಅಕ್ಟೋಬರ್ ೪ರಂದು ರಸ್ತೆ ಅಪಘಾತದಲ್ಲಿ ನಿಧನರಾದರು. ಇದಾದ ೩೦ ವರ್ಷಗಳ ನಂತರವೂ ಅವರು ತಮ್ಮ ತಾಲ್ಲೂಕಿನ ಹಿತಕ್ಕಾಗಿ ಕೈಗೊಂಡಿದ್ದ ಅನೇಕ ಸಮಾಜದ ಕಾರ್ಯಗಳಿಂದ ಜನತೆಯ ನೆನಪಿನಲ್ಲಿ ಉಳಿದಿದ್ದಾರೆ. ಇವರ ಸ್ಮರಣಾರ್ಥ ಇವರ ಧರ್ಮಪತ್ನಿ ಲಲಿತಮ್ಮ ಮತ್ತು ಮಕ್ಕಳು, ಜಿ. ವಾಸುದೇವರಾವ್ ಮೆಮೋರಿಯಲ್ ಟ್ರಸ್ಟನ್ನು ೧೯೯೭ನೇ ಇಸವಿ ಆಗಸ್ಟ್ ೨೩ರಂದು ಸ್ಥಾಪಿಸಿ, ಅಂತರ ಪ್ರೌಢಶಾಲಾ ಚರ್ಚಾ ಸ್ಪರ್ಧೆಗಳ ಕಾರ್ಯಕ್ರಮವನ್ನು ಪ್ರಾರಂಭ ಮಾಡಿದರು. ಗ್ರಾಮೀಣ ಪ್ರದೇಶದ ವಿದ್ಯಾರ್ಥಿಗಳಲ್ಲಿ ಅಡಗಿರುವ ಪ್ರತಿಭೆಗಳನ್ನು ಗುರುತಿಸಿ ಪ್ರೋತ್ಸಾಹಿಸುವುದೇ ಈ ಟ್ರಸ್ಟಿನ ಮೂಲ ಉದ್ದೇಶ. ಈ ನಿಟ್ಟಿನಲ್ಲಿ ಕಳೆದ ಐದು ವರ್ಷಗಳಿಂದ ಮುಳಬಾಗಿಲು ಮತ್ತು ಸುತ್ತಮುತ್ತಲಿನ ತಾಲ್ಲೂಕುಗಳ ೧೦-೧೧ ಶಾಲೆಗಳ ವಿದ್ಯಾರ್ಥಿಗಳು ಈ ಕಾರ್ಯಕ್ರಮದಲ್ಲಿ ಭಾಗವಹಿಸುತ್ತಿದ್ದಾರೆ. ಸ್ಪರ್ಧಾ ವಿಜೇತರಿಗೆ ನಗದು ಪುರಸ್ಕಾರಗಳನ್ನು ಹಾಗೂ ಪ್ರಮಾಣ ಪತ್ರಗಳನ್ನು ನೀಡಿ ಗೌರವಿಸಲಾಗುತ್ತಿದೆ. ಹಾಗೆಯೇ ಮುಂಬರುವ ವರ್ಷಗಳಲ್ಲಿ ಟ್ರಸ್ಟಿನ ವತಿಯಿಂದ, ವಿವಿಧ ಕ್ಷೇತ್ರಗಳಲ್ಲಿ ಸಾಧನೆಗೈದು ಯಶಸ್ಸು ಹೊಂದಿದ ಕೋಲಾರ ಜಿಲ್ಲೆಯ ಪ್ರತಿಭೆಗಳನ್ನು ಪುರಸ್ಕರಿಸುವ ಯೋಜನೆಯನ್ನು ಹಮ್ಮಿಕೊಳ್ಳಲಾಗಿದೆ.

***ಲೇಖಕರು ಘಟ್ಟು ವಾಸುದೇವರಾಯರ ಚತುರ್ಥ ಪುತ್ರ.***

# ಘಟ್ಟು ವಂಶಸ್ಥರ ನೆಲೆಗಳು

ಕೆ.ಆರ್. ನರಸಿಂಹನ್

*ತಲೆಯಿಂದ ತಲೆಗೆ ಪೀಳಿಗೆಯಿಂದ ಪೀಳಿಗೆಗೆ।*
*ಅಲೆಯಿಂದ ಅಲೆಗೆ ಟಪ್ಪೆಯ ಚಾರನಂತೆ॥*
*ಇಳಿಯುತಿದೆ ಯುಗದಿಂದ ಯುಗಕೆ ಮಾನವಧರ್ಮ।*
*ನೀಲದಮೃತಧಾರೆಯದು॥*

**– ಡಿ.ವಿ.ಜಿ.**

ಕಾಲದ ಗಣನೆಯನ್ನು ತಿಳಿಸುವ ಗಡಿಯಾರದಲ್ಲಿ ಗಂಟೆಯ ಮುಳ್ಳು ಮುಂದೆ ಹೋಗಿರುವುದು ಒಂದು ಗಂಟೆಯ ನಂತರವಷ್ಟೆ ನಮ್ಮ ಗಮನಕ್ಕೆ ಬರುತ್ತದೆ. ಒಂದು ತಲೆಮಾರು ಅಥವಾ ಒಂದು ಪೀಳಿಗೆಯು ಸಾಗಿಬಂದ ಹಾದಿಯೂ ಸಹ ಅದು ಸವೆದ ಬಳಿಕವೇ ಸ್ಪಷ್ಟವಾಗಿ ಗೋಚರಿಸುತ್ತದೆ. ಯಾವುದೇ ವಂಶದ ದೊಡ್ಡಮನುಷ್ಯರು ಮೂಡಿಸಿದ ಹೆಜ್ಜೆಯ ಗುರುತನ್ನು ಮುಂದಿನವರು ಅನುಸರಿಸುವುದು ಪದ್ದತಿಯಾಗಿ ಬೆಳೆದುಬಂದಿದೆ. ಪರಂಪರೆಯೊಂದನ್ನು ನಿರ್ಮಾಣ ಮಾಡುವ ಈ ಕಾರ್ಯ ಮಾನವಧರ್ಮವು ಹೌದೆನ್ನಬೇಕು.

ಆಧುನಿಕತೆ ಬೆಳೆದ ಹಾಗೆಲ್ಲಾ ಮಾನವನ ವಿಚಾರ ಚಿಂತನೆಗಳು ಬದಲಾಗುತ್ತ ಸಾಗಿವೆ. ಹೊಸ ಹೊಸ ಆವಿಷ್ಕಾರಗಳು ರೂಪಗೊಂಡಿವೆ. ವಿಜ್ಞಾನ–ತಂತ್ರಜ್ಞಾನಗಳ ಹಿನ್ನೆಲೆಯಲ್ಲಿ ನೂತನ ಶಾಸ್ತ್ರಗಳು ಪ್ರಕಟಗೊಂಡಿವೆ. ಇತಿಹಾಸ ಮನೋವಿಜ್ಞಾನಗಳೊಂದಿಗೆ ಖಗೋಳಶಾಸ್ತ್ರ, ಭೌತಶಾಸ್ತ್ರಗಳು ಬೆಳಕು ಕಂಡಿವೆ. ತಮ್ಮೊಂದಿಗೇ ಮುಗಿಯಬಾರದ ಪ್ರಮುಖ ವಿಚಾರಗಳನ್ನು ಮುಂದಿನ ಪೀಳಿಗೆಯವರಿಗಾಗಿ ರಕ್ಷಿಸಿಡಬೇಕೆಂಬ ಹಂಬಲ–ತುಡಿತಗಳು ಮಾನವರಲ್ಲಿ ಜಾಗೃತಗೊಂಡಿವೆ. ಇದರದ್ದೊಂದು ಕಾರಣದಿಂದಾಗಿ ರೂಪುಗೊಳ್ಳುತ್ತಿರುವ

ಘಟ್ಟುವಂಶದ ಚರಿತ್ರೆಯ ಗ್ರಂಥಸರಪಳಿಗೆ ಕೊಂಡಿಯೊಂದನ್ನು ಸೇರಿಸುವ ಪ್ರಯತ್ನವಿಲ್ಲಿದೆ.

ವಂಶವೊಂದರ ಹಿನ್ನೆಲೆಯಲ್ಲಿ ಆಯಾ ಪ್ರದೇಶದ ಮಣ್ಣಿನ ಗುಣವೂ ಬೆರೆತುಕೊಂಡಿರುವುದು ಸಹಜ. ಘಟ್ಟುವಂಶಕ್ಕೆ ಸಂಬಂಧಪಟ್ಟ ಹಾಗೆ ನೋಡುವುದಾದರೆ, ಈ ವಂಶದ ಶಾಖೆಗಳು ಹರಡಿರುವ ಎರಡು ಗ್ರಾಮಗಳ ಮಧ್ಯೆ ಇತಿಹಾಸದ ಎಳೆಯನ್ನು ಬಿಡಿಸಿ ನೋಡುವುದು ಪ್ರಸ್ತುತ ಸಂದರ್ಭದಲ್ಲಿ, ಅಪ್ರಸ್ತುತವಾಗಿರಬಹುದು. ಇಲ್ಲಿ ಮುಖ್ಯವಾಗಿ ದಳಸನೂರನ್ನು, ಆ ನಂತರ ಮಂಡಿಕಲ್ ಗ್ರಾಮವನ್ನು ವಿವೇಚನೆಗೆ ತೆಗೆದುಕೊಳ್ಳಲಾಗಿದೆ. ಸಾಂದರ್ಭಿಕವಾಗಿ ವೆಲಗಲಬುರ್ರೆಯನ್ನು ಸಂಬಂಧದ ಬೆಸುಗೆಯ ಕಾರಣಕ್ಕಾಗಿ ಗಮನಕ್ಕೆ ತೆಗೆದುಕೊಳ್ಳಲಾಗಿದೆ.

ದಳಸನೂರು, ಶ್ರೀನಿವಾಸಪುರ ತಾಲ್ಲೂಕಿಗೆ ಸೇರಿದ ಒಂದು ಗ್ರಾಮ. ಕೋಲಾರ – ಶ್ರೀನಿವಾಸಪುರ ಮಾರ್ಗದ ಮುಖ್ಯರಸ್ತೆಯಿಂದ ಒಳಗಡೆಗೆ ಸುಮಾರು ಒಂದೂವರೆ ಕಿಲೋಮೀಟರ್ ದೂರ ಸಾಗಿ ಇಲ್ಲಿಗೆ ತಲುಪಬಹುದು. ಇಲ್ಲಿನ ಸ್ಥಳನಾಮದ ವಿವೇಚನೆ ಕುತೂಹಲ ಕಾರಿಯಾದುದು. ದಳ ಎಂಬುದಕ್ಕೆ ಸೈನ್ಯವೆಂದೂ, ತುಳಸಿಯ ದಳವೆಂದು ಸಾಮಾನ್ಯರ್ಥ ಕಲ್ಪಿಸಬಹುದು. ಇಂತಹ ಅರ್ಥಗಳು ರಾಜಕೀಯ ನೈಪುಣ್ಯತೆಯನ್ನು ಆಧ್ಯಾತ್ಮಿಕ ಅನುಭವವನ್ನು ಮೂಡಿಸುವುದಾದರೆ ಅದೊಂದು ಅರ್ವಾಚೀನ ಬೆಳೆವಣಿಗೆಯೆಂಬುದಾಗಿ ಪರಿಭಾವಿಸಬೇಕಾದೀತು. ಅದರೆ ಸೂಕ್ಷ್ಮಾವಲೋಕನದ ಮನಸ್ಸಿಗೆ ಬೇರೆಯದೇ ಆಗಿದೆ.

ಒಂದು ಸ್ಥಳದ ಅಧ್ಯಯನವು ಅಲ್ಲಿ ಲಭ್ಯವಾಗುವ ಸಾಮಗ್ರಿಯನ್ನವಲಂಬಿಸಿರುತ್ತದೆ. ಪುರಾತತ್ತ್ವ ಶೋಧನೆಯು ಪ್ರಾಚೀನವಾದ ಸಂಗತಿಗಳನ್ನು ತಿಳಿಸಿಕೊಡುತ್ತದೆ. ಇದಕ್ಕೆ ಮುಖ್ಯವಾದ ಸಾಧನಗಳೆಂದರೆ ಶಾಸನಗಳು, ಕೋಟೆಕೊತ್ತಲಗಳು, ಸ್ಮಾರಕಗಳು, ನಾಣ್ಯಗಳು ಇತ್ಯಾದಿ. ದಳಸನೂರಿನಲ್ಲಿರುವ ಮೂರು ಪ್ರಮುಖವಾದ ಶಾಸನಗಳಲ್ಲಿ ಒಂದು ಕನ್ನಡ ಭಾಷೆಯಲ್ಲಿದ್ದು ಮತ್ತೆರಡು ತಮಿಳು ಭಾಷೆಯ ಲಿಪಿಗಳಲ್ಲಿವೆ. ಇಲ್ಲಿರುವ ಕನ್ನಡದ ಶಾಸನದ ಕಾಲವನ್ನು ಹದಿನೆಂಟನೆಯ ಶತಮಾನವೆಂದು ಗ್ರಹಿಸುವುದಾದರೆ, ತಮಿಳು ಶಾಸನದಲ್ಲಿ ಒಂದು ಹನ್ನೊಂದನೇ ಶತಮಾನಕ್ಕೂ ಇನ್ನೊಂದು ಹನ್ನೆರಡನೆಯ ಶತಮಾನಕ್ಕೂ ಸೇರಿವೆ.

ಕೋಲಾರ ಜಿಲ್ಲೆಯ ಜಾನಪದ ಉತ್ಸವಗಳಲ್ಲಿ ಕರಗಕ್ಕೆ ವಿಶೇಷವಾದ ಪ್ರಾಶಸ್ತ್ಯವಿದ್ದು ಇದನ್ನು ಚೈತ್ರ – ವೈಶಾಖ ಮಾಸಗಳಲ್ಲಿ ಆಚರಿಸುತ್ತಾರೆ, ಅಂದರೆ–ಏಪ್ರಿಲ್ ಮೇ ತಿಂಗಳುಗಳಲ್ಲಿ ಇದು ನಡೆಯುತ್ತದೆ. ಇಂತಹ ಕರಗದ ಆಚರಣೆಗಾಗಿ ಜಮೀನು ಮಾನ್ಯ ನೀಡಿರುವ ವಿಷಯವು ಕನ್ನಡದ ಶಾಸನದಲ್ಲಿದೆ. ಇದರಲ್ಲಿ ಊರಿನ ಹೆಸರು ದಳಸನೂರು ಎಂದಿದೆ. ಇದರಿಂದಾಗಿ ಹದಿನೆಂಟನೇ ಶತಮಾನದ ವೇಳೆಗೆ ದಳಸನೂರು ಎಂಬ ಹೆಸರು ಪ್ರಚಲಿತವಿದ್ದುದಾಗಿ ತಿಳಿದು ಬರುತ್ತದೆ.

ದಳಸನೂರಿನಲ್ಲಿರುವ ಎರಡು ತಮಿಳು ಶಾಸನಗಳನ್ನು ಚೋಳರಾಜರ ಆಳ್ವಿಕೆಯ ಕಾಲದ್ದು ಎಂದು ನಂಬಲಾಗಿದೆ. ಇವುಗಳಲ್ಲೊಂದು ರಾಜೇಂದ್ರ ಚೋಳನ ಕಾಲಕ್ಕೆ ಸೇರಿದ್ದಾಗಿದೆ (ಸುಮಾರು ಕ್ರಿ.ಶ. ೧೦೩೦). ಇದು ಅಸಮಗ್ರವೂ ಅಸ್ಪಷ್ಟವೂ ಆಗಿದ್ದು ಹೆಚ್ಚಿನ ಸುಳಿವನ್ನೇನನ್ನೂ ನೀಡುವುದಿಲ್ಲ. ಮತ್ತೊಂದು ಶಾಸನವು ಕುಲೋತ್ತುಂಗ ಚೋಳನ ಮಗನಾದ ವಿಕ್ರಮ ಚೋಳನ ಹತ್ತನೆಯ ವರ್ಷದ ಆಳ್ವಿಕೆಯ ಕಾಲದ್ದು (ಸುಮಾರು ಕ್ರಿ.ಶ. ೧೧೨೭). ದಳಸನೂರಿಗೆ ಸಂಬಂಧಿಸಿದ ಇದರಲ್ಲಿನ ಹಲವಾರು ಅಂಶಗಳು ವಿಚಾರಾರ್ಹವೆಂದು ಹೇಳಬಹುದು.

ನೀಲಗಿರಿ ಚೋಳಮಂಡಲವೆಂಬುದು ಚೋಳರ ಕಾಲದಲ್ಲಿ ಕೋಲಾರ ಜಿಲ್ಲೆಯ ಪ್ರಮುಖ ಪ್ರದೇಶಕ್ಕಿದ್ದ ಹೆಸರು. ಇದರಲ್ಲಿನ ಪುದನಾಟ್ಟು ಎಂಬ ನಾಡನ್ನು ಮಾರನ್ ಎಂಬ ಮಾಂಡಲಿಕನು ಆಳುತ್ತಿದ್ದನು. ಇವನ ಮತ್ತೊಂದು ಹೆಸರು ಬಾಣ ವಿದ್ಯಾಧರ. ಇವನ ತಂದೆ ರಾಜೇಂದ್ರ ಚೋಳ ಪುದನಾಟ್ಟ ಮಾಂಡುಲಿಕನ್ ಎರುತ್ತಿಲನ್. ತಿಲದನೂರ ದೊಡ್ಡಕೆರೆ ಕೆಳಗಿನ ಅರಣ್ಯವನ್ನು ಸ್ವಚ್ಛ ಮಾಡಿ ಸಾಗುವಳಿಗೆ ವಿಂಗಡಿಸಿ ಜಮೀನನ್ನು ತಿಲದನೂರಿನ ಬ್ರಾಹ್ಮಣರಿಗೆ ವಾಣ ವಿದ್ಯಾಧರ – ಬಾಣ ವಿದ್ಯಾಧರನು ಮಾನ್ಯವಾಗಿ ನೀಡಿದನು. ಇದು ಈ ಊರಿನ ಅಂಕಕ್ಕಾರೀಶ್ವರ ಮಹಾದೇವರ ಕೈಂಕರ್ಯಗಳಿಗಾಗಿ ನೀಡಿದ ದೇವದಾನ. ಈ ಕಾರ್ಯಕ್ಕೆ ನಾಡಗಾವುಂಡನ ಒಪ್ಪಿಗೆಯೂ ದೊರೆತಿರುವುದನ್ನು ಈ ಶಾಸನದಿಂದ ತಿಳಿಯಬಹುದು.

ಇಲ್ಲಿನ ಶಾಸನವು ಉಲ್ಲೇಖಿಸಿರುವ ಹೆಸರುಗಳು ಗಮನಾರ್ಹವಾದವು. ಬಾಣವಿದ್ಯಾಧರನೊಂದಿಗೆ ಇಲ್ಲಿ ಉಕ್ತವಾಗಿರುವ ಎರುತ್ತಿಲನ್ ಎಂಬ ವ್ಯಕ್ತಿ ನಮ್ಮ ಗಮನ ಸೆಳೆಯುತ್ತಾನೆ. ತಿಲದನೂರಿನ ಮುಖ್ಯ ಪ್ರೇರಕನಾಗಿ ಈತನನ್ನು

ಗುರುತಿಸಬಹುದು. 'ತಿಲ'ಎಂಬ ಪದವೇ ಕಾಲಾನಂತರದಲ್ಲಿ ರೂಪವ್ಯತ್ಯಾಸಗೊಂಡು 'ದಳ' ಎಂದಾಗಿರುವುದು. ನಮ್ಮ ಭಾಷೆಯಲ್ಲಿ ವರ್ಗದ ಮೊದಲನೆಯ ಅಕ್ಷರಗಳು ಮೂರನೆ ಅಕ್ಷರದ ರೂಪವನ್ನು ತಾಳುತ್ತವೆ. ಕ, ಪ, ಪ, ಲ ಅಕ್ಶರಗಳು ಕ್ರಮವಾಗಿ ಗ, ಬ, ಹ ಮತ್ತು ಳ ಆಗುವುದು. ಇದರಂತೆಯೇ 'ತಿಲ' ಎಂಬುದು 'ದಳ' ಎಂದು ಆಗಿರುವುದಕ್ಕೆ ಸಾಧ್ಯವಿದೆ.

ದಳಸನೂರಿಗೆ ಬಾಣ, ಗಂಗ, ಚೋಳ ವಂಶಗಳ ಸಂಬಂಧ ವಿದ್ದಿರಬೇಕು. ಇವರಲ್ಲಿ ಬಾಣರು ಶ್ರೀನಿವಾಸಪುರ ತಾಲ್ಲೂಕಿನ ಉತ್ತರ ಮತ್ತು ಪೂರ್ವ ದಿಕ್ಕಿನ ಗಡಿಭಾಗಕ್ಕೆ ಹೊಂದಿಕೊಂಡ ಪುಲಿನಾಡನ್ನು ಆಳುತ್ತಿದ್ದರು. ಗಂಗರ ಕಾಲದ ಕೆಲವು ಶಾಸನಗಳು ಹೆಬ್ಬಟದಲ್ಲಿವೆ. ಬಾಣ ನೊಳಂಬರಲ್ಲಿ ಉಂಟಾದ ಘರ್ಷಣೆಗಳಿಗೆ ಮುಖ್ಯಸೇತುವಾಗಿ ನಿಂತಿದ್ದವರು ಗಂಗರು. ಗಂಗರ ನಾಡು ಕೋಲಾರ ನಾಡು. ಬಾಣರು, ನೋಳಂಬ–ಚೋಳ ಮನೆತನಗಳ ತುಳಿತಕ್ಕೆ ಒಳಗಾಗಿ ಕೋಲಾರ ನಾಡಿನಿಂದ ಹೊರಗುಳಿದರು. ಆದರೂ ಇವರ ಸಾಂಸ್ಕೃತಿಕ ಸಂಬಂಧ ಬಹಳ ಕಾಲದವರೆಗೆ ಉಳಿದಿತ್ತೆಂಬುದನ್ನು ದಳಸನೂರಿನ ಮೂಲ ಹೆಸರಿನಿಂದ ಅರಿತುಕೊಳ್ಳಬಹುದು. ವ್ಯಕ್ತಿಗಳಿಗೆ ಸಲ್ಲುತ್ತಿದ್ದ ಗೌರವ ಒಂದು ಊರಿನ ಇಲ್ಲವೆ ಅಲ್ಲಿನ ಯಾವುದಾದರೂ ಪ್ರಸಿದ್ಧ ಸ್ಥಳಗಳ ಮೂಲಕ ಇಂದಿಗೂ ಪ್ರತಿಧ್ವನಿಸುತ್ತದೆ.

ಕೋಲಾರ–ಚಿಂತಾಮಣಿ ರಸ್ತೆಯಲ್ಲಿ ಮುಖ್ಯರಸ್ಥೆಯಿಂದ ಒಂದೂವರೆ ಕಿಲೋಮೀಟರ್ ದೂರದಲ್ಲಿರುವ ಗ್ರಾಮ ವೆಲಗಲಬುರ್ರೆ. ಘಟ್ಟುವಂಶಸ್ಥರ ಪ್ರಮುಖ ಸಂಬಂಧವನ್ನು ಈ ಊರಿನ ಕುಟುಂಬದೊಂದಿಗೆ ಗುರುತಿಸಿರುವುದು ತಿಳಿದ ವಿಚಾರವಾಗಿದೆ. ತೆಲುಗಿನ 'ವೆಲುಗ' ತಮಿಳಿನ 'ವಿಳಕ್ಕ'ಕ್ಕೆ ಸಮೀಪವಾಗಿದ್ದು ಬೆಳಕು ಎಂಬ ಅರ್ಥವಿದೆ. 'ಬುರ್ರೆ' ಎಂಬುದಕ್ಕೆ ತೆಲುಗಿನ ಅರ್ಥ ತಲೆಬುರುಡೆ; ಎಂದರೆ ಬೆಳಕಿನ ಬುರುಡೆ ಎಂದು.

ಬಾಣರ ಕಾಲದ ವೀರಗಲ್ಲುಗಳನ್ನು ಗಮನಿಸಿದವರಿಗೆ ಬಿಲ್ಲುಗಾರರ ಸಾಮರ್ಥ್ಯ ಮನದಟ್ಟಾಗುತ್ತದೆ. ಇಂತಹ ಬಿಲ್ಲುಗಾರನೊಬ್ಬನ ಹೆಸರನ್ನು ವೆಲಗಲಬುರ್ರೆ ಧರಿಸಿರುವುದು ಇತಿಹಾಸದ ಮಹತ್ವಕ್ಕೆ ತೊಡಿಸಿದ ಕಿರೀಟ. ಇದರ ಅರಿವಿನಿಂದ ನಮ್ಮ ಬುದ್ಧಿಯ ಬೆಳಕು ಪ್ರಜ್ವಲಿಸಬಹುದು.

ಕೋಲಾರ ಜಿಲ್ಲೆಯ ಮುಳಬಾಗಿಲು ಮತ್ತು ಇಲ್ಲಿನ ಸುತ್ತಮುತ್ತಲ

ಸ್ಥಳಗಳು ತಮ್ಮದೇ ಆದ ವಿಶಿಷ್ಟ ಸ್ಥಾನವನ್ನು ಪಡೆದಿವೆ. ಆವಣಿ, ಕುರುಡಮಲೆ, ಗುಡಿಪಲ್ಲಿ, ಬಲ್ಲ, ವಿರೂಪಾಕ್ಷಿ ಹೀಗೆ ಈ ತಾಲ್ಲೂಕಿನ ಐತಿಹಾಸಿಕ ಮಹತ್ವಸ್ಥಳಗಳ ಪಟ್ಟಿಯನ್ನು ಬೆಳೆಸಬಹುದು. ಇದಕ್ಕೊಂದು ಸೇರ್ಪಡೆ ಮಂಡಿಕಲ್ಲು. **ಘಟ್ಟು ವಂಶದವರೊಂದಿಗೆ ಮಂಡಿಕಲ್ ಗ್ರಾಮವು ಹೊಂದಿರುವ ಸಂಬಂಧ ಅಜರಾಮರವಾದುದ್ದು.**

ಮಂಡಿಕಲ್ಲು ಎಂಬುದರ ನಿಷ್ಪತ್ತಿ ಸ್ವಲ್ಪ ತೊಡಕಿನದೂ ಹೌದು. ಇಲ್ಲಿರುವ ಎರಡು ಪದಗಳು 'ಮಂಡಿ' ಮತ್ತು 'ಕಲ್ಲು'ಗಳ ಹಿಂದಿನ ರೂಪ 'ಮಣ್ಣಿ'ಎಂದೋ 'ಮನ್ದು' ಎಂದೋ ಇದ್ದಿರಬೇಕು. ಮಣ್ಣೂರು, ಮನ್ದೂರುಗಳು ಶಾಸನೋಕ್ತವಾದ ಹೆಸರುಗಳಾಗಿವೆ. ಈ ಶಾಸನಗಳಗಳನ್ನು ಸಹ ನಾವಿಂದು ಮಂಡಿಕಲ್ ನ ಸುತ್ತಮುತ್ತಲ ಹಳ್ಳಿಗಳಲ್ಲಿ ನೋಡಬಹುದಾಗಿದೆ. ಬಿಸನಹಳ್ಳಿ, ಗುಜ್ಜನಹಳ್ಳಿ, ದುಗ್ಗಸಂದ್ರ, ತಾವರೆಕೆರೆ, ಹರಪನಾಯಕನಹಳ್ಳಿಗಳನ್ನು ತನ್ನ ವರ್ತಲದಲ್ಲಿ ಹೊಂದಿರುವ ಮಂಡಿಕಲ್ಲು ಕೇಂದ್ರಸ್ಥಳದಲ್ಲಿದೆ. ಈ ಗ್ರಾಮದ ಇತಿಹಾಸವು ಸಾವಿರವರ್ಷಗಳ ಹಳಮೆಯನ್ನು ಸಾರುತ್ತದೆ.

'ಮಂಡಿಕಲ್ಲ ಊರಳಿವು' ಎಂಬ ಶಾಸನಪದದಿಂದ ಮಂಡಿಕಲ್ಲಿನ ಏಳುಬೀಳುಗಳನ್ನು ಅರಿತುಕೊಳ್ಳಬಹುದು. ಇಲ್ಲಿನ ಕೆರೆ – ಕುಂಟೆಗಳು, ರಸ್ತೆಗಳು ಹಾಳಾಗಿ ಕಲ್ಲಿನ ಹಾದಿಗೆ ಕಾರಣವಾದ ವಸ್ತುಗಳಾಗಿವೆ. ನಾವು ಏನನ್ನು ಉಳಿಸಿಕೊಂಡಿದ್ದೇವೆ ಎಂಬುದನ್ನು ಮಂಡಿಕಲ್ಲನ್ನು ದರ್ಶನ ಮಾಡಿದವರಿಗೆ ಯಾರಿಗಾದರೂ ಭಾಸವಾಗುತ್ತದೆ. **ಅಳಿವಿನಿಂದ ಉಳಿವಿನ ಹಾದಿ ಹಿಡಿದು ಈ ಸ್ಥಳದ ಅವಲೋಕನ ಮಾಡಿದವರಿಗೆ ಮಂಡಿಕಲ್ಲು ಕೇವಲ ಕಲ್ಲುಬಂಡೆಯಾಗದೆ ಅದರ ಪದರಗಳಲ್ಲೆಲ್ಲೊ ಹೊನ್ನಿನ ಹೊಳಹನ್ನು ಹೊಂದಿದ್ದಿರಬಹುದೆನ್ನಿಸುತ್ತದೆ.**

ಅವತಾರಗಳೆತ್ತಿ ನಿಂದಿಹನು! ದೇವತ್ವಚಿರ।<br>
ಜಾವದಿನಬಂದುಹೋಗುವುವು ಕಾಲಚಿರ॥<br>
ಜೀವದ ವ್ಯಕ್ತಿ ಸಾಯ್ವುದಾ; ಜೀವಸತ್ವಚಿರ।<br>
ಭಾವಿಸಾಕೇವಲವ – ಮಂಕುತಿಮ್ಮ॥

***ಲೇಖಕರು ಗದಗ ಜಿಲ್ಲೆಯ ಶಿರಹಟ್ಟಿಯ ಸರ್ಕಾರಿ ಪ್ರಥಮದರ್ಜೆ ಕಾಲೇಜಿನಲ್ಲಿ ಪ್ರಾಚಾರ್ಯರು***

# ಹಳೆಮನೆ ಚರಿತ್ರೆ

ಡಿ. ವಿ. ಶ್ಯಾಮರಾವ್

ದಳಸನೂರು ಗ್ರಾಮದಲ್ಲಿ ಪ್ರಮುಖರಾಗಿದ್ದ ಸುಬ್ಬಯ್ಯನವರ ಮಗ ಶ್ಯಾಮಣ್ಣನವರು ಶ್ಯಾನುಭೋಗರಾಗಿ ಬಹಳ ವರ್ಷಗಳ ಕಾಲ ಇದ್ದು ಅನೇಕ ಜನೋಪಕಾರ ಕಾರ್ಯಗಳನ್ನು ಮಾಡಿ ದೈವ ಭಕ್ತರಾಗಿದ್ದರು. ಇವರ ಜನೋಪಯೋಗ ಕಾರ್ಯಗಳು ಸರ್ವ ಧರ್ಮೀಯರಿಗೂ ಮಾದರಿಯಾಗಿತ್ತು. ಇವರ ಮನೆಯಲ್ಲಿ ನಡೆಯುತ್ತಿದ್ದ ಅನ್ನದಾನ ಕಾರ್ಯಕ್ರಮಗಳು ಇಂದಿಗೂ ಅವಿಸ್ಮರಣೀಯ. ಶ್ರೀಯುತ ಸುಬ್ಬಯ್ಯನವರ ಮಗ ಶ್ಯಾಮಣ್ಣನವರು ಭಾರದ್ವಾಜ ಗೋತ್ರದವರು. ಇವರನ್ನು ಹಳೆಮನೆ ಶ್ಯಾನುಭೋಗ ಶ್ಯಾಮಣ್ಣನೆಂದು ಕರೆಯುತ್ತಿದ್ದು ಸುತ್ತಮುತ್ತಲಿನ ಗ್ರಾಮಗಳಲ್ಲಿ ಮತ್ತು ಸರ್ಕಾರದಲ್ಲಿ ಪ್ರಭಾವಶಾಲಿಗಳಾಗಿದ್ದರು. ಅವರ ಜನಾನುರಾಗ ಕಾರ್ಯಗಳು ಈಗಲೂ ಕರ್ಣಾಕರ್ಣಿಯಾಗಿ ಉಳಿದಿದೆ. ಇವರು ಮಾಡಿದ ಜನೋಪಕಾರಿ ಕಾರ್ಯಗಳಲ್ಲಿ ವೇಣುಗೋಪಾಲ ಸ್ವಾಮಿ ಮಂದಿರ ನಿರ್ಮಾಣವೂ ಒಂದು. ೧೮೭೫ ರಲ್ಲಿ ಈ ಗ್ರಾಮಕ್ಕೆ ಅಚಾನಕ್ ಒಮ್ಮೆ ಜಿಲ್ಲಾಧಿಕಾರಿಗಳು ಜಮಾಬಂದಿ ನಡೆಸಲು ಬಂದಿದ್ದರು. ಅವರನ್ನು ಗ್ರಾಮಸ್ಥರು ಶ್ಯಾಮಣ್ಣನವರ ಮುಂದಾಳತ್ವದಲ್ಲಿ ಆಗ್ಗೆ ಆ ಊರಿನಲ್ಲಿ ವೀರಭದ್ರೇಶ್ವರ ಸ್ವಾಮಿ(ಶಿವ) ದೇವಾಲಯಕ್ಕೆ ಕರೆದುಕೊಂಡು ಹೋಗಿ ಬಿಡಾರ ಹೂಡಿಸಿದರು. ಜಮಾಬಂದಿಯೆಲ್ಲಾ ಮುಗಿದನಂತರ ಖಾವಂದರು ಶ್ಯಾಮಣ್ಣನವರನ್ನು ಕುರಿತು, "ಶ್ಯಾಮಣ್ಣನವರೇ ಈ ಊರಿನಲ್ಲಿ ಒಂದು ವಿಷ್ಣು ದೇವಾಲಯವನ್ನು ಸ್ಥಾಪಿಸಿ. ಅದಕ್ಕೆ ಬೇಕಾಗುವ ಎಲ್ಲಾ ಅನುಕೂಲಗಳನ್ನು ಮಾಡಿಸಿ ಕೊಡುತ್ತೇನೆ" ಎಂದರಂತೆ. ಇದನ್ನು ಶ್ಯಾಮಣ್ಣನವರಿಂದ ಅರಿತ ಗ್ರಾಮಸ್ಥರು ವೇಣುಗೋಪಾಲ ಸ್ವಾಮಿ ದೇವಾಲಯವನ್ನು ಸ್ಥಾಪಿಸಲು ಒಮ್ಮತ ಬೆಂಬಲ ಸೂಚಿಸಿದರು. ಹಾಲಿ ಗ್ರಾಮದಲ್ಲಿರುವ ವೇಣುಗೋಪಾಲ ಸ್ವಾಮಿ ದೇವಸ್ಥಾನವನ್ನು ಶ್ಯಾಮಣ್ಣನವರ ಆಸ್ಥೆ ಮತ್ತು ಗ್ರಾಮಸ್ಥರ ಉತ್ಸಾಹದಿಂದ ನಿರ್ಮಿತವಾಯಿತು. ಈ ದೇವಸ್ಥಾನಕ್ಕೆ

ಬೇಕಾದ ದತ್ತಿ ದಾನಗಳನ್ನು ಶ್ಯಾಮಣ್ಣನವರು ಮಾಡಿಕೊಟ್ಟರಂತೆ. ವೇಣುಗೋಪಾಲಸ್ವಾಮಿಯ ದೇವಾಲಯದ ಪೂಜಾರಿಗೆ ಇವರು ಖುಷ್ಕೀ ಜಮೀನು, ಹುಣಸೇಮರ ಮಾನ್ಯವಾಗಿ ಬಿಟ್ಟುಕೊಟ್ಟಿರುತ್ತಾರೆ. ಈವರೆಗೂ ಇವು ಪ್ರಸ್ತುತ ಅರ್ಚಕರಾಗಿರುವ ರಾಮಾಚಾರ್ಯರ ಮಗ ಶ್ರೀನಿವಾಸಮೂರ್ತಿಯವರ ಹಿಡುವಳಿಯಲ್ಲಿದೆ. ದೇವಸ್ಥಾನದ ಶ್ರದ್ಧಾ ಭಕ್ತಿಯ ಕಾರ್ಯಕ್ರಮಗಳಾದ ಧನುರ್ಮಾಸ ಪೂಜೆ, ನವರಾತ್ರಿ ಉತ್ಸವ, ಕಾರ್ತೀಕ ಉತ್ಸವ, ಹಾಗೂ ಪ್ರತಿವರ್ಷದ ರಥೋತ್ಸವ ಕಾರ್ಯಕ್ರಮವನ್ನು ಹಳೇಮನೆ ಶ್ಯಾಮಣ್ಣನವರ ಮನೆಯವರೇ ನಡೆಸಿಕೊಂಡುಬರುತ್ತಿದ್ದಾರೆ. ಶ್ಯಾಮಣ್ಣನವರ ದತ್ತು ಪುತ್ರನಾದ ಶ್ರೀ ವಿಜಯೇಂದ್ರ ರಾವ್ (ಶ್ಯಾಮಣ್ಣನವರಿಗೆ ಸಂತತಿ ಇಲ್ಲ) ಅದೇ ಗೋತ್ರದವರಾಗಿದ್ದು, ದಳಸನೂರು ಫಿರ್ಕಾದ ಶ್ಯಾನುಭೋಗರಾಗಿ ಅನೇಕ ವರ್ಷಗಳ ಕಾಲ ಜನಗಳ ಮೆಚ್ಚುಗೆಗೆ ಪಾತ್ರರಾಗಿದ್ದರು. ಮೇಲಾಧಿಕಾರಿಗಳಿಂದಲೂ ಸಹ ಇವರಿಗೆ ಶಭಾಷ್‌ಗಿರಿ ಪಡೆದಿದ್ದು ಇಂದಿಗೂ ಸಹ ಅವರ ಸಮಕಾಲೀನರು ಇವರ ಜನೋಪಕಾರಿ ಕಾರ್ಯಗಳನ್ನು ಸ್ಮರಿಸುತ್ತಾರೆ.

ಶ್ರೀ ಶ್ಯಾಮಣ್ಣನವರ ಪತ್ನಿ ಜಯಮ್ಮನವರ ಜನಸೇವಾ ಕಾರ್ಯಗಳು ಶ್ಯಾಮಣ್ಣನವರನ್ನೂ ಮೀರಿಸಿತ್ತು. ಇವರ ಬಗ್ಗೆ ಗ್ರಾಮದಲ್ಲಿ ಅನೇಕ ಪ್ರಶಂಸಾ ಕಥೆಗಳು ಪ್ರಚಲಿತವಿದೆ. ಶ್ರೀಮತಿ ಜಯಮ್ಮನವರು ಶ್ರೀಮಂತವರ್ಗದವಾರಾಗಿದ್ದು, ಅವರ ಮನೆಯಲ್ಲಿ ಚಿನ್ನದ ಹೊಗೆಯಾಡುತ್ತಿತ್ತು ಎಂದು ಪ್ರತೀತಿಯಿದೆ. ಅವರು ಮಾಡುತ್ತಿದ್ದ ಅನ್ನ ದಾನ ಮತ್ತು ಗ್ರಾಮಸ್ಥರಿಗೆ ನೀಡುತ್ತಿದ್ದ ಸಹಕಾರ ಅವಿಸ್ಮರಣೀಯ. ಶ್ರೀ ಶ್ಯಾಮಣ್ಣನವರು ಮತ್ತು ಜಯಮ್ಮನವರಿಗೆ ಸಂತಾನವಿಲ್ಲದ ಕಾರಣ ಕೊಲದೇವಿ ಗ್ರಾಮದ ಅನಾಥರಾಗಿದ್ದ ಕೆ. ರಾಮಾಚಾರ್ಯರನ್ನು ಸಾಕಿ ಸಲಹಿದರು. ಇವರಿಗೆ ಜೀವನೋಪಾಯದ ಮಾರ್ಗವಾಗಿ ತಮ್ಮ ಜವಾಬ್ದಾರಿಯಲ್ಲಿದ್ದ ವೇಣುಗೋಪಾಲ ಸ್ವಾಮಿ ದೇವಾಲಯದ ಜವಾಬ್ದಾರಿಯನ್ನು ಬಿಟ್ಟುಕೊಟ್ಟರು. ಶ್ರೀ ರಾಮಾಚಾರ್ಯರಿಗೆ ಒಂದು ಮದುವೇಮಾಡಿ ಸಂಸಾರವಂದಿಗನನ್ನಾಗಿ ಮಾಡಿದ್ದು ಇವರ ದೊಡ್ಡಗುಣ. ಜಯಮ್ಮನವರ ಅಕ್ಕನಮಗನಾದ (ಭಾಗಮ್ಮನವರ ಮಗ) ಶ್ರೀ ಕುಂಟಿಸೀನಪ್ಪನವರನ್ನು ಸಹ ಸಾಕಿಸಲಹಿದರು. ಆಗಿನ ಕಾಲದಲ್ಲಿ ದಾನ ದರ್ಮಗಳನ್ನು ಮಾಡುತ್ತಿದ್ದ ಮನೆಯೆಂದರೇ ಶ್ಯಾಮಣ್ಣನವರ ಮನೆ.

ಶ್ರೀ ಶ್ಯಾಮಣ್ಣ ಹಾಗೂ ಜಯಮ್ಮನವರು ಆಗಿನ ಕಾಲದಲ್ಲಿ ಕಾಲುನಡುಗೆಯಲ್ಲಿ ಕಾಶೀಯಾತ್ರೆಯನ್ನು ಮಾಡಿದ್ದರು. ಈ ವಿಷಯ ಅವರಿಗೆ ಹೆಚ್ಚು ಪ್ರಶಂಸೆಯನ್ನು ತಂದು ಕೊಟ್ಟಿತ್ತು.

ಶ್ಯಾಮಣ್ಣನವರು ಮತ್ತು ಇವರ ದತ್ತು ಪುತ್ರರಾದ ವಿಜಯೇಂದ್ರ ರಾಯರು ಕಣ್ವ ಮಠದ ಶ್ರೀಗಳಿಂದ ಪ್ರಭಾವಿತರಾಗಿ ಮಾಧ್ವಸಂಪ್ರದಾಯವನ್ನು ಸ್ವೀಕರಿಸಿದರು. ಇದರ ಗುರುತಾಗಿ ಮಠದ ಅಭಿವೃದ್ಧಿಗೆ ಶ್ರಮವಹಿಸಿದ್ದಲ್ಲದೆ, ಈಗ್ಗೆ ಸುಮಾರು ಅರವತ್ತು ವರ್ಷಗಳ ಹಿಂದೆ (೧೯೩೩-೩೪) ಚಾತುರ್ಮಾಸ ಕಾರ್ಯಕ್ರಮವನ್ನು ತಮ್ಮ ಸ್ವಂತ ಗೃಹದಲ್ಲಿ ನಡೆಸಿದರು. ಈ ಸಂದರ್ಭದಲ್ಲಿ ನಿತ್ಯ ಅನ್ನಸಂತರ್ಪಣೆ ಮತ್ತು ಪೂಜಾ ಕಾರ್ಯಕ್ರಮಗಳನ್ನು ನೆಡೆಸಿ ದರ್ಮಸಂರಕ್ಷಣೆಗೆ ಸಹಾಯ ನೀಡಿದ್ದಾರೆ.

**ಮಠಕ್ಕೆ ರಜತ ಮಂಟಪದ ಕೊಡುಗೆ**

ಇದೇ ಸಂದರ್ಭದಲ್ಲಿ ಸಾರ್ವಜನಿಕರಿಂದ ಚಿನ್ನ ಬೆಳ್ಳಿ ಮತ್ತು ಕಾಣಿಕೆಗಳನ್ನು ಪಡೆದು, ಅತ್ಯುತ್ತಮವಾದ ರಜತ ಮಂಟಪವನ್ನು ವಿಠಲಕೃಷ್ಣನ ಸೇವೆಗೆ ಬಳುವಳಿಯಾಗಿ ಕೊಟ್ಟಿದ್ದಾರೆ. ಈಗಲೂ ಸಹ ಬಳುವಳಿಯಾಗಿ ಕೊಟ್ಟಿರುವ ರಜತಮಂಟಪ ಶ್ರೀ ಮಠದಲ್ಲಿ ರಾರಾಜಿಸುತ್ತಿದೆ. ಈ ಮಹತ್ಕಾರ್ಯಗಳನ್ನು ಸಾಧಿಸಲು ಸಹಕಾರವನ್ನು ನೀಡಿದವರೆಂದರೆ ಘಟ್ ವೇದಾಚಲಯ್ಯನವರು, ಶ್ಯಾ॥ಕೃಷ್ಣಪ್ಪನವರು, ಗುಮ್ಮರೆಡ್ಡಿಪುರದ ರಾಮಕೃಷ್ಣಪ್ಪನವರು, ವೆಲಗಲಬುರ್ರೆ ಶೇಷಪ್ಪನವರು, ಚಿಂತಾಮಣಿಯ ಇಂದ್ರಜಾಲಂ ರಾಮಕೃಷ್ಣಪ್ಪನವರು, ಹಾಗು ದಳಸನೂರು ಗ್ರಾಮದ ವಿ.ವೆಂಕಟಸುಬ್ಬಯ್ಯನವರು. ಶ್ರೀ ವಿಜಯೇಂದ್ರರಾಯರು ಸ್ವತಃ ದೇವತಾರ್ಚನೆ ಮಂತ್ರಗಳನ್ನು, ನವಗ್ರಹ ಪೂಜಾ ಮಂತ್ರಗಳನ್ನು ಸ್ವತಃ ಕೈ ಬರಹದಲ್ಲಿ ಬರೆದು ಹಸ್ತ ಪ್ರತಿ ಬೆಳಕು ಕಾಣಬೇಕಾಗಿದೆ.

# ಸೂರ್ಯ ಪ್ರಾರ್ಥನೆ

ನಮಸ್ಸವಿತ್ರೇ ದ್ವಾರಾಯ ಮುಕ್ತೇರಮಿತ ತೇಜಸೇ।
ಋಗ್ಯಜುಸ್ಸಾಮಭೂತಾಯ ತ್ರಯೀಧಾಂನೇಚತೇನಮಃ ।೧।

ನಮೋಗ್ನಿಷೋಮಭೂತಾಯ ಜಗತಃ ಕರಣಾತ್ಮನೇ।
ಭಾಸ್ಕರಾಯ ಪರಂತೇಜ ಸೌಷುಮ್ನ ರುಚಿ ಬಿಭ್ರತೇ ।೨।

ಕಲಾಕಾಷ್ಟಾನಿಮೇಶಾದಿ ಕಾಲಜ್ಞಾನಾತ್ಮನೇ ನಮಃ।
ಧ್ಯೇಯಾಯ ವಿಶ್ವರೂಪಾಯ ಪರಮಾಕ್ಷರ ರೂಪಿಣೆ ।೩।

ಬಿಭರ್ತಿ ಯಸ್ಸುರಗುಣಾನಾಪ್ಯಾಯ್ಯೇಂದುಸ್ವರಶ್ಮಿಭಿಃ।
ಸ್ವಧಾಮೃತೇನಚ ಪಿತೃನ್ ತಸ್ಮೈ (ತೃಪ್ತ್ಯಾ) ಧೃತ್ಯಾತ್ಮನೇ ನಮಃ ।೪।

ಹಿಮಾಂಬು ಘರ್ಮವೃಷ್ಟೀನಾಂ ಕರ್ತಾಹರ್ತಾಚ ಯಃ ಪ್ರಭುಃ।
ತಸ್ಮೈ ತ್ರಿಕಾಲ ಭೂತಾಯ ನಮಃ ಸೂರ್ಯಾಯ ವೇದಸೇ ।೫।

ಅಪಹಂತಿ ತಮೋಯಶ್ಚ ಜಗತೋಸ್ಯ ಜಗತ್ಪತಿಃ।
ಸತ್ವಧಾಮಧರೋದೇವೋ ನಮಸ್ತಸ್ಮೈ ವಿವಸ್ವತೇ ।೬।

ಸತ್ಕರ್ಮ ಯೋಗ್ಯೋನ ಜನೋನ್ಯೈವಾಪಶೌಚಕಾರಣಂ।
ಯಸ್ಮಿನ್ನನುಸಿತೇತಸ್ಮೈ ನಮೋದೇವಾಯ ಭಾಸ್ವತೇ ।೭।

ಸ್ಪೃಷ್ಟೋಯ ದಂಶುಭಿಲೋಕಃ ಕ್ರಿಯಾಯೋಗ್ಯೋಭಿಜಾಯತೇ।
ಪವಿತ್ರ ಕಾರಣಾತ್ಮಾಯಃ ತಸ್ಮೈ ಶುದ್ಧಾತ್ಮನೇ ನಮಃ ।೮।

ನಮಸ್ಸವಿತ್ರೇ ಸೂರ್ಯಾಯ ಭಾಸ್ಕರಾಯ ವಿವಸ್ವತೇ।
ಆದಿತ್ಯಾದಿಭೂತಾಯ ದೇವಾಧೀನಾಂ ನಮೋನ್ನಮಃ ।೯।

ಹಿರಣ್ಮಯಂ ರಥಂ ಯಸ್ಯ ಕೇತವೋ ಅಮೃತವಾಜಿನಃ।
ವಹಂತಿ ಭುವನಾ ಲೋಕ ಚಕ್ಷುಷಂತಂ ನಮಾಮ್ಯಹಂ ।೧೦।

***ಈ ಪ್ರಾರ್ಥನೆ ವಿಷ್ಣು ಪುರಾಣದ ಅಂಶ ೩ ಅಧ್ಯಾಯ ೫ರಲ್ಲಿದೆ.***

# ವಂದನವು ಶ್ರೀ ಕೃಷ್ಣ ಗೋವಿಂದ ಹರಿಗೆ...

ಜಿ. ವಿ. ಪ್ರಭಾಕರ ರಾವ್

ವಂದನವು ಶ್ರೀಕೃಷ್ಣ ಗೋವಿಂದ ಹರಿಗೆ
ನಂದನವು ಕಮಲೇಶ ನಾರಾಯಣನಿಗೆ
ಚಂದನವು ಮಧ್ವ ಮತ ಎಲ್ಲ ಮತಗಳೊಳಗೆ
ಬಂಧನವು ಕಣ್ವ ಮತ ದ್ವೈತ ವನದೊಳಗೆ ॥೧॥

ವಂದನವು ಶ್ರೀಕೃಷ್ಣ ಪರಮಾತ್ಮಗೆಂದೆ
ರಕ್ಷಿಸು ಈ ಜಗವ ಎಂದೆಂದು ಮುಂದೆ
ಉದಯಿಸಿತು ಕಣ್ವ ಮತ ಅಷ್ಟಮಠದಿಂದ
ಜಗದೊಡೆಯ ವಿಠ್ಠಲಕೃಷ್ಣನ ದಯದಿಂದ ॥೨॥

ಶ್ರೀಕೃಷ್ಣ ಗೋವಿಂದ ಹರಿ ವಾಸುದೇವ
ನಿನ್ನ ನಾಮವನುಣಿಸೋ ಅಚ್ಯುತಾನಂದ
ಕಣ್ವ ಮತದಲ್ಲಡಗಿದೆ ಭಕ್ತಿಯಾ ಬಲವು
ಮಧ್ವ ಮತ ಬೆಸೆಯುತಿದೆ ಒಲವಿನ ಹರಿವು ॥೩॥

ವೃಷನಾಮ ಕಾರ್ತೀಕ ಶುದ್ಧ ಸಪ್ತಮಿಯಂದು
ಸೇರಿದರು ಉಡುಪಿಯಲಿ ಯಾಜ್ಞವಲ್ಕ್ಯರ ಜನ್ಮದಿನದಂದು
ಆ ಸಭೆಯ ವೈಭವವ ನಿಮಗರುಹಲೆಂದು
ಉಡುಪಿಗೆ ದಾಸಾನುದಾಸನನು ಕರೆಸಿದ್ದರಂದು ॥೪॥

ವಿದ್ಯಾಭಾಸ್ಕರರು ನಡೆಸಿದರು ಅಷ್ಟೋತ್ತರವನಂದು
ಯೋಗೀಶ್ವರರ ಸೇವೆಯನು ಶ್ರೀಕೃಷ್ಣನ ಮುಂದು
ತಾರತಮ್ಯದಿ ಭಜಿಸಿದರು  ವಿಠ್ಠಲನ ಅಂದು
ಈಶಾವಾಸ್ಯದ ಪಠಣ ದೇವಸಭೆಯಲಿ ನಿಂದು ॥೫॥

ಶ್ರೀಕೃಷ್ಣಮಠದಲಿ ಕ್ರಾಂತಿಯಾಯ್ತಂದು
ಯಾಜ್ಞವಲ್ಕ್ಯರ ಪೂಜೆ ಸಂಭ್ರಮದಿ ನಡೆದು
ಚಿತ್ತಶುದ್ಧದಲೋದಿದರು ಭಾಗವತ ಕಥೆಯ
ಸೂತ್ರಾರ್ಥದಲ್ಲದರ ಅಂತರಾರ್ಥವನು ॥೬॥

ಷಡ್ರಸದ ಸವಿಯಾಯ್ತು ಭಾರತದ ಕಥನದಿ
ಭೂರಿಭೋಜನವಾಯ್ತು ದೈವಮಂಟಪದಿ
ಸಂದರ್ಶನವಾಯ್ತಂದು ಬಾಬುರಾಯರದು
ಧರ್ಮಾರ್ಥ ಕಾಮಗಳ ಸಹಚಿಂತನವಂದು ॥೭॥

ತಾತ್ಪರ್ಯ ನಿರ್ಣಯದ ಅರ್ಥ ತಿಳಿಸಿದರು
ವಿಮರ್ಶಿಸಿದರು ವೇದವಿಭಜನೆಯ ಗೂಡಾರ್ಥವನ್ನು
ತಿತ್ತಿರಿ ಶುಕ್ಲರ ದಿವ್ಯ ಕಥೆಯನ್ನು
ಶುಕ್ಲರೆಂದರೆ ಶುದ್ಧ ಅರ್ಥ ಎಂದು ॥೮॥

ಪರಶುಕ್ಲತ್ರಯರಿಗೆ ದೋಷ ಇಲ್ಲೆಂದು
ವಾಗ್ದೇವತೆಯಿಂದ ಬಂದ ಶುಕ್ಲ ವೇದವಿದೆಂದು
ಆದಿತ್ಯ ದೇವನ ಕಿರಣ ಇದೆಂದು
ಶುಕ್ಲ ಯಜುರ್ವೇದವೆ ಬೆಳಕು ಜಗಕೆ ಎಂದೆಂದು ॥೯॥

ಶ್ರೀರಾಮನವತರಿಸಿದ ಸೂರ್ಯವಂಶದಲಿ
ಅವನ ಮಹಿಮೆಯ ಸಾರ ಎಲ್ಲ ವೇದಗಳು
ಶ್ರೀವಿಠಲಕೃಷ್ಣನಿಗಿಲ್ಲ ಯಾವುದೇ ದೋಷ
ಅವನೆ ಈ ಜಗದೊಡೆಯ ಪುಣ್ಯ ಪುರುಷ ॥೧೦॥

ವೈಶಂಪಾಯನರಿಗೆ ಬಂತು ಮೇರುಪರ್ವತದಾಹ್ವಾನ
ತಪ್ಪಿದ ಋಷಿಗಳಿಗೆ ತೀವ್ರ ಅಪಮಾನ
ಮೇರುಸಭೆ ನಡೆಯಿತು ಋಷಿಗಳ ಗೈರಿನಲ್ಲಿ
ಒದಗಿತು ಬ್ರಹ್ಮಹತ್ಯಾದೋಷ ನಿಯಮದಂತೆ ॥೧೧॥

ಯಾಜ್ಞವಲ್ಕ್ಯರು ಬಂದರು ವೈಶಂಪಾಯನರ ಬಳಿಗೆ
ಸಂತೈಸಲು ಗುರುಗಳ ಖಿನ್ನ ಮನವನ್ನು
ವಿನಮ್ರದಲಿ ಅರುಹಿದರು ತಮ್ಮ ಆತ್ಮವಿಶ್ವಾಸವನು
ತಾವೊಬ್ಬರೇ ದೋಷವ ನಿಗ್ರಹಿಸುವ ಆತ್ಮಬಲವನ್ನು ॥೧೨॥

ಇದರಿಂದ ಕೊರೆಯಾಯ್ತು ಗುರುಗಳ ಒಲವು
ಶಿಷ್ಯನನು ಜರೆದರು ಅವನೆ ಬಲು ಗರ್ವಿಯೆಂದು
ಕಲಿಸಲು ಅವರ ಬಳಿ ಮತ್ತೇನೂ ಉಳಿದಿಲ್ಲವೆಂದು
ಕಲಿತ ವಿದ್ಯೆಯನೆಲ್ಲ ಹಿಂತಿರುಗಿಸೆಂದು ॥೧೩॥

ಕಲಿಸಿದ್ದ ಯಜುರ್ವೇದ ಹಿಂತಿರುಗಿತಂದು
ಮಂತ್ರಗಳ ಸರಮಾಲೆ ಮಿಶ್ರವಾಯಿತಂದು
ಉಳಿದ ಶಿಷ್ಯರು ಗ್ರಹಿಸಿದರು ಆ ಮಂತ್ರಗಳನಂದು
ಇದನೆ ಕರೆದರು ಅಂದು ಕೃಷ್ಣವೇದವೆಂದು ॥೧೪॥

ಋಷಿಗಳಾಚರಿಸಿದರು ಘೋರ ತಪವನ್ನು
ಸೂರ್ಯನಾರಾಯಣನು ಅನುಗ್ರಹಿಸಿದನು ಶುದ್ಧ ಯಜುರ್ವೇದವನು
ವೈಶಂಪಾಯನರು ಆದರಿಸಿದರು ಮರಳಿದ ಯಾಜ್ಞವಲ್ಕ್ಯರನು ಮತ್ತೆ
ದೇವ ನಿಯಮವೆ ಕಾರಣ ಇದಕೆಲ್ಲ ಎಂದು ॥೧೫॥

ಬ್ರಹ್ಮಸಭೆ ಈ ಸತ್ಯವನನುಮೋದಿಸಿತು ಅಂದು
ವೈಶಂಪಾಯನರಿಗೆ ಶಿಷ್ಯನಲಿ ಕೋಪ ಇಲ್ಲೆಂದೂ
ಕೃಷ್ಣ ಯಜುರ್ವೇದದ ಶಿಷ್ಯರು ಒಪ್ಪಿದರು ಅಂದು

ಶಿಲೆಯಾಗಿದ್ದ ದೋಷ ಕಥೆ ಕರಗಿ ಜ್ಯೋತಿಯಾಯ್ತೆಂದು ॥೧೬॥

ಈ ವಿಮರ್ಶೆಯ ಕಾರ್ಯ ಸಂಜೆಯಲ್ಲಾಯ್ತು
ಶ್ರೀವಿಶ್ವೇಶತೀರ್ಥರ ಸಮ್ಮುಖದೊಳಾಯ್ತು
ಕಣ್ವಮಠಾಧೀಶರ ಸಮ್ಮತಿಯೊಳಾಯ್ತು
ಆಯಾತಯಾಮವೇ ಶುದ್ಧ ಸನಾತನವಾಯ್ತು ॥೧೭॥

ದ್ವೈತ ಮತ ದರ್ಶನವೇ ದೇವ ಜೀವೋದ್ಧರಣ
ಕಣ್ವಮತದುದಯಕ್ಕೆ ಪಂಡಿತರೆ ಕಾರಣ
ಜೀವನಿಗೆ ಬೇಕು ಎಂದೆಂದು ಭಕ್ತಿಯ ಹೂರಣ
ನಾವೆಲ್ಲ ಬೇಡುವೆವು ಮಾಧವನ ಕರುಣ ॥೧೮॥

ಜಯಜಯ ಶ್ರೀಕೃಷ್ಣ ಹರಿವಾಸುದೇವ
ನೀಡು ನಮ್ಮೆಲ್ಲರಿಗೆ ಸದ್ಬುದ್ಧಿ ಶ್ರೀಪದ್ಮನಾಭ
ಮಂಗಳವು ಶ್ರೀಕೃಷ್ಣ ಗೋವಿಂದ ಹರಿಗೆ
ಮಂಗಳವು ಕಮಲೇಶ ನಾರಾಯಣನಿಗೆ ॥೧೯॥

ಮಧ್ವಮತ ಸಾಯುಜ್ಯ ಮಂಗಳದ ಕೆಳಗೆ
ಜಯಜಯ ಶ್ರೀಕೃಷ್ಣ ಮಧ್ವೇಶ ಮುನಿಗೆ।

***೨೨-೧೧-೨೦೦೧ರ ಬುಧವಾರದಂದು ಉಡುಪಿಯ ಶ್ರೀಕೃಷ್ಣಮಠದಲ್ಲಿ ನಡೆದ ಯಾಜ್ಞವಲ್ಕ್ಯರ ಜಯಂತಿಯ ವೀಕ್ಷಕ ವಿವರಣೆ ಇದಾಗಿದೆ. ಈ ಶ್ರದ್ಧೆಯ ಕಾರ್ಯಕ್ರಮ ಪೇಜಾವರ ಶ್ರೀಗಳ ಸೌಹಾರ್ದತೆ ಮತ್ತು ಕಣ್ವ ಮಠ ಶ್ರೀಗಳಾದ ಶ್ರೀ ವಿದ್ಯಾಭಾಸ್ಕರ ತೀರ್ಥರ ನಾಯಕತ್ವದಲ್ಲಿ ನಡೆಯಿತು.***

## ನಾವು ಮತ್ತು ನಮ್ಮವರು

*ನಮ್ಮತನ ಕೇವಲ ವ್ಯಕ್ತಿಗಳಿಗೆ ಸೀಮಿತವಲ್ಲ. ನಮ್ಮ ಮನೆ, ಊರು, ರೀತಿ, ನೀತಿ, ಸಂಸ್ಕಾರ, ಆಚಾರ, ವಿಚಾರ ಇವುಗಳೆಲ್ಲವೂ ನಮ್ಮತನದ ಪ್ರತೀಕಗಳೇ.*

# ನಮ್ಮ ಊರುಗಳು

## ಶತದಳಪುರಿ–ಪುಷ್ಪಪುರಿ

ಕೋಲಾರ ಜಿಲ್ಲೆಯ ದಳಸನೂರಿನ ಮೊದಲ ಹೆಸರು ಶತದಳಪುರಿ. ಈ ಗ್ರಾಮಕ್ಕೆ ಈ ಹೆಸರು ಬರಲು ಕಾರಣ ಈ ಗ್ರಾಮದ ಸುತ್ತಮುತ್ತಲೂ ಹುಲುಸಾಗಿ ಬೆಳೆಯುತ್ತಿದ್ದ ತುಳಸೀ ವನ. ಇಲ್ಲಿ ಬೆಳೆಯುತ್ತಿದ್ದ ತುಳಸಿ, ಅಂತೆಯೇ ಪುಷ್ಪಪುರಿಯಿಂದ (ಈಗಿನ ಹೂಹಳ್ಳಿ) ಸಹಸ್ರ ಸಂಖ್ಯೆಯಲ್ಲಿ ಹೂಗಳು ಭಗವಂತನ ಸೇವೆಗೆ ಸಮರ್ಪಣೆಯಾಗುತ್ತಿತ್ತು.

ಈಗ್ಗೆ ಸುಮಾರು ಮುನ್ನೂರು ವರ್ಷಗಳಹಿಂದೆ ಕೃಷ್ಣದೇವರಾಯನ ಹಿಂದೂ ಸಾಮ್ರಾಜ್ಯ ಪತನವಾದ ನಂತರ ರಾಜ್ಯದ ಎಲ್ಲಾ ಪ್ರಾಂತ್ಯಗಳು ಪಾಳೇಗಾರರ ಅಧೀನದಲ್ಲಿತ್ತು. ಪ್ರತಿಯೊಬ್ಬ ನಾಯಕನೂ ತನ್ನ ಅಧಿಪತ್ಯವನ್ನು ಅತ್ಯಂತ ಸಮರ್ಕವಾಗಿ ಪಾಲಿಸುತ್ತಿದ್ದವರು ಇವರು. ಇಂತಹ ಸಮಯದಲ್ಲಿ ಕೋಲಾರ ಜಿಲ್ಲೆಯಲ್ಲಿ ಅನೇಕ ಪಾಳೆಗಾರರಿದ್ದರು. ಕೋಲಾರದ ಓರ್ವ ಪ್ರಮುಖ ನಾಯಕ ವೈಷ್ಣವನೂ, ಧರ್ಮಿಷ್ಟನೂ, ದೈಭಕ್ತನೂ ಆಗಿದ್ದನು. ಇವನ ಪಾಳೆಯ ಪಟ್ಟಿನ ವ್ಯಾಪ್ತಿಯಲ್ಲಿ ಶ್ರೀ ತುಲಸಿಯ(ದಳಗಳ) ಬೀಡಾಗಿದ್ದ ಶತದಳಪುರಿ ಮತ್ತು ಸಹಸ್ರಾರು ಆಕರ್ಷಕ ಪುಷ್ಪಗಳಿಂದ ಕೊಂಗೊಳಿಸುತ್ತಿದ್ದವು.

ಪ್ರತಿದಿನವೂ ಕೋಲಾರದ ಪಾಳೆಯಗಾರನ ಮನೆಗೆ ಶ್ರೀ ವಿಷ್ಣು ಪೂಜೆಗಾಗಿ ಪುಷ್ಪಪುರಿಯ ಪವಿತ್ರ ಪುಷ್ಪಗಳು ಮತ್ತು ಶತದಳಪುರಿಯಶ್ರೀ ತುಲಸಿ ರವಾನಿಸಲಾಗುತ್ತಿತ್ತು. ಈ ನಾಯಕನೇ ಮುಂದೆ ಕೋಲಾರ ಕ್ಷೇತ್ರದ ಗ್ರಾಮದೇವತೆ ಕೋಲಾರಮ್ಮನ ದೇವಸ್ಥಾನವನ್ನು ಕಟ್ಟಿಸಿದನು.

ಕಾಲಾಂತರದಲ್ಲಿ ಪಾಳೆಯಪಟ್ಟುಗಳು ಖಿಲವಾಗಿ ಎಲ್ಲಾ ಗ್ರಾಮಗಳ ಸ್ಥಳ ಚಾರಿತ್ರ್ಯ ಹೆಸರುಗಳು ಬದಲಾಗಿವೆ. ಇತ್ತೀಚಿನ ಶತಮಾನದಲ್ಲಿ ಹೆಸರುಗಳನ್ನು ಕನ್ನಡಕ್ಕೆ ತರ್ಜುಮೆಯಾಗಿ ತುಲಸಿಗೆ ಪ್ರಖ್ಯಾತವಾಗಿದ್ದ ಶತದಳಪುರಿ ಒಂದು ದಳ ಮಾತ್ರ ಉಳಿಸಿಕೊಂಡು ದಳಸನೂರು ಎಂದಾಗಿದೆ. ಪುಷ್ಪಪರಿ ಹೂಹಳ್ಳಿ ಎಂದಾಗಿದೆ.

## ಗುಜ್ಜನಹಳ್ಳಿ

ಇದನ್ನು ಮೊದಲು ಗುಜರೀ ಮಹಾಂಕಾಳಿ ಕ್ಷೇತ್ರ ಎನ್ನುತ್ತಿದ್ದರು. ಈಗ ಗುಜ್ಜನಹಳ್ಳಿ ಎನ್ನುತ್ತಾರೆ. ಅರವತ್ತು ಮನೆ ಬಂಧುಗಳಲ್ಲಿ ಗುಜ್ಜನ ಹಳ್ಳಿಯದೂ ಒಂದು. ವಸಂತವಲ್ಲಭರಾಯರು ಹಿರಿಯರು. ಇವರು ಶುಕ್ಲ ಯಜುರ್ವೇದ ಮಹಾಸಭೆಯ ಸಂಸ್ಥಾಪಕರಲ್ಲಿ ಒಬ್ಬರು ಮತ್ತು ವೃತ್ತಿಯಲ್ಲಿ ಶಾನುಭೋಗರು. ಇವರ ಮಕ್ಕಳಾದ ಚಿಕ್ಕರಾಮರಾಯರು ಮತ್ತು ದೊಡ್ಡರಾಮರಾಯರು ವಿದ್ಯಾದಾನದಲ್ಲಿಯೇ ಕಾಲ ಕಳೆದವರು. ಅಂದರೆ, ಇಬ್ಬರೂ ಶಾಲಾ ಮಾಸ್ತರುಗಳು. ಸಂಗೀತ, ನಾಟಕಗಳಲ್ಲಿ ಅಭಿರುಚಿ ಉಳ್ಳವರು. ದೊಡ್ಡರಾಮರಾಯರು ಪುರಂದರದಾಸರ ಆರಾಧನೆಯನ್ನು ಜೀವಮಾನ ಪರ್ಯಂತ ನಡೆಸಿಕೊಂದು ಬಂದವರು. ಅದು ಇಂದಿಗೂ ಮುಂದುವರೆದಿದೆ. ಸಾವಿನಲ್ಲೂ ತಮ್ಮ ಸೊದರತ್ವವನ್ನು ನಿರೂಪಿಸಲು ಒಂದೆ ದಿನ ಮೃತ್ಯುವಶರಾದರು.

ಮತ್ತೊಂದು ಮನೆ ಶ್ರೀವಾಸುದೇವರಾಯರದು. ಇವರೂ ಹೆಸರುವಾಸಿಯಾದ ಶ್ಯಾನುಭೋಗರು. ಇವರ ತಮ್ಮಂದಿರು ಶ್ರೀ ತಿಮ್ಮಪ್ಪಯ್ಯನವರು. ಇವರು ಶಾಲಾ ಮಾಸ್ತರರು. ಇವರ ಮನೆತನಕ್ಕೆ ದಾಸ ಸಾಹಿತ್ಯ ಗ್ರಂಥಗಳ ಪಾರಾಯಣ, ದಾಸರ ಕೀರ್ತನೆಗಳನ್ನು ಹಾಡುವುದರಲ್ಲಿ ಪರಿಣತರು. ತಿಮ್ಮಪ್ಪಯ್ಯನವರ ಧರ್ಮಪತ್ನಿ ಛಾಯಮ್ಮನವರು ಸಂಪ್ರದಾಯ ಹಾಡುಗಳಲ್ಲಿ ಪ್ರವೀಣೆ. ಬಾಯಿಂದ ಹೇಳಿಕೊಟ್ಟು ಅನೇಕ ಹಾಡುಗಾರರನ್ನು ತಯಾರು ಮಾಡಿದ್ದಾರೆ. ತಿಮ್ಮಪ್ಪಯ-ಛಾಯಮ್ಮನವರಿಗೆ ಐವರು ಪುತ್ರರು ಮತ್ತು ಇಬ್ಬರು ಪುತ್ರಿಯರು.

ಮೊದಲನೆಯವರು ಟಿ. ವಸಂತಪ್ಪನವರು ಗ್ರಾಮಲೆಕ್ಕಿಗರು. ಎರಡನೆಯವರು ಟಿ.ಜಿ. ರಾಮಪ್ಪ, ಪ್ರೌಢಶಾಲೆಯ ಮುಖ್ಯ ಉಪಾಧ್ಯಾಯರು ಮೂರನೆಯವರು ಟಿ. ಜಿ. ನರಸಿಂಹಯ್ಯನವರು ಸ್ವಂತ ಉದ್ಯಮ ಹೊಂದಿದ್ದಾರೆ ನಾಲ್ಕನೆಯವರು ಜಿ. ಕೃಷ್ಣಮೂರ್ತಿ, ತಂತಿ ಇಲಾಖೆಯಲ್ಲಿ ಸೇವೆ ಸಲ್ಲಿಸಿದವರು ಐದನೆಯವರು ಜಿ. ಟಿ. ಮಾಧವರಾವ್, ಕೆ. ಜಿ. ಎಫ್‌ ನಲ್ಲಿ ಇಂಜಿನಿಯರಾಗಿದ್ದರು.

# ನನ್ನೂರು, ನನ್ನ ದೊಡ್ಡಪ್ಪ

ಕೆ. ಆರ್ ನರಸಿಂಹನ್



ವೆಂಕಟನರಸಪ್ಪ

ಕುರುಡಮಲೆ ಎಂಬ ಹೆಸರನ್ನು ಕೇಳಿದ ಕೂಡಲೆ ನೆನಪಿಗೆ ಬರುವುದು ಇಲ್ಲಿರುವ ಪುರಾಣ ಪ್ರಸಿದ್ಧನಾದ ಮಹಾಗಣಪತಿ. ಮಲೆ ಎಂಬುದು ಬೆಟ್ಟಕ್ಕಿರುವ ಸಮಾನಪದ. ಇಲ್ಲಿರುವ ನಿಸರ್ಗದತ್ತವಾದ, ಸರಪಳಿಯಂತೆ ಹರಡಿ ನಿಂತ ಗಿರಿಶ್ರೇಣಿಯ ದೃಶ್ಯ ಚೇತೋಹಾರಿಯಾದದ್ದು. ಈ ಊರಿನ ಜನಜೀವನ ಗ್ರಾಮೀಣ ಸಂಸ್ಕೃತಿಯ ಮತ್ತೊಂದು ರೂಪ. ವಿವಿಧ ವರ್ಗಗಳಿಗೆ ಸೇರಿದ ಸಾವಿರಕ್ಕೂ ಹೆಚ್ಚು ಕುಟುಂಬಗಳು ಇಲ್ಲಿವೆ. ನರಸಿಂಗರಾಯರ ಮನೆತನ ಕುರುಡುಮಲೆಯ ಪ್ರತಿಷ್ಠಿತ ಕುಟುಂಬಗಳಲ್ಲೊಂದು.

ಆಂಧ್ರ ಪ್ರದೇಶದ ಗೊರವನಹಳ್ಳಿ ನರಸಿಂಗರಾಯರ ಮೂಲಸ್ಥಳ. ಅಲ್ಲಿಂದ ಸುಮಾರು ನೂರು ವರ್ಷಗಳ ಹಿಂದೆ ತಮ್ಮ ಬಾಲ್ಯದಲ್ಲಿ ಇಲ್ಲಿಗೆ ಇವರು ಬಂದು ನೆಲೆಸಿದವರು. ಚಿಕ್ಕವಯಸ್ಸಿನಲ್ಲಿಯೇ ಹಳ್ಳಿಯ ಬದುಕಿಗೆ ತಮ್ಮನ್ನು ಸಮರ್ಪಿಸಿಕೊಂಡ ರಾಯರ ಜೀವನ ಸಾಧಾರಣ ಮಟ್ಟದ್ದಾಗಿತ್ತು. ಶಾನುಭೋಗರ ಕೆಲಸಕಾರ್ಯಗಳನ್ನು ಸಮರ್ಪಕವಾಗಿ ನಡೆಸಿಕೊಂಡು ಬಂದ ಇವರಿಗೆ ಆಡಂಬರದ ಬದುಕು ದೂರವೇ ಉಳಿಯಿತು. ಚಿಕ್ಕವಯಸ್ಸಿನಲ್ಲಿಯೇ ಕೋಲಾರದ ನರಸಿಂಗರಾಯರ ಸೋದರಿ ನರಸಮ್ಮನನ್ನು ವಿವಾಹವಾದ ನನ್ನ ತಾತನವರು ತುಂಬುವಯಸ್ಸಿನಲ್ಲಿ ತೀರಿಕೊಂಡಾಗ ಅವರಿಗೆ ಉಳಿದದ್ದು ಆರು



ವೆಂಕಟನರಸಪ್ಪನವರ ಮಾತಾಪಿತೃಗಳಾದ
ಲಕ್ಷ್ಮಿನರಸಮ್ಮ ಮತ್ತು ಕುರುಡುಮಲೆ ನರಸಿಂಗರಾವ್

ಜನ ಗಂಡು ಸಂತಾನ. ಇವರಲ್ಲಿ ಮೂವರಿಗಷ್ಟೇ ವಿವಾಹವಾಗಿತ್ತು. ಉಳಿದವರ ಹೊಣೆ ಹಿರಿಯಮಗನಾದ ನನ್ನ ದೊಡ್ಡಪ್ಪನವರಾದ ವೆಂಕಟನರಸಪ್ಪನವರ ಮೇಲೆ ಬಿತ್ತು.

ಇವರು ಕಲಿತದ್ದು ಶ್ಯಾನುಭೋಗ ವೃತ್ತಿಗೆ ಸಾಕಾಗುವಷ್ಟು ಮಾತ್ರ. ಆದರೆ ಇವರು ಕಲಿಸಿದ್ದು ಅಪಾರ. ಇವರ ಉದ್ಯೋಗ ಹಳ್ಳಿಗಳ ಸುತ್ತಾಟ. ಇದರಿಂದಾಗಿ ಇವರು ಗಳಿಸಿದ್ದು ಸುತ್ತಲಿನ ಹತ್ತಾರು ಗ್ರಾಮಗಳ ಜನರ ಸಂಪರ್ಕ, ಅವರ ಪ್ರೀತಿ ಮತ್ತು ವಿಶ್ವಾಸ. ಇಷ್ಟೇ ಅಲ್ಲದೆ ಕುಲಬಾಂಧವರ ಅಪಾರ ಮೆಚ್ಚುಗೆಯೂ ಸಹ ಇವರನ್ನು ಸದಾಕಾಲವೂ ಚಟುವಟಿಕೆಯಿಂದಿರುವಂತೆ ಪ್ರೋತ್ಸಾಹಿಸಿತು.

ಸಮಾಜಸೇವೆ, ಧಾರ್ಮಿಕ ಕಾರ್ಯಗಳಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದ ನನ್ನ ದೊಡ್ಡಪ್ಪನವರು ತಮ್ಮ ವೈಯಕ್ತಿಕ ಕಷ್ಟಗಳನ್ನು ದೂರ ಸರಿಸಿದ್ದರು. ತಾಲ್ಲೂಕಿನ ಹಿರಿಯ ಕಿರಿಯ ಅಧಿಕಾರಿಗಳಿಗೆ ಮಾತ್ರವಲ್ಲದೇ; ಜಿಲ್ಲಾಮಟ್ಟದ ಉನ್ನತಾಧಿಕಾರಿಗಳಿಗೂ ಇವರ ಬಗ್ಗೆ ಅಪಾರ ಮಮತೆಯಿತ್ತು. ಯಾವುದೇ ಕೆಲಸವನ್ನಾದರೂ ಸಲೀಸಾಗಿ ಮಾಡಬಲ್ಲವರೆಂಬ ನಂಬಿಕೆಯನ್ನು

ಉಳಿಸಿಕೊಂಡಿದ್ದರು. ಮೈಸೂರು ಸಂಸ್ಥಾನದ ಮಹಾರಾಜರೇ ಮೊದಲಾಗಿ ಮಾನ್ಯ ಮಂತ್ರಿ ಮಹೋದಯರನ್ನು ತುಂಬ ಹತ್ತಿರದಿಂದ ಕಾಣುವ, ಅವರ ಶಿಷ್ಟಾಚಾರಕ್ಕೆ ಕಳಂಕ ಉಂಟಾಗದಂತೆ ನಡೆದುಕೊಳ್ಳುವ ಸರಳ ಸಜ್ಜನಿಕೆಗಳು ಇವರಲ್ಲಿದ್ದುವೆಂದರೆ ಅದು ಅತಿಶಯೋಕ್ತಿಯೇನಲ್ಲ.

ಸಮಾಜಸೇವೆಗೆ ತಮ್ಮನ್ನು ಸಮರ್ಪಿಸಿಕೊಂಡಿದ್ದ ಇವರು ಮಾಡಿದ ಕಾರ್ಯಗಳು ಹಲವಾರು. ಊರಿಂದ ಊರಿಗೆ ಸಂಪರ್ಕ ರಸ್ತೆಗಳನ್ನುಂಟು ಮಾಡಿ, ಗ್ರಾಮಗಳ ಕೆರೆ ಕುಂಟೆಗಳನ್ನು ದುರಸ್ತಿ ಮಾಡಿಸಿ, ದೇವಾಲಯ ಅಭಿವೃದ್ಧಿಯಲ್ಲಿ ಸಕ್ರಿಯವಾಗಿ ಭಾಗವಹಿಸಿ ತಮ್ಮ ಕೆಲಸದಲ್ಲಿ ಪ್ರಾಮಾಣಿಕತೆ ಮತ್ತು ನಿಷ್ಠೆಗಳನ್ನು ತೋರ್ಪಡಿಸಿದ್ದ ಇವರ ಆದರ್ಶ ಅನುಕರಣೀಯವಾದದ್ದು. 'ಮಂಡಿಕಲ್ ವಾಸುದೇವರಾಯರಂತೆ ಕುರುಡಮಲೆ ವೆಂಕಟನರಸಪ್ಪನವರು' – ಎಂಬ ನಾಣ್ಣುಡಿ ಪ್ರಚಲಿತವಿದೆ.

ಅಷ್ಟೇನೂ ಎತ್ತರವಲ್ಲದ ಸದಾನಗುಮೊಗದ, ತೆಳ್ಳನೆಯ ದೇಹದ ನನ್ನ ದೊಡ್ಡಪ್ಪ ತೀರಿಕೊಂಡದ್ದು ತಮ್ಮ ಸುಮಾರು ಅರವತ್ತೆರಡರ ಪ್ರಾಯದಲ್ಲಿ.

*ಯೇನಾಸ್ಯ ಪಿತರೋ ಯಾತಾಯೇನ ಯಾತಾಪಿತಾಮಹಾಃ।*
*ತೇನ ಯಾಯಾತ್ ಸತಾಂ ಮಾರ್ಗಂ ತೇನ ಗಚ್ಛನ್ ನ ರಿಷ್ಯತೇ॥*

ತನ್ನ ತಂದೆ – ತಾಯಿ, ಅಜ್ಜ – ಮುತ್ತಜ್ಜ ಮುಂತಾದ ಪೂರ್ವಜರು ಧರ್ಮ ಮಾರ್ಗವನ್ನು ಯಾವ ಕ್ರಮದಿಂದ ಹಿಡಿದು ಹೋದರೋ ಆ ಕ್ರಮದಿಂದಲೇ ಹೋಗಬೇಕು. ಅದನ್ನು ಹಿಡಿದರೆ ಆತನಿಗೆ ಕೇಡು ಸಂಭವಿಸುವುದಿಲ್ಲ.

***ಲೇಖಕರು ಗದಗ ಜಿಲ್ಲೆಯ ಶಿರಹಟ್ಟಿಯ ಸರ್ಕಾರಿ ಪ್ರಥಮದರ್ಜೆ ಕಾಲೇಜಿನಲ್ಲಿ ಪ್ರಾಚಾರ್ಯರು***

---

*ನನ್ನವನಿವನೆಂದು*
*ಅನ್ಯನು ಅವನೆಂದು*
*ಅವರು ಪರಿಗಣಿಸುವರು*
*ವಸುಧೆಯೇ ತಮ್ಮ ಕುಟುಂಬವೆಂದೆಣಿಪರು*
*ಉದಾರಚರಿತ್ರರು ಘನರು*
*– ಇಂದ್ರಚಾಪದಿಂದ*

---

# ನಮ್ಮ ಮನೆ – ನಮ್ಮ ಹಿರಿಯರು

'ನಿಮ್ಮ ಪೂರ್ವಜರ ಬಗ್ಗೆ ಪುಸ್ತಕ ಮಾಡುತ್ತಿದ್ದೀರಲ್ಲಾ, ಅವರು ಅಂಥ ಮೇಧಾವಿಗಳೇ? ಸಾಧಕರೇ?' ಎಂದು ಜನ ಕೇಳಿದ್ದುಂಟು. ನಿಜ, ದೇಶದ ಅಸಂಖ್ಯ ವಂಶಗಳಲ್ಲಿ ನಮ್ಮದೂ ಒಂದು. ನಮ್ಮದು ರಾಜಮನೆತನವೂ ಅಲ್ಲ ಅಥವಾ ಇತಿಹಾಸ ಕಂಡರಿಯದ ಮೇಧಾವಿಗಳ ಸಂತತಿಯೂ ಅಲ್ಲ. ನಮ್ಮ ಪೂರ್ವಜರು ಎಲ್ಲರಂತೆ ಸಾಮನ್ಯವಾಗಿದ್ದುಕೊಂಡೇ ತಮ್ಮ ಕೈಲಾದಷ್ಟು ಮಟ್ಟಿಗೆ ನಾಡಸೇವೆ–ರಾಷ್ಟ್ರಸೇವೆ ಮಾಡುತ್ತಾ, ಸನ್ಮಾರ್ಗದಲ್ಲಿ ನಡೆದು, ಸಮಾಜದ ಹಾಗೂ ತಮ್ಮ ವಂಶದ ಏಳಿಗೆಗೆ ಶ್ರಮಿಸಿದವರು. ಅವರನ್ನು ಸ್ಮರಿಸಿ ಸ್ಫೂರ್ತಿ ಪಡೆಯುವುದೇ ಈ ಪುಸ್ತಕದ ಮೂಲ ಉದ್ದೇಶ. ನಮ್ಮ ಪೂರ್ವಜರ ಕಥೆ ಬೇರ್‍ಯಾವುದೇ ಮಧ್ಯಮ ವರ್ಗದ ಕುಟುಂಬಕ್ಕಿಂತ ಭಿನ್ನವಾಗಿಲ್ಲ. ಆದರೆ ನಮ್ಮ ಪೂರ್ವಜರ ದೂರದೃಷ್ಟಿ ಇಂದು ನಮ್ಮನ್ನು ಅಭಿವೃದ್ಧಿಯ ಪಥದಲ್ಲಿರಿಸಿದೆ.

ನಮ್ಮ ಮುತ್ತಾತಂದಿರು ಮತ್ತು ಸ್ವಂತ ತಾತನನ್ನು ಕಂಡಿಲ್ಲದಿದ್ದರೂ ಅವರ ಬಗ್ಗೆ ನಮ್ಮ ಮನೆಯ ಹಿರಿಯರಿಂದ ತಿಳಿದುಕೊಂಡಿರುವುದುಂಟು. ನಮ್ಮ ಮನೆಯ ಪ್ರತ್ಯಕ್ಷ ಹಿರಿಯರು ಇಟ್ಟ ಹೆಜ್ಜೆ ನಡೆದ ದಾರಿಗಳ ಬಗ್ಗೆ ನನಗೆ ಪೂರ್ಣ ಅರಿವಿದೆ. ಇದು ನಮ್ಮ ಜೀವನದ ಮೇಲೆ ಅಚ್ಚಳಿಯದ ಪ್ರಭಾವ ಬೀರಿದೆ.

## ನಮ್ಮ ಅಜ್ಜಿ

ನಮ್ಮ ತಾಯಿ ನೌಕರಿಗೆ (ಆಗ ಅವರು ಭಾರತ್ ಎಲೆಕ್ಟ್ರಾನಿಕ್ಸ್ ಸಂಸ್ಥೆಯಲ್ಲಿ ಉದ್ಯೋಗದಲ್ಲಿದ್ದರು) ಮುಂಜಾನೆ ಆರು ಘಂಟೆಗೆ ಹೊರಟರೆ ಮತ್ತೆ ವಾಪಸ್ ಆಗುತ್ತಿದುದು ಸಂಜೆಗೇ. ಈ ಸಮಯದಲ್ಲಿ ನಮ್ಮನ್ನೆಲ್ಲಾ (ನಾಲ್ಕು ಪುಟ್ಟ ಮಕ್ಕಳನ್ನು) ನೋಡಿಕೊಳ್ಳುವ ಜಾವಾಬ್ದಾರಿಯು ನಮ್ಮ ಅಜ್ಜಿಯದಾಗಿತ್ತು. "ಅಜ್ಜಿಯಮ್ಮ"(ನಾವೆಲ್ಲರೂ ಅವರನ್ನು – ನಮ್ಮ ಅಜ್ಜಿ ಸರೋಜಮ್ಮನವರನ್ನು–

ಪ್ರೀತಿಯಿಂದ ಕರೆಯುತ್ತಿದ್ದ ಹೆಸರು) ನಿಜ ಹೇಳಬೇಕೆಂದರೆ ನಮಗೆ ಅಮ್ಮ ಹಾಗೂ ಅಜ್ಜಿ ಒಮ್ಮೆಲೆ ಆಗಿದ್ದರು. ನಮ್ಮನ್ನೆಲ್ಲಾ ನೋಡಿ–ಕೊಳ್ಳುವುದು ಅವರಿಗೆ ಕಷ್ಟದ ಕೆಲಸವಾಗಿರಲಿಲ್ಲ.

ನಮ್ಮ ತಾತನವರು, ನಮ್ಮ ತಂದೆ ಹದಿನಾಲ್ಕು ವರ್ಷದವರಿದ್ದಾಗ ತೀರಿ–ಕೊಂಡರಂತೆ. ನಮ್ಮ ತಂದೆಯೇ ನಮ್ಮ ತಾತನವರ ಐದು ಜನ ಮಕ್ಕಳ ಪೈಕಿ ಹಿರಿಯರು. ಅವರ ಹಿಂದೆ ನಾಲ್ಕು ಚಿಕ್ಕ ಮಕ್ಕಳಿದ್ದರು, ಕೊನೆಯ ಮಗು (ಸುಜಾತತ್ತೆ)ವಿಗೆ ಕೇವಲ ಒಂದು ವರ್ಷ. ಚಿಕ್ಕ ವಯಸ್ಸಿನಲ್ಲೇ ಯಜಮಾನರನ್ನು ಕಳೆದುಕೊಂಡು ಐದು ಚಿಕ್ಕಮಕ್ಕಳನ್ನು ಬೆಳೆಸುವ ಕಷ್ಟಕರ ಪರಿಸ್ಥಿತಿ ನಿಜಕ್ಕೂ ಎಂಥವರಿಗೂ ಭಯ ಹುಟ್ಟಿಸುವಂತಹುದು. ಆದರೆ ನಮ್ಮ ಅಜ್ಜಿ ಇಂತಹ ಪರಿಸ್ಥಿತಿಯಲ್ಲೂ ಧೃತಿಗೆಡದೆ ತಮ್ಮ ಭಾವಂದಿರ ಸಹಾಯದಿಂದ ಮಕ್ಕಳನ್ನು ಬೆಳೆಸಿದ್ದೇ ಅಲ್ಲದೇ ಇಂದು ಅವರೆಲ್ಲರೂ ತಮ್ಮ ಸ್ವಂತ ಕಾಲ ಮೇಲೆ ನಿಂತು ಉತ್ತಮ ಜೀವನವನ್ನು ನಡೆಸುವಂತೆ ಮಾಡಿದ್ದಾರೆ. ಇಂದು ತಮ್ಮ ವಂಶದ ನಾಲ್ಕನೆಯ ತಲೆಮಾರನ್ನು ಕಾಣುತ್ತಿರುವ ಅಜ್ಜಿ ವಿಕ್ರಂ, ಪವನ್ ಚೈತನ್ಯ ಹಾಗೂ ಸಾತ್ವಿಕ್‌ರನ್ನು ತಮ್ಮ ಎಂಭತ್ತು ವರ್ಷದ ಇಳಿವಯಸ್ಸಿನಲ್ಲೂ ಅಷ್ಟೇ ಉತ್ಸಾಹದಿಂದ ಬೆಳೆಸುತ್ತಿದ್ದಾರೆ. ನಮ್ಮ ಪೂರ್ವಜರ ಬಗ್ಗೆ ಪುಸ್ತಕ ತರಲು ಅವರೇ ನಮಗೆ ಸ್ಫೂರ್ತಿ.

## ನಮ್ಮ ತಂದೆ

ನಮ್ಮ ತಂದೆ ಜೀವನವನ್ನು ಎಂದಿಗೂ ಸಕಾರಾತ್ಮಕ ದೃಷ್ಟಿಯಿಂದ ನೋಡಿದವರು. ಇದೇ ಗುಣವನ್ನು ಅವರು ಇತರರಲ್ಲೂ, ವಿಶೇಷವಾಗಿ ತಮ್ಮ ಪರಿವಾರದವರಲ್ಲಿ ಕಾಣಬಯಸಿದವರು.

ನಮ್ಮ ತಂದೆಯವರು ಬಾಲ್ಯದಲ್ಲಿ ನಮ್ಮೆಲ್ಲರ ಮೇಲೆ ಒಳ್ಳೆಯ ಪ್ರಭಾವ ಬೀರಿದ್ದಾರೆ. ಅವರ ಜೀವನ ನಮ್ಮೆಲ್ಲರಿಗೂ ಒಂದು ಪ್ರತ್ಯಕ್ಷ ಆದರ್ಶ. ಸೋಮಾರಿತನವೆಂಬುದು ಅವರ ಜಾಯಮಾನಕ್ಕೆ ಬಂದಿದ್ದಲ್ಲ. ಬಹಳ ಭಾವುಕ ವ್ಯಕ್ತಿಯಾಗಿದ್ದರೂ ತಮ್ಮ ಶಿಸ್ತಿನ ನಡತೆಯಲ್ಲಿ ಒಂದು ಚೂರೂ ತಪ್ಪಿದವರಲ್ಲ. ಎಲ್ಲ ಮನಷ್ಯನಿಗೂ ಒಂದು ಆಸಕ್ತಿಯರಂಗ ಇದ್ದಂತೆ ಅವರಿಗೂ ಸಹ ನಮ್ಮ ಧರ್ಮ, ಸಂಸ್ಕೃತಿ, ವೇದೋಪನಿಷತ್, ಆಟ ಪಾಠ, ಸಂಗೀತ ಕಲೆ, ಕೃಷಿ ಇವುಗಳಲ್ಲಿ ಅಪಾರ ಆಸಕ್ತಿ ಹಾಗು ಅಭಿರುಚಿ ಇತ್ತು. ಮಹಾತ್ಮರ ಆತ್ಮ



ನಮ್ಮ ತಂದೆ ತಾಯಿ:
ಶ್ರೀಮತಿ ಶಾಂತಾಮಣಿ ಮತ್ತು
ಶ್ರೀ ಪ್ರಭಾಕರ ರಾವ್

ಕಥೆಗಳು, ಅವರ ಸಿದ್ಧಾಂತಗಳನ್ನು ಬಹಳವಾಗಿ ಓದುತ್ತಿದ್ದ ಅವರು ತಮ್ಮ ಜೀವನದಲ್ಲಿ ಅವೆಲ್ಲವುಗಳನ್ನೂ ಅಳವಡಿಸಿ- ಕೊಂಡಿಯೇ ಬಂದಿ- ದ್ದಾರೆ.

ಇವರ ಕಾರ್ಯ ತತ್ಪರತೆ ಮತ್ತು ಎಲ್ಲವನ್ನೂ ವಿಭಿನ್ನ ದೃಷ್ಟಿಯಿಂದ ಕಾಣುವ ರೀತಿಗಳು ಎಂಥವರಿಗೂ ಸ್ಫೂರ್ತಿ ನೀಡು- ವಂತಹುದು. ತಮ್ಮ ಬಿಡುವಿನ ವೇಳೆಯಲ್ಲಿ ಇವರು ಅನೇಕ ಕಾರ್ಯಗಳಲ್ಲಿ ತಮ್ಮನ್ನು ತಾವು ತೊಡಗಿಸಿ- ಕೊಳ್ಳುತ್ತಿದ್ದರು. ಅವುಗಳಲ್ಲಿ ಪ್ರಮುಖ- ವಾದವು ಸುದ್ದಿ ಸೇವೆ ಮತ್ತು ಜೇನು ಸಾಕಣೆಗಳು.

ಜೇನು ಸಾಕಣೆಯ ಬಗ್ಗೆ ಒಂದೆರಡು ಮಾತು ಹೇಳದಿದ್ದರೆ ನಮ್ಮ ತಂದೆಯ ಪೂರ್ಣ ಪರಿಚಯ ಮಾಡಿದಂತಾಗುವುದಿಲ್ಲ. ಕೃಷಿ ವಿಶ್ವವಿದ್ಯಾಲಯದಲ್ಲಿ ಉದ್ಯೋಗದಲ್ಲಿದ್ದ ಇವರು ಜೇನುಸಾಕಣೆಯ ಬಗ್ಗೆ ಆಸಕ್ತಿವಹಿಸಿ ಒಂದೆರಡು ಗೂಡುಗಳನ್ನು ನಮ್ಮ ಮನೆಯಲ್ಲಿ ತಂದಿರಿಸಿದರು. ಅತಿ ಶೀಘ್ರದಲ್ಲೇ ಇದು ಅನೇಕ ಗೂಡುಗಳಾಗಿ ವೃದ್ಧಿಯಾಯಿತು. ಆಗ ನಮ್ಮ ಮನೆಯಲ್ಲಿ ಜೇನಿನ ಹೊಳೆಯೇ ಹರಿಯಿತು. ಪ್ರತಿವಾರವೂ ನಮ್ಮ ಮನೆಯಲ್ಲಿ ಜೇನು ತೆಗೆಯುವ ಕಾರ್ಯಕ್ರಮವಿರುತ್ತಿತ್ತು. ಇದು ಮಾತ್ರ ನಮ್ಮ ಮನೆಮಂದಿಯೆಲ್ಲ ಆನಂದದಿಂದ ಭಾಗವಹಿಸುತ್ತಿದ್ದ ಒಂದು ಕಾರ್ಯಕ್ರಮ.

ಜೇನ್ನೊಣಗಳು ಆಗಾಗ ಕಚ್ಚಿ ನಮ್ಮ ಮುಖ ಕೈಕಾಲುಗಳನ್ನು ಊದಿಸುತ್ತಿದ್ದವಾದರೂ, ಜೇನುತುಪ್ಪವನ್ನು ಕಂಡಾಗ ಅವೆಲ್ಲ ಸಿಹಿಯಾಗುತ್ತಿತ್ತು.

ಗಂಡು-ಹೆಣ್ಣು ಎಂಬ ಬೇಧ-ಭಾವ ಎಂದೂ ಅವರು ಮಾಡಿದವರಲ್ಲ. ಸಮನಾದ ಪ್ರೋತ್ಸಾಹ ನೀಡಿ ಅವರು ನಮ್ಮನ್ನು ಬೆಳೆಸಿದರು. ಆದರೆ ನಾವುಗಳು ಅದರ ಸಂಪೂರ್ಣ ಉಪಯೋಗ ಪಡೆದುಕೊಳ್ಳಲಿಲ್ಲವೇನೋ ಎಂದು ಒಮ್ಮೊಮ್ಮೆ ನಮಗೆ ಅನ್ನಿಸುತ್ತದೆ. ಧೈರ್ಯವಾಗಿ ಮುನ್ನುಗ್ಗಲು ಅವರು ಬಹಳ ಒತ್ತುಕೊಡುತ್ತಿದ್ದರು.ಇದಕ್ಕೆ ಒಂದು ಉತ್ತಮ ಉದಾಹರಣೆ ಎಂದರೆ ಈಜು ಕಲಿಯಲು ಹೋದ ನಾವು ಭಯದಿಂದ ಹಿಂಜರಿಯುತ್ತಿದ್ದಾಗ ಅವರು ನಮ್ಮನ್ನು ಮೇಲಿನಿಂದ ನೀರಿಗೆ ತಳ್ಳಿದ್ದು. ಅಂದಿನಿಂದ ನಮ್ಮ ಹಿಂಜರಿಕೆ ಮಂಗಮಾಯ. ಹಾಗೆಯೇ ಇವರ ಪ್ರೋತ್ಸಾಹದಿಂದ ಹೆಣ್ಣುಮಕ್ಕಳು ಸಂಗೀತ ಮತ್ತು ಭರತನಾಟ್ಯಗಳನ್ನೂ ಕಲಿಯುವಂತಾಯ್ತು.

ಮುಂಜಾನೆಯ ಚಳಿಯನ್ನು ಬಿಟ್ಟು ಮೇಲೆದ್ದು ಕಾರ್ಯರೂಪರಾಗುವಂತೆ ನಮ್ಮನ್ನು ಮಾಡಲು ಅವರು ನಮಗೆ ವೇದಪಾಠವನ್ನು ಹೇಳಿಕೊಡುತ್ತಿದ್ದರು. ಈ ಪ್ರಯತ್ನದಿಂದ ನಾವೆಲ್ಲರೂ ವಿಷ್ಣುಸಹಸ್ರನಾಮ, ಶ್ರೀಸೂಕ್ತ ಮತ್ತು ಪುರುಷಸೂಕ್ತಗಳನ್ನು ಕಲಿಯುವಂತಾಯಿತು. ನಾವುಗಳಷ್ಟೇ ಅಲ್ಲದೇ ನಮ್ಮ ಅಕ್ಕ ಪಕ್ಕದ ಮನೆಯವರೂ ಇದರ ಲಾಭವನ್ನು ಪಡೆದರು. ಮುಂಜಾನೆಯಲ್ಲಿ ಕಲಿತ ಈ ಪಾಠವೆಲ್ಲವೂ ನಮ್ಮ ಸ್ಮೃತಿ ಪಟಲದಲ್ಲಿ

### ಪ್ರವಾಸ ವರದಿ

ಡಿಸೆಂಬರ್ ೧೯೭೯ : ಎರಡನೆಯ ತರಗತಿಯಲ್ಲಿ ಓದುತ್ತಿದ್ದ ನನಗೆ ದಕ್ಷಿಣ ಭಾರತದ ಪ್ರವಾಸದ ಸಂಭ್ರಮ. ಪ್ರವಾಸದ ನಂತರ ಆ ಹತ್ತು ದಿನಗಳಲ್ಲಿ ಕಂಡ ಸ್ಥಳಗಳ ಬಗ್ಗೆ ಒಂದು ವರದಿಯನ್ನು ಬರೆಯಬೇಕಾಯಿತು. ಏಳು ವರ್ಷದ ಬಾಲಕನ ಕೈಯಲ್ಲಿ ಪ್ರವಾಸ ವರದಿಯೊಂದನ್ನು ಬರೆಸಿದ ಹೆಗ್ಗಳಿಕೆ ನಮ್ಮ ತಂದೆಗೆ ಸಲ್ಲಬೇಕು. ಇದು ನಮ್ಮ ತಂದೆಯವರ ಪ್ರೋತ್ಸಾಹಕ ಗುಣಕ್ಕೆ ಅತಿ ಚಿಕ್ಕ ನಿದರ್ಶನ.

***- ಬಾಬು***

ಅಲುಗಾಡದೇ ಕುಳಿತ್ತಿದ್ದಷ್ಟೇ ಅಲ್ಲದೇ, ಇನ್ನೂ ಹೆಚ್ಚು ಕಲಿತು ನಾವು ನಮ್ಮ ಮಕ್ಕಳಿಗೂ ಕಲಿಸಬೇಕೆಂಬ ಆಸಕ್ತಿ ಹುಟ್ಟಿಸಿದೆ. ಈಗಲೂ ನಮ್ಮ ಮನೆಯ ಪುಟ್ಟಮಕ್ಕಳಿಗೆ ಸ್ತೋತ್ರಗಳನ್ನು ಅಷ್ಟೇ ಆಸಕ್ತಿ, ಶ್ರದ್ಧೆಗಳಿಂದ ಇವರು ಹೇಳಿಕೊಡುತ್ತಿದ್ದಾರೆ.

ಸಮಯದ ಸದುಪಯೋಗಕ್ಕಾಗಿ ಅವರು ನಮಗೆ ಅನೇಕ ಮಾರ್ಗಗಳನ್ನು ಸೂಚಿಸುತ್ತಿದ್ದರು. ಪ್ರತಿದಿನ ದಿನಪತ್ರಿಕೆಗಳಲ್ಲಿ ಬರುವ ನುಡಿಮುತ್ತುಗಳನ್ನು ಬರೆದಿಡುವಂತೆ ನಮಗೆ ಹೇಳುತ್ತಿದ್ದರು. ನಾವೆಲ್ಲರೂ ಅಂದು ಸಂಗ್ರಹಿಸಿರುವ ನುಡಿಮುತ್ತುಗಳು ಒಗಟು, ಗಾದೆಗಳ ಪುಸ್ತಕಗಳು ಇಂದಿಗೂ ಅಮೂಲ್ಯ ಸಂಗ್ರಹ ಪುಸ್ತಕಗಳಾಗಿವೆ.

ನಮ್ಮ ತಂದೆಯವರು ಸಮಾಜಸೇವೆಯಲ್ಲೂ ಸದಾ ಮುಂದು. ಕೇವಲ ಸಂಬಂಧಿಗಳು ಮತ್ತು ಸ್ನೇಹಿತರು ಇವರಿಗಷ್ಟೇ ತಮ್ಮನ್ನು ಮೀಸಲಾಗಿಡದೇ, ಸಮೂಹ, ಸಮಾಜ, ರಾಜ್ಯ ಹಾಗೂ ರಾಷ್ಟ್ರ ಮಟ್ಟದ ಕಾರ್ಯಗಳಲ್ಲೂ ತಮ್ಮನ್ನು ತಾವು ತೊಡಗಿಸಿಕೊಂಡಿದ್ದಾರೆ. ಅತ್ಯಂತ ಜವಾಬ್ದಾರಿಯುತ ಪ್ರಜೆಯಾಗಿ ತಮ್ಮ ಪ್ರಜಾಸೇವಾ ಕಾರ್ಯವನ್ನು ನಿರ್ವಹಿಸುತ್ತಿದ್ದಾರೆ.

ಯಾವುದೇ ಆಚಾರವನ್ನು ಅವರು ಅದರ ಬಗ್ಗೆ ಸಂಶೋಧನೆ ಮಾಡದೆ ಒಪ್ಪಿಕೊಳ್ಳುವವರಲ್ಲ. ಆ ವಿಚಾರವನ್ನು ಮೊದಲು ತಾವು ತಿಳಿದು, ಅನುಸರಿಸಿ ದೃಢೀಕರಿಸಿದ ಮೇಲೇ ಅದನ್ನು ತಮ್ಮ ಮಕ್ಕಳಿಗೆ ಬೋಧಿಸುತಿದ್ದರು.

'ಗೃಹಸ್ಥಾಶ್ರಮ ಎಲ್ಲ ಆಶ್ರಮಗಳಿಗೆ ತಾಯಿ ಇದ್ದಂತೆ' ಎಂಬ ನುಡಿಯಂತೆ, ಅವರು ತಮ್ಮ ಗೃಹಸ್ಥ ಜೀವನದಲ್ಲಿ ನಾನಾ ಧಾರ್ಮಿಕ ಕಾರ್ಯಗಳನ್ನು ನಡೆಸಿದ್ದಾರೆ. ಹಿರಿಯರು, ಸಾಧುಗಳು, ಯತಿಗಳು, ಬಲ್ಲವರು, ವಿದ್ವಾಂಸರು, ಪಂಡಿತರು, ವಿಜ್ಞಾನಿಗಳು ಹಾಗೂ ಅನೇಕ ರಂಗಗಳಲ್ಲಿ ಸಾಧನೆ ಮಾಡಿದವರನ್ನು ಅವರು ತಮ್ಮ ಮನೆಗೆ ಕರೆದು ಆತಿಥ್ಯ ನೀಡಿ ಸತ್ಕರಿಸುತ್ತಿದ್ದರು. ಈ ಪರಂಪರೆಯಿಂದ ನಮಗೆ ನಾನಾ ರೀತಿಯ ವ್ಯಕ್ತಿಗಳ ಪರಿಚಯವಷ್ಟೇ ಅಲ್ಲದೆ ನಾನಾ ರಂಗಗಳಲ್ಲಿ ಆಸಕ್ತಿಯೂ ಬೆಳೆಯುತಿತ್ತು. ಸದ್ಯ, ೭೨೦ ಚಂದ್ರ ದರ್ಶನ ಕಂಡಿರುವ ನಮ್ಮ ತಂದೆಯವರ ಸಮಾಜದ ವಿವಿಧ ರಂಗಗಳಲ್ಲಿನ ಉತ್ಸಾಹ ಯಾವ ಕಿಂಚಿತ್ತೂ ಕಡಿಮೆಯಾಗಿಲ್ಲ.

ದಂಪತಿಗಳಿಬ್ಬರೂ ದಾನ ಧರ್ಮ ಕಾರ್ಯಗಳಲ್ಲಿ ಎತ್ತಿದ ಕೈ. ನಮ್ಮ ತಂದೆಗೆ ಸ್ಫೂರ್ತಿಯಾಗಿ, ಬೆನ್ನೆಲುಬಾಗಿ ನಿಂತಿರುವ ನಮ್ಮ ತಾಯಿಯ

## ಹೆಜ್ಜೆ ಗುರುತುಗಳು

ನಮ್ಮ ತಂದೆಯವರಿಗೆ ತಮ್ಮ ೧೩ನೆ ವಯಸ್ಸಿನಲ್ಲಿ ಬ್ರಹ್ಮೋಪದೇಶವಾಯಿತು. ಇದಾದ ಕೂಡಲೆ, ದುರದೃಷ್ಟವಷಾತ್, ಅತ್ಯಂತ ದೈವ ಭಕ್ತಿಯುಳ್ಳವರೂ, ಸಾಧ್ವಿಗಳೂ ಆದ ಅವರ ತಂದೆ ಶ್ರೀ ವಿಠ್ಠಲಕೃಷ್ಣರಾಯರು ದೈವಾಧೀನರಾದರು. ಅಂದಿನಿಂದ ನಮ್ಮ ತಂದೆಯವರಿಗೆ ಕಷ್ಟಗಳ ಸರಮಾಲೆಯೇ ಪ್ರಾರಂಭವಾಯಿತು. ಹದಿಹರೆಯದ ಹುಡುಗ ತಮ್ಮ ತಂದೆಯ ಕರ್ಮಗಳನ್ನು ಮುಗಿಸಿ ೧೦ನೇ ತರಗತಿಯ ವ್ಯಾಸಂಗಕ್ಕೆ ತಮ್ಮ ಸ್ವಂತ ಊರಾದ ಮಂಡಿಕಲ್ಲಿನಿಂದ ತಮ್ಮ ಸೋದರತ್ತೆಯ ಊರಾದ ಶ್ರೀನಿವಾಸಪುರಕ್ಕೆ ಹೋಗಬೇಕಾಯಿತು. ಅಲ್ಲಿ ಅವರ ಸೋದರತ್ತೆಯು ಹೋಟೆಲ್ ಒಂದನ್ನು ನಡೆಸುತ್ತಿದ್ದರು. ಅಲ್ಲಿ ಇವರು ಆಶ್ರಯ ಪಡೆದು ತಮ್ಮ ೧೦ನೇ ತರಗತಿ ಪೂರ್ಣಗೊಳಿಸಿದರು. ನಂತರದ ವಿದ್ಯಾಭ್ಯಾಸಕ್ಕೆ ಅವರು ಬೆಂಗಳೂರಿಗೆ ತೆರಳಿದರು. ಬೆಂಗಳೂರಿನ ಹಾಸ್ಟೆಲ್ ಒಂದರಲ್ಲಿ ತಂಗಿದ್ದು, ವಾರಾನ್ನ ಮಾಡಿಕೊಂಡು ತಮ್ಮ ವಿದ್ಯಾಭ್ಯಾಸವನ್ನು ಮುಂದುವರೆಸಿದರು. ಹೀಗೆ ಅವರು B.Com ಮತ್ತು B.PEd ಪದವಿಗಳನ್ನು ಮುಗಿಸಿದರು.

ತಮ್ಮ ವ್ಯಾಸಂಗ ಮುಗಿದ ನಂತರ ಅವರು ಡೆಕ್ಕನ್ ಹೆರಾಲ್ಡ್ ಪತ್ರಿಕೆಯಲ್ಲಿ ಕೆಲಸಕ್ಕೆ ಸೇರಿದರು. ಈ ಸೇರ್ಪಡೆ ಅವರಿಗೆ ಪತ್ರಿಕೋದ್ಯಮದ ಮಹತ್ವವನ್ನು ತೋರಿಸಿಕೊಟ್ಟಿತು. ಜನರನ್ನು ಮುಟ್ಟುವಲ್ಲಿ ಮುದ್ರಣ ಮಾಧ್ಯಮದ ಮಹತ್ವವನ್ನು ಅರಿತ ಅವರು ತಮ್ಮ ಜೀವನದುದ್ದಕ್ಕೂ ಪುಸ್ತಕಗಳನ್ನು ಬೆಳಕಿಗೆ ತಂದಿದ್ದಾರೆ. ಇವರು ತಮ್ಮ ೨೫ನೇ ವಯಸ್ಸಿನಲ್ಲಿ (ಜೂನ್ ೧೨, ೧೯೬೬ ರಂದು) ವಿವಾಹವಾದರು. ಮದುವೆಯಾದ ತಕ್ಷಣ ತಮ್ಮ ಸಂಸಾರವನ್ನು–ತಾಯಿ, ತಮ್ಮ, ತಂಗಿಯರನ್ನು ಬೆಂಗಳೂರಿಗೆ ಕರೆತಂದರು. ಅಂದಿನಿಂದ ಅವರ ಸಂಪೂರ್ಣ ಜವಾಬ್ದಾರಿ ತಂದೆಯವರದಾಯಿತು. ಇವರು ತಮ್ಮ ೨೩ನೇ ವಯಸ್ಸಿನಲ್ಲಿಯೇ ಯುವ ಜನಾಂಗವನ್ನು ಒಟ್ಟುಗೂಡಿಸುವ ಸಲುವಾಗಿ ಶ್ರೀ ಶುಕ್ಲ ಯಜುರ್ವೇದ ಯುವಕ ಸಂಘವನ್ನು ಸ್ಥಾಪಿಸಿದರು. ಇದರ ಸ್ಥಾಪಕ ಕಾರ್ಯದರ್ಶಿಗಳಾಗಿಯೂ ಕೆಲಸ ಮಾಡಿದರು. ಈ ಸಂಸ್ಥೆಯ ವತಿಯಿಂದ 'ಗಾರ್ಗಿ'ಎಂಬ ಕಿರುಹೊತ್ತಿಗೆಯನ್ನು ಆಗಿನ ಕಾಲಕ್ಕೇ ತಂದ ಹೆಗ್ಗಳಿಕೆ ನಮ್ಮ ತಂದೆಯವರದು. ಇದೇ ಸಂದರ್ಭದಲ್ಲಿ ಅಂದಿನ ಮಾನ್ಯ ರಾಷ್ಟ್ರಪತಿಯವರಾದ ವಿ. ವಿ. ಗಿರಿಯವರನ್ನೂ ಭೇಟಿ ಮಾಡಿದರು. ಶ್ರೀ ಶುಕ್ಲ ಯಜುರ್ವೇದ ಯುವಕ ಸಂಘದೊದಿಗೇ ಗಾರ್ಗಿ ಸಂಸ್ಕೃತಿ ವಿದ್ಯಾ ಕೇಂದ್ರದ ಸ್ಥಾಪಕ ಕಾರ್ಯದರ್ಶಿಯಾಗಿಯೂ ಇವರು ಕಾರ್ಯನಿರ್ವಹಿಸಿದ್ದರು. ೧೯೮೮ರಲ್ಲಿ ಯಲಹಂಕ ಉಪನಗರದಲ್ಲಿರುವ ತಮ್ಮ ಸ್ವಗೃಹ "ಈಶಾವಾಸ್ಯ"ಕ್ಕೆ ಬಂದ ಇವರು ಅಂದಿನಿಂದ ನಾನಾ ಕ್ಷೇತ್ರಗಳಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದಾರೆ.

**– ಜಿ. ಪಿ. ವಿದ್ಯಾ**

ಪಾತ್ರ ಬಹಳ ದೊಡ್ಡದು. ೬೦ ವಸಂತಗಳ ಸಾರ್ಥಕ ಜೀವನವನ್ನು ಪೂರೈಸಿರುವ ಈ ಸಂದರ್ಭದಲ್ಲಿ ದೇವರು ಈ ದಂಪತಿಗಳಿಗೆ ಆಯುರಾರೋಗ್ಯ, ನೆಮ್ಮದಿ, ಸುಖಶಾಂತಿಗಳನ್ನು ಕೊಡಲಿ ಎಂದು ನಾವು ಬೇಡುತ್ತೇವೆ. ಹಾಗೂ ಅವರ ಜೀವನದ ಸಾಧನೆಯ ಕೆಲವು ಅಂಶಗಳನ್ನಾದರೂ ನಾವು ಪಾಲಿಸಿದರೆ ನಮ್ಮ ಜೀವನ ಸಾರ್ಥಕವಾಗುತ್ತದೆ.

## ನಮ್ಮ ತಾಯಿ

ನಮ್ಮ ತಾಯಿ ನಮಗೆಲ್ಲರಿಗೂ ಮಾತೆ, ಮಾರ್ಗದರ್ಶಿ ಮತ್ತು ಒಬ್ಬ ಪ್ರತ್ಯಕ್ಷ ದೇವತೆ. ನಮಗೆ ಅವರು ಎಂದೂ ಮನೆಯಲ್ಲಿ ಇರದೆ ಇದ್ದುದು ಬೇಸರದ ಸಂಗತಿಯಾಗಿತ್ತು. ಆದರೆ ಅವರು ಉದ್ಯೋಗದಲ್ಲಿದ್ದುಕೊಂಡೇ ಮಾಡಿರುವ ಸಾಧನೆಗಳ ಬಗ್ಗೆ ನಮಗೆಲ್ಲಾ ಹೆಮ್ಮೆಯಿದೆ. ಅಮ್ಮ ಫ್ಯಾಕ್ಟರಿಯ ಅನೇಕ ಸೇವಾ ಸಂಸ್ಥೆಗಳಲ್ಲಿ ಸೇವೆ ಸಲ್ಲಿಸುತ್ತಿದ್ದರು. ಇದೇ ಅಲ್ಲದೇ ತಮ್ಮ ಫ್ಯಾಕ್ಟರಿಯ ಸಮಯದ ನಂತರ ಮಹಿಳಾ ಸಹಕಾರಿ ಬ್ಯಾಂಕಿನ ಆಡಳಿತ ಮಂಡಳಿಯಲ್ಲೂ ಸೇವೆ ಸಲ್ಲಿಸುತ್ತಾ ಬಂದಿದ್ದು ಈಗ ಬ್ಯಾಂಕಿನ ಅಧ್ಯಕ್ಷೆಯಾಗಿದ್ದಾರೆ. ನಿವೃತ್ತಿಯ ನಂತರ ಇವರು ಬ್ಯಾಂಕಿನ ಸೇವೆಯಲ್ಲಿ ತಮ್ಮನ್ನು ಹೆಚ್ಚು ತೊಡಗಿಸಿಕೊಳ್ಳುತ್ತಿದ್ದಾರೆ. ಅವರಿಗೆ ಸುಮಾರು ೧೫ ವರ್ಷಗಳಿಂದಲೂ ಅನರೋಗ್ಯವಿದ್ದರೂ ಸದಾ ಯಾವುದಾದರೊಂದು ಕೆಲಸದಲ್ಲಿ ತೊಡಗಿರುವುದು ಅವರ ಅಂತಃಶಕ್ತಿ ಹಾಗೂ ಹೋರಾಟದ ಮನೋಭಾವಕ್ಕೆ ಹಿಡಿದ ಕನ್ನಡಿ.

– **ಜಿ. ಪಿ. ವಿಠ್ಠಲಕೃಷ್ಣ**
**ಜಿ. ಪಿ. ವಿದ್ಯಾ**
**ಜಿ. ಪಿ. ವಿಮಲ**
**ಜಿ. ಪಿ. ವಿನಯಬಾಬು**

## ನಮ್ಮ ಸಂಬಂಧಿಗಳು

*ಘಟ್ಟು ವಂಶದವರಷ್ಟೇ ಅಲ್ಲದೇ ಅವರೊಂದಿಗೆ ಸಂಬಂಧ ಬೆಳೆಸಿದ ವಂಶಗಳಲ್ಲನೇಕರು ಸಮಾಜ ಸೇವೆಯಲ್ಲಿ ಮುಂದಾಳತ್ವ ವಹಿಸಿದ್ದರು.*

*ಘಟ್ಟು ವಂಶದೊಂದಿಗೆ ಸಂಬಂಧ ಬೆಳೆಸಿದ ಕೆಲವು ಕುಟುಂಬಗಳ ವಂಶಾವಳಿಗಳು ಇಲ್ಲಿವೆ.*

# ಚಲ್ದಿಗಾನಹಳ್ಳಿ ಚರಿತ್ರೆ

ಸಿ. ಬಿ. ಸುಬ್ರಮಣ್ಯಂ

ನಮ್ಮ ಪೂರ್ವಿಕರು ಶ್ರೀನಿವಾಸಪುರ ತಾಲ್ಲೂಕು, ಚಲ್ದಿಗಾನಹಳ್ಳಿ ಗ್ರಾಮಸ್ತರಾಗಿದ್ದು ಸದರಿ ಗ್ರಾಮದ ಶ್ಯಾನುಭೋಗರೂ ಆಗಿದ್ದರು. ನಮ್ಮ ತಾತ ರಾಮಪ್ಪನವರು ೯೦ ವರ್ಷಕ್ಕೆ ಮೇಲ್ಪಟ್ಟು ಜೀವಿಸಿದ್ದರು. ಇವರು ಕಾಲವಾದಾಗ ನನಗೆ ಸುಮಾರು ಐದು ವರ್ಷ ಇರಬಹುದು. ನಮ್ಮ ತಾತನವರಿಗೆ ಐದು ಜನ ಗಂಡು ಮಕ್ಕಳು ಮತ್ತು ಮೂವರು ಹೆಣ್ಣು ಮಕ್ಕಳು.
ಇವರುಗಳೆಂದರೆ: **ಗಂಡು ಮಕ್ಕಳು** – ನಾರಣಪ್ಪ (ಬೆಂಗಳೂರು), ಸಿ. ಆರ್. ಭಾಸ್ಕರಪ್ಪ (ಶ್ರೀನಿವಾಸಪುರ), ಸಿ. ಆರ್. ವೆಂಕಟರಮಣಪ್ಪ (ನಂಗಲಿ ಗ್ರಾಮ), ಸಿ.ಆರ್. ಕೃಷ್ಣಮೂರ್ತಿ (ಮದನಪಲ್ಲಿ), ಸಿ.ಆರ್. ಸುಬ್ಬರಾವ್ (ಶ್ರೀನಿವಾಸಪುರ). **ಹೆಣ್ಣು ಮಕ್ಕಳು** – ಅಚ್ಚಮ್ಮ, ಗೌರಮ್ಮ ಮತ್ತು ಮಹಾಲಕ್ಷ್ಮಮ್ಮ.

**ನಮ್ಮ ತಂದೆ – ಭಾಸ್ಕರಪ್ಪನವರು**

ನಮ್ಮ ತಂದೆ ಸಿ.ಆರ್. ಭಾಸ್ಕರಪ್ಪ ಇವರ ಪತ್ನಿ ರುಕ್ಮಿಣಿಯಮ್ಮ, ಈಕೆ ಮಂಡಿಕಲ್ ಘಟ್ಟು ವೆಂಕಟಾಚಲಯ್ಯನವರ ಜ್ಯೇಷ್ಠ ಪುತ್ರಿ. ಇವರ ವಾಸ ಶ್ರೀನಿವಾಸ ಪುರ. ನನ್ನನ್ನು ಭುಜದ ಮೇಲೆ ಕುಳ್ಳಿರಿಸಿಕೊಂಡು ನಮ್ಮ ತಂದೆ ನನ್ನನ್ನು ಸಂತೆಗೆ, ಚಲ್ದಿಗಾನಹಳ್ಳಿ ಜಮೀನುಗಳಲ್ಲಿಯ ಬೆಳೆಗಳನ್ನು ನೋಡಿಕೊಂಡು ಬರಲು ತಿರುಗಾಡಿಸುತ್ತಿದ್ದರು. ನಮ್ಮೂರು ಸಂತೆಯಲ್ಲಿ ನನಗೆ ಮೂರು ಕಾಸು ಕೊಡುತ್ತಿದ್ದರು. ಆ ಕಾಸಿಗೆ ನನ್ನ ಟೋಪಿ ತುಂಬಾ ಪುರಿ, ಕಳ್ಳೇಬೀಜ , ಬತ್ತಾಸು ತೆಗೆದುಕೊಳ್ಳುತ್ತಿದ್ದೆ. ನಮ್ಮ ತಂದೆಗೆ ನಾವು ೪ ಜನ ಗಂಡು ಮಕ್ಕಳು – ಸಿ.ಬಿ.ಅನಂತರಾಮರಾವ್, ಸಿ.ಬಿ. ವಿಶ್ವನಾಥರಾವ್, ಸಿ.ಬಿ.ಸೂರ್ಯನಾರಾಯಣರಾವ್, ಸಿ.ಬಿ.ಸುಬ್ರಮಣ್ಯಂ ಮತ್ತು ಇಬ್ಬರು ಹೆಣ್ಣು ಮಕ್ಕಳು – ಜಯಲಕ್ಷ್ಮಮ್ಮ ಮತ್ತು ಪದ್ಮಾವತಮ್ಮ. ಪದ್ಮಾವತಮ್ಮನನ್ನು ಕೊಲದೇವಿ ನಾರಾಯಣಚಾರ್‌ರವರ ೨ನೇ ಮಗ ಲಕ್ಷ್ಮೀನಾರಾಯಣಾಚಾರ್

ರವರಿಗೆ ಮದುವೆ ಮಾಡಿಕೊಟ್ಟಿದ್ದು ಇವರು ಶ್ರೀರಂಗಪಟ್ಟಣದಲ್ಲಿ ವಾಸವಾಗಿದ್ದರು.

ನಮ್ಮ ತಂದೆಯವರು ದಿವಾನ್ ವಿಶ್ವೇಶ್ವರಯ್ಯ ನವರ ಮನೆಯಲ್ಲಿ ಅಡಿಗೆ ಮಾಡುತ್ತಿದ್ದು ಬೆಣ್ಣೆ ಹಾಕಿ ರಾಗಿ ಮುದ್ದೆ ತೊಳೆಸುತ್ತಿದ್ದ ವಿಷಯ ನಮ್ಮ ತಾಯಿಯವರು ಆಗಿಂದಾಗ್ಗೆ ಜ್ಞಾಪಿಸಿಕೊಂಡು ನಮಗೆ ಹೇಳುತ್ತಿದ್ದರು. ಬೆಂಗಳೂರಿನಲ್ಲಿ ಕೋರಿದಷ್ಟು ನಿವೇಶನ ಕೊಡುತ್ತೇನೆಂದರೂ ಅವರು ನಿರಾಕರಿಸಿ ಬಂದು ಇವರು ಶ್ರೀನಿವಾಸಪುರದಲ್ಲಿ ವಾಸ್ತವ್ಯ ಹೂಡಿದರು. ಶ್ರೀನಿವಾಸಪುರಕ್ಕೆ ಬರುತ್ತಿದ್ದ ನ್ಯಾರೋಗೇಜ್ ರೈಲಿನ ಹತ್ತಿರ ಕುರುಕುಲು ತಿಂಡಿ ವ್ಯಾಪಾರ ಮಾಡಿಕೊಂಡಿದ್ದು ಶ್ರೀನಿವಾಸಪುರದಲ್ಲಿ ಹೋಟೆಲ್ ಉದ್ಯಮ ಸ್ಥಾಪಿಸಿ, ಜೀವನ

**ಭಾಸ್ಕರಪ್ಪನವರ ನಳಪಾಕ**

ಭಾಸ್ಕರಪ್ಪನವರ ಬಗ್ಗೆ ಎರಡು ಮಾತು ಬರೆಯದಿದ್ದರೆ ಘಟ್ ವೆಂಕಟಾಚಲಯ್ಯನವರ ಮೊದಲ ಅಳಿಯನ ಉದಾರ ಮನೋಭಾವ ಮೃದತ್ವದ ಅರಿವು ಆಗುವುದಿಲ್ಲ. ಇವರು ಮೊದಲು ದಿವಾನ್ ವಿಶ್ವೇಶ್ವರಯ್ಯನ ಬಳಿ ಅಡಿಗೆಯವರಾಗಿದ್ದರು. ಶ್ರೀ ವಿಶ್ವೇಶ್ವರಯ್ಯನವರು ಕೋಲಾರ ಜಿಲ್ಲೆಯವರಾಗಿದ್ದರಿಂದ ಅವರಿಗೆ ರಾಗಿ ಮುದ್ದೆ, ಸೊಪ್ಪು ಹುಳಿಯು ಮೇಲೆ ಅಪಾರ ಪ್ರೇಮ. ಅವರು ಒಮ್ಮೆ ಮುದ್ದೆ ಊಟಮಾಡುತ್ತಿದ್ದಾಗ ಅವರಿಗೆ ಬೇಕಾದ ಒಬ್ಬ ಉನ್ನತ ಆಂಗ್ಲ ಅಧಿಕಾರಿ ಇವರನ್ನು ಕಾಣಲು ಬಂದರು ಇವರ ಮುದ್ದೆ ಊಟವನ್ನು ನೋಡಿ ಇದು ಯಾವ ಬಗೆ ಊಟವೆಂದು ಕೇಳಿದರು. ಆಗ ವಿಶ್ವೇಶ್ವರಯ್ಯನವರು ಕೋಲಾರ ಪ್ರಾಂತ್ಯದ ಜನತೆಗೆ ಇದು ದಿನನಿತ್ಯದ ಆಹಾರವೆಂದು ತಾವೂ ಸಹ ಕೋಲಾರ ಜಿಲ್ಲೆಯಿಂದ ಬಂದವರಾಗಿದ್ದರಿಂದ ಈ ಮುದ್ದೆ ಊಟ ಪ್ರಿಯವಾದ ಆಹಾರವೆಂದು ತಿಳಿಸಿದರು. ಇದನ್ನು ಕೇಳಿದ ಆ ಆಂಗ್ಲ ಅಧಿಕಾರಿ ತಾವೂ ಸಹ ಒಮ್ಮೆ ಈ ಊಟದ ಸವಿಯನ್ನು ಅನುಭವಿಸಬೇಕೆಂದು ಅಪೇಕ್ಷಿಸಿದರು. ಆಂಗ್ಲ ಅಧಿಕಾರಿಯ ಅಪೇಕ್ಷೆಯನ್ನು ವಿಶ್ವೇಶ್ವರಯ್ಯನವರು ತಮ್ಮ ನೆಚ್ಚಿನ ಭಾಸ್ಕರಪ್ಪನವರಿಗೆ ತಿಳಿಸಲಾಗಿ, ಭಾಸ್ಕರಪ್ಪನವರು ಹಳೆಯ ಕೆಂಪುರಾಗಿ ಹಿಟ್ಟನ್ನು ವಸ್ತ್ರಕಾಯ ಮಾಡಿಸಿ ಅದಕ್ಕೆ ಸಮಪಾಲು ಬೆಣ್ಣೆಯ ಎಸರಿಟ್ಟು ಮೃದುವಾಗಿ ಹಿಟ್ಟು ತೊಳೆಸಿ ಸಣ್ಣ ಉಂಡೆಗಳನ್ನು ಮಾಡಿ, ಆ

ಸಾಗಿಸಿದರು, ಇವರ ಕಾಲದಲ್ಲಿ ಇವರ ಬಂಧು ಬಳಗದ ಮಕ್ಕಳು ವಿದ್ಯಾಭ್ಯಾಸಕ್ಕೆ ಶ್ರೀನಿವಾಸಪುರಕ್ಕೆ ಬಂದು ಇವರಲ್ಲೇ ಆಶ್ರಯ ಪಡೆದಿದ್ದರು. ನಮ್ಮ ತಂದೆಯವರು ಸಾರ್ವಜನಿಕರ ಸಹಕಾರದಿಂದ ಶ್ರೀನಿವಾಸಪುರದ ಈಶಾನ್ಯ ಭಾಗಕ್ಕೆ ದೊಡ್ಡಕೆರೆ ಅಂಚಿನಲ್ಲಿ ಶ್ರೀ ವರದಬಾಲಾಂಜನೇಯ ದೇವರ ಪ್ರತಿಷ್ಠೆ ಮಾಡಿಸಿ ಗುಡಿ ಕಟ್ಟಿಸಿ ನಿತ್ಯಪೂಜೆ, ಜಾತ್ರೆ ಏರ್ಪಡಿಸಿ ಶ್ರೀನಿವಾಸಪುರದಲ್ಲಿ ಜಾತ್ರೆ ನಡೆಯಲು ಪ್ರೇರಕರಾದರು, ಇವರ ೨ನೇ ಮಗ ಸಿ.ಬಿ. ವಿಶ್ವನಾಥರಾವ್ ರವರ ಮದುವೆ ಸಂಭ್ರಮನೋಡಿ ತಮ್ಮ ಕೊನೆ ಉಸಿರನ್ನು ಮಾವನ ಮನೆಯಲ್ಲೇ ಬಿಟ್ಟರು. ಇವರ ನಂತರ ನಮ್ಮ ಅಣ್ಣಂದಿರಾದ ಸಿ.ಬಿ. ಅನಂತರಾಮರಾವ್ ಮತ್ತು ಸಿ.ಬಿ. ಸೂರ್ಯನಾರಾಯಣರಾವ್ ರವರು ಹೋಟೆಲ್ ಉದ್ಯಮ

ಹಿಟ್ಟಿಗೆ ಹೆಚ್ಚು ಖಾರವಿಲ್ಲದ ಮೇಲೋಗರವನ್ನು ಮಾಡಿ ಬಡಿಸಿದರು. ಆ ರುಚಿಯಾದ ಊಟವನ್ನು ಉಂಡ ಆಂಗ್ಲ ಅಧಿಕಾರಿ ವಿಶ್ವೇಶ್ವರಯ್ಯನವರ ರಾಗಿ ಮುದ್ದೆ ಊಟವನ್ನು ಪ್ರಶಂಸಿಸಿದರು. ಇಂಥ ಅಡಿಗೆ ಭಾಸ್ಕರಪ್ಪನವರದು. ಇವರ ಚತುರತೆಗೆ ಮೆಚ್ಚಿ ವಿಶ್ವೇಶ್ವರಯ್ಯನವರು ಇವರಿಗೆ ಆಗಿನ ಬೆಂಗಳೂರಿಗೆ ಸಮೀಪದ ಮಲ್ಲೇಶ್ವರದ ಬಳಿ ೪ ಎಕರೆ ಜಮೀನು ಕೊಡುತ್ತೇವೆಂದು ಹೇಳಿದರು. ಆಗ ಭಾಸ್ಕರಪ್ಪನವರು ತನಗೆ ಜಮೀನು ಬೇಡವೆಂದೂ, ತನ್ನನ್ನು ಸೇವೆಯಿಂದ ನಿವೃತ್ತಿ ಮಾಡಿ ಸ್ವಗ್ರಾಮಕ್ಕೆ ಕಳಿಸಿಕೊಡಬೇಕೆಂದು ಪ್ರಾರ್ಥಿಸಿದರು. ಆ ಸಾತ್ವಿಕ ಶಿಖಾಮಣಿಯ ಅಪೇಕ್ಷೆಯನ್ನು ಒಪ್ಪಿ ವಿಶ್ವೇಶ್ವರಯ್ಯನವರು ಅವರನ್ನು ಅವರ ತವರೂರಿಗೆ ಕಳಿಸಿಕೊಟ್ಟರು. ನಂತರ ಅವರ ಊರಾದ ಚಲ್ದಿ ಗಾನಹಳ್ಳಿ ಸಮೀಪದ ಶ್ರೀನಿವಾಸಪುರ ಪಟ್ಟಣದಲ್ಲಿ ಸಣ್ಣದಾದ ಉಪಹಾರಗೃಹ ನಡೆಸಿ ಜೀವನ ನಡೆಸಿದರು. ಈ ಪುಣ್ಯ ದಂಪತಿಗಳ ಹಿರಿಯಮಗ ವೆಂಕಟಾಚಲಯ್ಯನವರ ದೌಹಿತ್ರ ಸಿ.ಬಿ. ಅನಂತರಾಮರಾಯರ ತಾತನಿಗೆ ತಕ್ಕ ಮಹಾಕೊಡುಗೈದಾನಿಯಾಗಿ ಅನೇಕ ಜನ ವಿದ್ಯಾರ್ಥಿಗಳಿಗೆ ಅನ್ನ, ವಸತಿ, ಆಶ್ರಯಗಳನ್ನು ಇತ್ತು ಪೋಷಿಸಿ ಕೀರ್ತಿಗಳಿಸಿದರು. ಅನಂತರಾಯರ ತಾಯಿ ರುಕ್ಮಿಣಮ್ಮನವರಿಗೆ ಅನಂತರಾಯರ ಮೊಮ್ಮಗ (ನಾಗರಾಜಶರ್ಮನ ಮಗ) ಹುಟ್ಟಿದಾಗ ಕನಕಾಭಿಷೇಕ ಸಮಾರಂಭ ನೆರವೇರಿತು.



ರುಕ್ಮಿಣಮ್ಮ ಮತ್ತು ಭಾಸ್ಕರಪ್ಪ



ಸಿ.ಬಿ. ಅನಂತರಾಮರಾವ್ ಮತ್ತು ನರಸಮ್ಮ

ಮುಂದುವರೆಸಿದರು. ನಮ್ಮ ೨ನೇ ಅಣ್ಣ ಸಿ.ಬಿ. ವಿಶ್ವನಾಥರಾವ್‌ರವರು ಉಪಾಧ್ಯಾಯ ವೃತ್ತಿಯಲ್ಲಿದ್ದರು. ನನ್ನ ವಿದ್ಯಾಭ್ಯಾಸ ಶ್ರೀನಿವಾಸಪುರದಲ್ಲಿ ಹೈಸ್ಕೂಲುವರೆಗೆ ನಡೆಯಿತು. ಕೋಲಾರದ ಇಂಟರ್ಮೀಡಿಯೆಟ್ ಕಾಲೇಜ್‌ನಲ್ಲಿ ೨ ವರ್ಷ ಕಳೆದು ಮುಂದಿನ ವಿದ್ಯಾಭ್ಯಾಸ ಮೊಟಕುಗೊಳಿಸಬೇಕಾಯಿತು.

ಆಗ ನಮ್ಮ ಅಣ್ಣ ಸಿ.ಬಿ. ವಿಶ್ವನಾಥರಾವ್‌ರವರು ಕೋಲಾರದ ಪೇಟೆಚಾಮನಹಳ್ಳಿಯಲ್ಲಿ ಉಪಾಧ್ಯಾಯರಾಗಿದ್ದರು. ನಮ್ಮ ಮನೆಯಲ್ಲಿ ಬೇಕಾದಷ್ಟು ಜನ ಬ್ರಾಹ್ಮಣ ವಿದ್ಯಾರ್ಥಿಗಳು ವಾರಾನ್ನಕ್ಕೆ ಬಂದು ವಿದ್ಯೆ ಕಲಿಯುತ್ತಿದ್ದರು. ಇವರು ಚಲ್ದಿಗಾನಹಳ್ಳಿಯ ಚರಿತ್ರೆಯಲ್ಲಿ ಪ್ರಾತಃಸ್ಮರಣೀಯರು. ಈಗ ಹೋಟೆಲ್ ಉದ್ಯಮವನ್ನು ನಮ್ಮ ಅಣ್ಣ ಸಿ.ಬಿ. ವಿಶ್ವನಾಥರಾವ್ ರವರು ನೋಡುತ್ತಿದ್ದಾರೆ. ಶ್ರೀ ವರದಬಾಲಾಂಜನೇಯ ಸ್ವಾಮಿಕಾರ್ಯ ನಮ್ಮ ಹಿರಿಯಣ್ಣ ಮಗ ಎ. ನಾಗರಾಜಶರ್ಮ ವಹಿಸಿಕೊಂಡಿರುತ್ತಾರೆ.

**ಪವಾಡ**

ನಮ್ಮ ತಾಯಿಯವರು ನಿರಕ್ಷರಿಗಳು. ನಮ್ಮಿಂದ ಶ್ರೀರಾಮ ನಾಮವನ್ನು ರೆಯುವುದನ್ನು ಕಲಿತು ರಾಮಕೋಟಿ ಬರೆದು ಲಕ್ಷಹೂಗಳು ಅರ್ಚನೆ ಮಾಡಿದ್ದರು, ನಂತರ ದಿನಪತ್ರಿಕೆ, ಪುಸ್ತಕಗಳು ಓದುವುದು ಅವರಿಗೆ ನಿತ್ಯಕರ್ತವ್ಯವಾಗಿತ್ತು. ಇವರು ದಕ್ಷಿಣಭಾರತ ಪ್ರವಾಸಮಾಡಿ ರಾಮೇಶ್ವರ, ಕನ್ಯಾಕುಮಾರಿ ಸಂದರ್ಶಿಸಿದ್ದರು. ಉತ್ತರ ಭಾರತದ ಕಾಶಿ ಕ್ಷೇತ್ರವನ್ನು ನೋಡಲು ಉತ್ಸುಕರಾಗಿದ್ದರು. ಅವರ ವಯೋಧರ್ಮ ಅದನ್ನು ನೋಡದಂತೆ ಮಾಡಿತು. ಇವರು ೧೯೭೭ರಲ್ಲಿ ಸ್ವರ್ಗಸ್ಥರಾದರು.

ನಾನು ಇಂಟರ್ಮೀಡಿಯೇಟ್‌ಗೆ ವಿದಾಭ್ಯಾಸ ಮೊಟಕುಗೊಳಿಸಿದ ನಂತರ ಹೋಟೆಲ್ ಉದ್ಯಮದಲ್ಲೇ ಇದ್ದು ಎರಡು ವರ್ಷ ಪುಂಗನೂರಿನಲ್ಲಿ ಹೋಟೆಲ್ ನಡೆಸಿ, ಆ ವ್ಯಾಪಾರದಲ್ಲೇ ಹಿನ್ನಡೆ ಕಂಡು ಶ್ರೀನಿವಾಸಪುರಕ್ಕೆ ಬಂದೆವು. ನನ್ನ ಸ್ನೇಹಿತ ಸಿ. ವಿ. ಮಲ್ಲಪ್ಪ ನವರ ಒತ್ತಾಯಕ್ಕೆ ಗ್ರಾಮ ಸೇವಕರ ಕೆಲಸಕ್ಕೆ ಅರ್ಜಿ ಸಲ್ಲಿಸಿ ಆಯ್ಕೆಯಾಗಿ ಎರಡು ವರ್ಷ ತರಬೇತಿ ಪಡೆದು ಸರ್ಕಾರಿ ಕೆಲಸಕ್ಕೆ ಸೇರಿದೆ. ೧೯೬೦ರಲ್ಲಿ ತಿಂಗಳ ಸಂಬಳ ಒಟ್ಟು ರೂ. ೭೫ ಬರುತ್ತಿತ್ತು.

**ನಮ್ಮ ಸಂಸಾರ**

೧೯೫೮ರಲ್ಲಿ ಜಯಮಣಿಯೊಂದಿಗೆ ವಿವಾಹವಾದ ಮೇಲೆಯೇ ನನಗೆ ಕೆಲಸ ಸಿಕ್ಕಿದ್ದು. ನಮ್ಮ ಸೋದರ ಮಾವ ಘಟ್ಟು ನಾರಾಯಣರಾವ್ ರವರ ದ್ವಿತೀಯ ಪುತ್ರಿಯೇ ನನ್ನ ಧರ್ಮ ಪತ್ನಿ ಜಯಮಣಿ. ನಮಗೆ ನಾಲ್ಕು ಜನ ಗಂಡು ಮಕ್ಕಳು – ರವಿಕುಮಾರ್, ವಿಜಯಕುಮಾರ್, ಗುರುಪ್ರಸಾದ್ ಮತ್ತು ಅಮರ್‌ನಾಥ್.

ಎಸ್. ರವಿಕುಮರ್‌ಗೆ ಭಾರತೀಯ ವಾಯುಸೇನೆಯಲ್ಲಿ ಕೆಲಸ , ಘಟ್ಟು ಪ್ರಭಾಕರರಾವ್‌ರವರ ಹಿರಿಯ ಮಗಳು ಚಿ.ಸೌ. ವಿದ್ಯಾ ಈತನ ಹೆಂಡತಿ, ಇವರಿಗೆ ಒಂದು ಗಂಡುಮಗ–ಸಾತ್ವಿಕ್. ಎರಡನೆಯ ಮಗ ವಿಜಯ್‌ಕುಮಾರ್‌ಗೆ ಬೆಂಗಳೂರಿನ ಜಿ.ಕೆ.ವಿ.ಕೆ ಯಲ್ಲಿ ಕೆಲಸ, ಬೆಂಗಳೂರಿನಲ್ಲಿ ವಾಸ. ಈತನ ಹೆಂಡತಿ ತಿರುಚಾನೂರಿನ ಬಿ. ಮಧುಸೂದನ ರಾವ್–ಕೌಸಲ್ಯಮ್ಮನವರ ಜ್ಯೇಷ್ಠ ಪುತ್ರಿ. ಇವರಿಗೂ ಒಬ್ಬ ಗಂಡುಮಗ–ಚೇತನ. ಮೂರನೇ ಮಗ ಗುರುಪ್ರಸಾದ್‌ಗೆ ಉಪ ಅಂಚೆ ಕಛೇರಿಯಲ್ಲಿ ಕೆಲಸ. ನಾಲ್ಕನೇ ಮಗ ಅಮರನಾಥ್ ಕೋಲಾರದಲ್ಲಿ ಸ್ನೇಹಿತರೊಡನೆ ಕೂಡಿ ಕಂಪ್ಯೂಟರ್ ಸಂಸ್ಥೆ ಮಾಡಿರುತ್ತಾರೆ. ಇತ್ತೀಚೆಗಷ್ಟೇ ಡಿ. ವಿ. ಅನಂತನಾರಾಯಣರವರ ಪುತ್ರಿ ಸವಿತಾಳೊಂದಿಗೆ ವಿವಾಹವಾದರು.

ನಮ್ಮ ಮಕ್ಕಳೆಲ್ಲ ಸೇರಿ ತಾರೀಖು ೨೬/೭/೯೯೬ ರಂದು ನನ್ನ ಮತ್ತು ಜಯಮಣಿಯ ಷಷ್ಠಿಪೂರ್ತಿ ಶಾಂತಿ ಹೋಮ ಮಾಡಿಸಿ, ಮರು ಮದುವೆ ಮಾಡಿಸಿ ಸಂತೋಷಪಟ್ಟರು.

***ಲೇಖಕರು ಘಟ್ಟು ಮನೆತನದಿಂದ ಹೆಣ್ಣು ತೆಗೆದುಕೊಂಡು ಸಂಬಂಧ ಬೆಳೆಸಿದವರು. ಇವರ ಮಗ ಶ್ರೀ ಎಸ್. ರವಿಕುಮಾರ್ ಘಟ್ಟು ಪ್ರಭಾಕರ ರಾವ್‌ರವರ ಹಿರಿಯ ಪುತ್ರಿ ಚಿ. ಸೌ. ವಿದ್ಯಾಳನ್ನು ವಿವಾಹವಾಗಿದ್ದಾರೆ.***

***ಇತಿಹಾಸ ಎಂದರೆ ಹೀಗೆ ಹೇಳಲಾಗುತ್ತಿತ್ತು ಎಂದರ್ಥ. ಚರಿತೆ ಎಂದರೆ ನಡೆದು ಬಂದ ರೀತಿ. ಆದರೆ ಈ ಎರಡೂ ಪರಿಭಾವಿಸಿದಷ್ಟು ಸರಳವಲ್ಲ. ವರ್ತಮಾನದ ಪುರಾವೆಗಳ ತುಣುಕನ್ನು ಕೂಡಿಸಿ ಭೂತದಲ್ಲಿನ ಚಿತ್ರಣವನ್ನು ಮರುರಚಿಸುವ ಪ್ರಯತ್ನ.***
***ಹೀಗೆ ಮಾಡುವಾಗ ಚಿತ್ರದಲ್ಲಿ ಚಿತ್ತು, ಬಿರುಕು, ಕೊರತೆ ಇರದಂತೆ ವಿರೂಪ–ವಿಲೋಪಗಳು ಆಗದಂತೆ ನೋಡಿಕೊಳ್ಳಲು ಎಷ್ಟು ಎಚ್ಚರ ವಹಿಸಿದರೂ ಕಡಿಮೆಯೆಂದೇ ಎನಿಸುತ್ತದೆ.***

# ಮುಳ್ಳಹಳ್ಳಿ ಚರಿತ್ರೆ


ಡಿ. ವಿ. ಪ್ರಭಾಕರ

ಶುಕ್ಲ ಯಜುರ್ವೇದ ಕಾಣ್ವ ಶಾಖಾ ಬ್ರಾಹ್ಮಣ ಕುಟುಂಬಗಳಲ್ಲಿ ಒಂದಾದ ಅರವತ್ತು ಮನೆ ಮತ್ತು ಹದಿನಾಲ್ಕು ಗೋತ್ರಗಳ ಗುಂಪಿಗೆ ಸೇರಿದ ಪುರಾತನ ಮುಳ್ಳಹಳ್ಳಿಯವರ ಕುಟುಂಬವು ದಳಸನೂರಿನಲ್ಲಿ ನೆಲೆಸಿತು. ಈ ಮುಳ್ಳಹಳ್ಳಿ ಕುಟುಂಬದ ಮೂಲ ಪುರುಷ ಹೊನ್ನಪ್ಪ.

## ಮೂಲಪುರುಷ ಹೊನ್ನಪ್ಪ

ಹೊನ್ನಪ್ಪನವರು ಈಗಿನ ಆಂಧ್ರದ ಚಂದ್ರಗಿರಿಯಿಂದ ಬಂದು ದಳಸನೂರಿನಲ್ಲಿ ಸುಮಾರು ೧೭ನೇ ಶತಮಾನದ ಮಧ್ಯಭಾಗದಲ್ಲಿ ನೆಲೆಸಿದರು. ಇವರ ಮನೆದೇವರು ಕರ್ನಾಟಕದ ದಕ್ಷಿಣ ಕನ್ನಡ ಜಿಲ್ಲೆಯ ಕುಕ್ಕೆ ಸುಬ್ರಹ್ಮಣ್ಯಸ್ವಾಮಿ. ಇವರ ಪೂರ್ವೀಕರು ಕನ್ನಡ ನಾಡಿನವರೇ ಆಗಿದ್ದು ಶ್ರೀಕೃಷ್ಣದೇವರಾಯನ ಕಾಲದಲ್ಲಿ ವಿಜಯನಗರಕ್ಕೆ ವಲಸೆ ಹೋಗಿ ಆ ರಾಜ್ಯದ ಅವನತಿಯ ನಂತರ ಆಂಧ್ರದಲ್ಲಿಯ ಈಗಿನ ತಿರುಪತಿಯ ಬೆಟ್ಟದ ಕೆಳಗೆ ಇರುವ ಚಂದ್ರಗಿರಿಯಲ್ಲಿ ಕೆಲಕಾಲ ಇದ್ದು ನಂತರ ಹೊನ್ನಪ್ಪನವರ ಕಾಲದಲ್ಲಿ ಕರ್ನಾಟಕಕ್ಕೆ ವಾಪಸ್ಸಾದರು. ಕರ್ನಾಟಕದಲ್ಲಿ ಎಲ್ಲಿಗೆ ಹೋಗುವ ಗುರಿಯಿದ್ದರೋ ತಿಳಿಯದು. ಅಂತು ದಳಸನೂರಿಗೆ ಬಂದು ಅಲ್ಲಿಯೇ ಸ್ಥಿರವಾಗಿ ಉಳಿಯಲು ತೀರ್ಮಾನಿಸಿದರು. ಸುತ್ತಮುತ್ತಲಿನ ಹತ್ತು ಗ್ರಾಮಗಳ ಶ್ಯಾನುಭೋಗಿಯನ್ನು ಪಡೆದುಕೊಂಡರು. ಭೂಮಿ ಮನೆ ಮುಂತಾದವುಗಳನ್ನು ಸಂಪಾದಿಸಿದರು. ತಿರುಪತಿಯ ಪ್ರಾಂತ್ಯದಿಂದ ಬಂದ ಪರಿಣಾಮವಾಗಿ ದಳಸನೂರಿಗೆ ಸಮೀಪದಲ್ಲಿರುವ ಹೂಹಳ್ಳಿ ಗ್ರಾಮದಲ್ಲಿ ಶ್ರೀವೆಂಕಟರಮಣಸ್ವಾಮಿ ದೇವಾಲಯವನ್ನು ಸ್ಥಾಪಿಸಿದರು. ಈ ದೇವಸ್ಥಾನದ ಎಲ್ಲಾ ಪೂಜಾಕಾರ್ಯಗಳನ್ನೂ ಇಂದಿಗೂ ಈ ವಂಶದವರೇ ನಡೆಸಿಕೊಂಡು ಬರುತ್ತಿರುತ್ತಾರೆ.

## ಮುಳ್ಳಹಳ್ಳಿಯವರ ವಂಶವೃಕ್ಷ (ಭಾರದ್ವಾಜ ಗೋತ್ರ)




(ಮುಂದುವರೆದಿದೆ)

- ವೆಂಕಟಸುಬ್ಬಯ್ಯ(1855-1941)
  ಹೆಂ : ಪುಟ್ಟಲಕ್ಷ್ಮಮ್ಮ
  - ಡಿ.ವಿ. ವೆಂಕಟಾಚಲಯ್ಯ (1908-1998)
    ಹೆಂ : ೧ ಲಕ್ಷ್ಮಿ ೨ ಪದ್ಮಾವತಮ್ಮ
    - ಲಲಿತಾಮಣಿ
      ಗಂ : ಬಿ.ಎಸ್.ಕೆ.ಮೂರ್ತಿ
      - ಬಿ.ಕೆ.ಗೋವರ್ಧನ್ ಜ: 1950
        ಹೆಂ : ಸರಸ್ವತಿ
    - ಡಿ.ವಿ. ಪ್ರಭಾಕರ ಜ : 1938
      ಹೆಂ : ಲತ
      - ಪಿ. ವೀಣಾ ಜ : 1968
        ಗಂ : ಜಿ.ಪಿ. ವಿಠ್ಠಲ್‌ಕೃಷ್ಣ
      - ಪಿ. ಯಮುನಾ ಜ : 1970
        ಗಂ : ಕೆ.ಪಿ.ಮಂಜುನಾಥ್
      - ಪಿ.ಎಸ್.ರಾಘವೇಂದ್ರ ಜ : 1976
    - ಡಿ.ವಿ.ಅನಂತನಾರಾಯಣ
      ಜ : 1940
      ಹೆಂ : ಸಿಂಧು
      - ಎ. ಸುನೀತ ಜ : 1970
        ಗಂ : ನಾಗರಾಜ್
      - ಎ. ಸವಿತ ಜ : 1974
        ಗಂ : ಅಮರನಾಥ್
      - ಎ. ಆಶ ಜ : 1977
    - ಡಿ.ವಿ.ಶಾಂತಾಮಣಿ ಜ : 1943
      ಗಂ : ಪ್ರಭಾಕರ ರಾವ್
  - ವಿ. ಶೇಷಾಚಲಯ್ಯ
    ಹೆಂ : ಲಕ್ಷ್ಮಿ
    ಸಂತತಿ ಇಲ್ಲ
  - ಡಿ.ವಿ. ಕೃಷ್ಣರಾವ್ (1919-2000)
    ಹೆಂ : ೧ ನಾಗರತ್ನ ೨ ಅಕ್ಕಣ್ಣಮ್ಮ
    - ಡಿ.ಕೆ. ಸುಬ್ರಹ್ಮಣ್ಯ ಜ: 1949
      ಹೆಂ : ಸರಸ್ವತಮ್ಮ
    - ಡಿ.ಕೆ. ಶ್ರೀನಿವಾಸ ಜ: 1954
      ಹೆಂ : ರಾಧಮ್ಮ
    - ಡಿ.ಕೆ. ವೆಂಕಟೇಶಬಾಬು ಜ: 1967
      ಹೆಂ : ಛಾಯಾದೇವಿ
    - ಡಿ.ಕೆ. ಮುರಳೀಧರ ಜ : 1971
    - ಡಿ.ಕೆ. ರಘು ಜ: 1973
    - ಹೆಣ್ಣುಮಕ್ಕಳು
      ರಾಜಲಕ್ಷ್ಮಿ (ಜ : 1958), ಸುಮಿತ್ರದೇವಿ(ಜ : 1962)
      ಪದ್ಮಲತಾದೇವಿ (ಜ: 1965), ಸರಳ (ಜ : 1974)
      ದಾಕ್ಷಾಯಣಿ (ಜ : 1977 )

* 01-01-2002ರ ಸ್ಥಿತಿಯ ಮೇರೆಗೆ

## ಮಲ್ಲಪ್ಪ

ಹೊನ್ನಪ್ಪನವರ ಮಗ ಮಲ್ಲಪ್ಪನವರು. ಇವರಿಗೆ ತಮ್ಮ ತಂದೆಯಿಂದ ಚಿರಸ್ಥಿರ ಆಸ್ತಿ ಸಂಪತ್ತು ಬಂದಿತ್ತು. ಇವರ ಸಹೋದರರ ಬಗ್ಗೆ ಮಾಹಿತಿ ದೊರೆತಿಲ್ಲ. ಮಲ್ಲಪ್ಪನವರಿಗೆ ನಂಜುಂದಪ್ಪ ೧, ಕುಮಾರಪ್ಪ, ತಿಮ್ಮಪ್ಪ ಮತ್ತು ಸುಬ್ಬಯ್ಯ ಎಂಬ ನಾಲ್ಕು ಮಂದಿ ಗಂದು ಮಕ್ಕಳು. ಮಲ್ಲಪ್ಪನವರ ಎಗ ಕುಮಾರಪ್ಪ ಮತ್ತು ತಿಮ್ಮಪ್ಪ ಎಂಬುವವರಿಗೆ ಮಕ್ಕಳಿರಲಿಲ್ಲ. ಸುಬ್ಬಯ್ಯನವರಿಗೆ ಮಲ್ಲಪ್ಪ ೨, ನಂಜುಂಡಪ್ಪ ೩ –ಇಬ್ಬರು ಮಕ್ಕಳು. ನಂಜುಂಡಪ್ಪನವರ ಮಗ ಮಲ್ಲಪ್ಪ೩. ಮಲ್ಲಪ ೨ ಅವರ ಮಗ ಸುಬ್ಬಯ್ಯ ೨. ಇವರ ಕಾಲದಲ್ಲಿ ದಳಸನೂರು ಗ್ರಾಮವನ್ನು ಬಿಟ್ಟು ಗುಮ್ಮರೆಡ್ಡಿಪುರಕ್ಕೆ ಹೋಗಿ ನೆಲೆಸಿದರು. ಸುಬ್ಬಯ್ಯ ೨ ಇವರ ಮಗ ರಾಮಕೃಷ್ಣಯ್ಯನವರು (೧೮೮೦–೧೯೬೫).

## ನಂಜುಂಡಪ್ಪ ೧

ಇವರು ಮಲ್ಲಪ್ಪನವರ ಹಿರಿಯ ಮಗ. ಇವರಿಗೆ ರಾಮಪ್ಪ ಮತ್ತು ಕುಮಾರಪ್ಪ ಎಂಬ ಇಬ್ಬರು ಗಂಡು ಮಕ್ಕಳು. ಇವರು ತಮ್ಮ ವಂಶಕ್ಕೆ ಬಂದ ಶ್ಯಾನುಭೋಗ ವೃತ್ತಿಯನ್ನು ಮುಂದುವರೆಸಿದರು. ಇವರೂ ಸಹ ಹಣ, ಬಂಗಾರ ಮತ್ತು ಆಸ್ತಿಗಳನ್ನು ಹೇರಳವಾಗಿ ಸಂಪಾದಿಸಿದ್ದರು. ಇವರ ಭಾಗಕ್ಕೆ ಬಂದ ಆಸ್ತಿಯನ್ನು ತಮ್ಮ ಇಬ್ಬರು ಗಂಡುಮಕ್ಕಳಿಗೂ ಸಮಭಾಗಮಾಡಿದರು. ನಂಜುಂಡಪ್ಪನವರು ಪುಟ್ಟಮ್ಮ ಎಂಬಾಕೆಯನ್ನು ವಿವಾಹವಾಗಿದ್ದರು. ನಂಜುಂಡಪ್ಪ ೧ ರ ಮಗ ರಾಮಪ್ಪನವರಿಗೆ ಸಂತತಿಯಿಲ್ಲದೇ ಶಿವರಾಮಪ್ಪ ಎಂಬುವರನ್ನು ದತ್ತು ಮಗನಾಗಿ ಪಡೆದಿದ್ದರು.

## ಕುಮಾರಪ್ಪ

ಇವರು ನಂಜುಂಡಪ್ಪನವರ ಎರಡನೆಯ ಮಗ. ಇವರ ಹೆಸರು ತಮ್ಮ ಮನೆದೇವರಾದ ಸುಬ್ರಹ್ಮಣ್ಯ ಕ್ಷೇತ್ರದ ಕುಮಾರಸ್ವಾಮಿಯ (ಷಣ್ಮುಖ) ಹೆಸರೆಂದು ತಿಳಿದು ಬರುತ್ತದೆ. ಇವರು ಜನಾನುರಾಗಿಗಳಾಗಿದ್ದು ಐಶ್ವರ್ಯವಂತರಾಗಿದ್ದು ದಳಸನೂರಿನ ಸುತ್ತಮುತ್ತಲಿನ ಗ್ರಾಮಗಳಲ್ಲೆಲ್ಲಾ ಪ್ರಸಿದ್ಧರಾಗಿದ್ದರು. ಇವರು ಹತ್ತು ಗ್ರಾಮದ ಶ್ಯಾನುಭೋಗರಾಗಿದ್ದರು. ಕುಮಾರಪ್ಪನವರ ಹೆಂಡತಿ ಅಕ್ಕಣ್ಣಮ್ಮ. ಇವರಿಗೆ ಇಬ್ಬರು ಗಂಡುಮಕ್ಕಳು

–ಸುಬ್ಬಯ್ಯ ಮತ್ತು ನಂಜುಂಡಪ್ಪ ೨. ಕುಮಾರಪ್ಪನವರ ನಂತರ ಈ ಮನೆತನಕ್ಕೆ (ಈ ಶಾಖೆಗೆ) ಕುಮಾರಪ್ಪನವರ ವಂಶವೆಂದೇ ಹೆಸರಾಯಿತು.

ನಂಜುಂಡಪ್ಪ ೨ರವರ ಹೆಂಡತಿ ಸಾಕಮ್ಮ, ಕುಮಾರಪ್ಪನವರ ಆಸ್ತಿಯಲ್ಲಿ ಸುಬ್ಬಯ್ಯ ಮತ್ತು ನಂಜುಂಡಪ್ಪ ಇವರಿಗೆ ಸಮಪಾಲು. ಶ್ಯಾನುಭೋಗಿಕೆಯಲ್ಲೂ ಸಮಪಾಲು. ಸುಬ್ಬಯ್ಯನವರ ಮಗ ನಾರಾಯಣಪ್ಪ. ಇವರಿಗೆ ಮೂರು ಮಂದಿ ಗಂಡುಮಕ್ಕಳು. ಇವರೆಂದರೆ, ಸುಬ್ಬರಾವ್, ಶ್ರೀನಿವಾಸರಾವ್ ಮತ್ತು ಪ್ರಾಣೇಶರಾವ್. ಈ ಶಾಖೆಯು ದಳಸನೂರನ್ನು ಬಿಟ್ಟು ಕೊಡಿಚೆರವು ಗ್ರಾಮದಲ್ಲಿ ನೆಲೆಸಿದರು.

## ವೆಂಕಟಸುಬ್ಬಯ್ಯ

ಇವರು ಸಾಕಷ್ಟು ವಿದ್ಯಾವಂತರಾಗಿದ್ದು ಲೆಕ್ಕಾಚಾರ ಮತ್ತು ವ್ಯವಹಾರದಲ್ಲಿ ಸಾಕಷ್ಟು ಅನುಭವವನ್ನು ಪಡೆದಿದ್ದರು. ತಂದೆಯ ಪೂರ್ಣ ಆಸ್ತಿ ಮತ್ತು ಸಂಪತ್ತು ಇವರ ಕೈ ಸೇರಿತು. ಇವರು ಪ್ರಪ್ರಥಮ ಕಣ್ವ ಬ್ಯಾಂಕ್‌ನ ಸ್ಥಾಪಕರು. ಸುಮಾರು ಕ್ರಿ.ಶ. ೧೮೭೫ರಲ್ಲಿ ಚಿಂತಾಮಣಿ ಮತ್ತು ಚಲಮ ಕೋಟೆಗಳಲ್ಲಿ ಖಾಸಗಿ ಹಣಕಾಸು ಬ್ಯಾಂಕ್ ಸ್ಥಾಪಿಸಿ ಹಣಕಾಸು ವ್ಯವಹಾರ ನಡೆಸುತ್ತಿದ್ದರು. ಈ ವೃತ್ತಿಯಲ್ಲಿ ಇವರ ಎಲ್ಲ ಸ್ಥಿರ ಚರ ಆಸ್ತಿಯನ್ನು ಕಳೆದುಕೊಂಡರು. ಇವರ ಪಿತ್ರಾರ್ಜಿತವಾಗಿ ಬಂದಿದ್ದ ಶ್ಯಾನುಭೋಗ ವೃತ್ತಿಯೂ ಸಹ ಇವರ ಕೈ ತಪ್ಪಿ ಇವರ ಜ್ಞಾತಿಗಳೇ ಆದ ಗುಮ್ಮರೆಡ್ಡಿಪುರದ ಸುಬ್ಬಯ್ಯನವರ ವಶವಾಯಿತು. ಇದು ನಡೆದದ್ದು ೧೮೯೮ರಲ್ಲಿ. ವೆಂಕಟಸುಬ್ಬಯ್ಯನವರಿಗೆ ಆಗ ಸುಮಾರು ೪೩ ವರ್ಷ ವಯಸ್ಸಾಗಿತ್ತು. ಇವರಿಗೆ ಉಳಿದ ಆಸ್ತಿ ಎಂದರೆ ದಳಸನೂರಿನಲ್ಲಿದ್ದ ಪೂರ್ವೀಕರ ಮನೆ ಮಾತ್ರ. ಇವರ ಪರಿಸ್ಥಿತಿಯನ್ನು ಕಂಡು ಅದೇ ಗ್ರಾಮದಲ್ಲಿದ್ದ ಇತರ ಬಂಧುಗಳು ಘಟ್ಟು ಮನೆತನದವರ ಮುಂದಾಳತ್ವದಲ್ಲಿ ಇವರ ಸಹಾಯಕ್ಕೆ ಬಂದು ಇವರಿಗೆ ಗುಜ್ಜನಹಳ್ಳಿಯಿಂದ ಪುಟ್ಟಲಕ್ಷ್ಮಮ್ಮ ಎಂಬ ಕನ್ಯೆಯನ್ನು ತಂದು ವಿವಾಹ ಮಾಡಿದರು. ಗುಜ್ಜನಹಳ್ಳಿಯಲ್ಲಿ ವೆಂಕಟರಾಘವಯ್ಯ ಎಂಬುವರ ಮಗ ರಾಮಪ್ಪ. ರಾಮಪ್ಪನವರಿಗೆ ವ್ಯಾಸರಾಯಪ್ಪ, ವೆಂಕಟರಾಘವಯ್ಯ, ಸೀತಾರಾಮಯ್ಯ ಎಂಬ ಮೂರು ಮಂದಿ ಗಂಡುಮಕ್ಕಳೂ, ಪುಟ್ಟಲಕ್ಷ್ಮಮ್ಮ ಎಂಬ ಒಬ್ಬ ಹೆಣ್ಣುಮಗಳು ಇದ್ದರು. ವೆಂಕಟಸುಬ್ಬಯ್ಯನವರು ಮದುವೆಯಾದದ್ದು ಇದೇ ಪುಟ್ಟಲಕ್ಷ್ಮಮ್ಮ

ಎಂಬುವವರನ್ನು. ಕೆಟ್ಟ ಮೇಲೆ ಬುದ್ಧಿ ಬಂತು ಆಟ್ಟ ಮೇಲೆ ಒಲೆ ಉರಿಯಿತು ಎಂಬ ಗಾದೆಯಂತೆ ಅನಂತರ ಇವರು ಸಂಪೂರ್ಣ ಪರಿವರ್ತನೆಗೊಂಡು ಸಾಂಸಾರಿಕ ಜೀವನದಲ್ಲಿ ವ್ಯವಹರಿಸತೊಡಗಿದರು. ಈ ವಂಶದ ಪೂರ್ವೀಕರಿಂದ ಹೂಹಳ್ಳಿ ಗ್ರಾಮದಲ್ಲಿ ಸ್ಥಾಪಿಸಲ್ಪಟ್ಟ ಶ್ರೀವೆಂಕಟರಮಣಸ್ವಾಮಿ ದೇವಾಲಯದ ಪೂಜಾಕಾರ್ಯಗಳನ್ನು ಈ ವಂಶದವರೇ ಮಾಡುತ್ತಾ ಬಂದಿರುತ್ತಾರೆ. ಮೈಸೂರು ಸಂಸ್ಥಾನದ ಶ್ರೀಮನ್ ಮಹಾರಾಜರ ಸರ್ಕಾರದಿಂದ ಜುಲೈ ೧೮೭೩ರಲ್ಲಿ ಈ ದೇವಸ್ಥಾನದ ಹಕ್ಕು ಕರಾರು ಪತ್ರವನ್ನು ವೆಂಕಟಸುಬ್ಬಯ್ಯನವರ ಕಾಲದಲ್ಲಿ ಅಧಿಕೃತವಾಗಿ ನೀಡಿರುತ್ತಾರೆ. ಈ ವಂಶದವರೇ ಈ ದೇವಸ್ಥಾನವನ್ನು ಕಟ್ಟಿದ್ದಕ್ಕೆ ಈಗಲೂ ದಾಖಲೆ ಇರುತ್ತೆ. ಈ ದೇವಸ್ಥಾನ ಕಟ್ಟಿದಾರಭ್ಯ ಇಂದಿನವರೆಗೂ ಈ ದೇವಾಲಯದ ದೇವರ ಸೇವೆ ಪೂಜಾದಿಗಳು ಅರ್ಚನಾದಿಗಳು ಮತ್ತು ಎಲ್ಲ ವಿಧವಾದ ಉತ್ಸವಾದಿಗಳು ಈ ವಂಶದವರ ನೇತೃತ್ವದಲ್ಲಿಯೇ ನಡೆದುಕೊಂಡು ಬಂದಿರುತ್ತೆ. ವೆಂಕಟಸುಬ್ಬಯ್ಯನವರು ಹೂಹಳ್ಳಿಯ ಶ್ರೀ ವೆಂಕಟರಮಣಸ್ವಾಮಿ ಮತ್ತು ಹೆಚ್ಚುವರಿಯಾಗಿ ನಾಗನಾಯಕನಹಳ್ಳಿಯ ಆಂಜನೇಯಸ್ವಾಮಿ ದೇವಾಲಯದ ಅರ್ಚಕ ವೃತ್ತಿಯನ್ನು ಮಾಡುತ್ತಿದ್ದರು. ಈ ಎರಡೂ ದೇವಾಲಯಗಳಲ್ಲಿ ಆಗ್ಗೆ ವಾರಪೂಜೆ ಮತ್ತು ವಿಶೇಷ ದಿನಗಳ ಪೂಜೆಗಳು ಮಾತ್ರ ನಡೆಯುತ್ತಿದ್ದವು. ೨೦ನೇ ಶತಮಾನದ ಎರಡನೆಯ ದಶಕದಲ್ಲಿ ಶಿಥಿಲವಾಗಿದ್ದ ಹೂಹಳ್ಳಿಯ ವೆಂಕಟರಮಣಸ್ವಾಮಿ ದೇವಾಲಯವನ್ನು ಇದೇ ಗ್ರಾಮದ ದೈವಭಕ್ತ ಲೋಕೋಪಕಾರಿ ಕರಿಯಪ್ಪನವರು ಜೀರ್ಣೋದ್ಧಾರ ಮಾಡಿಸಿ ಒಂದು ಸುಂದರ ದೇವಾಲಯವನ್ನು ನಿರ್ಮಿಸಿಕೊಟ್ಟರು. ಅಲ್ಲಿಂದ ಮುಂದೆ ಈ ದೇವಾಲಯದಲ್ಲಿ ನಿತ್ಯಪೂಜೆಯು ವೆಂಕಟಸುಬ್ಬಯ್ಯನವರ ನೇತೃತ್ವದಲ್ಲಿ ಪ್ರಾರಂಭವಾಯಿತು. ವೆಂಕಟಸುಬ್ಬಯ್ಯನವರು ದಳಸನೂರು ಅಲ್ಲದೇ ಇತರ ಗ್ರಾಮಗಳ ಶ್ಯಾನುಭೋಗ ಲೆಕ್ಕಗಳನ್ನು ಬರೆದು ಮಾರ್ಗದರ್ಶನ ಮಾಡುತ್ತಿದ್ದರು. ಅವರಿಗೆ ಈ ವೃತ್ತಿಯಲ್ಲಿ ಅಪಾರ ಅನುಭವವಿದ್ದಿತು. ದಳಸನೂರಿನಲ್ಲಿ ನಡೆಯುವ ಇತರೆ ಬ್ರಾಹ್ಮಣರ ಕಾರ್ಯಕಲಾಪಗಳಲ್ಲಿ ಮುಂದಾಳತ್ವ ವಹಿಸಿ ಹಣಕಾಸು ವ್ಯವಹಾರಗಳಲ್ಲಿ ತಕ್ಕ ನಿರ್ದೇಶನಗಳನ್ನು ನೀಡುತ್ತಿದ್ದರು. ಇವರದು ಪರಮಾಧಿಕಾರ ಐಶ್ವರ್ಯವಂತ ಜೀವನವಲ್ಲದಿದ್ದರೂ ಸಾಧಾರಣ ಸಂತೃಪ್ತ ಜೀವನ ನಡೆಸುತ್ತಿದ್ದರು.

**ಕಣ್ವ ಮಠಾಧೀಶರ ಭೇಟಿ**

ಕಣ್ವ ಮಠದ ಶ್ರೀಗಳಾದ ಶ್ರೀವಿದ್ಯಾಧಿರಾಜತೀರ್ಥರು (ಕ್ರಿ.ಶ. ೧೮೮೮–೧೯೧೯) ಸುಮಾರು ೧೯೧೫ರಲ್ಲಿ ಬೆಂಗಳೂರು ಮತ್ತು ಕೋಲಾರ ಪ್ರಾಂತ್ಯದಲ್ಲಿ ಸಂಚಾರ ಮಾಡುವಾಗ್ಗೆ ದಳಸನೂರಿಗೂ ಬಂದಿದ್ದರು. ಆ ಸಂದರ್ಭದಲ್ಲಿ ಸ್ಮಾರ್ತ ಬ್ರಾಹ್ಮಣ ಸಾಂಪ್ರದಾಯದವರಾಗಿದ್ದ ದಳಸನೂರು ವೆಂಕಟಸುಬ್ಬಯ್ಯ ಮತ್ತು ಇನ್ನೂ ಇತರರು ವಿಧಿಪೂರ್ವಕ ಮುದ್ರಾಧಾರಣೆಯನ್ನು ಮಾಡಿಸಿಕೊಂಡು ವೈಷ್ಣವ ದೀಕ್ಷೆ ಹೊಂದಿ ಮಾಧ್ವ ಸಾಂಪ್ರದಾಯಸ್ತರಾದರು.

**ಶ್ರೀ ವಿದ್ಯಾವಿರಾಜತೀರ್ಥರ ಭೇಟಿ**

ಶ್ರೀ ವಿದ್ಯಾವಿರಾಜತೀರ್ಥ ಶ್ರೀಪಾದಂಗಳವರು ಕಣ್ವಮಠದ ಪರಂಪರೆಯಲ್ಲಿ ಏಳನೆಯ ಮಠಾಧೀಶರಾಗಿ ತಮ್ಮ ಗುರುಗಳಾದ ಶ್ರೀ ವಿದ್ಯಾಧಿರಾಜತೀರ್ಥ ಶ್ರೀಪಾದಂಗಳವರಿಂದ ಕ್ರಿ.ಶ. ೧೯೧೯ರ ಸಿದ್ಧಾರ್ಥಿನಾಮ ಸಂವತ್ಸರದ ಆಶ್ವಯುಜ ಮಾಸದಲ್ಲಿ ಕಣ್ವಮಠದ ಪೀಠಾರೋಹಣವನ್ನು ಮಾಡಿದರು. ಇವರು ಕ್ರಿ.ಶ. ೧೯೨೩ರಲ್ಲಿ ಮೈಸೂರು ರಾಜ್ಯದಲ್ಲಿ ಸಂಚಾರ ಮಾಡುತ್ತಾ ದಳಸನೂರು ಗ್ರಾಮಕ್ಕೂ ಬಂದು ಕೆಲವು ದಿನಗಳು ಉಳಿದಿದ್ದರು. ಇದಾದ ಸುಮಾರು ಹತ್ತು ವರ್ಷಗಳ ನಂತರ ಅಂದರೆ ೧೯೩೩ರ ಶ್ರೀಮುಖನಾಮ ಸಂವತ್ಸರದಲ್ಲಿ ಶ್ರೀಗಳು ಪುನಃ ದಳಸನೂರು ಗ್ರಾಮಕ್ಕೆ ಭೇಟಿ ಕೊಟ್ಟು ಅಲ್ಲಿಯೇ ಆ ವರ್ಷದ ಚಾತುರ್ಮಾಸ್ಯ ವ್ರತವನ್ನು ಬಹಳ ವೈಭವದಿಂದ ಆಚರಿಸಿದರು. ಈ ಸಂದರ್ಭದಲ್ಲಿ ಮಂಡಿಕಲ್ ಘಟ್ಟು ಶ್ರೀನಿವಾಸರಾವ್ ಅವರಿಂದ ಬರೆದು ನಿರ್ದೇಶಿಸಲ್ಪಟ್ಟ ವೇದಾನ್ವೇಷಣ ಎಂಬ ನಾಟಕವನ್ನು ಸಾರ್ವಜನಿಕವಾಗಿ ಪ್ರದರ್ಶಿಸಲಾಯಿತು. ಇದರಲ್ಲಿ ಶ್ರೀ ವೆಂಕಟಾಚಲಯ್ಯನವರು ಬಾಲ ಯಾಜ್ಞವಲ್ಕ್ಯ ಪಾತ್ರವನ್ನು ನಿರ್ವಹಿಸಿ ದರೆ ದಳಸನೂರಿನ ಘಟ್ಟು ವೆಂಕಟರಮಣಯ್ಯನವರು ವೈಶಂಪಾಯನನ ಪಾತ್ರವನ್ನು ಅಭಿನಯಿಸಿದ್ದರು.

ಇವರಿಗೆ ಐದು ಜನ ಹೆಣ್ಣುಮಕ್ಕಳು ಹಾಗೂ ಮೂರು ಜನ ಗಂಡುಮಕ್ಕಳು ಜನಿಸಿದರು. ಇವರಿಗೆ ಮೊದಲು ನಾಲ್ಕು ಜನ

ಹೆಣ್ಣುಮಕ್ಕಳಾದರು. ಇವರು ಪ್ರತಿ ವರ್ಷವೂ ಆಶ್ವಯುಜ ಮಾಸದಲ್ಲಿ ತಿರುಪತಿ ಕ್ಷೇತ್ರಕ್ಕೆ ಬ್ರಹ್ಮೋತ್ಸವಕ್ಕಾಗಿ ಕಾಲ್ನಡಿಗೆಯಲ್ಲಿ ಹೋಗಿ ಬರುತ್ತಿದ್ದರು. ಹೀಗೆ ಒಂದು ಸಲ ೧೯೦೮ನೆ ಇಸವಿಯಲ್ಲಿ ಇವರಿಗೆ ಮೊದಲ ಪುತ್ರೋತ್ಸವವಾಯಿತು. ತಮ್ಮ ಅಚಲ ಭಕ್ತಿಯ ಪ್ರತೀಕವಾಗಿ ತಮ್ಮ ಮಗನಿಗೆ ವೆಂಕಟಾಚಲ ಎಂದು ನಾಮಕರಣ ಮಾಡಿದರು. ಇವರ ನಂತರ ಸೀತಮ್ಮ ಎಂಬ ಒಬ್ಬ ಹೆಣ್ಣುಮಗಳು ಮತ್ತು ಶೇಷಾಚಲ ಹಾಗೂ ಕೃಷ್ಣರಾವ್ ಎಂಬ ಗಂಡು ಮಕ್ಕಳು ಜನಿಸಿದರು. ವೆಂಕಟಸುಬ್ಬಯ್ಯನವರ ಹಿರಿಯ ಮಗಳು ಪಾರ್ವತಮ್ಮ. ಈಕೆಯನ್ನು ಅಬ್ಬಣಿ ಜಗನ್ನಾಥರಾಯರ ಮಗ ರಾಮಪ್ಪ ಎಂಬುವವರಿಗೆ ವಿವಾಹ ಮಾಡಿಕೊಟ್ಟರು. ಮುಂದಿನ ಮೂರು ಹೆಣ್ಣುಮಕ್ಕಳು ಚಿಕ್ಕವಯಸ್ಸಿನಲ್ಲಿಯೇ ತೀರಿಕೊಂಡರು. ಸೀತಮ್ಮ ಎಂಬಾಕೆಯನ್ನು ಮಂಡಿಕಲ್ ಗ್ರಾಮದ ಕೌಶಿಕ ಗೋತ್ರದ ಘಟ್ಟು ಮನೆತನದ ವೆಂಕಟಾಚಲಯ್ಯನವರ ಹಿರಿಯ ಮಗ ಶ್ರೀನಿವಾಸರಾವ್ ಎಂಬುವವರಿಗೆ ವಿವಾಹ ಮಾಡಿಕೊಟ್ಟರು.

## ಹೂಹಳ್ಳಿಗೆ ಸ್ಥಳಾಂತರ

ವೆಂಕಟಸುಬ್ಬಯ್ಯನವರು ತಮ್ಮ ಪತ್ನಿಯ ವಿಯೋಗದ (೧೬.೦೩.೧೯೩೬) ನಂತರ ಕೆಲವು ತಿಂಗಳುಗಳಲ್ಲಿ ದಳಸನೂರನ್ನು ಬಿಟ್ಟು ಹೂಹಳ್ಳಿಗೆ ಬಂದು ನೆಲೆಸಿದರು. ಶೇಷಾಚಲ (ವೆಂಕಟಸುಬ್ಬಯ್ಯನವರ ಎರಡನೆ ಮಗ) ಅವರ ೩೦ನೇ ವಯಸ್ಸಿನಲ್ಲಿ ನಿಧನರಾದರು. ವೆಂಕಟಸುಬ್ಬಯ್ಯನವರೊಂದಿಗೆ ಅವರ ಕೊನೆಯವರೆಗೂ ಹೂಹಳ್ಳಿಯಲ್ಲಿ ಉಳಿದಿದ್ದವರು ಅವರ ಕೊನೆಯ ಮಗ ಕೃಷ್ಣರಾವ್. ವೆಂಕಟಸುಬ್ಬಯ್ಯನವರು ೧೯೪೧ರಲ್ಲಿ ನಿಧನರಾದರು. ವೆಂಕಟಸುಬ್ಬಯ್ಯನವರ ನಿಧನದ ನಂತರ ಇವರ ಕೊನೆಮಗ ಕೃಷ್ಣರಾಯರೊಂದಿಗೆ ಖಾಯಮ್ಮಾಗಿ ನೆಲೆಸಿದರು. ಕೃಷ್ಣರಾಯರಿಗೆ ಸುಬ್ರಃಮಣ್ಯ, ಶ್ರೀನಿವಾಸ, ವೆಂಕಟೇಶ ಬಾಬು, ಮುಳೀಧರ ಮತ್ತು ರಘು ಎಂಬ ಐದು ಮಂದಿ ಗಂಡು ಮಕ್ಕಳು. ಕೃಷ್ಣರಾವ್ ೯–೯–೨೦೦ ದಂದು ನಿಧನ ಹೊಂದಿದರು.

# ದ. ವೆಂ. ವೆಂಕಟಾಚಲಯ್ಯ

ಡಿ. ವಿ. ಪ್ರಭಾಕರ



**(೧೩-೧೦-೧೯೦೮ ರಿಂದ ೨೧-೯-೧೯೯೮)**

ದಳಸನೂರಿನ ವೆಂಕಟಸುಬ್ಬಯ್ಯನವರ ಹಿರಿಯ ಮಗ ವೆಂಕಟಾಚಲಯ್ಯ. ಇವರ ಪ್ರಾಥಮಿಕ ಮತ್ತು ಮಾಧ್ಯಮಿಕ ವಿದ್ಯಾಭ್ಯಾಸಗಳು ದಳಸನೂರಿನಲ್ಲಿಯೇ ನಡೆಯಿತು. ಇವರು ತಮ್ಮ ಕನ್ನಡ ಲೋಯರ್ ಸೆಕೆಂಡರಿ

ಪರೀಕ್ಷೆಯನ್ನು ದಳಸನೂರಿನಲ್ಲಿ ಮುಗಿಸಿ ಇಂಗ್ಲೀಷ್ ಲೋಯರ್ ಸೆಕೆಂಡರಿ ಪರೀಕ್ಷೆಗಾಗಿ ಕೋಲಾರಕ್ಕೆ ಹೋದರು. ಅನಂತರ ಪ್ರೌಢ ಶಾಲಾ ವ್ಯಾಸಂಗಕ್ಕಾಗಿ ಕೋಲಾರದ ಸರ್ಕಾರಿ ಪ್ರೌಢ ಶಾಲೆಗೆ ಸೇರಿದರು. ಅಂದಿನ ಇವರು ಸಹಪಾಠಿಗಳು –ಮಂಡಿಕಲ್ ಘಟ್ಟು ಶ್ರೀನಿವಾಸರಾವ್, ಕೂತಾಂಡ್ಲಹಳ್ಳಿ ಮೂರ್ತಿರಾವ್, ಯಾನಾದಹಳ್ಳಿ ವೆಂಕಟಾಚಲಯ್ಯ, ದಳಸನೂರು ಘಟ್ಟು ವೆಂಕಟರಮಣಯ್ಯ ಮೊದಲಾದವರು. ಇವರಿಗೆ ವಿದ್ಯಾಭ್ಯಾಸದಲ್ಲಿ ತುಂಬಾ ಆಸಕ್ತಿಯಿತ್ತು. ನಿತ್ಯವೂ ವೆಂಕಟಾಚಲಯ್ಯನವರು ದಳಸನೂರಿನಿಂದ ಕೋಲಾರಕ್ಕೆ ಕಾಲ್ನಡಿಗೆಯಲ್ಲಿಯೇ ಕೆಲಕಾಲ ಶಾಲೆಗೆ ಹೋಗಿ ಬರುತ್ತಿದ್ದರು. ಇವರು ಬಡತನದಿಂದ ವಿದ್ಯಾಭ್ಯಾಸವನ್ನು ಹೆಚ್ಚು ಮುಂದುವರೆಸಲು ಆಗಲಿಲ್ಲ.

ಸಂಸಾರ ಪೋಷಣೆಗಾಗಿ ಉದ್ಯೋಗಕ್ಕೆ ಸೇರಲೇ ಬೇಕಾಯಿತು. ಆಗ್ಗೆ ಮೈಸೂರು ನಗರದಲ್ಲಿ ರೈಲ್ವೆ ಇಲಾಖೆಯಲ್ಲಿ ಉದ್ಯೋಗಸ್ಥರಾಗಿದ್ದ ಗುಬ್ಬಿ ನಾರಾಯಣರಾವ್ ಎಂಬುವರ ಸಹಾಯದಿಂದ ಮೈಸೂರು ರಾಜ್ಯ ರೈಲ್ವೆ ಇಲಾಖೆಗೆ ೧೯೨೬ರಲ್ಲಿ ಉದ್ಯೋಗಕ್ಕೆ ಸೇರಿಕೊಂಡರು. ನಂತರ ಇವರು ತಮ್ಮ ಇಬ್ಬರು ತಮ್ಮಂದಿರ ವಿದ್ಯಾಭ್ಯಾಸಗಳಿಗೆ ಸಹಾಯ ಮಾಡಲಾರಂಭಿಸಿದರು. ಇವರು ಇಬ್ಬರೂ ತಮ್ಮಂದಿರಿಗೆ ವಿವಾಹಾದಿಗಳನ್ನು ಮಾಡಿ ಸ್ವತಂತ್ರಜೀವನ ನಿರ್ವಹಿಸಲು ನೆರವಾದರು.

## ಆಸಕ್ತಿ

ತಂದೆ ವೆಂಕಟಸುಬ್ಬಯ್ಯನವರ ನಿಧನದ ನಂತರ ವೆಂಕಟಾಚಲಯ್ಯನವರ ದಳಸನೂರಿನ ಸಂಪರ್ಕ ಕಡಿಮೆಯಾಯಿತು. ಅವರಿಗೆ ಧಾರ್ಮಿಕ, ಐತಿಹಾಸಿಕ ಮುಂತಾದ ಗ್ರಂಥಗಳನ್ನು ಓದುವುದರಲ್ಲಿ ಅಪಾರ ಆಸಕ್ತಿಯಿತ್ತು. ಇವರಿಗೆ ಅಪರೂಪದ ಗ್ರಂಥ ಸಂಗ್ರಹಣೆಯಲ್ಲಿ ಆಸಕ್ತಿಯಿತ್ತು. ಇವರಿಗೆ ಸಾರ್ವಜನಿಕ ಗ್ರಂಥಾಲಯಗಳಲ್ಲಿ ಓದುವ ಅವಕಾಶಗಳಿಲ್ಲದ್ದರಿಂದ (ಉದ್ಯೋಗದ ಜವಾಬ್ದಾರಿಯಿಂದಾಗಿ) ಇವರು ತಮ್ಮ ಮನೆಯಲ್ಲಿಯೇ ಎಲ್ಲ ವಿಚಾರಗಳಿಗೆ ಸಂಬಂಧಪಟ್ಟ ಗ್ರಂಥ ಸಂಗ್ರಹಣೆ ಮಾಡಿದರು. ಇವರಿಗೆ ಸಾಹಿತ್ಯ, ಸಂಗೀತ, ವಿಮರ್ಶೆ, ಕ್ರಿಕೆಟ್ ಕ್ರೀಡೆ ಮತ್ತು ರಾಜಕೀಯ ವಿಚಾರಗಳಲ್ಲಿ ಅಪಾರ ಆಸಕ್ತಿಯಿತ್ತು. ಇವರು ಪ್ರತಿದಿನವೂ ಕನಿಷ್ಠ ೪–೫ ಘಂಟೆಗಳ ಕಾಲ ಅಧ್ಯಯನ ಮಾ ಡುತ್ತಿದ್ದರು.

ಇವರು ರೈಲ್ವೆ ಉದ್ಯೋಗದಲ್ಲಿ ಹಳೆಯ ಮೈಸೂರು ರಾಜ್ಯದ ಬಹುತೇಕ ಎಲ್ಲ ಜಿಲ್ಲೆಗಳಲ್ಲಿಯೂ ಉದ್ಯೋಗ ನಿಮಿತ್ತ ಕಾರ್ಯ ನಿರ್ವಹಿಸಿದರು. ಇವರು ಕೊನೆಯಲ್ಲಿ ತುಮಕೂರು ಸ್ಟೇಶನ್ ಮಾಸ್ಟರ್ ದಕ್ಷಿಣ ರೈಲ್ವೆ ವಿಭಾಗದಲ್ಲಿ ಕೆಲಸ ಮಾಡಿ ೧೮-೦೧.೧೯೬೪ರಂದು ನಿವೃತ್ತರಾದರು. ಇಲಾಖೆಯಲ್ಲಿ ಇರುವಾಗ್ಗೆ ಮತ್ತು ನಿವೃತ್ತರಾದ ನಂತರ ಭಾರತದ ಎಲ್ಲ ಮುಖ್ಯ ನಗರ ಪ್ರೇಕ್ಷಣೀಯ ಮತ್ತು ತೀರ್ಥಕ್ಷೇತ್ರಗಳನ್ನು ಇವರ ಪತ್ನಿಯೊಂದಿಗೆ ಆಗಿಂದಾಗ್ಗೆ ಸಂದರ್ಶಿಸುತ್ತಿದ್ದರು. ಇವರ ಕೊನೆಯ ದೂರದ ಯಾತ್ರೆ ಸಂದರ್ಶನ ೧೯೭೩ರಲ್ಲಿ ಬದರಿ ಮತ್ತು ಇತರ ಎಲ್ಲ ಪ್ರಮುಖ ಉತ್ತರ ಭಾರತ ಮತ್ತು ದಕ್ಷಿಣ ಭಾರತದ ಕ್ಷೇತ್ರಗಳಿಗೆ ಮಾಡಿದ್ದರು.

## ಸಂಸಾರ ಮತ್ತು ಮಕ್ಕಳು

ವೆಂಕಟಾಚಲಯ್ಯನವರಿಗೆ ತಮ್ಮ ೧೮ನೇ ವಯಸ್ಸಿನಲ್ಲಿ ವಿವಾಹವಾಗಿ ಒಬ್ಬ ಹೆಣ್ಣು ಮಗಳು ಹುಟ್ಟಿದಳು. ೧೬.೦೬.೧೯೩೩ರಲ್ಲಿ ಇವರ ವಿವಾಹವೂ (ದ್ವಿತೀಯ) ಪೆಂಗಸಂದ್ರದ (ನಾರಾಯಣಪುರದ) ಕೌಶಿಕ ಗೋತ್ರದ ನಾರಾಯಣಪ್ಪನವರ ಕೊನೆಯ ಮಗಳು ಪದ್ಮಾವತಮ್ಮನವರೊಂದಿಗೆ ಆಯಿತು. ಇವರಿಂದ ಇಬ್ಬರು ಗಂಡುಮಕ್ಕಳು ಪ್ರಭಾಕರ ಮತ್ತು ಅನಂತನಾರಾಯಣ ಮತ್ತು ಒಬ್ಬ ಹೆಣ್ಣು ಮಗಳು ಜನಿಸಿದರು. ಮೊದಲನೆ ಮಗಳು ಲಲಿತಾಳನ್ನು ಪಾರ್ಥಿವಸ ಗೋತ್ರದ ಬಿದರಹಳ್ಳಿ ಶ್ರೀನಿವಾಸ ಮೂರ್ತಿಯವರ ಮಗ ಕೃಷ್ಣಮೂರ್ತಿಯವರಿಗೆ ವಿವಾಹ ಮಾಡಿಕೊಟ್ಟರು. ಇವರ ಕಿರಿಯ ಮಗಳು ಶಾಂತಾಮಣಿಯನ್ನು ಮಂಡಿಕಲ್ಲು ಘಟ್ಟು ವಿಠಲಕೃಷ್ಣರಾಯರ ಹಿರಿಯ ಮಗ ಪ್ರಭಾಕರರಾಯರಿಗೆ ವಿವಾಹ ಮಾಡಿಕೊಟ್ಟರು. ಮುಂದೆ ವೆಂಕಟಾಚಲಯ್ಯನವರು ತನ್ನ ಮೊಮ್ಮಗಳು ಅಂದರೆ ಪ್ರಭಾಕರನ ಹಿರಿಯ ಮಗಳು ವೀಣಾಳನ್ನು ತಮ್ಮ ಅಳಿಯ ಘಟ್ಟು ಪ್ರಭಾಕರರಾವ್ ಮತ್ತು ಮಗಳು ಶಾಂತಾಮಣಿಯರ ಮಗ ವಿಠಲಕೃಷ್ಣನಿಗೆ ವಿವಾಹ ಮಾಡಿಕೊಟ್ಟರು.

ದಳಸನೂರಿನ ಕುಮಾರಪ್ಪನವರ ವಂಶಕ್ಕೂ ಮಂಡಿಕಲ್ಲುಘಟ್ಟ ವಂಶಕ್ಕೂ ಮೂರು ತಲೆಮಾರಿಗೂ ಹೆಚ್ಚಿನ ಆತ್ಮೀಯ ಸಂಬಂಧ. ವೆಂಕಟಾಚಲಯ್ಯನವರು ೧೯೬೪ರಲ್ಲಿ ದಕ್ಷಿಣ ರೈಲ್ವೆ ಇಲಾಖೆಯಿಂದ ನಿವೃತ್ತರಾಗುವುದಕ್ಕೆ ಮುಂಚೆಯೇ ಬೆಂಗಳೂರಿನ ಅಲಸೂರಿನಲ್ಲಿರುವ

ಮುನಿಸ್ವಾಮಪ್ಪ ಬಡಾವಣೆಯಲ್ಲಿ ಒಂದು ಹೊಸ ಮನೆಯನ್ನು ೨೧.೧೦.೧೯೬೩ರಲ್ಲಿ ಖರೀದಿಸಿದರು. ಈ ಮನೆಯಲ್ಲಿಯೇ ಅವರು ೩೧ ವರ್ಷಗಳಿಗೂ ಹೆಚ್ಚು ಕಾಲ ವಾಸ ಮಾಡಿದರು. ಇವರ ಜೀವನದ ಪ್ರಮುಖ ಕಲ್ಯಾಣ ಕಾರ್ಯಗಳೆಲ್ಲವೂ ಇಲ್ಲಿಯೇ ನಡೆಯಿತು. ಬೆಂಗಳೂರಿನ ಅರಳೇಪೇಟೆಯಲ್ಲಿ ವಾಸವಾಗಿದ್ದ ನಾಗರಾಜರಾಯರ ಮೂರನೆಯ ಮಗಳು ಲತಾಳನ್ನು ವೆಂಕಟಾಚಲಯ್ಯನವರು ತಮ್ಮ ಹಿರಿಯ ಮಗ ಪ್ರಭಾಕರನಿಗೆ ೧೮-೨-೧೯೬೮ರಂದು ತಂದುಕೊಂಡರು. ವೆಂಕಟಾಚಲಯ್ಯನವರು ತಮ್ಮ ಎರಡನೆಯ ಮಗ ಅನಂತನಾರಾಯಣನಿಗೆ ಧಾರವಾಡ ಜಿಲ್ಲೆಯ ಕಾಶ್ಯಪಗೋತ್ರದ ದೇವಗಿರಿ ಕೃಷ್ಣರಾವ್ ಕುಲಕರ್ಣಿಯವರ ಮಗಳು ಸಿಂಧುಳನ್ನು ೨೯-೮-೧೯೬೯ರಂದು ವಿವಾಹ ಮಾಡಿ ಹೊಸ ಸಂಬಂಧ ಮಾಡಿದರು.

ವೆಂಕಟಾಚಲಯ್ಯನವರು ತಮ್ಮ ಮೊಮ್ಮಕ್ಕಳ ಬಗ್ಗೆ ಹೆಚ್ಚು ಆಸಕ್ತಿವಹಿಸಿ ಸೂಕ್ತವಾದ ಮಾರ್ಗದರ್ಶನ ಮಾಡಿ, ಶಾಲಾ ಕಾಲೇಜುಗಳಲ್ಲಿ ಉತ್ತಮ ವಿದ್ಯಾರ್ಥಿಗಳಾಗಲು ಶ್ರಮಿಸಿದರು. ಇವರು ದಳಸನೂರು ಗ್ರಾಮದಲ್ಲಿದ್ದ ಪೂರ್ವಿಕರ ಮನೆ ಮತ್ತು ಹೂಹಳ್ಳಿ ಗ್ರಾಮದ ಶ್ರೀನಿವಾಸದೇವರ ದೇವಸ್ಥಾನದ ಕಾರುಬಾರಗಳನ್ನು ಅದೇ ಸ್ಥಳದಲ್ಲಿ ವಾಸವಾಗಿದ್ದ ಇವರ ತಮ್ಮ ಕೃಷ್ಣರಾವ್‌ಗೆ ವಹಿಸಿಕೊಟ್ಟು ದಳಸನೂರಿನ ಸಂಬಂಧವನ್ನು ತ್ಯಜಿಸಿಕೊಂಡಿದ್ದರು.

## ಲೇಖನಗಳು

ಇವರು ಬರಹಗಾರರೂ, ಚಿಂತಕರು ಮತ್ತು ಜ್ಞಾನವೃದ್ಧರೂ ಆಗಿದ್ದರು. ಶ್ರೀ ವೆಂಕಟಾಚಲಯ್ಯನವರು ಅನೇಕ ಗ್ರಂಥಗಳನ್ನು ಅಧ್ಯಯನ ಮಾಡಿ ಇದರ ಆಧಾರದ ಮೇಲೆ ಕನ್ನಡ ಮತ್ತು ಇಂಗ್ಲೀಷ್ ಭಾಷೆಯ ದಿನಪತ್ರಿಕೆ ಹಾಗೂ ವಾರಪತ್ರಿಕೆಗಳಲ್ಲಿ ಬರೆಯುತ್ತಿದ್ದರು. ಇದೂ ಅಲ್ಲದೆ ಇನ್ನೂ ಅನೇಕ ಸಂಚಿಕೆಗಳಲ್ಲೂ ಲೇಖನಗಳನ್ನು ಬರೆದು ಪ್ರಕಟಿಸುತ್ತಿದ್ದರು. ಇವರು ಬರೆದ ಶ್ರೀ ಯಾಜ್ಞವಲ್ಕ್ಯ ಎಂಬ ಕಿರು ಹೊತ್ತಿಗೆಯನ್ನು ಫೆಬ್ರುವರಿ ೧೯೬೮ರಲ್ಲಿ ಶ್ರೀ ಶುಕ್ಲ ಯಜುರ್ವೇದ ಯುವಕ ಸಂಘ, ಬೆಂಗಳೂರು ಇವರು ಪ್ರಕಟಿಸಿದ್ದಾರೆ. ಇವರಿಗೆ ಮಠದ ಸಾಂಪ್ರದಾಯ, ಮಠ ಪೀಳಿಗೆ, ಐತಿಹಾಸಿಕ ದೃಷ್ಟಿ ಇವುಗಳಲ್ಲಿ ಅಪಾರ ಆಸಕ್ತಿಯಿತ್ತು. ಇವರು ಬರೆದು ಪ್ರಕಟಿಸಿದ ಮುಖ್ಯ ಲೇಖನಗಳು ಮಧ್ವಾಚಾರ್ಯರು, ಟೀಕಾಚಾರ್ಯರು, ಸುರೇಶ್ವರಾಚಾರ್ಯರು, ತ್ಯಾಗರಾಜರು,

ವೇದವ್ಯಾಸರು, ಯಾಜ್ಞವಲ್ಕ್ಯರು ಇತ್ಯಾದಿ.

೧೯೭೬ರಲ್ಲಿ ಆಗಮಿಸಿ ಚಾತುರ್ಮಾಸ್ಯ ವ್ರತವನ್ನು ಕಣ್ವ ಮಠಾಧೀಶರಾದ ಶ್ರೀ ವಿದ್ಯಾತಪೋನಿಧಿ ತೀರ್ಥರು, (೨೯-೬-೧೯೫೭ ರಿಂದ ೦೨.೦೫.೧೯೮೮ರವರೆಗೆ) ಬೆಂಗಳೂರಿನಲ್ಲಿ ಆಚರಿಸಿದ ಚಾತುರ್ಮಾಸ್ಯದ ಸಮಾರೋಪ ಸಮಾರಂಭದ ಸಂದರ್ಭದಲ್ಲಿ ವೆಂಕಟಾಚಲಯ್ಯನವರು ಸುರಪುರದ ಕಣ್ವ ಮಠ ಮತ್ತು ದ್ವೈತ ಸಿದ್ಧಾಂತ ಶಿರೋಮಣಿ ಶ್ರೀ ಮಾಧವತೀರ್ಥರ ಚರಿತ್ರೆಯನ್ನು ಲೇಖನಗೊಳಿಸಿ ಪ್ರಕಾಶಿಸಿದರು. ಈ ಲೇಖನವು ಶ್ರೀವಿದ್ಯಾತಪೊನಿಧಿ ತೀರ್ಥರಿಂದ ಬಿಡುಗಡೆಯಾಯಿತು. ಶ್ರೀಗಳವರು ಇವರಿಗೆ ಉಡುಗೊರೆಯನ್ನಿತ್ತು ಆಶೀರ್ವಾದಿಸಿದರು. ಇವರು ಕಣ್ವಮಠಕ್ಕೆ ಸಂಬಂಧಿಸಿದ ಇನ್ನೂ ಕೆಲವು ದಾಖಲೆಗಳನ್ನು ಸಂಗ್ರಹಿಸಿದ್ದಾರೆ. ಹಲವು ಹಸ್ತ ಪ್ರತಿ ಲೇಖನಗಳು ಪ್ರಕಟವಾಗದೆ ಇಂದಿಗೂ ಇವರ ಮಗ ಡಿ. ವಿ. ಪ್ರಭಾಕರ್ ರೊಂದಿಗೆ ಉಳಿದಿವೆ.

ವೆಂಕಟಾಚಲಯ್ಯನವರು ಸತ್ ಚಿಂತನೆ ಸೂಕ್ತ ಮಾರ್ಗದರ್ಶನ, ಹಿತವಚನಾದಿಗಳನ್ನು ಕೊಡುವಲ್ಲಿಸಮರ್ಥರಾಗಿದ್ದರು. ಇವರು ಪರಿಸರ ಮತ್ತು ಸ್ಥಳ ಬದಲಾವಣೆ ಬಯಸಿ ೧೯೬ನೆ ನವಂಬರ್ ತಿಂಗಳಲ್ಲಿ ತಮ್ಮ ವಾಸದ ಮನೆಯನ್ನು ಅಲಸೂರಿನಿಂದ ಬಸವನಗುಡಿ ಬಳಿಯಿರುವ ಅಶೋಕನಗರಕ್ಕೆ ಬದಲಾಯಿಸಿದರು. ಇವರು ೧೯೮ನೆ ಸೆಪ್ಟೆಂಬರ್ ಮಾಸದಲ್ಲಿ ಕೆಲವೇ ದಿನಗಳ ಅಸ್ವಸ್ಥತೆಯ ನಂತರ ೨೧-೦೯-೧೯೮ರಂದು ತಮ್ಮ ಕಿರಿಯ ಮಗ ಅನಂತನಾರಾಯಣನ ನಿವಾಸದಲ್ಲಿ ನಿಧನರಾದರು. ಅದು ಬಹುಧಾನ್ಯನಾಮ ಸಂವತ್ಸರದ ಆಶ್ವಯುಜ ಶುಕ್ಲ ದ್ವಿತೀಯ ಸೋಮವಾರವಾಗಿತ್ತು. ಇವರು ಪತ್ನಿ ಮತ್ತು ನಾಲ್ಕು ಮಂದಿ ಮಕ್ಕಳೇ ಅಲ್ಲದೆ ಸುಮಾರು ೧೫ ಮಂದಿ ಮೊಮ್ಮಕ್ಕಳು ಮತ್ತು ೧೨ ಮಂದಿ ಮರಿಮಕ್ಕಳನ್ನು ಅಗಲಿದರು. ಇವರು ಮುಳ್ಳಹಳ್ಳಿ ವಂಶದ ಮುಕುಟಮಣಿ ಮತ್ತು ಕಣ್ವ ಸಮಾಜದ ಅನಧಿಕೃತ ವಕ್ತಾರರಾಗಿದ್ದರು.

ಇವರ ಪತ್ನಿ ಶ್ರೀಮತಿ ಪದ್ಮಾವತಮ್ಮನವರು ತಾ। ೨೭/೭/೨೦೦೦ರಂದು ನಿಧನರಾದರು.

---

*ಬಾಳು ಹಾಳು, ಗೋಳು, ಕೀಳು - ಎಂಬುದೆಲ್ಲಾ ಹೀನ ನುಡಿ*
*ಬೀಳು; ಆದರೂ ಮೇಲೇಳು, ನಿನ್ನನ್ನು ನೀನು ಆಳು, ಆಗ ಜಗವು ನಿನಗೆ*
*ಮನ್ನಣೆ ನೀಡೀತು. ನೀಡದಿರೂ ಅದನ್ನು ತಾಳು.*

# ದೊಡ್ಡಕುರುಗೋಡು ವಂಶವೃಕ್ಷ

ಡಿ. ವಿ. ಸತ್ಯನಾರಾಯಣ ರಾವ್


ಗೌರೀಬಿದನೂರು ತಾಲ್ಲೂಕು ದೊಡ್ಡ ಕುರುಗೋಡು ಗ್ರಾಮದಲ್ಲಿ ವಾಸವಾಗಿರುವ ಶ್ಯಾಮಣ್ಣನವರ ಕುಟುಂಬದ ವಂಶವೃಕ್ಷದ ವಿವರಗಳು ಇಂತಿವೆ:

**ಶ್ಯಾಮಣ್ಣ**

ಇವರು ದೊಡ್ಡ ಕುರುಗೋಡು ಹಾಗೂ ಪ್ರಸಿದ್ಧ ಪುಣ್ಯ ಕ್ಷೇತ್ರವಾದ ಶ್ರೀವಿದುರಾಶ್ವತ್ಥ ಗ್ರಾಮಗಳ ಶ್ಯಾನುಭೋಗರು ಹಾಗೂ ಜಮೀನುದಾರರಾಗಿ ಜನಪ್ರಿಯತೆ ಗಳಿಸಿದವರು. ಇವರ ಧರ್ಮಪತ್ನಿ ಲಕ್ಷ್ಮಮ್ಮ. ಇವರಿಗೆ ಇಬ್ಬರು ಗಂಡು ಮಕ್ಕಳು.



ದೊಡ್ಡಕುರುಗೋಡಿನವರು ಈಶಾವಾಸ್ಯಕ್ಕೆ ಭೇಟಿ ನೀಡಿದಾಗ
ಎಡದಿಂದ ಬಲಕ್ಕೆ: ಶ್ರೀಮತಿ ಸೀತಮ್ಮ, ಶ್ರೀಮತಿ ಲೀಲಮ್ಮ, ಶ್ರೀ ವೆಂಕಟರಾಯಪ್ಪ, ಶ್ರೀ ಸತ್ಯನಾರಾಯಣರಾವ್ ಮತ್ತು ಶ್ರೀ ಜಿ. ವಿ. ಪ್ರಸನ್ನಕುಮಾರ್


ಶ್ರೀ ಶ್ಯಾಮಣ್ಣ
ಶ್ರೀ ವೆಂಕಟರಾಯಪ್ಪ
ಶ್ರೀ ಪುಟ್ಟಯ್ಯ
ಡಿ. ವೆಂಕಟರಾಮಯ್ಯ
ಡಿ. ಶ್ರೀನಿವಾಸರಾವ್ ಅಲಿಯಾಸ್ ನಾಗಣ್ಣ
ಡಿ. ವಿ. ಶ್ಯಾಮಣ್ಣ
ಡಿ. ವಿ. ವೆಂಕಟರಾಯಪ್ಪ
ಡಿ. ವಿ. ಸತ್ಯನಾರಾಯಣರಾವ್
ಡಿ. ಎಸ್. ಗುರುರಾಜಾ ರಾವ್
ಡಿ. ವಿ. ಸುರೇಶ
ಡಿ. ಎಸ್. ರಮೇಶ್
ಜಿ. ಪಿ. ವಿಮಲ
ಡಿ. ಆರ್. ಚೈತನ್ಯ
ಡಿ. ಎಸ್. ವೆಂಕಟಕೃಷ್ಣ ರಾವ್
ಡಿ. ವಿ. ವೆಂಕಟೇಶ
ಡಿ. ಎಸ್. ಹರೀಶ್
ಡಿ. ಎಸ್. ಮಂಜುನಾಥ
ಡಿ. ವಿ. ಜಗದೀಶ
ಡಿ. ಎಸ್. ಪ್ರಸನ್ನ
ಡಿ. ಎಸ್. ವೆಂಕಟಕೃಷ್ಣ
ಡಿ. ಎಸ್. ಮಂಜುನಾಥ

## ವೆಂಕಟರಾಯಪ್ಪ

ಇವರು ತಮ್ಮ ತಂದೆ ಶ್ಯಾಮಣ್ಣನವರು ನೆರವೇರಿಸುತ್ತಿದ್ದ ಶ್ಯಾನುಭೋಗ ವೃತ್ತಿಯನ್ನು ಮುಂದುವರಿಸಿದರು. ಇವರ ಧರ್ಮ ಪತ್ನಿ ಶ್ರೀಮತಿ ವೆಂಕಟಲಕ್ಷ್ಮಮ್ಮ. ಇವರಿಗೆ ಇಬ್ಬರು ಗಂಡು ಮಕ್ಕಳು.

## ಡಿ. ವೆಂಕಟರಾಮಯ್ಯ

ಇವರು ವೆಂಕಟರಾಯಪ್ಪನವರ ದೊಡ್ಡ ಮಗ. ಇವರು ಬೆಂಗಳೂರಿನಲ್ಲಿ ಸರ್ವೇ ಇಲಾಖೆಯಲ್ಲಿನ ವೃತ್ತಿಯನ್ನು ಬಿಟ್ಟು ತಮ್ಮ ತಂದೆಯವರ ಮಾತಿನಂತೆ ಶ್ಯಾನುಭೋಗ ವೃತ್ತಿಯನ್ನು ವಹಿಸಿಕೊಂಡರು. ಇವರು ನಿಷ್ಠಾವಂತ ಶ್ಯಾನುಭೋಗರಾಗಿದ್ದು ವಾರ್ಷಿಕ ರೂ. ೧೫೦/– ಪೋಟಿಗೆ ಹಣದಲ್ಲಿ ಜೀವನ ಸಾಗಿಸಲು ಬಹಳ ಕಷ್ಟವಾಗಿದ್ದರೂ ಇವರು ಪ್ರಾಮಾಣಿಕ ಹಾಗೂ ದಕ್ಷ ಸೇವೆಯಿಂದ ಊರಿನ ಸಾರ್ವಜನಿಕರ ಸಹಕಾರ ಆದರಗಳಿಂದ ಸುಗಮವಾಗಿ ಜೀವನ ಸಾಗಿಸುತ್ತಿದ್ದರು. ಇವರ ವಿವಾಹ ಚಿಕ್ಕ ವಯಸ್ಸಿನಲ್ಲೇ ಕಣ್ಣೂರು ಗ್ರಾಮದ ಶ್ರೀಮತಿ ಕೃಷ್ಣಮ್ಮನವರೊಂದಿಗೆ ಆಯಿತು. ಇವರಿಗೆ ಧಾರ್ಮಿಕ ಪ್ರವೃತ್ತಿಯಲ್ಲೂ ಆಸಕ್ತಿಯಿತ್ತು. ಇವರಿಗೆ ಮೂರುಜನ ಗಂಡುಮಕ್ಕಳು ಮತ್ತು ಮೂರುಜನ ಹೆಣ್ಣು ಮಕ್ಕಳು. ಇವರು ತಮ್ಮ ೮೬ನೇ ವಯಸ್ಸಿನಲ್ಲಿ ದೈವಾಧೀರಾದರು.

ಇವರ ಹಿರಿಯ ಮಗಳು ಶ್ರೀಮತಿ ಲಕ್ಷ್ಮಿದೇವಮ್ಮ, ಬೆಂಗಳೂರು ಜಿಲ್ಲೆಯ ಬ್ಯಾಲಾಳು ಗ್ರಾಮದ ಶ್ರೀ ವೆಂಕಟಗಿರಿಯಪ್ಪನವರ ಹಿರಿಯ ಮಗ ಶ್ರೀ ಬಿ.ವಿ. ಸತ್ಯನಾರಾಯಣ ರಾವ್‌ರನ್ನು ವಿವಾಹವಾದರು. ಇವರಿಗೆ ಮಕ್ಕಳಿಲ್ಲದ ಕಾರಣ ಶ್ರೀಮತಿ ಲಕ್ಷ್ಮಿದೇವಮ್ಮನವರ ಅಣ್ಣನ ಮಗ ಡಿ.ವಿ. ವೆಂಕಟಕೃಷ್ಣರವರನ್ನು ಸಾಕಿಕೊಂಡಿರುತ್ತಾರೆ. ಸತ್ಯನಾರಾಯಣರಾವ್ ರವರು ತಮ್ಮ ೮೦ನೇ ವಯಸ್ಸಿನಲ್ಲಿ ದೈವಾಧೀನರಾದರು.

ಇವರು ಎರಡನೆಯ ಮಗಳಾದ ಶ್ರೀಮತಿ ವೆಂಕಟಲಕ್ಷ್ಮಮ್ಮನವರು ಗೌರಿಬಿದನೂರು ತಾಲ್ಲೂಕು ಕುದ್ರೇಬ್ಯಾಲ್ಯ ಗ್ರಾಮದ ಶ್ರೀ ಕೆ.ಎಚ್. ಸತ್ಯನಾರಾಯಣರಾವ್ ಇವರೊಂದಿಗೆ ವಿವಾಹಮಾಡಿರುತ್ತಾರೆ. ಇವರಿಗೆ ೪ ಜನ ಹೆಣ್ಣು ಮಕ್ಕಳು ಮತ್ತು ಒಬ್ಬ ಗಂಡು ಮಗ. ಎಲ್ಲಾ ಹೆಣ್ಣು ಮಕ್ಕಳಿಗೂ ವಿವಾಹ ಮಾಡಿರುತ್ತಾರೆ. ಗಂಡು ಮಗ ವೈಶ್ಯ ಬ್ಯಾಂಕಿನಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ.

ಇವರು ಮೂರನೆಯ ಪುತ್ರಿ ಶ್ರೀಮತಿ ಕಮಲಮ್ಮ, ಇಡಗೂರು ಗ್ರಾಮದ ವೈ. ವೆಂಕಟಸುಬ್ಬಯ್ಯ ಇವರೊಂದಿಗೆ ವಿವಾಹವಾಗಿರುತ್ತೆ. ಶ್ರೀ ವೆಂಕಟಸುಬ್ಬಯ್ಯನವರು ಸರ್ಕಾರಿ ಸೆಕ್ರೆಟರಿಯಟ್‌ನಲ್ಲಿ ಶಾಖಾಧಿಕಾರಿಗಳಾಗಿ (ಸೆಕ್ಷನ್ ಆಫೀಸರ್) ದ್ದರು. ಇವರಿಗೆ ಇಬ್ಬರು ಮಕ್ಕಳು. ಒಂದು ಗಂಡು, ಒಂದು ಹೆಣ್ಣು. ಗಂಡು ಮಗ ಇಂಜಿನಿಯರಿಂಗ್ ಪದವೀಧರನಾಗಿದ್ದು ಅಶೋಕ್ ಲೇಲ್ಯಾಂಡ್ ಸಂಸ್ಥೆಯಲ್ಲಿ ಕಾರ್ಯ ನಿರ್ವಹಿಸುತ್ತಿದ್ದಾರೆ.

## ಶ್ಯಾಮಣ್ಣ

ಇವರು ೧೯೨೮ನೇ ಜನವರಿಯಲ್ಲಿ ಜನಿಸಿದರು. ಇವರು ಸುಮಾರು ೧೮-೨೦ ವರ್ಷದವರಿದ್ದಾಗ ಇವರ ತಾಯಿಯು ನಿಧನರಾದುದರಿಂದ ತಮ್ಮ ತಮ್ಮಂದಿರುಗಳ ವಿದ್ಯಾಭಾಸದ ಮುಂದುವರಿಕೆಗೆ ನೆರವಾಗಲು ತಮ್ಮ ವಿದ್ಯಾಭ್ಯಾಸವನ್ನು ಹೈ ಸ್ಕೂಲ್ ಮಟ್ಟಕ್ಕೆ ನಿಲ್ಲಿಸಿ ಉಪಾಧ್ಯಾಯ ವೃತ್ತಿಗೆ ಸೇರಿದರು. ಇವರ ಮನೆಯ ಅಭಿವೃದ್ಧಿಗೆ ಮತ್ತು ತಮ್ಮಂದಿರ ವಿದ್ಯಾಭ್ಯಾಸ, ಹೆಣ್ಣು ಮಕ್ಕಳ ವಿವಾಹಗಳು ಇತ್ಯಾದಿ ಕಾರ್ಯಗಳ ನಿರ್ವಹಣೆಗೆ ಇವರು ತುಂಬಾ ಶ್ರಮದಿಂದ ದುಡಿದಿರುತ್ತಾರೆ. ಇವರಿಗೆ ಸಾಯಪ್ಪನಹಳ್ಳಿ (ಗೋಪಾಲಪುರ) ಯ ಶ್ರೀಮತಿ ಜಯಲಕ್ಷ್ಮಮ್ಮ ಇವರೊಂದಿಗೆ ವಿವಾಹವಾಯಿತು. ಇವರಿಗೆ ಮೂರುಜನ ಗಂಡುಮಕ್ಕಳು ಮತ್ತು ಒಬ್ಬ ಹೆಣ್ಣು ಮಗಳು. ಇವರ ಹಿರಿಯ ಮಗ ಶ್ರೀ ಡಿ. ಎಸ್. ಗುರುರಾಜಾರಾವ್ ಊರಿನಲ್ಲಿ ವ್ಯವಸಾಯ ಹಾಗೂ ಡೀಡ್ ರೈಟರ್ ಹುದ್ದೆಗಳನ್ನು ನಿರ್ವಹಿಸುತ್ತಿದ್ದಾರೆ.

## ಡಿ.ಎಸ್. ವೆಂಕಟಕೃಷ್ಣ ರಾವ್

ಇವರು ಶ್ರೀ ಶ್ಯಾಮಣ್ಣನವರ ಎರಡನೇ ಮಗ. ಇವರು ತಮ್ಮ ಸೋದರತ್ತೆ ಶ್ರೀಮತಿ ಲಕ್ಷ್ಮಿದೇವಮ್ಮನವರ ಮನೆಯಲ್ಲಿ ಮಗನಂತೆ (ಅವರಿಗೆ ಮಕ್ಕಳಿರಲಿಲ್ಲ) ಬೆಳೆದು ಅಲ್ಲಿಯೇ ವಿದ್ಯಾಭ್ಯಾಸ ಮುಗಿಸಿ ಭಾರತ ಅಂಚೆ ಇಲಾಖೆಯಲ್ಲಿ ಈಗ ಸೇವೆ ಸಲ್ಲಿಸುತ್ತಿದ್ದಾರೆ. ಇವರ ಪತ್ನಿ ಹೊಸಹಳ್ಳಿ ಗ್ರಾಮದ ಶ್ರೀಮತಿ ರಮಾಮಣಿ. ಇವರಿಗೆ ಇಬ್ಬರು ಗಂಡು ಮಕ್ಕಳು – ಶ್ರೀನಿಧಿ ಮತ್ತು ಶ್ರೀಹರಿ.

## ಡಿ.ಎಸ್. ಮಂಜುನಾಥ

ಇವರು ಶ್ರೀ ಶ್ಯಾಮಣ್ಣನವರ ಮೂರನೇ ಪುತ್ರ. ಪಿ.ಯು.ಸಿ ಮತ್ತು ಟಿ.ಸಿ.ಎಚ್. ವಿದ್ಯಾಭ್ಯಾಸವನ್ನು ಮುಗಿಸಿದ್ದಾರೆ.

## ಡಿ.ವಿ. ವೆಂಕಟರಾಯಪ್ಪ

ಇವರು ತಮ್ಮ ತಾಯಿಯ ನಿಧನದ ನಂತರ ಇಂಟರ್ ಸೈನ್ಸ್ ಮುಗಿಸಿ ಭಾರತ ಅಂಚೆ ಇಲಾಖೆಯಲ್ಲಿ ಸೇವೆಗೆ ಸೇರಿದರು. ಇವರು ಮೈಸೂರಿನ ಲಕ್ಷ್ಮಣರಾವ್–ಸರಸ್ವತಮ್ಮ ಇವರ ಜ್ಯೇಷ್ಠ ಪುತ್ರಿ ಸೀತಮ್ಮನವರನ್ನು ಲಗ್ನವಾದರು. ಇವರಿಗೆ ಮೂರು ಜನ ಗಂಡುಮಕ್ಕಳು – ಡಿ. ವಿ. ಸುರೇಶ್, ಡಿ. ವಿ. ವೆಂಕಟೇಶ್ ಮತ್ತು ಡಿ. ವಿ. ಜಗದೀಶ್.

**ಡಿ.ವಿ.ಸುರೇಶ್** – ಇವರು ಬಿ.ಕಾಂ ಪದವಿ ಪಡೆದು ಭಾರತ ಸರ್ಕಾರ ದೂರವಾಣಿ ಇಲಾಖೆಯಲ್ಲಿ ಸೇವೆಸಲ್ಲಿಸುತ್ತಿದ್ದಾರೆ. ಇವರು ತುಮಕೂರಿನ ಶ್ರೀಮತಿ ಗೀತಾರವರನ್ನು ಲಗ್ನವಾಗಿದ್ದಾರೆ. ಈಕೆ ಸ್ಟೇಟ್ ಬ್ಯಾಂಕ್ ಆಫ್ ಮೈಸೂರ್‌ನಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ. ಇವರಿಗೆ ಇಬ್ಬರು ಮಕ್ಕಳು. ಚಿ|| ವರುಣ್ ಪರಾಶರ್ ಮತ್ತು ಕು|| ವೈಷ್ಣವಿ.

**ಡಿ.ವಿ.ವೆಂಕಟೇಶ** – ಇವರು ಬಿ.ಕಾಂ ಪದವಿ ಪಡೆದು ಖಾಸಗೀ ಫ್ಲೋರ್ರಿಕಲ್ಚರ್ ಸಂಸ್ಥೆಯಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ. ಇವರು ಶ್ರೀಮತಿ ಶಶಿಕಲಳನ್ನು ವಿವಾಹವಾಗಿದ್ದಾರೆ. ಈಕೆಯು ಭಾರತೀಯ ಜೀವ ವಿಮಾ ನಿಗಮದಲ್ಲಿ ಸೇವೆ ಸಲ್ಲಿಸತ್ತಿದ್ದಾರೆ. ಇವರಿಗೆ ಒಬ್ಬ ಗಂಡು ಮಗ ಚಿ|| ಆದಿತ್ಯ ಪರಾಶರ್.

**ಡಿ.ವಿ. ಜಗದೀಶ್** – ಡಿಪ್ಲೊಮಾ ಪದವಿ ಪಡೆದಿರುವ ಇವರು ಮುಂಬೈನ ವೋಲ್ಟಾಸ್ ಸಂಸ್ಥೆಯಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ. ಇವರು ಪುಣೆಯ ಶ್ರೀಮತಿ ಮಧುಳನ್ನು ವಿವಾಹವಾಗಿದ್ದಾರೆ. ಈಕೆ ಇಂಜಿನಿಯರಿಂಗ್ ಪದವೀಧರೆಯಾಗಿದ್ದು ಖಾಸಗೀ ಸಂಸ್ಥೆಯಲ್ಲಿ ಸಾಫ್ಟ್‌ವೇರ್ ಇಂಜಿನಿಯರಾಗಿ ಸೇವೆ ಸಲ್ಲಿಸುತ್ತಿದ್ದಾರೆ.

## ಡಿ.ವಿ. ಸತ್ಯನಾರಾಯಣ ರಾವ್

೧೯೩೭ರಲ್ಲಿ ಜನಿಸಿದ ಇವರು ತಮ್ಮ ೧೦ ನೇ ವಯಸ್ಸಿನಲ್ಲಿ ತಾಯಿಯನ್ನು ಕಳೆದುಕೊಂಡು ಕೇವಲ ತಂದೆಯ ಆರೈಕೆಯಲ್ಲಿ ಬೆಳೆದವರು. ಇವರು ಬಿ.ಕಾಂ. ಮತ್ತು ಬಿ.ಫಿಲ್ ಪದವಿಗಳನ್ನು ಪಡೆದು ರಾಜ್ಯಲೇಖಾ ಪತ್ರ ಇಲಾಖೆಯಲ್ಲಿ

ಅಸಿಸ್ಟೆಂಟ್ ಕಂಟ್ರೋಲರ್ ಹುದ್ದೆಯಲ್ಲಿದ್ದು ನಿವೃತ್ತರಾಗಿದ್ದಾರೆ. ಇವರಿಗೆ ಧಾರ್ಮಿಕ ಕಾರ್ಯಗಳಲ್ಲಿ ತುಂಬ ಶ್ರದ್ಧೆಯಿರುತ್ತೆ. ಇವರು ಗಾಂಧಿ ಬಜ಼ಾರ್‌ನಲ್ಲಿ ಶ್ರೀ ಕೆ. ಗೋಪಾಲರಾವ್‌ರ ದ್ವಿತೀಯಪುತ್ರಿಯನ್ನು ೧೨-೦೫-೧೯೬೩ರಲ್ಲಿ ವಿವಾಹವಾದರು. ಇವರಿಗೆ ಇಬ್ಬರು ಗಂಡು ಮಕ್ಕಳು – ಡಿ. ಎಸ್. ರಮೇಶ್ ಮತ್ತು ಡಿ. ಎಸ್. ಹರೀಶ್

ಡಿ.ಎಸ್. ರಮೇಶ್ – ಬಿ.ಇ. ಪದವೀಧರರಾದ ಇವರು ಕೇಂದ್ರ ಸರ್ಕಾರದ ಮೈನರ್ ಪೋರ್ಟ್ಸ್ ಸರ್ವೆ ಆರ್ಗನೈಜ಼ೇಷನ್ ಇಲಾಖೆಯಲ್ಲಿ ಹೈಡ್ರೋಗ್ರಾಫಿಕ್ ಸರ್ವೆಯರ್ ಆಗಿ ಮುಂಬೈನಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ. ಈತನು ಯಲಹಂಕ ಉಪನಗರದಲ್ಲಿರುವ ಘಟ್ಟು ಕುಟುಂಬದ ಶ್ರೀ ಜಿ. ವಿ. ಪ್ರಭಾಕರ ರಾವ್‌ರವರ ಎರಡನೇ ಪುತ್ರಿಯಾದ ಜಿ. ಪಿ. ವಿಮಲಳನ್ನು ಲಗ್ನವಾಗಿರುತ್ತಾರೆ. ಈಕೆ ಬಿ.ಎಚ್.ಎಂ.ಎಸ್ (ಹೋಮಿಯೋಪತಿ) ಪದವೀಧರಗಳಾಗಿದ್ದು ಖಾಸಗಿ ಸೇವೆ ಸಲ್ಲಿಸುತ್ತಿದ್ದಾಳೆ. ಇವರಿಗೆ ಒಬ್ಬ ಗಂಡು ಮಗ ಡಿ.ಆರ್. ಚೈತನ್ಯ.

ಡಿ.ಎಸ್. ಹರೀಶ್ – ಡಿಪ್ಲೊಮಾ ವಿದ್ಯಾಭ್ಯಾಸವನ್ನು ಮುಗಿಸಿದ ಇವನು ಖಾಸಗಿಯಾಗಿ ಸಿವಿಲ್ ಕೆಲಸಗಳನ್ನು ನಿರ್ವಹಿಸುತ್ತಾ ಬಿ.ಎಂ. ಎಸ್. ಸಂಜೆ ಕಾಲೇಜಿನಲ್ಲಿ ಬಿ.ಇ. ಪದವಿ ಪಡೆದಿರುತ್ತಾರೆ. ಹಾಲಿ ಆಫ್ರಿಕಾದ ಮಲಾವಿದೇಶದಲ್ಲಿ ಇಂಜಿನಿಯರ್ ಆಗಿ ಸೇವೆ ಸಲ್ಲಿಸುತ್ತಿದ್ದಾರೆ.


***ಲೇಖಕರು ಘಟ್ಟು ಮನೆತನದಿಂದ ಹೆಣ್ಣು ತೆಗೆದುಕೊಂಡು ಸಂಬಂಧ ಬೆಳೆಸಿದವರು. ಇವರ ಮಗ ಶ್ರೀ ಡಿ. ಎಸ್. ರಮೇಶ್ ಘಟ್ಟು ಪ್ರಭಾಕರ ರಾವ್ ರವರ ದ್ವಿತೀಯ ಪುತ್ರಿ ಚಿ. ಸೌ. ವಿಮಲಳನ್ನು ವಿವಾಹವಾಗಿದ್ದಾರೆ.***

*ಕಲಿಯುವವ ತನ್ನ ಕೋಟಲೆಗಳನ್ನು ಕೊಲ್ಲುವ ಕಲಿ ಆಗಬೇಕು! ಅರಿತವರೊಡನೆ ಕಲೆಯಬೇಕು. ಜ್ಞಾನದ ಕಳೆಯಿಂದ ಅಜ್ಞಾನದ ಕೊಳೆಯನ್ನು ಕಳೆಯಬೇಕು. ತನ್ನ ಧೀಮಂತ ಗುಣಗಳನ್ನು ಬೆಳೆಸಬೇಕು.*

# ಎಲೆಮರೆಯ ಕಾಯಿಗಳು

ಬಿ. ರಾಜ್ ಕಮಲ್

ನಮ್ಮ ಪೂರ್ವಜರು ಎಲೆಮರೆಯೆ ಕಾಯಿಗಳಂತೆ ಇದ್ದುಕೊಂಡೇ ಅನೇಕ ಸಮಾಜ ಸೇವಾ ಕಾರ್ಯಗಳನ್ನು ಮಾಡಿದ ಮಹನೀಯರು. ನಮ್ಮ ವಂಶದ ಪ್ರಮುಖ ವ್ಯಕ್ತಿಗಳ ಬಗ್ಗೆ ಇಲ್ಲಿ ಮಾಹಿತಿ ಕೊಡಲು ಪ್ರಯತ್ನಿಸಿದ್ದೇನೆ.




**ರಂಗನಾಥ ರಾವ್**

ಕಾಶಿ ಅಪ್ಪೂರಾವ್ ಮಕ್ಕಳಾದ ಶ್ರೀ ರಂಗನಾಥರಾವ್ ೧೯೪೦ರಲ್ಲಿ ಪದವೀಧರರಾಗಿ ಆಂಧ್ರಪ್ರದೇಶ ಧಾರ್ಮಿಕ ದತ್ತಿಯಲ್ಲಿ ಅಸಿಸ್ಟೆಂಟ್

ಕಮೀಷನರ್ ಆಗಿ ಸೇವೆ ಸಲ್ಲಿಸಿ ನಿವೃತ್ತಿ ನಂತರ ಮಂತ್ರಾಲಯದ ರಾಯರ ಮಠದಲ್ಲಿ ೧೧ ವರ್ಷಗಳ ಕಾಲ ಮ್ಯಾನೇಜರ್ ಆಗಿ ಕಾರ್ಯನಿರ್ವಹಿಸಿ, ಡಕ್ಷ ಆಡಳಿತಗಾರರು ಎಂಬ ಹೆಸರನ್ನು ಪಡೆದರು. ಮಾಜಿ ಪ್ರಧಾನಿಗಳಾದ ಪಿ.ವಿ. ನರಸಿಂಹರಾವ್ರವರು ಶ್ರೀಯುತರ ಆಪ್ತರಾಗಿದ್ದರು. ದಿ|| ರಾಜಾರಾವ್ ಮಡದಿ ಶ್ರೀಮತಿ ದಿ|| ಜಯಮ್ಮನವರು ಕನ್ನಡ ಚಿತ್ರ ರಂಗದ ಖ್ಯಾತ ನಟಿ ಅದವಾನಿ ಲಕ್ಷ್ಮೀದೇವಿಯವರ ಬಾಲ್ಯ ಸ್ನೇಹಿತೆಯು ಆಪ್ತ ಕಾರ್ಯದರ್ಶಿಯೂ ಆಗಿದ್ದರು.

**ಕಾಶಿ ಶ್ರೀನಿವಾಸರಾವ್**

ಗುಂಡೂರಾವ್ ಪುತ್ರರಾದ ಕಾಶಿ ಶ್ರೀನಿವಾಸ ರಾವ್ ಒಳ್ಳೆಯ ಸಿತಾರ್ ವಾದಕರು, ಅಪರೋಕ್ಷಜ್ಞಾನಿಗಳು. ದಿ||ಶ್ರೀನಿವಾಸರಾವ್‌ರವರ ಧರ್ಮಪತ್ನಿ ಶ್ರೀಮತಿ ಕೃಷ್ಣವೇಣಮ್ಮನವರು ಚಿಕ್ಕಬಳ್ಳಾಪುರದ ಆತ್ರೇಯಸ ಗೋತ್ರ ವ್ಯಾಸರಾಯರ ಮಠದ ವೆಂಕಟರಮಣರಾವ್– ಪದ್ಮಾವತಮ್ಮನವರ ಏಕೈಕ ಪುತ್ರಿ. ಇವರ ಒಡಹುಟ್ಟಿದವರು ನಾಲ್ಕು ಮಂದಿ. ಅಣ್ಣ ಸೀತಾರಾಮು ಅತ್ತಿಗೆ ಸುಮಿತ್ರಮ್ಮ. ಸುಮಿತ್ರಮ್ಮನ ಅಣ್ಣನ ಮಕ್ಕಳಾದ ಶ್ರೀ ಅರಳುಮಲ್ಲಿಗೆ ಪಾರ್ಥ ಸಾರಥಿಯವರು ಉತ್ತಮ ಕವಿಗಳು. ಎಲ್ಲರಿಗೂ ಚಿರಪರಿಚಿತರು. ಕೃಷ್ಣವೇಣಮ್ಮನವರ ತಮ್ಮ ರಾಮಚಂದ್ರರಾವ್ ಮಡದಿ ಸೀತಮ್ಮ. ಈ ಸೀತಮ್ಮನವರ ತಂಗಿ ಖ್ಯಾತ ಕವಿಯಿತ್ರಿ. ಎಚ್.ಜಿ. ರಾಧಾದೇವಿ. ಇವರ ಸುಮರ್ಣಸೇತುವೆ ತೆರೆಕಂಡಿದೆ.

ಶ್ರೀನಿವಾಸರಾವ್ ಮತ್ತು ಕೃಷ್ಣವೇಣಮ್ಮನವರ ಮಕ್ಕಳು ಕೆ. ವೆಂಕಟೇಶರಾವ್, ಕೆ. ರಾಜ್‌ಕಮಲ್, ವಾಸುಕಿ, ಪದ್ಮ, ರಜನಿ, ಸಂಧ್ಯಾ ಹಾಗೂ ಲಕ್ಷ್ಮೀ ಉತ್ತಮ ಸುಗಮ ಸಂಗೀತಗಾಯಕರು. ೧೯೭೯/೮೦ ರಲ್ಲಿ ನಡೆದ ಆಂಧ್ರ ಪ್ರದೇಶ್ ವಾದ್ಯವೃಂದ, ಗಾಯನ ಸ್ಪರ್ಧೆಗಳಲ್ಲಿ ಉತ್ತಮ ಗಾಯಕಿಯಾಗಿ ರಜನಿ ರಾಜ್ಯಪ್ರಶಸ್ತಿಗಳನ್ನು ಪಡೆದಿದ್ದಾರೆ.

ಶ್ರೀನಿವಾಸರಾವ್‌ರವರ ದೊಡ್ಡಮಗಳಾದ ವಾಸುಕಿಯನ್ನು ಆಂಗೀರಸ ಗೋತ್ರದ ಉತ್ತರಾದಿ ಮಠದ ಎನ್. ಬದರಿನಾಥ್‌ರವರಿಗೆ ಕೊಟ್ಟಿದೆ. ಶ್ರೀ ಎನ್. ಬದರಿನಾಥ್ ರವರ ಚಿಕ್ಕಪ್ಪನ ಮಕ್ಕಳಾದ ವಿ.ಕೆ. ಸತ್ಯಮೂರ್ತಿ ಖ್ಯಾತ ಬರಹಗಾರರು. ವಾರಪತ್ರಿಕೆಗಳಲ್ಲಿ ಧಾರಾವಾಹಿಗಳನ್ನು ಬರೆದವರು.

ಶ್ರೀನಿವಾಸರಾವ್‌ರವರ ೪ನೇ ಮಗಳು ಸಂಧ್ಯಾ ಒಳ್ಳೆಯ ಸುಗಮಸಂಗೀತ ಗಾಯಕಿ. ಸಂಧ್ಯಾಳ ನಾದಿನಿ ಗೀತಳನ್ನು ಡಾ॥ ಬಾಲಮುರಳೀ ಕೃಷ್ಣರವರ ತಮ್ಮನ ಮಗನಿಗೆ ಮದುವೆ ಮಾಡಿ ಕೊಟ್ಟಿದ್ದಾರೆ. ಬಾಲಮುರಳೀ ಕೃಷ್ಣರ ಬಗ್ಗೆ ನಿಮಗೆ ತಿಳಿದೇ ಇದೆ.

**ಕೃಷ್ಣಮೂರ್ತಿ**

ಶ್ರೀಯುತ ಕೃಷ್ಣಮೂರ್ತಿಯವರು ಸಂಗೀತ ಜ್ಞಾನಿಗಳಾಗಿದ್ದು ತೆಲಗು ಚಿತ್ರ ರಂಗದ ಖ್ಯಾತ ನಿರ್ದೇಶಕ ಎಸ್. ರಾಜೇಶ್ವರರಾವ್ ಅವರೊಂದಿಗೆ ಸಂಗೀತ ಕಛೇರಿಗಳನ್ನು ನೀಡಿ ಸನ್ಮಾನಗಳನ್ನು ಪಡೆದಿದ್ದಾರೆ. ಏಜೀಸ್ ಆಫ್ಹೀಸ್‌ನಲ್ಲಿ ಅಕೌಂಟ್ಸ್ ಆಫೀಸರ್ ಆಗಿ ಕಾರ್ಯ ನಿರ್ವಹಿಸಿ ಪ್ರಸ್ತುತ ಹಿಂದೂಪುರದ ರಾಯರ ಮಠದಲ್ಲಿ ಕಾರ್ಯ ನಿರ್ವಹಿಸುತ್ತಿದ್ದಾರೆ. ಶ್ರೀ ಯುತರಿಗೆ ಈಗ ೭೦ ವರ್ಷಗಳು.

**ಘಟ್ ಮೂಲ: ನನಗೆ ತಿಳಿದಂತೆ**

ಘಟ್ ವಂಶದ ಮೂಲಪುರುಷರು ಕೋಲಾರ ಜಿಲ್ಲೆಯ ಶ್ರೀನಿವಾಸಪುರ ತಾಲ್ಲೂಕಿನ ದಳಸನೂರು ವಾಸಿಗಳು. ಇದರ ಮೂಲಪುರುಷರು ಆಂಧ್ರ ಪ್ರದೇಶದ ಬಳಿಯಿರುವ ಘಟ್ ಹಳ್ಳಿಯಿಂದ ಇಲ್ಲಿಗೆ ವಲಸೆ ಬಂದರು ಎಂಬ ಪ್ರತೀತಿ ಇದೆ. ನಮಗೆ ತಿಳಿದಿರುವಂತೆ ಪ್ರಮುಖರು ಮಲ್ಲಪ್ಪದಾಸರು, ವೆಂಕಟರಮಣಯ್ಯ, ವೆಂಕಟಾಚಲಯ್ಯ, ವೆಂಕಟನಾರಾಯಣ ದಾಸರು. ಘಟ್ಟು ವಂಶದ ದಿ॥ ನಾರಾಯಣರಾವ್ ಮಗಳಾದ ಜಿ.ಎನ್. ಸಂಧ್ಯಾಳನ್ನು ರಾಜ್ ಕಮಲ್ ಆದ ನಾನು ವಿವಾಹವಾಗಿದ್ದೇನೆ. ನಮ್ಮದು ರಾಯರ ಮಠ, ಕಾಶ್ಯಪ ಗೋತ್ರ (ಅರವತ್ತು ಒಕ್ಕಲು). ಘಟ್ಟು ವಂಶಸ್ಥರು ಹರಿದಾಸರು, ಸಾಹಿತಿಗಳು, ಸಮಾಜ ಸುಧಾರಕರು ಆಗಿದ್ದರು. ವೇದಾಚಲದಾಸರು, ಮಲ್ಲಪ್ಪದಾಸರು, ವೆಂಕಟನಾರಾಯಣ ದಾಸರು ಬೆಳಕಿಗೆ ಬಾರದ ಎರೆಯಮರೆಯ ಕಾಯಿಗಳು.

ದಿ॥ ಎಂ. ಶ್ರೀನಿವಾಸರಾವ್, ಶ್ರೀ ರಾಮಚಂದ್ರರಾವ್, ವಿಠ್ಠಲಕೃಷ್ಣರಾವ್, ನಾರಾಯಣರಾವ್, ಮುಳಬಾಗಿಲಿನಲ್ಲಿ ಯಾಜ್ಞವಲ್ಕ್ಯ ಆಶ್ರಮದ ನಿರ್ಮಾಣ ಕೈಗೊಂಡವರಲ್ಲಿ ಪ್ರಮುಖರು.

ಘಟ್ಟು ವಂಶಸ್ತರು ಮೂಲತ: ಸಂಗೀತಪ್ರಿಯರು. ಸಾಹಿತ್ಯಕ್ಷೇತ್ರದಲ್ಲಿ ನಮಗೆ ತಿಳಿದಿರುವಂತೆ ದಿ॥ ಜಿ. ನಾರಾಯಣರಾವ್‌ರವರು ಒಳ್ಳೆಯ ಸಾಹಿತ್ಯಕಾರರಾಗಿದ್ದರು. ಇವರು ಕುವೆಂಪು, ಮಾಸ್ತಿ ವೆಂಕಟೇಶ್ ಅಯ್ಯಂಗಾರ್ ರವರ ಸಮಕಾಲೀನರಾಗಿದ್ದರು. ಇವರ ಕವನಗಳು ಹಿಂದೆ ಜೈ ಕರ್ನಾಟಕವೆಂಬ ಪತ್ರಿಕೆಯಲ್ಲಿ ಪ್ರಕಟವಾಗುತ್ತಿದ್ದವು. ಅದೃಷ್ಟ ಇವರ ಕೈ ಬಿಟ್ಟಿತು. ಕುವೆಂಪು ಮುಂದೆ ಬಂದರು. ನಾರಾಯಣರಾಯರು ಮಂಡಿಕಲ್ಲಿಗೆ ಸೀಮಿತವಾದರು. ಶ್ರೀಯುತರು ೩ ವರ್ಷಗಳ ಹಿಂದಷ್ಟೇ ದೈವಾಧೀನರಾದರು. ನಾರಾಯಣರಾಯರು, ಶ್ರೀನಿವಾಸರಾಯರು ಮತ್ತು ವಿಠ್ಠಲರಾಯರು ಶಿಕ್ಷಕರಾಗಿ ಉತ್ತಮ ಪ್ರಜೆಗಳನ್ನು ರೂಪಿಸಿದ್ದಾರೆ. ಅವರ ಶಿಷ್ಯರು ಇಂದಿಗೂ ಈ ಗುರುಗಳನ್ನು ಸ್ಮರಿಸಿಕೊಳ್ಳುತ್ತಾರೆ. ನಾರಾಯಣರಾಯರು ೧೯೭೦ರಲ್ಲಿ ಜಿಲ್ಲಾಮಟ್ಟದ ಉತ್ತಮ ಶಿಕ್ಷಕ ಪ್ರಶಸ್ತಿಯನ್ನು ತಮ್ಮದಾಗಿಸಿಕೊಂಡರು. ಶ್ರೀ ರಾಮಚಂದ್ರರಾವ್‌ರವರು ಶ್ಯಾನುಭೋಗರಾಗಿದ್ದ ಸಮಯಕ್ಕೆ ಅವರನ್ನು ಕಂಡರೆ ಜನಕ್ಕೆ ತುಂಬಾ ಗೌರವವಿತ್ತು.

ಸಮಾಜ ನಿರ್ಮಾಣಕಾರ್ಯದಲ್ಲಿ ಜಿ. ನಾರಾಯಣರಾಯರ ಕನಿಷ್ಠ ಪುತ್ರಿ ನನ್ನ ಹೆಂಡತಿ ಜಿ.ಎನ್. ಸಂಧ್ಯಾ ಶಿಕ್ಷಕಿಯಾಗಿ ನಿರತಳಾಗಿದ್ದಾಳೆ. ಗೌರೀಬಿದನೂರು ತಾಲ್ಲೂಕಿನಲ್ಲಿ ಕಾರ್ಯನಿರ್ವಹಿಸುತ್ತಿರುವ ಇವಳು ತಾಲ್ಲೂಕು ಹಾಗೂ ಜಿಲ್ಲಾಮಟ್ಟದಲ್ಲಿ ಉತ್ತಮ ಶಿಕ್ಷಕಿ ಎನ್ನಿಸಿದ್ದಾಳೆ.

*ಲೇಖಕರು ಘಟ್ಟು ನಾರಾಯಣರಾಯರ ಪುತ್ರಿ ಸಂಧ್ಯಾರ ಪತಿರಾಯರು. ಈ ಲೇಖನ ಅವರ ಸ್ವಂತ ಅನುಭವವನ್ನು ಆಧರಿಸಿದ್ದು. ಇವರ ವಿಳಾಸ: ರಾಜ್‌ಕಮಲ್, ರಾಘವೇಂದ್ರ ಸ್ವಾಮಿ ಮಠದ ಎದುರು, ನಂ. ೪೨೯/ ೧, ರೈಲ್ವೇ ಸ್ಟೇಷನ್ ರಸ್ತೆ, ಗೌರಿಬಿದನೂರು*

---

*ಬದುಕಿನ ಮೌಲ್ಯಗಳು ಬದುಕಿಗಿಂತಲೂ ಬೆಲೆ ಬಾಳುವಂತಹವು. ಬದುಕಿಗೆ ಬೆಲೆಯೇನಾದರೂ ಬಂದರೆ ಈ ಮೌಲ್ಯಗಳಿಂದ ತಾನೆ? ಮೌಲ್ಯಗಳಿಲ್ಲದೆ ಬದುಕುವವ ಕೇವಲ ಉಸಿರಾಡುವ ಯಂತ್ರ; ಅರ್ಥ ತಿಳಿಯದ ಮಂತ್ರ; ಗುರಿಯಿಲ್ಲದ ತಂತ್ರ.*


---

# ವೈಎನ್ ಹೊಸಕೋಟೆ ವಂಶಾವಳಿ


ತುಮಕೂರು ಜಿಲ್ಲೆಯ ಪಾವಗಡ ತಾಲ್ಲೂಕು ವೈ. ಎನ್. (ಎಲ್ಲಪ್ಪ ನಾಯಕನ) ಹೊಸಕೋಟೆ ಗ್ರಾಮದಲ್ಲಿ ವಾಸವಾಗಿದ್ದ ಶ್ರೀ ಹನುಮಂತ ರಾವ್, ಅವರ ಮಕ್ಕಳು, ಮೊಮ್ಮಕ್ಕಳು ಮತ್ತು ಇತರ ಕುಟುಂಬ ಸದಸ್ಯರ ವಂಶವೃಕ್ಷದ ವಿವರಗಳನ್ನು ಈ ಲೇಖನದಲ್ಲಿ ವಿವರಿಸಲಾಗಿದೆ.



ಶ್ರೀಮತಿ ಪದ್ಮ ಮತ್ತು ಶ್ರೀ ರಾಮರಾವ್, ತಮ್ಮ ಮಕ್ಕಳು ವಾದಿರಾಜ್ ಮತ್ತು ಪರಿಮಳರೊಂದಿಗೆ




* ವಂಶಾವಳಿ ಪ್ರತ್ಯೇಕವಾಗಿ ಪುಟ ೧೬೯ರಲ್ಲಿ ನೀಡಲಾಗಿದೆ




## ಹನುಮಂತ ರಾವ್

ಇವರು ವೈ. ಎನ್. ಹೊಸಕೋಟೆ ಗ್ರಾಮದ ನಿವಾಸಿಗಳಾಗಿದ್ದು ವೈ. ಎನ್. ಹೊಸಕೋಟೆ ಮತ್ತು ತಿಪ್ಪಾನಹಳ್ಳಿ ಗ್ರಾಮಗಳ ಶ್ಯಾನುಭೋಗರಾಗಿ ಜನಪ್ರಿಯರಾಗಿದ್ದರು. ಇವರು ವಸಿಷ್ಠ ಗೋತ್ರದವರಾಗಿದ್ದು ವ್ಯಾಸರಾಯದ ಮಠದ ಶಿಷ್ಯರಾಗಿದ್ದಾರೆ. ಇವರ ಧರ್ಮಪತ್ನಿ ಸಂಜೀವಮ್ಮ. ಇವರಿಗೆ ಆರು ಜನ ಗಂಡು ಮಕ್ಕಳು – ಪ್ರಾಣೇಶ ರಾವ್, ಸಂಜೀವ ರಾವ್, ಪಾಂಡುರಂಗ ರಾವ್, ರಾಮ ರಾವ್, ರಾಘವೇಂದ್ರ ರಾವ್ ಮತ್ತು ವೇಣುಗೋಪಾಲ ರಾವ್ ಹಾಗೂ ಒಬ್ಬ ಹೆಣ್ಣು ಮಗಳು – ಲಕ್ಷ್ಮಿ. ಇವರ ಒಬ್ಬಳೇ ಹೆಣ್ಣು ಮಗಳನ್ನು ಶ್ರೀ ನಂಜುಂಡಯ್ಯನವರಿಗೆ ಕೊಟ್ಟು ವಿವಾಹ ಮಾಡಿದ್ದಾರೆ.

**ಎಚ್. ಪ್ರಾಣೇಶ ರಾವ್**

ಇವರು ಹನುಮಂತರಾವ್‌ರವರ ದೊಡ್ಡ ಮಗ. ಇವರು ಕರ್ನಾಟಕ ರಾಜ್ಯ ಲೋಕೋಪಯೋಗಿ ಇಲಾಖೆಯಲ್ಲಿ ಸೇವೆಯಲ್ಲಿದ್ದರು. ಇವರ ಧರ್ಮ ಪತ್ನಿ ಶ್ರೀಮತಿ ಸೀತಮ್ಮ. ಇವರಿಗೆ ನಾಲ್ಕು ಗಂಡು ಮಕ್ಕಳು – ಅನಿಲ್ ಕುಮಾರ್, ಗುರುರಾಜ್, ವೆಂಕಟೇಶ್, ಕೃಷ್ಣಮೂರ್ತಿ ಮತ್ತು ನಾಲ್ಕು ಹೆಣ್ಣು ಮಕ್ಕಳು – ಗಾಯತ್ರಿ, ಸಾವಿತ್ರಿ, ಸತ್ಯವತಿ, ವಾಣಿ.

**ಎಚ್. ಸಂಜೀವ ರಾವ್**

ಇವರು ಹನುಮಂತರಾವ್‌ರವರ ಎರಡನೆಯ ಮಗ. ಇವರು ತಿಪಟೂರಿನಲ್ಲಿ ಸಹಾಯಕ ಕಾರ್ಯಪಾಲಕ ಅಭಿಯಂತರ (ಅಸಿಸ್ಟೆಂಟ್ ಎಕ್ಸಿಕ್ಯುಟೀವ್ ಇಂಜಿನಿಯರ್) ರಾಗಿದ್ದರು. ಇವರ ಧರ್ಮ ಪತ್ನಿ ಕಮಲಮ್ಮ. ಇವರಿಗೆ ನಾಲ್ಕು ಜನ ಗಂಡು ಮಕ್ಕಳು – ಪ್ರಹ್ಲಾದ ರಾವ್, ಗೋಪಾಲ ರಾವ್, ಮಧುಸೂಧನ ಮತ್ತು ವಾದಿರಾಜ್ ಹಾಗೂ ಒಬ್ಬ ಹೆಣ್ಣು ಮಗಳು – ಸುಮಾ.

**ಎಚ್. ಪಾಂಡುರಂಗ ರಾವ್**

ಇವರು ಹನುಮಂತ ರಾವ್‌ರವರ ಮೂರನೆಯ ಮಗ. ಇವರು ಅಧ್ಯಾಪಕರಾಗಿದ್ದರು. ಇವರ ಧರ್ಮಪತ್ನಿ ಸರೋಜಮ್ಮ. ಇವರಿಗೆ ಮೂರು ಜನ ಹೆಣ್ಣು ಮಕ್ಕಳು – ಚಂದ್ರಿಕ, ಅನಿತ, ಲತಾ ಮತ್ತು ಒಬ್ಬ ಗಂಡು ಮಗ – ಗುರುರಾಜ್.

**ಎಚ್. ರಾಮು ರಾವ್**

ಇವರು ಹನುಮಂತ ರಾವ್‌ರವರ ನಾಲ್ಕನೆಯ ಮಗ. ಇವರು ವಿವಾಹವಾಗಿದ್ದು ಅಚ್ಚಮ್ಮನಹಳ್ಳಿಯ ಜೋಡಿದಾರರಾದ ಶ್ರೀ ಶೇಷಗಿರಿರಾವ್ ಮತ್ತು ನರಸಮ್ಮ ದಂಪತಿಗಳ ಪುತ್ರಿ ಶ್ರೀಮತಿ ಪದ್ಮ ಅವರನ್ನು. ಶ್ರೀರಾಮರಾಯರು ಸೇರಿದ್ದು ಬೆಂಗಳೂರಿನ ಎನ್. ಜಿ. ಇ. ಎಫ್. ಕಾರ್ಖಾನೆ ಮತ್ತು ಅನುಭವಿಸಿದ್ದು ಮಧ್ಯಮ ವರ್ಗದ ಜೀವನ. ಇವರು ತಮ್ಮ ಗ್ರಾಮವನ್ನು ಬಿಟ್ಟಾಗ ಇವರ ಬಳಿ ಇದ್ದುದು ಮೂರು ಸೇರಿ ಅಕ್ಕಿ ಮಾರಿ ಬಂದ ಹಣ ಮಾತ್ರ. ಗಳಿಸಿದ್ದು

ಡಿಪ್ಲೊಮ ಇನ್ ಡ್ರಾಫ್ಟ್ಸ್‌ಮನ್ ಶಿಕ್ಷಣ. ಕಾರ್ಖಾನೆಯಲ್ಲಿ ಉತ್ತಮ ಸಾಧನೆ ತೋರಿ ಬಹುಬೇಗನೆ ಸೀನಿಯರ್ ಮ್ಯಾನೇಜರರಾದರು. ಇವರು ೧೯೮೮ರಲ್ಲಿ ದೈವಾಧೀನರಾದಾಗ ಇವರ ಧರ್ಮ ಪತ್ನಿ ಶ್ರೀಮತಿ ಪದ್ಮ ಅವರನ್ನೇ ಅಲ್ಲದೇ ಇಬ್ಬರು ಪುಟ್ಟ ಮಕ್ಕಳು – ವಾದಿರಾಜ್ ಮತ್ತು ಪರಿಮಳರನ್ನು ಅಗಲಿದರು. ಈ ಪುಟ್ಟ ಮಕ್ಕಳನ್ನು ಬೆಳೆಸಿ ಒಳ್ಳೆಯ ಸ್ಥಿತಿಗೆ ತರುವ ಜವಾಬ್ದಾರಿ ಇವರ ಪತ್ನಿಯವರದಾಯಿತು. ಈ ಇಬ್ಬರು ಮಕ್ಕಳಿಗೂ ವಿವಾಹವಾಗಿದ್ದು ಈಗ ಒಳ್ಳೆಯ ವೃತ್ತಿಗಳಲ್ಲಿದ್ದಾರೆ. ಮಗ ವಾದಿರಾಜ್ ಎಲೆಕ್ಟ್ರಾನಿಕ್ಸ್ ಮತ್ತು ಟೆಲಿಕಮ್ಯುನಿಕೇಶನ್ಸ್ ಇಂಜಿನಿಯರಿಂಗ್ ಡಿಪ್ಲೊಮಾ ಮಾಡಿದ್ದು ಮಂತ್ರಾಲಯದ ಶ್ರೀ ನಾಗರಾಜಾಚಾರ್–ಪರಿಮಳ ದಂಪತಿಗಳ ದ್ವಿತೀಯ ಪುತ್ರಿ ಅಲಕನಂದಾರನ್ನು ವಿವಾಹವಾಗಿದ್ದಾರೆ. ಇವರಿಗೆ ಒಬ್ಬ ಮಗಳು – ಪ್ರೇರಣ. ಶ್ರೀ ರಾಮರಾವ್ ರವರ ಮಗಳು ಪರಿಮಳ, ದಂತ ವೈದ್ಯಳಾಗಿದ್ದು, ಘಟ್ಟು ಪ್ರಭಾಕರ ರಾಯರ ದ್ವಿತೀಯ ಪುತ್ರ ವಿನಯಬಾಬುರವರನ್ನು ವಿವಾಹವಾಗಿದ್ದಾಳೆ.

### ಎಚ್. ರಾಘವೇಂದ್ರ ರಾವ್

ಇವರು ಹನುಮಂತರಾಯರ ಐದನೆಯ ಪುತ್ರ. ಇವರು ಗ್ರಾಮ ಲೆಕ್ಕಾಧಿಕಾರಿಯಾಗಿ ಸೇವೆ ಸಲ್ಲಿಸಿ ನಿವೃತ್ತಿ ಹೊಂದಿದ್ದಾರೆ. ಇವರಿಗೆ ಇಬ್ಬರು ಹೆಣ್ಣು ಮತ್ತು ಒಬ್ಬ ಗಂಡು ಮಕ್ಕಳು.

### ಎಚ್. ವೇಣುಗೋಪಾಲ ರಾವ್

ಇವರು ಹನುಮಂತರಾಯರ ಆರನೆಯ ಪುತ್ರ. ಇವರ ಧರ್ಮಪತ್ನಿ ಉಮಾ. ಇವರಿಗೆ ಒಬ್ಬ ಹೆಣ್ಣು ಮಗಳು – ಮೈತ್ರಿ. ಇವರು ಬೆಂಗಳೂರಿನ ಐ. ಟಿ. ಐ. ಕಾರ್ಖಾನೆಯಲ್ಲಿ ಉದ್ಯೋಗದಲ್ಲಿದ್ದು ನಿವೃತ್ತಿ ಹೊಂದಿದ್ದಾರೆ.

ಸಂಗ್ರಹ: *ಎಚ್. ಆರ್. ವಾದಿರಾಜ್. ಇವರು ಘಟ್ಟು ಮನೆತನಕ್ಕೆ ಹೆಣ್ಣು ಕೊಟ್ಟು ಸಂಬಂಧ ಬೆಳೆಸಿದ್ದಾರೆ. ಇವರ ತಂಗಿ ಶ್ರೀಮತಿ ಪರಿಮಳಳನ್ನು ಘಟ್ಟು ಪ್ರಭಾಕರ ರಾವ್ ರವರ ಕಿರಿಯ ಪುತ್ರ ಬಿ. ವಿನಯಬಾಬುವಿನೊಂದಿಗೆ ವಿವಾಹ ಮಾಡಿಕೊಟ್ಟಿದ್ದಾರೆ.*

# ಆಚಾರ್ ವೆಂಕೋಬಾಚಾರ್ಯರು

ಜಿ. ನಾಗರಾಜಾಚಾರ್

ಶ್ರೀಯುತ ರಾಘವೆಂದ್ರಾಚಾರ್ಯರು, ಶ್ರೀ ರಾಯರಮಠದ ಪರಂಪರೆಯಲ್ಲಿ ಬರುವ ಶ್ರೀ ಸುಧರ್ಮೀಂದ್ರ ತೀರ್ಥರ ಪೂರ್ವಾಶ್ರಮದ ಭಾವಮೈದುನರಾದ ನಾರಾಯಣ ಪುರದ ನಿವಾಸಿಗಳಾದ ಶ್ರೀಯುತ ಮುದ್ದುಭೀಮಾಚಾರ್ಯ ಮತ್ತು ಅವರ ಪತ್ನಿ ಕಮಲಮ್ಮ ಅವರ ಮನೆಗೆ ಅಳಿಯತನಕ್ಕಾಗಿ ಬಂದರು. ಈ ದಂಪತಿಗಳಿಗೆ ಸಂತಾನವಿರಲಿಲ್ಲ. ಪೂಜ್ಯ ಮದನಕಲ್ಲು ಶೇಷದಾಸರಲ್ಲಿ ಮೊರೆಹೋದಾಗ ಅವರು ನಿಮಗೆ ಗಂಡು ಸಂತಾನವಿಲ್ಲ, ಮೂರು ಜನ ಹೆಣ್ಣು ಮಕ್ಕಳು ಆಗುತ್ತಾರೆ. ಅವರಲ್ಲಿ ಎರಡನೆಯ ಮಗಳನ್ನು ನಿಮ್ಮ ಮನೆಯಲ್ಲಿ ಇಟ್ಟುಕೊಳ್ಳಿ, ಅವಳಿಗೆ ಹುಟ್ಟುವ ಮಗ ಬಹಳ ಯಶೋವಂತ ಹಾಗು ಕೀರ್ತಿವಂತನಾಗುತ್ತಾನೆಯೆಂದು ಹೇಳಿದರಂತೆ. ಗುರು ಮಾತಿನಲ್ಲಿ ಅಚಲ ವಿಶ್ವಾಸ ಇಟ್ಟ ದಂಪತಿಗಳು ಅದರಂತೆ ನಡೆದರು.

ರಾಘವೇಂದ್ರಾಚಾರ್ಯರಿಗೆ ಇವರ ಎರಡನೆಯ ಮಗಳು ರಾಧಮ್ಮಳನ್ನು ಕೊಟ್ಟು ವಿವಾಹ ಮಾಡಿ ಮನೆಯಲ್ಲೇ ಇರಿಸಿಕೊಂಡರು. ಈ ಮಗಳು ಚಿಕ್ಕ ವಯಸ್ಸಿನಲ್ಲಿಯೇ ಒಂದು ಗಂಡು ಮತ್ತು ಮೂರು ಹೆಣ್ಣುಮಕ್ಕಳಿಗೆ ಜನ್ಮ ವಿತ್ತು ತೀರಿಹೋದರು. ಆ ಒಬ್ಬ ಮಗನೇ ಆಚಾರ್ ವೆಂಕೋಬಾಚಾರ್ಯ. ಮಂತ್ರಾ –ಲಯದಲ್ಲಿ ಗುರುಕುಲವನ್ನು ಕಟ್ಟಿ ಮಂತ್ರಾಲಯ ಗ್ರಾಮಕ್ಕೆ ಗುರುಗಳು ಎನಿಸಿಕೊಂಡು, ಇಡೀ ಗ್ರಾಮಕ್ಕೆ ಅಕ್ಷರ ಕೊಟ್ಟು ಚತುಶ್ಶಾಸ್ತ್ರ–ತರ್ಕ, ಮೀಮಾಂಸ, ವ್ಯಾಕರಣ ಮತ್ತು ವೇದಾಂತ–ಗಳನ್ನು ಕರತಲಾವಲಕ ಮಾಡಿಕೊಂಡ ಮೇಧಾವಿಗಳಿವರು. ವಿನಯ, ಅಚಾರ ವಿಚರ ಎಲ್ಲದರಲ್ಲೂ ಎಲ್ಲರಿಂದಲೂ ಮಾನ್ಯರಾದ ಇವರು ರಾಯರ ವೇದಾಂತ ಸಾಮ್ರಾಜ್ಯದಲ್ಲಿ ಮೆರೆದ ಧೀಮಂತ ವ್ಯಕ್ತಿ. ಈ ಗುರುಗಳ ಪ್ರೀತಿಯ ನೆನಪಾದಾಗ ಅವರ ಶಿಷ್ಯರು ಇಂದಿಗೂ ಅಂತಹ ಗುರುಗಳು ಈ ಕಾಲದಲ್ಲಿ ಸಿಗುವುದು ದುರ್ಲಭ. ನಮಗೆ ಸಿಕ್ಕಿದ್ದು ನಮ್ಮ ಪೂರ್ವ ಜನ್ಮದ ಪುಣ್ಯ ಎಂದು ಕಣ್ಣೀರು ಹಾಕುತ್ತಾರೆ. ಅವರ ವ್ಯಕ್ತಿತ್ವಕ್ಕೆ ಇನ್ನೊಂದು ನಿದರ್ಶನ ಎಂದರೆ ಅವರು



ವೆಂಕೋಬಾಚಾರ್ಯ

ಗತಿಸಿಹೋಗಿ ೨೫ ವರ್ಷಗಳ ನಂತರ ಶ್ರೀ ರಾಯರ ಮಠದಲ್ಲಿ ಶ್ರೀ ಸುಶಮೀಂದ್ರ ತೀರ್ಥರ ಅಧ್ಯಕ್ಷತೆಯಲ್ಲಿ ಅವರ ಶಿಷ್ಯಂದಿರು ಮೂರು ದಿನಗಳ ಕಾಲ, ಅವರ ವ್ಯಕ್ತಿತ್ವ, ಗುರುತ್ವ ಮತ್ತು ಪುಸ್ತಕಗಳ ಬಗ್ಗೆ ಒಂದು ಸಭೆಯನ್ನೇ ನಡೆಸಿದ್ದು. ರಾಯರ ಮಠದ ಸಂಸ್ಕೃತ ಮಹಾ ವಿದ್ಯಾ ಪೀಠದ ಪ್ರಂಶುಪಾಲರಾಗಿದ್ದ ಇವರು ಅನೇಕ ಗ್ರಂಥಗಳನ್ನು ಬರೆದಿದ್ದಾರೆ. ಅವುಗಳಲ್ಲಿ ಪಮುಖವಾದುವು 'ಶ್ರೀ ಮದ್ ನ್ಯಾಯಸುಧಾಪರಿಮಳ ಪ್ರಸರ , ಶ್ರೀ ರಾಘವೇಂದ್ರ ವಿಜಯ (ನಾಟಕ), ಸುಪ್ರಭಾತ ಮತ್ತು ಅನೇಕ ಚಿಕ್ಕ ಚಿಕ್ಕ ವಾಖ್ಯಾರ್ಥ ಟಿಪ್ಪಣಿಗಳು.

ಇವರು ಮಂತ್ರಾಲಯ ಮೂಲ ಬೃಂದಾವನದ ಅರ್ಚಕರಾದ ವೇದವ್ಯಾಸಾಚಾರ್‌ರಿಂದ ಸಂಸ್ಕೃತ ವಿದ್ಯಾಭ್ಯಾಸ ಮಾಡಿದರು. ನಂತರ ಮಳಗಿ ವೇದವ್ಯಾಸಾಚಾರ್ ಬಾಗಲಕೋಟೆ ಇವರಲ್ಲಿ ವ್ಯಾಸಂಗ ಮಾಡಿ ತಿರುಪತಿ ಮತ್ತು ಮೈಸೂರುಗಳಲ್ಲಿ ವಿದ್ಯಾಭ್ಯಾಸ ಮುಗಿಸಿದರು. ಇವರು ಎಲ್ಲಿ ವಿದ್ಯಾಭ್ಯಾಸ ಮಡಿದರೂ, ಅಲ್ಲಿಯೇ ಅವರ ಅಜ್ಜಿ ಕಮಲಮ್ಮ ಮನೆಮಾಡಿಕೊಂಡು ಇದ್ದು, ಮೊಮ್ಮಗನ ವಿದ್ಯೆಯನ್ನು ನೋಡಿ ಧನ್ಯರಾದರು. ಇವರ ಶಿಷ್ಯರಲ್ಲಿ ಕೆಲವು ಪ್ರಮುಖರಾದವರೆಂದರೆ: ಅರ್ಚಕ ವೆಂಕೋಬಾಚಾರ್, ಮಂತ್ರಾಲಯ, ರಾಜಾ ಎಸ್. ಗುರುರಾಜಾಚಾರ್, ನಂಜನಗೂಡು (ಶ್ರೀ ಸುಯಮೀಂದ್ರ ತೀರ್ಥರ ಪೂರ್ವಾಶ್ರಮದ ಮಕ್ಕಳು), ಶ್ರೀ ವಿದ್ಯಾ ವಾಚಸ್ಪತಿ ತೀರ್ಥರು (ಈಗಿನ ವ್ಯಾಸರಾಜ ಮಠದ ಪೀಠಾಧಿ ಪತಿಗಳು)

ಇವರ ಮನೆಯ ಪುಸ್ತಕದ ಕೊಠಡಿಯನ್ನು ಶ್ರೀ ಭಂಡಾರಕೇರಿ ಮಠಾಧೀಶರಾದ ಶ್ರೀ ವಿದ್ಯಾಮಾನ್ಯತೀರ್ಥರು 'ಸಣ್ಣ ಬದರಿಕಾಶ್ರಮ'ಎಂದೇ ಕರೆದಿದ್ದರು. ರಾಯರ ಕರುಣೆ ಇವರ ಮೇಲೆ ಎಷ್ಟಿತ್ತೆಂದರೆ ರಾಯರ

ಮಠದಲ್ಲೊಮ್ಮೆ ಸುಧಾ ಪಾಠ ಹೇಳುವಾಗ ಒಂದು ಪ್ರಮೇಯ ಭಾಗದಲ್ಲಿ ಸಂಶಯ ಬಂದಾಗ ಮರುದಿನ ಅದನ್ನು ನಿವಾರಿಸುವುದಾಗಿ ಹೇಳಿ ಅದೇ ಗುಂಗಿನಲ್ಲಿ ಮನೆಗೆ ಮರಳಿಬಂದರಂತೆ. ಮರುದಿನ ಬೆಳಿಗ್ಗೆ ರಾಯರ ಮಠಕ್ಕೆ ಬರುವಾಗ ದಾರಿಯಲ್ಲಿ ನದಿಯ ಕಡೆಯಿಂದ ಒಂದು ಹಾಳೆ ಹಾರಿಬಂದಂತೆ. ತೆಗೆದುನೋಡಿದಾಗ ಸಂಶಯ ಬಂದ ವಿಷಯದ ವಿವರಣೆ ಅದರಲ್ಲಿ ಸಂಸ್ಕೃತ ಲಿಪಿಯಲ್ಲಿ ಬರೆದಿತ್ತಂತೆ! ಚಿಕ್ಕ ವಯಸ್ಸಿನಲ್ಲಿ ಮದ್ರಾಸು ವಿಶ್ವವಿದ್ಯಾನಿಲಯ ಮತ್ತು ಬೆಂಗಳೂರು ಜಯ ಚಾಮರಾಜೇಂದ್ರ ಸಂಸ್ಕೃತ ಪಾಠಶಾಲೆಯ ಪ್ರಾಂಶುಪಾಲ ವೃತ್ತಿಗೆ ಆಹ್ವಾನ ಬಂದಾಗ ಇವರು ರಾಯರಲ್ಲಿ ಮಾರ್ಗದರ್ಶನ ಪಡೆದು ಆ ಹುದ್ದೆಗಳನ್ನೆಲ್ಲಾ ತ್ಯಜಿಸಿ ಮಂತ್ರಾಲಯದಲ್ಲೇ ಉಳಿದರು.

ಇವರಿಗೆ ನಾಲ್ಕುಜನ ಗಂಡುಮಕ್ಕಳು. ಅವರಲ್ಲಿ ನಾನು ಅವರ ದೊಡ್ಡ ಮಗ. ಅಚಾರ್ ವೆಂಕೋಬಚಾರ್ಯರ ಮಗ ಎಂಬ ಕಾರಣಕ್ಕಾಗಿ ನನ್ನನ್ನು ಮಂತ್ರಾಲಯದ ಗೌರವದಿಂದ ಹಾಗು ಪ್ರೀತಿಯಿಂದ ಕಾಣುತ್ತಾರೆ. ನನ್ನ ತಂದೆಯವರು ನನ್ನ ೩ನೇ ವಯಸ್ಸಿನಲ್ಲಿ (ಡಿಸೆಂಬರ್ ೧೯೬೩) ಕಾಲವಾದರು. ನನ್ನ ಮಾತೃಶ್ರೀಯವರು ತಮ್ಮ ಯಜಮಾನರು ತೀರಿಹೋದಮೇಲೆ ಮನೆಯನ್ನು ಬಿಟ್ಟು ಹೊರಗೇ ಬರುತ್ತಿರಲಿಲ್ಲ. ೫ ವರ್ಷಗಳ ಕಾಲ ರಾಯರ ದರ್ಶನಕ್ಕೂ ಹೋಗಿರಲಿಲ್ಲ. ಹಾಗಿರಲು ೨೪-೪-೬೮ ರ ರಾತ್ರಿ ಅವರ ಕನಸಿನಲ್ಲಿ ರಾಯರು ಬಂದು 'ನೀನು ಐದು ವರ್ಷದಿಂದ ನನ್ನ ದರ್ಶನಕ್ಕೆ ಬಂದಿಲ್ಲ, ನಿನ್ನ ಮಕ್ಕಳನ್ನು ನಾನು ಹೇಗೆ ಕಾಪಾಡಲಿ? ಎಂದು ಕೇಳಿದರಂತೆ. ಮರುದಿನವೇ ನನ್ನ ತಾಯಿ ರಾಯರ ದರ್ಶನ ಮಾಡಿದರಂತೆ. ನನಗೆ ಅದೇದಿನ ಅಪಮೃತ್ಯು ಪರಿಹಾರವಾಯಿತು. ೨೫-೪-೬೮ ರಂದು ನಾನು ಪ್ರಯಾಣಿಸುತ್ತಿದ್ದ ಎಚ್.ಎ.ಎಲ್. ಫ್ಯಾಕ್ಟರಿಯ ಬಸ್ಸು ಅಪಘಾತಕ್ಕೀಡಾಯಿತು. ರಾಯರ ಕರುಣೆಯಿಂದ ಬದುಕುಳಿದೆನು. ನಮ್ಮ ತಾಯಿಯವರೇ ನನಗೆ ಜೀವದಾನ ಮಾಡಿದರು. ಈ ಅಪಘಾತದಿಂದ ನಾನು ಮೂರು ತಿಂಗಳ ಕಾಲ ಬೆಂಗಳೂರಿನ ಈ.ಎಸ್.ಐ. ಆಸ್ಪತ್ರೆಯಲ್ಲಿ ಇರಬೇಕಾಯಿತು. ಇದಾದಮೇಲೆ ರಾಯರ ದಯದಿಂದ ಮತ್ತು ತಂದೆತಾಯಿಯರ ಆಶೀರ್ವಾದದಿಂದ ನನ್ನ ಮಕ್ಕಳು ಮೊಮ್ಮಕ್ಕಳು ಸುಖವಾಗಿದ್ದಾರೆ.

***ಲೇಖಕರು ಜಿ.ಪಿ. ವಿನಯಬಾಬುರವರ ಭಾವಮೈದುನ ವಾದಿರಾಜ್‌ರವರಿಗೆ ಹೆಣ್ಣು ಕೊಟ್ಟ ಮಾವ.***

**ಕುದುರೆಮೋತಿ ಸ್ವಾಮಿರಾಯಚಾರ್**
ಯಲಬುರ್ಗಾ ತಾಲೂಕು, ಕರ್ನಾಟಕ

- **ಗುನ್ನಾಳ ರಾಘವೇಂದ್ರಾಚಾರ್** – ರಾಧಮ್ಮ
  - **ಆಚಾರ್ ವೆಂಕೋಬಾಚಾರ್** – ಮಹಾಲಕ್ಷ್ಮಮ್ಮ
    - **ಪುರಾಣಿಕ್ ಸಣ್ಣಾಚಾರ್** – ರಾಧಮ್ಮ, ಪರಿಮಳ
      - **ವೆಂಕಟೇಶ್ – ವಿಜಯಶ್ರೀ** – ಇಂಜಿನಿಯರ್, ಬೆಂಗಳೂರು
        - ಸುಧರ್ಮೇಂದ್ರ
      - **ರಾಘವೇಂದ್ರ** – ಇಂಜಿನಿಯರ್ **(USA)**
      - **ಅಲಕನಂದಾ** – ವಾದಿರಾಜ್ ಬಿ. ಎಸ್.
        - ಪ್ರೇರಣ
      - **ಶ್ರೀಪಾದಾಚಾರ್** – ವೃಂದಾ ಬಾಯಿ
      - **ಕಮಲ – ಶೇಷಗಿರಿ** – ಬೆಂಗಳೂರು
        - ಸಂಕರ್ಷಣ
    - **ಜಿ. ನಾಗರಾಜಾಚಾರ್** – ಪರಿಮಳ
    - **ಪ್ರಹ್ಲಾದಾಚಾರ್** – ಸುನಂದಾಬಾಯಿ
    - **ವ್ಯಾಸರಾಜಾಚಾರ್** – ರಾಧಾ
    - **ಶ್ರೀಪಾದಾಚಾರ್** – ವೃಂದಾ ಬಾಯಿ
  - **ಶೇಷಮ್ಮ** – ಕೊಪ್ರಶೇಷಾಚಾರ್
  - **ರತ್ನಮ್ಮ** – ತಿರುಮಲ ರಾವ್
  - **ರುಕ್ಕವ್ವ** – ನರಸಿಂಹಾಚಾರ್ ದೇಸಾಯಿ
- **ಗುನ್ನಾಳ ರಾಮಾಚಾರ್**
- **ಗುನ್ನಾಳಕೃಷ್ಣಾಚಾರ್**
- **ಗುನ್ನಾಳ ಲಕ್ಷ್ಮಪ್ಪಾಚಾರ್**

ಜಾತಿ, ಧರ್ಮಗಳ ಅಥವಾ ಕಾಲ, ದೇಶಗಳ ಬೇಧವಿಲ್ಲ. ಇಂತಹ ಹಿರಿಯರು ಎಲ್ಲಿದ್ದರೂ, ಹೇಗಿದ್ದರೂ ಅವರು ಹಿರಿಯರೇ. ಈ ಪೂಜೆಯ ವಿಧಿ – ವಿಧಾನಗಳು ಬೇರೆ ಬೇರೆ ಇರಬಹುದಾದರೂ ಅದರ ಹಿಂದಿನ ಉದೇಶ ಮಾತ್ರ ಸಾರ್ವಕಾಲಿಕವಾದುದು.

ಇದು ಪೂಜೆ ಎಂಬ ಶಬ್ದದ ಅರ್ಥ ವಿವರಣೆಯಾಯಿತು. ಆದರೆ ಈ ಪದದ ಪರಿಕಲ್ಪನೆ ಹೇಗಾಯಿತು? ವೇದಗಳ ಕಾಲದ ಋಷಿ ಮುನಿಗಳು ನಮಗೆ ಪೂಜಾರ್ಹರು, ನಿಜ. ಆದರೆ ಆ ಮಹಾತ್ಮರು ತಮಗಿಂತಲೂ ಅನೇಕ ಪಟ್ಟು ಹಿರಿಯನಾದ, ಅಂದರೆ ಈ ಜಗತ್ತಿನ ಎಲ್ಲ ಕ್ರಿಯೆಗಳನ್ನೂ ನಿಯಂತ್ರಿಸುವ,ಇಡೀ ವಿಶ್ವದ ಕೋಟ್ಯಾಂತರ ಜೀವರಾಶಿಗಳ ಸೃಷ್ಟಿ, ಸ್ಥಿತಿ, ಲಯಗಳಿಗೆ ಕಾರಣನಾದ ಸರ್ವಶಕ್ತ, ಸರ್ವೋತ್ತಮನಾದ ಭಗವಂತನ ಲೀಲಾವಿಲಾಸಗಳನ್ನು ಗುರ್ತಿಸಿ ಆತನನ್ನು ಪೂಜಿಸುವ ವಿಧಿ – ವಿಧಾನಗಳನ್ನು ರೂಪಿಸಿಕೊಟ್ಟರು.

ಅಂತಹ ಭಗವಂತನನ್ನು ನಮ್ಮ ಕುಲ – ಪದ್ಧತಿಗಳಿಗೂ ಮತ್ತು ಮನಸ್ಸಿನ ಒಲವುಗಳಿಗೂ ಒಪ್ಪುವಂತಹ ಒಂದು ಪ್ರತೀಕದಲ್ಲಿ ಸಾತ್ವಿಕ ದ್ರವ್ಯಗಳಿಂದ ಪೂಜಿಸುವುದು ನಮ್ಮ ನಿತ್ಯ ಕರ್ಮಗಳಿಂದ ಪ್ರಧಾನವಾಗಿರಬೇಕೆಂದು ಈ ಮಹಾತ್ಮರು ತೋರಿಸಿಕೊಟ್ಟಿದ್ದಾರೆ. ಈ ನಿತ್ಯ ಕರ್ಮಗಳಲ್ಲಿ ವಿಧಿ – ವಿಧಾನಗಳು ಮುಖ್ಯವಾದರೂ ಭಗವಂತನಲ್ಲಿ ನಾವು ತೋರುವ ಅನನ್ಯ ಭಕ್ತಿ ಇನ್ನೂ ಮುಖ್ಯವಾದುದು. ಭಗವಂತನೇ ಭಗವದ್ಗೀತೆಯಲ್ಲಿ ಹೇಳಿರುವಂತೆ:

ಪುತ್ರಂ ಪುಷ್ಪಂ ಫಲಂ ತೋಯಂ ಯೋ ಮೇ ಭಕ್ತ್ಯಾ ಪ್ರಯಚ್ಛತಿ।
ತದಹಂ ಭಕ್ತ್ಯುಪಹೃತಂ ಅಶ್ನಾಮಿ ಪ್ರಯತಾತ್ಮನಃ॥

ಪೂಜೆಯ ವಿಧಿ – ವಿಧಾನಗಳು, ಮಂತ್ರ – ತಂತ್ರ ಸಂಪ್ರದಾಯಗಳು ಕಾಲ ದೇಶಗಳಿಗೆ ಅನುಸಾರವಾಗಿ ಅನೇಕ ಬಗೆಯಲ್ಲಿ ರೂಪಗೊಳ್ಳುತ್ತವೆ. ಆದರೆ ಪೂಜೆಯ ಹಿಂದಿರುವ ತಾತ್ವಿಕ ಉದ್ದೇಶ ಮಾತ್ರ ಒಂದೇ: ನಮಗೆ ಅನೇಕ ಸೌಲಭ್ಯಗಳನ್ನೂ ಸವಲತ್ತುಗಳನ್ನೂ ನೀಡಿ ನಮ್ಮ ಬದುಕನ್ನು ಸುಗಮಗೊಳಿಸಿರುವ ಆ ಭಗವಂತನಿಗೆ ನಮ್ಮ ಕೃತಜ್ಞತೆಯನ್ನೂ ಮತ್ತು ಗೌರವವನ್ನೂ ಸಲ್ಲಿಸುವುದು.

ಅರ್ಥ. ಒಂದು ಒಳ್ಳೆಯ ಕೆಲಸವನ್ನು ಮತ್ತೆ ಮತ್ತೆ ಮಾಡುವುದರಿಂದ ಏರ್ಪಡುವ ಚಿತ್ತದ ಪರಿಪಾಕಕ್ಕೆ ಸಂಸ್ಕಾರ ಎಂಬ ಹೆಸರು ಸಲ್ಲುತ್ತದೆ.

ಇತರ ಪ್ರಾಣಿಗಳಲ್ಲಿ ಇರುವಂತೆ ಮನುಷ್ಯನಲ್ಲಿಯೂ ಕೆಲವು ಗುಣಗಳಿರುತ್ತವೆ. ಇವನ್ನು ಹಾಗೆಯೇ ಬೆಳೆಯಲು ಬಿಟ್ಟರೆ ವ್ಯಕ್ತಿಯು ಪ್ರಾಣಿಗಳಿಗಿಂತ ಹೆಚ್ಚು ವ್ಯತ್ಯಾಸವಿಲ್ಲದಂತೆ ಬೆಳೆಯಬಹುದು. ಒಂದು ಒಳ್ಳೆಯ ಜಾತಿಯ ಗಿಡವನ್ನು ತೋಟದಲ್ಲಿ ನೆಟ್ಟು ಗೊಬ್ಬರ ಮತ್ತು ನೀರುಗಳನ್ನು ಕೊಡುತ್ತಾ, ಹುಳು ಮತ್ತು ಕಳೆಗಳ ಬಾಧೆಯಿಲ್ಲದಂತೆ ನೋಡಿಕೊಂಡು ಆರೈಕೆ ಮಾಡಿ ಬೆಳೆಸಿದಾಗ ಮಾತ್ರ ಆ ಗಿಡವು ಸರಿಯಾಗಿ ಬೆಳೆದು ತನ್ನ ಗುಣಗಳನ್ನು ವಿಕಾಸಗೊಳಿಸಿಕೊಂಡು ಉತ್ತಮವಾದ ಫಲವನ್ನು ಕೊಡಬಲ್ಲುದು. ಹೀಗೆಯೇ ವ್ಯಕ್ತಿಯ ವಿಷಯದಲ್ಲಿಯೂ ಆರೈಕೆ ಮತ್ತು ಕೃಷಿಗಳು ಆಗಬೇಕು. ಇದಕ್ಕಾಗಿ ಏರ್ಪಟ್ಟಿರುವ ವಿಧಿ-ವಿಧಾನಗಳೇ ಸಂಸ್ಕಾರಗಳು. ವ್ಯಕ್ತಿಯು ತನ್ನ ದುರ್ಗುಣಗಳನ್ನು ಕಳೆದುಕೊಂಡು ಮೊದಲು ಸರಿಯಾದ ಮಾನವನಾಗಬೇಕು. ಇದು ಸಂಸ್ಕಾರಗಳ ಗುರಿ.

ಸಂಸ್ಕಾರಗಳ ವಿಧಿ-ವಿಧಾನಗಳನ್ನು ಪರಿಶೀಲಿಸಿದಾಗ ಕೆಲವು ಸಾಮಾನ್ಯ ಸಂಗತಿಗಳನ್ನು ಗುರ್ತಿಸಬಹುದು. ಈ ಜಗತ್ತಿನಲ್ಲಿ ಮಾನವನ ಹೊರಗಿನ ಕಣ್ಣಿಗೆ ಕಾಣಿಸಿದ್ದಷ್ಟೇ ಸತ್ಯವಲ್ಲ. ಅಗೋಚರವಾದ ಅನೇಕ ಶಕ್ತಿಗಳ ಮತ್ತು ಪ್ರಭಾವಗಳ ಮಧ್ಯೆ ನಾವು ಬಾಳುತ್ತಿರುವೆವು. ಕೆಲವು ಶಕ್ತಿಗಳು ನಮಗೆ ಕೆಡುಕನ್ನು ಉಂಟುಮಾಡುವ ಸಾಧ್ಯತೆ ಇದೆ. ಅವುಗಳ ಪ್ರಭಾವದಿಂದ ನಮ್ಮನ್ನು ರಕ್ಷಿಸಿಕೊಳ್ಳಲು ಸಂಸ್ಕಾರಗಳು ನೆರವಾಗಬಲ್ಲವು. ಹಾಗೆಯೇ ಇನ್ನು ಕೆಲವು ಶಕ್ತಿಗಳು ನಮಗೆ ಒಳಿತನ್ನು ಮಾಡುವ ಸಾಮರ್ಥ್ಯವನ್ನು ಹೊಂದಿರುತ್ತವೆ. ಇವನ್ನು ಆವಾಹಿಸಿ, ಆರಾಧಿಸಿ ಒಲಿಸಿಕೊಳ್ಳುವುದಕ್ಕೂ ಸಹ ಸಂಸ್ಕಾರಗಳು ನೆರವಾಗುವುವು.

ಸಂಸ್ಕಾರಗಳಿಗೆ ಪ್ರತ್ಯಕ್ಷವಾದ ಸಾಮಾಜಿಕ ಪ್ರಯೋಜನಗಳೂ ಇವೆ. ತನ್ನ ಮತ್ತು ತನ್ನ ಕುಟುಂಬದ ಬಾಳಿನ ಪ್ರಮುಖ ಘಟ್ಟಗಳಲ್ಲಿ (ಅಂದರೆ ಮದುವೆ, ಸಂತಾನ, ಸಾವು ಮುಂತಾದವು) ಆಯಾ ಸನ್ನಿವೇಶಕ್ಕೆ ತಕ್ಕಂತೆ ಸಂತೋಷ,

# ಗಂಗಾವತರಣ

ಪೂರ್ವದಲ್ಲಿ ಸಗರನೆಂಬ ರಾಜನೊಬ್ಬನು ಅಯೋಧ್ಯೆಯನ್ನು ಆಳುತ್ತಿದ್ದನು. ಅವನು ಬಹಳ ಧಾರ್ಮಿಕನು. ಸಂತಾನಪೇಕ್ಷೆಯಿಂದ ವಿದರ್ಭ ರಾಜನ ಮಗಳಾದ ಕೇಶಿನಿ ಎಂಬವಳನ್ನು ಜ್ಯೇಷ್ಠ ಪತ್ನಿಯಾಗಿ ಸ್ವೀಕರಿಸಿದನು. ಅರಿಷ್ಟನೇಮಿ ಎಂಬುವನ ಮಗಳಾದ ಸುಮತಿ ಇವನ ಎರಡನೆಯ ಹೆಂಡತಿ.

ಸಗರನು ಈ ಇಬ್ಬರು ಪತ್ನಿಯರೊಡಗೂಡಿ ಪುತ್ರಾರ್ಥಿಯಾಗಿ ಹಿಮವತ್ಪರ್ವತದ ಭೃಗು ಪ್ರಸರಣವೆಂಬ ಪ್ರದೇಶದಲ್ಲಿ ದೊಡ್ಡ ತಪಸ್ಸು ಮಾಡುತ್ತಿದ್ದನು. ಇವನ ತಪಸ್ಸಿಗೆ ಮೆಚ್ಚಿ ಭೃಗು ಮಹರ್ಷಿಯು ಪುತ್ರಸಂತಾನ ವರವನ್ನು ದಯಪಾಲಿಸಿದನು. ಇಬ್ಬರ ಹೆಂಡತಿಯರಲ್ಲಿ ಒಬ್ಬಳಿಗೆ ವಂಶವನ್ನು ಬೆಳೆಸುವ ಒಬ್ಬನೇ ಮಗನಾಗುವನು; ಇನ್ನೊಬ್ಬ ಪತ್ನಿಗೆ ೬೦,೦೦ ಜನ ಮಕ್ಕಳು ಹುಟ್ಟುವರು ಎಂದು ಭೃಗು ಮಹರ್ಷಿಯು ಆಶೀರ್ವದಿಸಿದನು. ಇದರ ಫಲವಾಗಿ ಕೇಶಿನಿಯಲ್ಲಿ ಅಸಮಂಜಸ ಎಂಬ ಒಬ್ಬನೇ ಮಗನು ಹುಟ್ಟಿದನು. ಎರಡನೆಯವಳಾದ ಸುಮತಿಗೆ ೬೦,೦೦೦ ಜನ ಮಕ್ಕಳು ಜನಿಸಿದರು. ಸುಮತಿಗೆ ಸೋರೇಕಾಯಿಯಂತೆ ದುಂಡಗೆ ದಪ್ಪನಾದ ಒಂದು ಪಿಂಡವು ಗರ್ಭದಲ್ಲಿ ಬೆಳೆಯಲಾರಂಭಿಸಿತು. ಬೆಳೆಯುತ್ತಿರುವಾಗಲೇ ಅದನ್ನು ಒಡೆದುದರಿಂದ ಅದು ೬೦ ಸಾವಿರ ಹೋಳುಗಳಾಯಿತು.

ಕೇಶಿನಿಯ ಮಗನಾದ ಅಸಮಂಜಸನು ಎಂದೂ ಸಮಂಜಸವಾದ ಕಾರ್ಯ ಮಾಡುತ್ತಿರಲಿಲ್ಲ. ಬೀದಿಯಲ್ಲಿ ತಿರುಗುತ್ತಿದ್ದ ಮಕ್ಕಳನ್ನು ಎತ್ತಿಕೊಂಡು ಹೋಗಿ ಸರಯೂ ನದಿಯಲ್ಲಿ ಹಾಕುತ್ತಿದ್ದನು. ಈ ರೀತಿ ಲೋಕ ಕಂಟಕ ಕಾರ್ಯ ಮಾಡುತ್ತಿದ್ದುದರಿಂದ ಸಗರನು ತನ್ನ ಮಗನನ್ನು ಗಡೀಪಾರು ಮಾಡಿದ್ದನು. ಬಹುಕಾಲದ ಮೇಲೆ ಇವನಿಗೆ ಸದ್ಬುದ್ಧಿ ಬಂದು ಯಜ್ಞ ಯಾಗಾದಿಗಳನ್ನು ಮಾಡುವ ಮನಸ್ಸಾಯಿತು. ಈ ವಿಷಯ ತಿಳಿದು ಸಗರನಿಗೆ ಸಂತೋಷವಾಗಿ ಅಶ್ವಮೇಧ ಯಾಗವನ್ನು ಪ್ರಾರಂಭಿಸಿದನು.

ಸಗರನು ಯಜ್ಞ ಕುದುರೆಯನ್ನು ದೇಶ ಸಂಚಾರಕ್ಕೆ ಕಳುಹಿಸಿದನು. ಅಶ್ವದ ರಕ್ಷಣೆಗಾಗಿ ಅಸಮಂಜಸನ ಮಗ ಅಂಶುಮಂತನನ್ನು ಕಳುಹಿಸಿದನು.

ಯಜ್ಞವು ಪ್ರಾರಂಭವಾದ ಕೂಡಲೇ ಇಂದ್ರನು ರಾಕ್ಷಸ ರೂಪ ಧರಿಸಿ ಯುಕ್ಥ್ಯ ವೆಂಬ ಕರ್ಮವನ್ನು ನಡೆಸುವ ದಿನಕ್ಕೆ ಸರಿಯಾಗಿ ಕುದುರೆಯನ್ನು ಹಾರಿಸಿಕೊಂಡು ಹೋದನು. ಈ ರೀತಿ ಕಳುವಾದ ಅಶ್ವವನ್ನು ಹಿಂತಿರುಗಿ ತರಲು ಸಗರನು ತನ್ನ ೬೦,೦೦೦ ಮಕ್ಕಳನ್ನು ಕಳುಹಿಸಿದನು. ಅಶ್ವವನ್ನು ಹಿಂತಿರುಗಿ ತರದ ಹೊರತು ಯಜ್ಞವನ್ನು ನಡೆಸುವಂತಿರಲಿಲ್ಲವಾದ್ದರಿಂದ ಸಗರನ ಮಕ್ಕಳು ಭೂಮಿಯನ್ನೆಲ್ಲಾ ಶೋಧಿಸಿ ಪಾತಾಳಕ್ಕೆ ಹೋಗಲು ತಮ್ಮ ಉಗುರುಗಳಿಂದ ಭೂಮಿಯನ್ನು ಕೊರೆದರು. ಈ ರೀತಿ ಭೂಮಂಡಲವನ್ನು ತೋಡಿದ್ದರಿಂದ ಕೋಪಗೊಂಡ ಋಷಿಗಳು ಭೂಮಂಡಲವನ್ನು ರಕ್ಷಿಸುವಂತೆ ಶ್ರೀಮನ್ನಾರಯಣನನ್ನು ಪ್ರಾರ್ಥಿಸಿದರು. ಆಗ ಹರಿಯು ಕಪಿಲನಾಮಕ ಋಷಿರೂಪ ಧರಿಸಿ ಸಗರ ಪುತ್ರರಿಗೆ ಎದುರಾಗಿ ತನ್ನ ಕೋಪಾಗ್ನಿಯಿಂದ ೬೦,೦೦೦ ಪುತ್ರರನ್ನು ಸುಟ್ಟು ಭಸ್ಮ ಮಾಡಿದನು. ಅಸಂಜಸನ ಮಗನಾದ ಅಂಶುಮಂತನು ಯಜ್ಞಾಶ್ವವನ್ನು ಹಿಂತಿರುಗಿ ತಂದು ಯಜ್ಞವನ್ನು ಮಾಡಲು ಸಗರನಿಗೆ ಸಹಾಯ ಮಾಡಿದನು.

ಸುಟ್ಟು ಭಸ್ಮವಾದ ಸಗರ ಪುತ್ರರಿಗೆ ಮೋಕ್ಷವಾಗಬೇಕಾದರೆ ಲೋಕಪಾವನಿಯಾದ ಗಂಗೆಯನ್ನು ಅವರ ಅಸ್ಥಿಗಳ ಮೇಲೆ ಹರಿಸಬೇಕೆಂದು ಗರುಡನು ಅಂಶುಮಂತನಿಗೆ ಸೂಚನೆ ಕೊಟ್ಟನು. ಸಗರನು ತನ್ನ ಮಕ್ಕಳ ಮೋಕ್ಷಕ್ಕಾಗಿ ೩೦,೦೦೦ ವರ್ಷ ತಪಸ್ಸು ಮಾಡಿದನು. ಅನಂತರ ಅಂಶುಮಂತನು ರಾಜ್ಯಭಾರ ಮಾಡಿದನು. ಅಂಶುಮಂತನೂ ೩೨,೦೦೦ ವರ್ಷ ತಪಸ್ಸು ಮಾಡಿದನು. ಇವನ ಮಗನೇ ದಿಲೀಪ. ಇವನೂ ೩೦,೦೦೦ ವರ್ಷಗಳ ಕಾಲ ತಪಸ್ಸು ಮಾಡಿದರೂ ತಾತಂದರಿಗೆ ಮೋಕ್ಷ ಸಿಗಲಿಲ್ಲ. ಗಂಗೆ ಭೂಮಿಗೆ ಬರಲಿಲ್ಲ.

ದಿಲೀಪನ ಮಗನಾದ ಭಗೀರಥನು ಮಹಾತೇಜಸ್ವಿಯಾಗಿ ರಾಜರ್ಷಿ ಎನಿಸಿಕೊಂಡು ಸಂತಾನವಿಲ್ಲದೇ ಮಕ್ಕಳನ್ನು ಪಡೆಯುವ ಉದ್ದೇಶದಿಂದಲೂ ಮತ್ತು ಮುತ್ತಾತಂದಿರಿಗೆ ಮೋಕ್ಷ ದೊರಕಿಸಿಕೊಡುವ ಉದ್ದೇಶದಿಂದಲೂ ಗೋಕರ್ಣಕ್ಕೆ ಹೋಗಿ ಘೋರವಾದ ತಪಸ್ಸು ಮಾಡಿದನು.

ಭಗೀರಥನ ಎರಡೂ ಬೇಡಿಕೆಗಳನ್ನು ಈಡೇರಿಸಲು ಇಂದ್ರನು ಪ್ರತ್ಯಕ್ಷನಾದನು ಆದರೆ ದೇವಗಂಗೆಯನ್ನು ನಿಗ್ರಹಿಸಬಲ್ಲ ರುದ್ರನನ್ನು ಕುರಿತು ತಪಸ್ಸು ಮಾಡುವಂತೆ ಸೂಚಿಸಿದನು. ಭಗೀರಥನ ತಪಸ್ಸಿನ ಫಲವಾಗಿ

ಗಂಗೆಯನ್ನು ರುದ್ರನು ನಿಗ್ರಹಿಸಿದನಾದರೂ ತನ್ನ ಜಟೆಯಲ್ಲೇ ಬಂಧಿಸಿಟ್ಟನು. ಇದರಿಂದ ಭಗೀರಥನು ರುದ್ರನನ್ನು ಕುರಿತು ಮತ್ತೊಮ್ಮೆ ತಪ ಕೈಗೊಳ್ಳಬೇಕಾಯಿತು. ತಪಸ್ಸಿಗೆ ಮೆಚ್ಚಿ ಪ್ರಸನ್ನರಾದ ರುದ್ರ ದೇವರು ಗಂಗೆಯನ್ನು ಬಿಂದು ಸರಸ್ಸಿನಲ್ಲಿ ಬಿಟ್ಟುಬಿಟ್ಟರು.

ಗಂಗಾ ಪ್ರವಾಹವು ರುದ್ರನ ಜಟೆಯಿಂದ ಬಿದ್ದೊಡನೆಯೇ ಏಳು ಪ್ರವಾಹಗಳಾಗಿ ಒಡೆಯಿತು. ಅವುಗಳಲ್ಲಿ ಹ್ಲಾದಿನಿ, ಪಾವನೆ ಮತ್ತು ನಳಿನಿ ಎಂಬ ಮೂರು ಪ್ರವಾಹಗಳು ಪೂರ್ವಾಭಿಮುಖವಾಗಿ ಹರಿದವು. ಸುಚಕ್ಷೆ, ಸೀತೆ ಮತ್ತು ಸಿಂಧೂ ಎಂಬ ಮೂರು ಪ್ರವಾಹಗಳು ಪಶ್ಚಿಮಾಭಿಮುಖವಾಗಿ ಹೊರಟವು. ಏಳನೆಯದಾದ ಇನ್ನೊಂದು ಪ್ರವಾಹವು ಮಾತ್ರ ಭಗೀರಥನನ್ನು ಹಿಂಬಾಲಿಸಿತು. ಗಂಗಾ ಪ್ರವಾಹವು ಸಮಸ್ತ ಪ್ರಪಂಚವನ್ನೂ ಆವರಿಸಿತು.

ಗಂಗೆ ದೇವಲೋಕದಿಂದ ಭೂಸ್ಪರ್ಶವಾದ ರುದ್ರರಮಣೀಯ ದೃಶ್ಯವನ್ನು ಕಾಣಲು ದೇವಾನುದೇವತೆಗಳು, ಯಕ್ಷರು, ಗಂಧರ್ವರು, ಕಿನ್ನರರು ಮತ್ತು ನಾಗರು ಆಕಾಶ ಮತ್ತು ಭೂಮಿಗಳಲ್ಲಿ ನೆರೆದಿದ್ದರು. ತಮ್ಮ ಪೂರ್ವಜರಿಗೆ ಮುಕ್ತಿ ತೋರಿಸಲು ಭಗೀರಥನು ಕರೆದು ತರುತ್ತಿದ್ದ ಗಂಗೆಯು ಮಾರ್ಗವಶದಿಂದ ತಪಸ್ಸಿನಲ್ಲಿದ್ದ ಜಹ್ನು ಮಹರ್ಷಿಯ ಆಶ್ರಮ ಪ್ರವೇಶಿಸಿತು. ಇದರಿಂದ ಕೋಪಗೊಂಡ ಮಹರ್ಷಿ ಗಂಗೆಯ ಗರ್ವ ಮುರಿಯಲು ಬೇಕೆಂದೇ ಆ ನೀರನ್ನೆಲ್ಲಾ ಆಪೋಶನೆಯಾಗಿ ಕುಡಿದುಬಿಟ್ಟರು. ಆದರೆ ಇನ್ನಿತರ ಋಷಿಗಳ ಪ್ರಾರ್ಥನೆಯಂತೆ ಗಂಗೆಯನ್ನು ತಮ್ಮ ಕಿವಿಯ ಮೂಲಕ ಅವರು ಹೊರಗೆಬಿಟ್ಟರು. ಅಂದಿನಿಂದ ಗಂಗೆಗೆ ಜಾಹ್ನವಿ ಎಂದು ಹೆಸರಾಯಿತು. ಜಾಹ್ನವಿಯು ಭಗೀರಥನ ರಥವನ್ನು ಮತ್ತೆ ಹಿಂಬಾಲಿಸುತ್ತಾ ಹೋಗಿ ಸಾಗರದಲ್ಲಿ ಪ್ರವೇಶಿಸಿ ಪಾತಾಳವನ್ನು ಸೇರಿತು. ಭಗೀರಥನು ದುಃಖಿತನಾಗಿ ತಾನು ಮಹಾಪ್ರಯತ್ನದಿಂದ ತಂದ ಗಂಗೆಯನ್ನು ಭಸ್ಮರಾಶಿಯಾಗಿ ಬಿದ್ದಿದ್ದ ತನ್ನ ಪೂರ್ವಜರ ಮೇಲೆ ಪ್ರವಹಿಸಲು ಪ್ರಾರ್ಥಿಸಿದನು. ಪವಿತ್ರಳಾದ ಗಂಗೆಯು ತನ್ನ ಪ್ರವಾಹದಿಂದ ಬೂದಿರಾಶಿಯನ್ನು ಕೊಚ್ಚಿಸಿದಳು. ಆಗ ೬೦,೦೦೦ ಮಂದಿ ಸಗರ ಪುತ್ರರು ಪಾಪದಿಂದ ಪುನೀತರಾಗಿ ತಮ್ಮ ವಂಶಜರೆಲ್ಲರ ಸತತ ಪ್ರಯತ್ನದಿಂದ ಸ್ವರ್ಗವನ್ನು ಸೇರಿದರು.

ಭಗೀರಥನ ಪ್ರಯತ್ನದಿಂದ ಅವನ ವಂಶದ ಹಿರಿಯರು ಸ್ವರ್ಗ ಸೇರಿದ್ದೇ ಅಲ್ಲದೆ ಜಗತ್ತಿಗೆ ಗಂಗೆಯೊದಗಿತು. ಹಾಗೆಯೇ ನಮ್ಮ ಕುಟುಂಬದ ವ್ಯಕ್ತಿಗಳ ಆದರ್ಶ ಇತರರಿಗೂ ಸ್ಫೂರ್ತಿಯಾಗಲಿ. **(ಸಂಗ್ರಹ)**

ನಾವೆಲ್ಲರೂ ಋಷಿ ಮುನಿಗಳಲ್ಲ. ಕಠಿಣ ತಪಶ್ಚರ್ಯೆ ಕೈಗೊಂಡವರೇನೂ ಅಲ್ಲ. ಆದರೂ ನಿಶ್ಚಿಂತೆಯಿಂದ ನಿರಾಳವಾಗಿ ಬದುಕುತ್ತಲೂ ಇಲ್ಲ. 'ಕಷ್ಟ ಬೇಡೆಂಬಾಸೆ, ಕಡು ಸುಖವ ಕಾಂಬಾಸೆ, ನಷ್ಟ ಜೀವನದಾಸೆ'. ಕುಣಿಸಿದ ಹಾಗೆ ಕುಣಿದು ದಣಿದವರು. ಕಷ್ಟದ ಲೇಪವಿಲ್ಲದ ಸುಖ, ನಷ್ಟದ ಸೋಂಕಿಲ್ಲದ ಲಾಭವನ್ನು ಈ ನಶ್ವರ ಜೀವನದಲ್ಲಿ ಶಾಶ್ವತವಾಗಿ ಹುಡುಕುತ್ತಿರುವವರು. ನಮ್ಮ ಅಸಹಜ ಆಸೆಗಳು, ನಮ್ಮನ್ನು ಕಾಡುತ್ತಿವೆಯೆಂದು ತಿಳಿದೂ ನಮ್ಮ ದುಃಖಕ್ಕೆ ಕಾರಣವನ್ನು ಜನರಲ್ಲೋ, ಪರಿಸ್ಥಿತಿಯಲ್ಲೋ, ದೈವದಲ್ಲೋ ಆರೋಪಿಸುವವರು.

ಹೀಗೆ ಕುರುಡು ಬಾಳ್ವೆ ನಡೆಸುತ್ತಿರುವಾಗ ಆಗೊಮ್ಮೆ ಈಗೊಮ್ಮೆ ಕೆಲವರು ಮಿಂಚಿನ ಸಂಚಾರವನ್ನುಂಟು ಮಾಡಿ ಕಣ್ತೆರೆಸುವರು, ಕಣ್ತಣಿಸುವರು. ನೆನಪಾಗಿ ಕಾಡುವರು. ಅಂತಹವರು, ಕೈಗೆ ಮುಳ್ಳು ಚುಚ್ಚಿದಾಗಲೂ ಗುಲಾಬಿಯನ್ನು ಕಂಡು ಪರವಶರಾಗುವರು. ಅಪ್ರತೀಕಾರಪೂರ್ವಕವಾಗಿ ಎಲ್ಲ ದುಃಖವನ್ನೂ ಕೇವಲ ನುಂಗಿದ್ದಲ್ಲ – ಜೀರ್ಣಿಸಿಕೊಂಡವರು. 'ರಾಗಗಳು ತಮಗೊಡೆಯರಾಗವೊಲುಬಾಳುವರು'(ಆಕರ: ಕರುಣಾಳು ಬಾಬೆಳಕೆ, ಕವನ ಲೇ: ಬಿಎಂಶ್ರೀ)

ಸಮಷ್ಟಿ ಪ್ರಜ್ಞೆಯನ್ನೇ ಕಳೆದುಕೊಂಡು ವ್ಯಷ್ಟಿ ಗೀಳಿನಲ್ಲಿ ಬಾಳ ಸಾಗಿಸುತ್ತಿರುವ ನಮಗೆ ಇಂತಹ ಪ್ರಾತಃ ಸ್ಮರಣೀಯರನ್ನು ಪರಿಚಯಿಸುವ ಪ್ರಯತ್ನ ಈ ಪುಸ್ತಕದಲ್ಲಿದೆ. ಅಂತಹವರು ಮೋಹದಿಂದ ಕರುಣೆಯತ್ತ, ಕರುಣೆಯಿಂದ ಶಾಂತಿಯತ್ತ ಸಾಗಿದವರು. ಮೋಹ, ಕರುಣೆಗಳೆಂದರೆ...

ಪಿಡಿಗಳಿಸು ಭುಜಿಸೊಡೆಯನಾಗೆನ್ನುವುದು ಮೋಹ<br>
ಕೊಡು ಸಲಿಸು ಸೇವೆಗೈ ಎಂಬುದು ಕರುಣೆ<br>
ಬಿಡು ನೀನು–ನಾನುಗಳ ವಿಶ್ವಾತ್ಮವ ನೀನ್<br>
ಅಡರೆನ್ನುವುದು ಶಾಂತಿ ಮಂಕುತಿಮ್ಮ

ಅಂತಹವರಿಗೆ ನಮ್ಮ ನುಡಿ ನಮನ<br>
ಎಲ್ಲರಿಗಮಿಗ ನಮೋ ಬಂಧುಗಳೆ ಭಾಗಿಗಳೆ<br>
ಉಲ್ಲಾಸವಿತ್ತರವರೆ ಕೊಳೆಯ ತೊಳೆದವರೆ<br>
ಟೊಳ್ಳು ಜಗ ಬಾಳೆ ಎನಿಸಿ ಗುರುನಾದವರೆ<br>
ಕೊಳ್ಳಿರೀ ನಮನವನು ಮಂಕುತಿಮ್ಮ

ಅನೇಕರ ಬಾಳಿನಿಂದಾಯ್ತು ಆದರ್ಶದೀಪ. ಈ ಹೊತ್ತಿಗೆಯಲ್ಲಿ ಹೊತ್ತಿ ಜಾಜ್ವಲ್ಯವಾಗಿದೆ. ಅದು ಚಿರಂತನ ನಂದಾದೀಪವಾಗಿ ಎಲ್ಲರ ಮನಗಳಿಗೆ ದಾರಿದೀಪವಾಗಲಿ. ಪಂಡಿತಾಃ ಸತ್ತ್ವದರ್ಶಿನಃ – ಭಗವದ್ಗೀತೆ

### *ಕೆಲವಂ ಬಲ್ಲವರಿಂದ ಕಲ್ತು ಕೆಲವಂ ಶಾಸ್ತ್ರಂಗಳಂ ಕೇಳುತಂ...*

‘ನಾವು–ನಮ್ಮವರು’ ಎಂಬ ಪರಿಧಿಯು ಬಹಳ ವಿಸ್ತಾರವಾದುದು ಹಾಗೂ ಸಾಪೇಕ್ಷವಾದುದು (relative term). ಕೆಲವರಿಗೆ ಎಲ್ಲಾ ಭಾರತೀಯರು ನಮ್ಮವರಾದರೆ ಇನ್ನು ಕೆಲವರಿಗೆ ‘ನಾವು–ನಮ್ಮವರು’ ಅವರ ಮನಸ್ಸಿನ ಮೇಲೆ ಅಚ್ಚಳಿಯದ ಪ್ರಭಾವವನ್ನು ಬೀರಿದವರು. ಇನ್ನು ಕೆಲವರಿಗೆ ಹತ್ತಿರದ ಬಂಧುಗಳು ನಮ್ಮವರಾದರೆ, ಇನ್ನು ಕೆಲವರಿಗೆ ಇಡೀ ಸಮಾಜವೇ ನಮ್ಮವರು.

ಇಲ್ಲಿ, ನಮ್ಮ ಘಟ್ ಪೂರ್ವಜರು ಹಾಗೂ ಅವರೊಂದಿಗೆ ಸಾಮರಸ್ಯದಿಂದ ಬೆರೆತು, ಅವರನ್ನು ಬೆಳೆಸಿ, ತಿದ್ದಿ, ಅವರೊಡನೆ ಬೆಳೆದು, ಅವರ ಕಷ್ಟ–ಸುಖ, ದುಃಖ–ದುಮ್ಮಾನ, ವಿನೋದ–ವಿಕಾಸ, ಹುಟ್ಟು–ಸಾವು ಗಳಲ್ಲಿ ಒಂದಾದ ಬಂಧುಗಳು ‘ನಾವು–ನಮ್ಮವರು’ ಆಗಿದ್ದಾರೆ.

ಘಟ್ ವಂಶದ ಎಳೆಗಳನ್ನು ತಮ್ಮ ವರ್ಣರಂಜಿತ ಸಾಮಾಜಿಕ ಚಿತ್ರದಲ್ಲಿ ಒಂದುಗೂಡಿಸಿದ ಹತ್ತು ಹಲವು ಮನೆತನಗಳನ್ನು ನಾವು ಅರಿತು ಬಿಂಬಿಸುವ ಯತ್ನವನ್ನು ಮಾಡಿರುತ್ತೇವೆ.

ಸ್ವಾಸ್ಥ ಸಮಾಜದ ನಿರ್ಮಾಣದಲ್ಲಿ ಕೇವಲ ಬೆರಳೆಣಿಕೆಯಷ್ಟು ಸಾಧಕರು ಹಾಗೂ ಅಸಂಖ್ಯಾತ ಸಜ್ಜನರು ಸೇರಿರುವಂತೆ, ನಮ್ಮ ಸಮಾಜವೂ ಅನೇಕ ಸಜ್ಜನರಿಂದ ಕೂಡಿದೆ. ಇವರ ಸೂಕ್ಷ್ಮ ಪರಿಚಯವನ್ನು ಮಾಡುವುದೇ ಈ ಪ್ರಯತ್ನದ ಉದ್ದೇಶ.

ನಮ್ಮ ಹಿರಿಯರು ಅವರ ಜೀವಿತ ಕಾಲದಲ್ಲಿ ಬಹಳ ನೊಂದವರು; ನಿಂದೆ, ತಿರಸ್ಕಾರ, ಕೀಳರಿಮೆ, ಬಡತನ ಮುಂತಾದವುಗಳನ್ನು ಮೆಟ್ಟಿ ನಿಂತ ಸುಚರಿತ್ರರು. ಈ ಎಲ್ಲ ಅಡೆತಡೆಗಳ ಮಧ್ಯೆಯೂ ವ್ಯಕ್ತಿ ವಿಕಾಸ, ಸಾಮಾಜಿಕ ವಿಕಾಸಗಳಲ್ಲಿ ಅದಮ್ಯ ಆಸಕ್ತಿ ತೋರಿದ ಮಹನೀಯರು. ನಮ್ಮ ಇಂದಿನ ಸಾಮಾಜಿಕ ನೆಲೆಗೆ ಇವರ ಪರಿಶ್ರಮ, ದೂರದೃಷ್ಟಿಗಳೇ ಕಾರಣ.

ಅವರ ಸಾಧನೆಗಳು ನಮ್ಮ ಬಾಳಿಗೆ ಸ್ಫೂರ್ತಿದಾಯಕವಾಗಲಿ. ನಮ್ಮ ಸಾಧನೆಗಳಿಗೆ ದಾರಿದೀಪವಾಗಲಿ.

*ರಾಮನಡಿಯಿಟ್ಟ ನೆಲ ಭೀಮನುಸುರಿದ ಗಾಳಿ।*
*ವ್ಯೋಮದೆ ಭಗೀರಥಂ ತಂದ ಸುರತಟನಿ*
*ಸೋಮನಂ ಪೆತ್ತ ಕಡಲಿ ಪುರಾತನಗಳಿರೆ*
*ನಾವೆಂತು ಹೊಸಬರೆಲೊ – ಮಂಕುತಿಮ್ಮ*